
# ಹುಯಿಲಗೋಳ ನಾರಾಯಣರಾಯರು

ಜೀವನ-ಸಾಧನೆ



ರಾಧಾ ಕುಲಕರ್ಣಿ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

# ಹುಯಿಲಗೋಳ ನಾರಾಯಣರಾಯರು

## ಜೀವನ - ಸಾಧನೆ

**ರಾಧಾ ಕುಲಕರ್ಣಿ**

**ಕರ್ನಾಟಕ ಸರ್ಕಾರ**

**ಕನ್ನಡ ಪುಸ್ತಕ ಪ್ರಾಧಿಕಾರ**

ಕನ್ನಡ ಭವನ, ಜೆ. ಸಿ. ರಸ್ತೆ, ಬೆಂಗಳೂರು - ೨

NARAYANARAYARU -
A life Sketch and his achivements by Smt. Radha Kulkarni, 'Kruthi', 794, 17th 'F' 2nd Main, 6th Block, Koramangala, Bangalore - 95, Tel No. 25536463, 30990202 and published by - **Ashok N. Chalavadi,** Administrator, Kannada Book Authority, Kannada Bhavana, Bangalore - 2, pages : VIII + 204, Rs. 95/-

© ಲೇಖಕರು

ಮೊದಲ ಮುದ್ರಣ : 2007

ಪುಟಗಳು : XII = 216

ಬೆಲೆ : 95/-

ಶ್ರೀ ಅಶೋಕ ಎನ್. ಚಲವಾದಿ
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು

ಕರಡು ತಿದ್ದಿದವರು :
ಡಾ. ಮೀರಾಸಾಬಿಹಳ್ಳಿ ಶಿವಣ್ಣ

ಛಾಯಾಕ್ಷರ ಜೋಡಣೆ :
ಜೆ. ಎನ್. ಕಂಪ್ಯೂಟರ್ ಗ್ರಾಫಿಕ್ಸ್
ಬೆಂಗಳೂರು - 40 ಚರವಾಣಿ : 9448974425

ISBN : 81-7713-211-3

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
ISO 9001-2000
Chamarajpet, Bangalore-18
✆ : 2661 3123, 2661 8752



ಹುಯಿಲಗೋಳ ನಾರಾಯಣರಾಯರು

( 1884 - 1971 )

ಶ್ರೀ

೧೮ ಮ್ಯಾದಸ ಜಂಪೆತಾಳ

॥ ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ॥ಪ॥
॥ ಬದುಕು ಬಲುಹಿನ ನಿಧಿಯು ಸದಭಿಮಾನದ ಗೂಡು ॥ಅ.ಪ॥

॥ ರಾಜನ್ಯರಿಪುವರರುಧರಿಸ ಜನನಿಯ ನಾಡು ॥
॥ ಆ ಜಲಧಿಯನೆ ಜಿಗಿದ ಹನುಮ ಹುಟ್ಟಿದ ನಾಡು ॥
॥ ಓಜೆಯಿಂ ಮೆರೆದರಸುಗಳ ನಾಡಕರ ಸೂರು ॥
॥ ತೇಜವನು ನಮಗೀವ ವೀರವೃಂದದ ಬೀಡು ॥೧॥

॥ ಲೆಕ್ಕಿಗ ಶಿಲ್ಪಾಕ್ಷರರು ಮೆರೆದು ಚೆಲುವಿದ ನಾಡು ॥
॥ ಚಕ್ಕಣದ ಶಿಲ್ಪಕಲೆಯ ದ್ಯುತಿದ ಕರುಗೋತು ॥
॥ ಚೊಕ್ಕ ಮತಗಳ ನಾರಿದ ವೇಗಿದು ನೆಲವೀಡು ॥
॥ ಚೊಕ್ಕನಡ ಕಾವ ಶ್ರೀ ಜಂಪ ಸಿರಿಯುನಳ್ಳಿವ ನಾಡು ॥೨॥

॥ ಪಾವನೆಯರಾ ಕೃಷ್ಣೆ ಭೀಮೆಯರ ತಾಯ್ನಾಡು ॥
॥ ಕಾವೇರಿ ಗೋದೆಯರ ಮೈದೊಳೆವ ಚೆಲುನಾಡು ॥
॥ ಆವಗಂ ಸ್ಫೂರ್ತಿ ಸ್ಪುವ ಕಬ್ಬಿಗರ ನಡೆಮಾಡು ॥
॥ ಕಾವ ಗರುಡಗನದಿ ರಸಗಾಯನದ ಬೀಡು ॥೩॥

೧೯೨೪ ಇಸವಿಯ ಡಿಸೆಂಬರ ಹುಯಿಲಗೋಳ ನಾರಾಯಣರಾಯರು
ಗದಗ

# ಲೇಖಕಿಯನ್ನು ಕುರಿತು...

ಈ ವಾಚಿಕೆಯ ಲೇಖಕಿ ಶ್ರೀಮತಿ ರಾಧಾ ಕುಲಕರ್ಣಿ. ಶ್ರೀ ಹುಯಿಲಗೋಳ ನಾರಾಯಣರಾಯರ ಮೊಮ್ಮಗಳು.

ಲಲಿತ ಕಲೆಗಳಿಗೆ ಹೆಸರಾದ ಗದುಗಿನ ಪಾಗೆ ಮನೆತನದಲ್ಲಿ ಜನಿಸಿದ ರಾಧಾ ಕುಲಕರ್ಣಿ (ವಿಮಲ ಪಾಗೆ) ಚಿಕ್ಕಂದಿನಿಂದಲೂ ಸಂಗೀತ, ನೃತ್ಯ, ನಾಟಕ ಹಾಗೂ ಸಾಹಿತ್ಯ ಪರಿಸರದಲ್ಲಿ ಬೆಳೆದಿದ್ದಾರೆ.

ವಿದ್ಯಾರ್ಥಿನಿಯಾಗಿದ್ದಾಗಲೆ ಬರೆಯುವ ಗೀಳು ಬೆಳೆಯಿತು. ಮುಂದೆ ಶಿಕ್ಷಕಿಯಾಗಿ ಸುಮಾರು ೪೦ ವರ್ಷ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವಾಗ ಪಾಠದ ಜೊತೆಜೊತೆಗೆ ತಮ್ಮಲ್ಲಿದ್ದ ಲಲಿತ ಕಲೆಗಳನ್ನೂ ಮಕ್ಕಳ ಜೊತೆ ಹಂಚಿಕೊಂಡು ಅವರ ಸರ್ವಾಂಗೀಣ ವಿಕಾಸಕ್ಕೆ ಶ್ರಮಿಸಿದ್ದಾರೆ. ಅಂತೆಯೇ ಅವರ ಈ ಪ್ರತಿಭೆಯನ್ನು ಗುರುತಿಸಿ ಕೇಂದ್ರ ಸರಕಾರ ಹಾಗೂ ಇತರ ಸಂಸ್ಥೆಗಳು ಅವರನ್ನು ಪುರಸ್ಕರಿಸಿವೆ. ಇವರನ್ನು NCERT ಯಿಂದ ಮೂರುಸಲ, ಕೇಂದ್ರೀಯ ವಿದ್ಯಾಲಯ ಸಂಘಟನದಿಂದ ಎರಡು ಸಲ ಹಾಗೂ ರೋಟರಿ ಕ್ಲಬ್ಬಿನಿಂದ ಎರಡು ಸಲ ಪುರಸ್ಕರಿಸಲಾಗಿದೆ. ೨೦೦೦ದಲ್ಲಿ ರಾಷ್ಟ್ರೀಯ ಬಾಲಭವನ, ಹೊಸದಿಲ್ಲಿಯಿಂದ ಆಯೋಜಿತ "Workshop for Visual and Performing Arts" ನಲ್ಲಿ ಮೆಚ್ಚುಗೆ ಪತ್ರ ದೊರೆತಿದೆ.

೧೯೯೦ ರಲ್ಲಿ "Indian Council for Child Education" ಪರವಾಗಿ ವಿಶ್ವವಿದ್ಯಾಲಯ ಸ್ತರದವರೆಗಿನ ಭಾರತಾದ್ಯಂತ ಆಯ್ಕೆಯಾದ ೨೫ ಶಿಕ್ಷಕರಲ್ಲಿ ಇವರೊಬ್ಬರು. ದಿಲ್ಲಿಯಲ್ಲಿ ನಡೆದ ಮೂರು ದಿನದ ಶಿಕ್ಷಣದ ರಾಷ್ಟ್ರೀಯ ಸಮ್ಮೇಲನದಲ್ಲಿ ಡಾ. ಕರನ್‌ಸಿಂಗ್ ಅವರಿಂದ ಈ "ರಾಷ್ಟ್ರೀಯ ಪ್ರಶಸ್ತಿ" ದೊರಕಿದೆ. ೧೯೯೮ರಲ್ಲಿ ಉತ್ತಮ ಶಿಕ್ಷಕಿಯ "ರಾಷ್ಟ್ರೀಯ ಪ್ರಶಸ್ತಿ" ಭಾರತದ ರಾಷ್ಟ್ರಪತಿಯಾಗಿದ್ದ ಡಾ ಕೆ. ಆರ್. ನಾರಾಯಣರಿಂದ ಪಡೆದಿದ್ದಾರೆ.

ಹುಯಿಲಗೋಳ ನಾರಾಯಣರಾಯರ ಕುರಿತು ಇವರಿಗೆ ಅತೀವ ಆತ್ಮೀಯತೆ. ಚಿಕ್ಕಂದಿನಿಂದಲೂ ಅವರ ಸಹವಾಸ ದೊರೆತುದಲ್ಲದೆ, ಸಾಹಿತ್ಯದಲ್ಲಿ ಇವರಿಗೆ ಇದ್ದ ಅಭಿರುಚಿ, ಸಾಹಿತ್ಯ ಪ್ರವೃತ್ತಿ, ಪ್ರಜ್ಞೆ ತಾತನಾದ 'ನಾನಾ' ಅವರ ಸಂಸ್ಕಾರ, ಆಶೀರ್ವಾದ ಎಂದೇ ಅವರ ಭಾವನೆ. "ನಾನಾ" ಅವರ ಜೀವನ ಹಾಗೂ ಸಾಹಿತ್ಯದ ಸೃಜನಶೀಲತೆಯನ್ನು ಸಮೀಪದಿಂದ ಅನುಭವಿಸಿದ ಪ್ರತ್ಯಕ್ಷದರ್ಶಿ ಅವರು. ಅಂತೆಯೇ ಅವರ ನಿಜ ಜೀವನದ ನೈಜ ಹಾಗೂ ನಿಖರ ಚಿತ್ರಣದ ಈ ವಾಚಿಕೆಯ ಲೇಖನ ಅವರಿಗೆ ಸಹಜಸಾಧ್ಯವಾಗಿದೆ.



೧೮೮೪ ೧೯೭೧

ಶ್ರೀ ಹುಯಿಲಗೋಳ ನಾರಾಯಣರಾಯರು

# ಒಂದು ದಿನ ಒಳಕೊಂಡಿತ್ತು ನೋಡಾ

ನಮ ಕಣ್ಣೆದುರಿಗೆ ಎರಡು ವಾಸ್ತವಗಳಿವೆ. ಒಂದು - ಜನಾಂಗಿಕ ಸಂಸ್ಕೃತಿಯ ಸ್ಮೃತಿ ಸಂಚಯಗಳಂತಿರುವ ಜನಪದ ಪುರಾಣ ಕಥನಗಳನ್ನು ತಲೆಮಾರಿನಿಂದ ತಲೆಮಾರಿಗೆ ಬಾಯಿಯಿಂದ ಬಾಯಿಗೆ ನೆನಪಿನ ವಾಹಕದಲ್ಲಿ ಸೃಜನಶೀಲವಾಗಿ ಕಾಪಾಡಿಕೊಂಡು ಬಂದ ಮೌಖಿಕ ಜಗತ್ತು. ಇದು ಈಗಾಗಲೇ ನಮ್ಮ ನಡುವೆ ಕಣ್ಮರೆಯಾಗುತ್ತಿರುವ ಜಗತ್ತು. ಇನ್ನೊಂದು- ಬದುಕಿನ ಎಲ್ಲ ಜ್ಞಾನಶಾಖೆಗಳ ಮಾಹಿತಿ ಭಂಡಾರವನ್ನೂ ತನ್ನ ಸೂಚ್ಯಂಕದಲ್ಲಿ ದಾಖಲಿಸಿಕೊಳ್ಳುತ್ತಾ, ಮನುಷ್ಯನ ಸೃಜನಶ್ರಮದ ಕಾಲದೀರ್ಘತೆಯನ್ನು ತನ್ನ ಅಣುಕ್ಷಣಗಳ ಹ್ರಸ್ವತೆಗೆ ತಂದಿಟ್ಟುಕೊಂಡು ದೈತ್ಯ ಸಾಧನೆಯನ್ನು ಮೆರೆಯುತ್ತಿರುವ ಗಣಕ ಜಗತ್ತು. ಇದು ದಿನದಿಂದ ದಿನಕ್ಕೆ ಗಣನೆಗೆ ಸಿಗದ ವೇಗದಲ್ಲಿ ಚಲಿಸುತ್ತಿರುವ ಜ್ಞಾನ ಜಗತ್ತು.

ಮೌಖಿಕ ಸೃಜನ ಪ್ರತಿಭೆಯ ಪ್ರತೀಕ ಸಿರಿಯಜ್ಜಿ. ಗಣಕ ಜ್ಞಾನದ ವೇಗದ ಪ್ರತೀಕ ಶಕುಂತಲಾದೇವಿ. ಸಿರಿಯಜ್ಜಿಯದು ಕೇವಲ ನೆನಪಲ್ಲ : ಅದೊಂದು ಸೃಜನ ಪ್ರತಿಭೆ. ಅದು ಭೂತವಲ್ಲ, ವರ್ತಮಾನ. ಪರಂಪರೆಯನ್ನು ಅರಗಿಸಿಕೊಂಡ ಸಮಕಾಲೀನವಾದ ಸೃಜನೆ. ಅದು ಕೇವಲ ವ್ಯಕ್ತಿಯಲ್ಲ, ಅದೊಂದು ಸಮುದಾಯ ಪ್ರಜ್ಞೆ. ಶಕುಂತಲಾ ದೇವಿಯವರ ಜ್ಞಾನಶಕ್ತಿ ೨೦೦ =ಳರ ಲೆಕ್ಕಾಚಾರದ ಅಗಾಧ ನೆನಪಿನ ಕೋಶ, ಇದು ತಾಂತ್ರಿಕ ನೈಪುಣ್ಯತೆ ಹಾಗೂ ಪರಿಕಲ್ಪನೆಗಳ ಅದ್ಭುತ ಸಮೀಕರಣದ ಜ್ಞಾನಶಕ್ತಿ. ಇಲ್ಲಿ ಪರಿಭಾವಿಸಬೇಕಾದ ಬಹು ಮುಖ್ಯ ವಿಚಾರವೆಂದರೆ, ಮೊದಲನೆಯದು ಭಾವಪ್ರಭೆಯ ಸೃಜನೆಯ ಫಲ. ಎರಡನೆಯದು ಬುದ್ಧಿ ಸಂಚಯದ ತರ್ಕದ ಫಲ. ಇಂದು ಈ ಎರಡು ವಾಸ್ತವಗಳ ನಡುವೆ ಅಕ್ಷರ ಲೋಕದ ಚಲನೆ ಹಲವು ಸವಾಲುಗಳಿಗೆ ಹಲವು ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗಿದೆ.

ಜ್ಞಾನದ ಶೋಧ ವಿಸ್ತರಣೆಗೊಂಡಂತೆ, ಬಹಳಷ್ಟು ಆತಂಕಗಳು ನಿತ್ಯದ ಭಯಗಳಾಗಿ ನಮ್ಮೆದುರು ಬಿಚ್ಚಿಕೊಳ್ಳುತ್ತಿವೆ. ಮಾಹಿತಿ ತಂತ್ರಜ್ಞಾನದ ವೇಗದಾಳಿಗೆ ಸಿಲುಕಿ ಜಗತ್ತಿನ ಬಹುತೇಕ ಭಾಷೆಗಳು ಕಣ್ಮರೆಯಾಗುವ ಆತಂಕವನ್ನು ಹಲವು ಜನ ಭಾಷಾತಜ್ಞರು ಗಂಭೀರ ಸಮಸ್ಯೆಯಾಗಿ ಜಗತ್ತಿನ ಮುಂದಿಟ್ಟಿದ್ದಾರೆ. ಈ ಆತಂಕದ ಆವರಣದಲ್ಲಿ ನಮ್ಮ ಕನ್ನಡ ಭಾಷೆಯ ಸ್ಥಿತಿ ಏನು ? ಇದು ಇಂದು ನಾವು ಕೇಳಿಕೊಳ್ಳಬೇಕಾದ ಪ್ರಮುಖ ಪ್ರಶ್ನೆ. ಭಾಷೆ ಎಂಬುದು ಕೇವಲ ಸಂವಹನ ಸಂಕೇತವಲ್ಲ. ಅದು ಸಮುದಾಯದ ಸಂಸ್ಕೃತಿ, ನಾಗರಿಕತೆ, ಸೃಜನಶಕ್ತಿ, ಬುದ್ಧಿಭಾವಗಳು ಸಂಲಗ್ನಗೊಂಡ ಬದುಕಿನ ಪ್ರತೀಕ. ಅದು ಸಮುದಾಯದ ಉಸಿರು. ಇಂಥ ಭಾಷೆಯ ಅಳಿಯುವಿಕೆ ಎಂದರೆ ಬದುಕಿನ ಎಲ್ಲ ಕ್ಷೇತ್ರಗಳ ಪ್ರಮುಖ ವ್ಯಾವಹಾರಿಕತೆಯಿಂದ ಆ ಭಾಷೆಯನ್ನು ಹೊರಗಿಡುವುದು; ಆಡಳಿತ ಶಿಕ್ಷಣ ಸಂಪರ್ಕ ಮಾಧ್ಯಮ ಸ್ಥಾನದಿಂದ ಆ ಭಾಷೆಯನ್ನು ಕಣ್ಮರೆ ಮಾಡುವುದು. ಇದರ ಅರ್ಥ ಬಹುದೊಡ್ಡ ಭಾಷಿಕ ಸಮುದಾಯವೊಂದನ್ನು ಜ್ಞಾನದ ಬೆಳಕಿನಿಂದ ದೂರಪಿಡುವುದು. ಜಾಗತಿಕ ಬದುಕಿನ ಸುಖ ಸವಲತ್ತುಗಳಿಂದ ವಂಚಿಸುವುದು. ಇಂಥ ಹಲವು

ಆಘಾತಕಾರಿ ಆತಂಕಗಳ ವಾತಾವರಣದಲ್ಲಿ ಇಂದು ಕನ್ನಡ ಅಕ್ಷರ ಲೋಕ ತನ್ನ ಗತಿಯನ್ನು ಕಂಡುಕೊಳ್ಳಬೇಕಾಗಿದೆ.

ಸಾವಿರಾರು ವರ್ಷಗಳ ಇತಿಹಾಸದಲ್ಲಿ ಸಾಂಸ್ಕೃತಿಕ, ರಾಜಕೀಯ ದಬ್ಬಾಳಿಕೆಯನ್ನು ಸಮರ್ಥವಾಗಿ ಎದುರಿಸಿ, ಬೆಳೆದುಬಂದ ಕನ್ನಡ ಭಾಷೆಗೆ, ಕನ್ನಡ ಬದುಕಿಗೆ ಆತಂಕ ಆಘಾತಗಳು ಮೈಯುಂಡ ಬಾಳು. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳಿಂದ ಮೊದಲ್ಗೊಂಡು ಹಿತಮಿತ ಮೃದುವಚನ , ನುಡಿ ಟಠಡಢಣ, ಮಾತು ಜ್ಯೋತಿರ್ಲಿಂಗ, ಹಲಗೆ ಬಳಪವ ಪಿಡಿಯದೊಂದಗ್ಗಳಿಕೆಯಲ್ಲಿ ಒಲಿದಂತೆ ಹಾಡಿದ ಹಲವು ಕಾಲದ ಹಲವು ನಿಟ್ಟಿನ ನುಡಿಸಾಧಕರ ಮಾರ್ಗದೇಸಿಗಳ ಸಮಾಹಿತದಲ್ಲಿ ತನಗೆದುರಾದ ಆತಂಕ ಆಘಾತಗಳನ್ನು ಅರಗಿಸಿಕೊಂಡು ಕನ್ನಡದ ದೀಪ ಬೆಳಗಿದೆ. ಇದರರ್ಥ ಆಯಾ ಕಾಲದ ಕನ್ನಡ ಸಮುದಾಯ ತನ್ನ ಕಾಲದ ಸವಾಲುಗಳಿಗೆ ತಕ್ಕ ವಿವೇಕ ತೋರಿ ಸೃಜನಶೀಲವಾಗಿದೆ. ಆದರೆ, ಇಂದಿನ ಆತಂಕ ಹಿಂದೆಂದಿನ ಆಕ್ರಮಣಗಳಿಗಿಂತ ಭಯಾನಕವಾದುದು. ಈ ಭಯಾನಕತೆಯನ್ನು ಎದುರಿಸುವ ಹಾಗೂ ಆರೋಗ್ಯಕರವಾಗಿ ಅದನ್ನು ಅರಗಿಸಿಕೊಂಡು ಬೆಳೆಯುವ ಸತ್ವಶಕ್ತಿ ಭಾಷೆಗಿದ್ದರೂ, ಭಾಷಿಕ ಸಮುದಾಯದ ಇಚ್ಛಾಶಕ್ತಿಯ ಕೊರತೆ ಎದ್ದು ಕಾಣುವ ಸಂಗತಿ. ಈ ಇಚ್ಛಾಶಕ್ತಿ ಹೊರಗಿನಿಂದ ಆಮದು ಮಾಡಿಕೊಳ್ಳುವ ಸರಕಲ್ಲ; ಬದುಕನ್ನು ರೂಪಿಸುವ ಪ್ರಭುತ್ವ ಹಾಗೂ ಪ್ರಭುತ್ವವನ್ನು ಆಯ್ಕೆ ಮಾಡಿಕೊಳ್ಳುವ ಜನಸಮುದಾಯದೊಳಗೆ ಅರಿವೇ ಗುರುವಾಗಿ ಮೂಡಬೇಕಾದ ಪ್ರಜ್ಞಾವಿಶೇಷ. ಈ ಪ್ರಜ್ಞಾ ವಿಶೇಷ ಸಿರಿಯಜ್ಜಿಯ ಸಮುದಾಯವನ್ನು ಕಡೆಗಣಿಸದೆ ಸಮೀಕರಣದ ಜ್ಞಾನಶಕ್ತಿಗೆ ಮಣೆ ಹಾಕಬೇಕಿದೆ. ಸಾಮಾಜಿಕ ನ್ಯಾಯವನ್ನು ಸಂಸ್ಕೃತಿಯ ರುಚಿ ವಿಶೇಷತೆಯನ್ನು ಪರಿಭಾವನೆಗೆ ತಂದುಕೊಂಡು ಜಂಗಮಶೀಲವಾಗಬೇಕಿದೆ. ಅತಿರೇಕಗಳ ಅವಾಂತರದಿಂದ ಸಮುದಾಯವನ್ನು ಕಾಪಾಡುವ ಶಕ್ತಿ ಅಕ್ಷರ ಲೋಕಕ್ಕಿದೆ. ಆದ್ದರಿಂದ ಅಕ್ಷರ ಲೋಕ ಸೃಜನಶೀಲತೆಯನ್ನು ಎಚ್ಚರದಿಂದ ಉಳಿಸಿಕೊಳ್ಳುತ್ತಾ, ಜ್ಞಾನದ ಹೊಸ ವಿಸ್ತರಣೆಗೆ ತೆರೆದುಕೊಳ್ಳುವ ಅಗತ್ಯವಿದೆ.

ವಿಜ್ಞಾನದ ಹೊಸ ಹೊಸ ಆವಿಷ್ಕಾರಗಳಿಗೆ ಪ್ರತಿಸ್ಪಂದಿಸುತ್ತಾ ಬೆಳೆಯುವ ಭಾಷೆಯ ಸೃಜನಶೀಲತೆ ಪ್ರಕಾಶಿಸುತ್ತದೆ. ವೈಜ್ಞಾನಿಕ ವಿಚಾರ ಸೃಜನಶೀಲಭಾವದಲ್ಲಿ ಅಭಿವ್ಯಕ್ತಗೊಂಡಾಗ ಅದಕ್ಕೊಂದು ಮಾನವೀಯತೆಯ ಸ್ಪರ್ಶ ಪ್ರಾಪ್ತವಾಗುತ್ತದೆ. ಹೊಸಕಾಲದ ಸಂವೇದನೆಗಳಿಗೆ ವೈಜ್ಞಾನಿಕ ವಿಚಾರಗಳಿಗೆ ತಾತ್ವಿಕ ತರ್ಕದೀಪ್ತಿಗಳಿಗೆ ತೆರೆದುಕೊಳ್ಳುವ ನಮ್ಯಗುಣ ಜೀವಂತ ಭಾಷೆಯೊಂದರ ದೊಡ್ಡಶಕ್ತಿ. ಕಾಲದ ಅಗತ್ಯಗಳಿಗೆ ಸ್ಪಂದಿಸಬಲ್ಲ ನಮ್ಯಗುಣ ಕನ್ನಡ ಭಾಷೆಯ ದೊಡ್ಡ ಶಕ್ತಿ. ಜಾಗತಿಕ ಮಟ್ಟದಲ್ಲಿ ವಿಸ್ತರಣೆಗೊಳ್ಳುತ್ತಿರುವ ಎಲ್ಲ ಜ್ಞಾನಶಾಖೆಗಳ ಪಾರಿಭಾಷಿಕ ಶಬ್ದ ಸಂಪತ್ತನ್ನು ಸ್ವೀಕರಿಸುತ್ತಾ, ತನ್ಮೂಲಕ ವಿಷಯಜ್ಞಾನವನ್ನು ಅರಗಿಸಿಕೊಂಡು ಕನ್ನಡ ಭಾಷೆ ಬೆಳೆಯಬೇಕಿದೆ. ಕನ್ನಡದ ಜ್ಞಾನ ಚೇತನಗಳ ಇಚ್ಛಾಶಕ್ತಿ ಈ ದಿಸೆಯಲ್ಲಿ ಹೆಚ್ಚು ಕ್ರಿಯಾಶೀಲವಾಗಬೇಕಾದ ಅಗತ್ಯವಿದೆ. ಅಲ್ಲಮನ ಒಂದು ವಚನ ಹೀಗಿದೆ-

*ಹಿಂದಣ ಅನಂತವನು ಮುಂದಣ ಅನಂತವನು*
*ಒಂದು ದಿನ ಒಳಕೊಂಡಿತ್ತು ನೋಡಾ*
*ಒಂದು ದಿನವನೊಳಕೊಂಡು ಮಾತಾಡುವ ಮಹಾಂತನ*
*ಕಂಡು ಬಲ್ಲವರಾರಯ್ಯ*
*ಆದ್ಯರು ವೇದ್ಯರು ಅನಂತ ಹಿರಿಯರು ಕಾಲದಂತುವನರಿಯದೆ*
*ಅಂತೆ ಹೋದರು ಕಾಣಾ ಗುಹೇಶ್ವರ*

ಜಗತ್ತಿನ ಜ್ಞಾನಕ್ಕೆ ಹಿಂದಣ ಪರಂಪರೆಯ ಅಪಾರತೆ ಇದೆ. ಮುಂದಣ ಭವಿಷ್ಯದ ಅನಂತತೆ ಇದೆ. ವರ್ತಮಾನದಲ್ಲಿ ಈ ಎರಡೂ ಸಂಲಗ್ನಗೊಂಡ ಭಾವದಲ್ಲಿ ಸೃಜನಶೀಲವಾದಾಗ ಅದು ಅಳಿಯದ ಮಾತಾಗುತ್ತದೆ. ಆ ಮಾತು ಜ್ಯೋತಿರ್ಲಿಂಗ ರೂಪಿಯಾಗುತ್ತದೆ. ನಿಜವಾದ ಪುಸ್ತಕಗಳು ಮಾತು ಜ್ಯೋತಿರ್ಲಿಂಗವಾದಸಂಸ್ಕೃತಿ ಸಂಚಯದ ಜ್ಞಾನದೀವಿಗೆಗಳು. ಜ್ಞಾನವನ್ನು ಕೇವಲ ಪಂಡಿತಮಾನ್ಯರ ಸ್ವತ್ತಾಗಿದೆ, ಜನಸಾಮಾನ್ಯರ ಬದುಕಾಗಿಸುವುದು ಅಕ್ಷರಲೋಕದ ಗುರಿಯಾಗಬೇಕು. ಜ್ಞಾನ ಪರಂಪರೆಗಳನ್ನು ಶೋಧನೆಗೆ ಹಚ್ಚುತ್ತಾ, ಆತ್ಮಾವಲೋಕನದ ಒಳಮುಖೀದರ್ಶನ ದೀಪ್ತಿಯಲ್ಲಿ ಸತ್ಯವನ್ನು ಮನಗಾಣಿಸಬೇಕು. ಕಂಡ ಸತ್ಯದ ಬೆಳಕಿನಲ್ಲಿ ವರ್ತಮಾನದ ದಾರಿ ತೆರೆದು ಭವಿಷ್ಯದ ಮುಂಗಾಣ್ಕೆಯಿಂದ ಗುರಿಯ ಕಡೆ ಹೆಜ್ಜೆ ಹಾಕಬೇಕು. ಇದು ಬದುಕಿನ ಗತಿಶೀಲ ಗುಣವಾದಾಗ ಅತಿರೇಕಗಳಿಗೆ ಅವಕಾಶವಿರುವುದಿಲ್ಲ. ಇದು ಜಾಗತೀಕರಣ ಯುಗ. ಈ ಪ್ರಕ್ರಿಯೆಯ ವೇಗ ಅಪರಿಮಿತವಾದಷ್ಟು ಅಪಾಯಕಾರಿಯೂ ಆಗಿದೆ. ಜಾಗತೀಕರಣದ ದಾಳಿಯಲ್ಲಿ. ಏಕಸಂಸ್ಕೃತಿ, ಏಕಜೀವನಶೈಲಿ, ಏಕಭಾಷಾಧಿಪತ್ಯಕ್ಕೆ ಜಗತ್ತನ್ನು ಒಳಗುಮಾಡುವುದರಿಂದ ಆಗುವ ದುಷ್ಪರಿಣಾಮವೆಂದರೆ, ಜೀವನ ವೈವಿಧ್ಯತೆಯ ಬಹುಮುಖೀ ಸಂಸ್ಕೃತಿಗಳ ಸಾವು. ಅತಿರೇಕದ ವೈಪರೀತ್ಯಕ್ಕೆ ಒಳಗಾಗಿ ಬದುಕನ್ನು ಬರಡಾಗಿಸುವ ಹಾಗೂ ಅಸಮಾನತೆಯ ಪ್ರಮಾಣವನ್ನು ಅಗಾಧವಾಗಿಸುವ ಅಪಾಯದಿಂದ ಈ ಸಮುದಾಯಗಳನ್ನು ರಕ್ಷಿಸುವ ಅಗತ್ಯ ಇಂದಿನ ತುರ್ತು. ಈ ತುರ್ತಿನ ಸನ್ನಿವೇಶದಲ್ಲಿ ವಿವೇಕದ ದಾರಿ ತೋರಿ ಅತಿರೇಕಕ್ಕೆ ಕಡಿವಾಣವನ್ನು ಹಾಕಿ ಸಂಸ್ಕೃತಿಯನ್ನು, ಬದುಕನ್ನು ಮಾನವಕೋಟಿಯನ್ನು ಸಂರಕ್ಷಿಸಬಲ್ಲ ಶಕ್ತಿ ಅಕ್ಷರಲೋಕಕ್ಕಿದೆ. ಏಕರೂಪೀ ಗುಣದಿಂದ ಕೂಡಿದ ಗಣಕೀಕರಣದ ಏಕಾಧಿಪತ್ಯಕ್ಕಿಂತ ಬಹುರೂಪಿ ಗುಣದ ಪ್ರತಿಭಾ ಸಂಪನ್ನತೆಯಿಂದ ಹೊಳೆಯುವ ಅಕ್ಷರಲೋಕ ಜಗತ್ತಿನ ವೈವಿಧ್ಯತೆಯನ್ನು ಸಂರಕ್ಷಿಸುತ್ತದೆ. ವೈವಿಧ್ಯತೆಗಳೊಳಗಿನ ಸೃಜನಶೀಲತೆಯನ್ನು ಬೆಳೆಸುತ್ತದೆ.

ಪುಸ್ತಕಗಳು ಅಕ್ಷರ ಲೋಕದ ಮೂರ್ತರೂಪಗಳು ; ಅಮೂರ್ತವಾದ ಜ್ಞಾನಸಂಪತ್ತನ್ನು ಧಾರಣ ಮಾಡಿಕೊಂಡ ಶಬ್ದರೂಪಗಳು. ಶಬ್ದ ಕೇವಲ ಅರ್ಥದ ಅಭಿದಾವೃತ್ತಿಯಲ್ಲಿ ನೆಲೆ ನಿಲ್ಲುವುದಲ್ಲ, ವ್ಯಂಜನಾ ವ್ಯಾಪಾರದಲ್ಲಿ ಅನುಭಾವಿಕವಾಗುವುದು. ಈ ವ್ಯಂಜನಾ ವ್ಯಾಪಾರ ಬುದ್ಧಿ ಭಾವಗಳ ವಿದ್ಯುದಾಲಿಂಗನ ಪ್ರಭೆಯ ಫಲಿತ. ಹೀಗಾಗಿ ಪುಸ್ತಕಗಳು ಸಂಸ್ಕೃತಿ ನಾಗರಿಕತೆಗಳ ಸಂಚಯಿತ ಫಲವಾದಷ್ಟೇ ಸಂಸ್ಕೃತಿಯನ್ನು ನಿರಂತರವಾಗಿ ಉಜ್ಜೀವಿಸುವ ಧಾತು ದ್ರವ್ಯಗಳು.

ಕನ್ನಡ ಪುಸ್ತಕ ಪ್ರಾಧಿಕಾರವು ಕರ್ನಾಟಕದಾದ್ಯಂತ ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ಸಮುದ್ದೇಶದಿಂದ ಪ್ರಾರಂಭವಾದ ಒಂದು ಸಂಸ್ಕೃತಿ ಕೇಂದ್ರ. ವಾಚನಾಭಿರುಚಿಯನ್ನು ಬೆಳೆಸುವುದು ಹಾಗೂ ಪುಸ್ತಕೋದ್ಯಮವನ್ನು ಆರೋಗ್ಯಕರವಾಗಿ ಪೋಷಿಸುವುದು ಪ್ರಾಧಿಕಾರದ ಹೊಣೆಯಾಗಿರುತ್ತದೆ. ಅದಕ್ಕಾಗಿ ಹಲವು ರೀತಿಯ ಕಾರ್ಯ ಯೋಜನೆಗಳನ್ನು ಪ್ರಾಧಿಕಾರ ರೂಪಿಸಿಕೊಂಡಿದೆ. ಯುವ ಸಮುದಾಯದಲ್ಲಿ ವಾಚನಾಭಿರುಚಿ ಹೆಚ್ಚಿಸಲು ವಾಚನಾಭಿರುಚಿ ಕಮ್ಮಟಗಳನ್ನು ನಡೆಸುತ್ತಿದೆ. ಪ್ರಕಾಶಕರು, ಲೇಖಕರು ಹಾಗೂ ಓದುಗರ ನಡುವೆ ಚಿಂತನಾ ಕಮ್ಮಟಗಳನ್ನು ನಡೆಸುತ್ತಿದೆ. ಇವುಗಳ ಜೊತೆಗೆ ಎರಡನೆಯ ಆದ್ಯತೆಯಾಗಿ ಪುಸ್ತಕ ಪ್ರಕಟಣೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಶೈಕ್ಷಣಿಕ ಶಿಸ್ತಿನಲ್ಲಿ ಅಧ್ಯಯನ ಮಾಡುವ ಪರಾಮರ್ಶನ ಗ್ರಂಥಗಳ ಜೊತೆಗೆ ಜನಸಾಮಾನ್ಯರಿಗೆ ಅಗತ್ಯವಾಗಿ ಬೇಕಾದ ಅರಿವನ್ನು ಹಂಚುವ ಪುಸ್ತಕಗಳ ಪ್ರಕಟಣೆಯೂ ಪ್ರಾಧಿಕಾರದ ಉದ್ದೇಶವಾಗಿದೆ.

ಶ್ರೀಮತಿ ರಾಧಾಕುಲಕರ್ಣಿಯವರು ಬರೆದಿರುವ 'ಹುಯಿಲಗೋಳ ನಾರಾಯಣರಾಯರ (ಜೀವನ - ಸಾಧನೆ )' ಪುಸ್ತಕ ಒಂದು ಉಪಯುಕ್ತ ಗ್ರಂಥ. ಲೇಖಕಿಯವರು ಹುಯಿಲಗೋಳರ ಮೊಮ್ಮಗಳು. ಅಜ್ಜನ ಪ್ರೀತಿಯ ಭಾವಬಂಧದಲ್ಲಿ ಬಾಲ್ಯ ಕಳೆದ ಶ್ರೀಮತಿ ರಾಧ ಅವರು ಈ ಕೃತಿಯಲ್ಲಿ ತಮ್ಮ ಅನುಭವಗಳ ಜೊತೆಗೆ ಅಜ್ಜನ ಜೀವನ ಸಾಧನೆಗಳನ್ನು ಅಂತಃಕರಣ ತುಂಬಿದ ಭಾವದಲ್ಲಿ ಕಟ್ಟಿಕೊಟ್ಟಿದ್ದಾರೆ. ಕನ್ನಡ ನಾಡಿನ ಏಕೀಕರಣದ ಕಥನದಲ್ಲಿ ಹುಯಿಲಗೋಳದ ಹೆಸರು ಅಮೃತರೂಪಿಯಾದುದು. ಈ ಕೃತಿಯ ಘಟನೆಗಳು ಅದನ್ನು ಅದ್ಭುತವಾಗಿ, ಆಪ್ತವಾಗಿ ಮನಗಾಣಿಸಿವೆ. ಲೇಖಕಿಯವರಿಗೆ ಪ್ರಾಧಿಕಾರದ ಧನ್ಯವಾದಗಳು.

*ಪ್ರೊ. ಎಸ್. ಜಿ. ಸಿದ್ಧರಾಮಯ್ಯ*
ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ

## ಹುಯಿಲಗೋಳ ನಾರಾಯಣರಾಯರು

### ಜೀವನ - ಸಾಧನೆ

### ಪರಿವಿಡಿ

*ಭಾಗ - ೧ ಜೀವನ*

## ಹುಯಿಲಗೋಳ ನಾರಾಯಣರಾಯರು

### ಜೀವನ - ಸಾಧನೆ

### ಭಾಗ - ೨ ಸಾಧನೆಗಳು



### ಭಾಗ - ೩

# ಭಾಗ ೧.

# ಹುಯಿಲಗೋಳ ನಾರಾಯಣರಾಯರ ಜೀವನ

## ೧. ಪ್ರಸ್ತಾವನೆ

"ಗದುಗು"........ಗಾಯನ, ವಾದನ, ನೃತ್ಯ, ನಾಟಕ, ಸಾಹಿತ್ಯ, ಶಿಕ್ಷಣ, ಶಿಲ್ಪ, ಚಿತ್ರಕಲೆ, ಕ್ರೀಡೆ, ವ್ಯಾಪಾರ... ಇತ್ಯಾದಿ ಹಲವಾರು ಕ್ಷೇತ್ರಗಳ ದಿಗ್ಗಜರ ಪ್ರತಿಭೆಯಿಂದ ಹಲವಾರು ಸಹೃದಯರ ಸಂವೇದನೆಯನ್ನು ಗದ್ಗದಗೊಳಿಸಿದ ಗದುಗು! ಗದಗಿನ ಗರಿಮೆಯನ್ನು ಗಗನದೆತ್ತರಕೆ ಗರಿಗೆದರಿಸಿದವರು ಇಲ್ಲಿಯ ಮೂವರು ನಾರಾಯಣರು - ವಿವಿಧ ಕ್ಷೇತ್ರಗಳಲ್ಲಿ ವಿಶಿಷ್ಟ ವ್ಯಕ್ತಿಗಳಿಗೆ ತನ್ನ ಕೃಪಾಕಟಾಕ್ಷದ ಧಾರೆಯೆರೆದು ಆಶೀರ್ವದಿಸಿ ಗದಗನ್ನು ಪುಣ್ಯಕ್ಷೇತ್ರವನ್ನಾಗಿ ಪರಿವರ್ತಿಸಿದ ಇಲ್ಲಿಯ ಕ್ಷೇತ್ರದೇವತೆ - "ವೀರ ನಾರಾಯಣ", ಮೊದಲಿಗನು. ಎರಡನೆಯವನು ಕಲಿಯುಗವನ್ನು ದ್ವಾಪರಯುಗವಾಗಿ ಮಾರ್ಪಡಿಸಬಲ್ಲ ಯುಗ ಕವಿ - "ನಾರಣಪ್ಪ" ಅಥವಾ "ಕುಮಾರವ್ಯಾಸ". ಮೂರನೆಯದಾಗಿ "ನಮ್ಮ ಚೆಲುವ ಕನ್ನಡ" ನಾಡಿಗೆ ಉದಯರಾಗವನ್ನು ಹಾಡಿ ನಾಡನ್ನೇ ಬಡಿದೆಬ್ಬಿಸಿದ ನಾಡಕವಿ "ಹುಯಿಲಗೋಳ ನಾರಾಯಣರಾಯರು".

ಕನ್ನಡದ ಕಹಳೆಯಾಗಿ, ಉತ್ತುಂಗ ಕವಿಯಾಗಿ ಕರ್ನಾಟಕದ ಆದ್ಯ ಸಾಮಾಜಿಕ ನಾಟಕಕಾರರಾಗಿ, ಶಿಕ್ಷಣ ಸಂಸ್ಥೆಯ ಸಂಸ್ಥಾಪಕರಾಗಿ, ಸ್ವಾತಂತ್ರ್ಯ ಯೋಧರಾಗಿ, ಸಂಸ್ಕೃತಿಯ ಸಾಕಾರ ರೂಪವಾಗಿ, ಧರ್ಮದ ಅನ್ವರ್ಥಕ ದೂತರಾಗಿ ಎಲ್ಲಕ್ಕೂ ಮಿಗಿಲಾಗಿ ಮೇರು ವ್ಯಕ್ತಿತ್ವದ ದ್ಯೋತಕವಾಗಿ ಜೀವಿಸಿದ ಹುಯಿಲಗೋಳ ನಾರಾಯಣರಾಯರ ಸ್ಮರಣಿಕೆ, ಜೀವನ ಚಿತ್ರಣ ಭಾವೀ ಪ್ರಜೆಗಳಿಗೆ ಪ್ರೇರಣೆಯ ಸ್ರೋತವಾಗುವಲ್ಲಿ, ಸ್ಫೂರ್ತಿಯ ಸೆಲೆಯಾಗುವಲ್ಲಿ ದಾರಿದೀಪವಾಗುವಲ್ಲಿ ಕಿಂಚಿತ್ತೂ ಸಂದೇಹವಿಲ್ಲ.

## ೨. ಪೂರ್ವಜರು

ಶ್ರೀ ನಾರಾಯಣರಾಯರ ಪೂರ್ವಜರು ಮೂಲತಃ ಬಳ್ಳಾರಿಯವರು. ಇವರ ಪೂರ್ವಜರಾದ ಶ್ರೀ ಬಳ್ಳಾರಿ ಹಣಮಂತರಾಯರು (ಆಗ ಅವರ ಮನೆತನದ ಹೆಸರೂ 'ಬಳ್ಳಾರಿ' ಎಂದಿತ್ತು) ಕ್ರಿ.ಶ. ೧೬೦೮ರಲ್ಲಿ ಬಳ್ಳಾರಿಯಲ್ಲಿ ವಾಸವಾಗಿದ್ದು, ಅಲ್ಲಿಯ ಶ್ರೀ

ಲಕ್ಷ್ಮೀನಾರಾಯಣ ದೇವಸ್ಥಾನದ ಪೂಜಾರರಾಗಿದ್ದರು. ಹನುಮಂತರಾಯರು ಆಗಿನ ಬ್ರಿಟಿಷರ ಕಾಲದಲ್ಲಿ ಬಳ್ಳಾರಿಯಲ್ಲಿ ಕಮೀಷನರ್ ಗುಮಾಸ್ತರಾಗಿದ್ದರು. ಅವರ ನಿಷ್ಠಾಪೂರ್ಣ ಸೇವೆಗೆ ಮನ್ನಣೆ ಎಂದು ೧೮೨೩ರಲ್ಲಿ ಲೆಫ್ಟನೆಂಟ್ ಕ್ಯಾಂಬೆಲ್ ಎಂಬ ಅಧಿಕಾರಿಗಳು ಇವರಿಗೆ ಹುಯಿಲಗೋಳ, ಕಳಸಾಪುರ ಹಾಗೂ ನಾಗಾವಿ ಹಳ್ಳಿಗಳನ್ನು ಜಹಾಗೀರಾಗಿ ಕೊಟ್ಟರು. ಇದರಿಂದ ಹಣಮಂತರಾಯರು ೧೮೨೪ರಲ್ಲಿ ಹುಯಿಲಗೋಳ ಗ್ರಾಮಕ್ಕೆ ಬಂದು ನೆಲೆಸಿದರು. ಅಲ್ಲಿ ಬಂದ ಮೇಲೆ ಮೊಟ್ಟ ಮೊದಲು ಶ್ರೀಲಕ್ಷ್ಮೀನಾರಾಯಣನ ದೇವಸ್ಥಾನವನ್ನು ಸ್ಥಾಪಿಸಿ ಅದರ ಪೂಜೆ ಹಾಗೂ ಸೇವೆಗಾಗಿ ವ್ಯವಸ್ಥೆ ಮಾಡಿದರು. ಆಗಿನಿಂದ ಇವರಿಗೆ "ಹುಯಿಲಗೋಳ" ಎಂಬ ಅಡ್ಡ ಹೆಸರು ಬಂದಿತು.

ಹುಯಿಲಗೋಳ ಗ್ರಾಮವು ಗದಗಿನ ಸಮೀಪದಲ್ಲಿದೆ. (ಸುಮಾರು ೧೪ ಕಿ.ಮೀ. ಅಂತರದಲ್ಲಿದೆ.) ಗದಗು ಆಗಿನ ಕಾಲದಿಂದಲೂ ವ್ಯಾಪಾರ ಕೇಂದ್ರವಾಗಿತ್ತು. ಹುಯಿಲಗೋಳದಿಂದ ಹನುಮಂತರಾಯರು ಮತ್ತು ಅವರ ಮನೆತದವರು ಆಗಾಗ ಗದಗಿಗೆ ಬರಬೇಕಾಗುತ್ತಿತ್ತು. ಕಾಲಾಂತರದಲ್ಲಿ ಗದಗನ್ನೇ ತಮ್ಮ ವಾಸಸ್ಥಾನವಾಗಿ ಮಾಡಿಕೊಂಡು ಆಗಾಗ ಹುಯಿಲಗೋಳದಲ್ಲಿಯ ಹೊಲ - ಬೆಳೆಗಳನ್ನು ನೋಡಿಕೊಂಡು ಬರುತ್ತಿದ್ದರು.

## ೩. ಜನನ

ಹನುಮಂತರಾಯರ ಮರಿಮೊಮ್ಮಗ ಕೃಷ್ಣರಾಯರು ಹಾಗೂ ಅವರ ಪತ್ನಿ ರಾಧಾಬಾಯಿಯವರ ಹಿರಿಯ ಮಗನೇ ನಾರಾಯಣರಾಯರು. ಇವರ ಜನ್ಮದಿನಾಂಕ ಶಾಲೆಯ ಸರ್ಟಿಫಿಕೇಟಿನ ಮೇರೆಗೆ ४-೧೦-೧೮೮೪ ಎಂದಿದ್ದರೂ ಇವರ ಜನ್ಮಕುಂಡಲಿಯ ಪ್ರಕಾರ ಇವರ ಜನ್ಮ ೨೫-೯-೧೮೮೪ ಬುಧವಾರ ಮುಂಜಾನೆ ೭ ಗಂಟೆಗೆ (ಶ್ರೀ ಶಕ ೧೮೦೬ ಅಶ್ವಿಜ ಶುದ್ಧ ಚತುರ್ಥಿ (ನವರಾತ್ರಿ)ಯ ದಿನದಂದು ಆಗಿದೆ).

ದಿ || ನಾರಾಯಣರಾವ ಹುಯಿಲಗೋಳ

ಇವರ ಜನ್ಮ ಕುಂಡಲಿ

ಶ್ರೀ ಶಕ 1806 ಅಶ್ವಿಜ ಶುದ್ಧ ಚತುರ್ಥಿ ಬುಧವಾರ ಬೆಳಗು ಮುಂಜಾನೆ 7-00 ಗಂಟೆಗೆ ವಿಶಾಖಾ ನಕ್ಷತ್ರ 4ನೇ ಚರಣ ವೃಶ್ಚಿಕ ರಾಶಿ ತಾ || 25-9-1884 ಕನ್ಯಾಲಗ್ನದಲ್ಲಿ ಜನನ

ಜನ್ಮ ಲಗ್ನ ಕುಂಡಲಿ

| | | | |
|---|---|---|---|
| ಕೇತು | | | ಶನಿ |
| | ರಾಶಿ | ಕುಂಡಲಿ | ಶುಕ್ರ |
| | | | ಗುರು ಬುಧ |
| | ಚಂದ್ರ | ಮಂಗಳ | ರವಿ ರಾಹು |

ಶಾಲೆಯ ಸರ್ಟಿಫಿಕೇಟಿನಲ್ಲಿ ಇವರ ಜನ್ಮ ದಿನಾಂಕ 4-10-1884 ಎಂದು ಇರುತ್ತದೆ. ಆದರೆ ಅವರ ಜೊತೆಗೆ ಮಾತನಾಡಿ, ಅವರ ಜನ್ಮನಾಮ ತಿಥಿ ವಾರ ನಕ್ಷತ್ರ ಕೇಳಿ, ತಿಳಿದು ಕೊಂಡವರ ಪೈಕಿ ನಾನೂ ಒಬ್ಬನು.

ಮೇಲಿನ ಕುಂಡಲಿ ಸರಿಯಾದ ಜನ್ಮ ಕುಂಡಲಿ

ಧೀರೇಂದ್ರ ಶ್ರೀ ಹೊಂಬಾಳಿ
ಸ್ಟೇಷನ್ ರೋಡ್
ಗದಗ

## ೪. ಬಾಲ್ಯ ಹಾಗೂ ಪರಿಸರ

ಮನೆಯಲ್ಲಿ ನಾರಾಯಣರಾಯರ ತಂದೆ ಕೃಷ್ಣರಾಯರು ಆಗಿನ ಕಾಲದ ಮ್ಯಾಟ್ರಿಕ್ ಆಗಿ ಬೋಧನಾನಿಷ್ಠ ಉತ್ತಮ ಶಿಕ್ಷಕರಾಗಿದ್ದರು. ಅದೇ ಕಾರಣದಿಂದ ಮನೆಯಲ್ಲಿ ವ್ಯವಸ್ಥಿತ ಶಿಕ್ಷಣದ ವಾತಾವರಣವೂ ಇದ್ದಿತು. ನಾರಾಯಣರಾಯರ ತಾಯಿ ರಾಧಾಬಾಯಿ (ಬಹಿಣಾಕ್ಕ) ಉಮಚಗಿ ಮನೆತನದವರು. ಈ ಮನೆತನ ಅತ್ಯಂತ ಸುಸಂಸ್ಕೃತವಾಗಿದ್ದು ಅವರ ಪ್ರಭಾವ ನಾರಾಯಣರಾಯರ ಮೇಲೆ ಆಗಿರಲು ಸಾಕು. ಅದರಲ್ಲೂ ನಾರಾಯಣರಾಯರು ಚಿಕ್ಕವರಿದ್ದಾಗಲೇ ತಂದೆಯು ತೀರಿಕೊಂಡಿದ್ದರಿಂದ ಅಜ್ಜ, ರಾಮಣ್ಣ ನಾಯಕ ಉಮಚಗಿ ಅವರ ಆಶ್ರಯ ಪಡೆಯಬೇಕಾಯಿತು. ಅಜ್ಜ ಧರ್ಮಿಷ್ಠರೂ ಸತ್ಯವಂತರೂ ಆಗಿದ್ದು ನಾರಾಯಣರಾಯರ ಮೇಲೆ ಅಚ್ಚಳಿಯದ ಪ್ರಭಾವ ಬೀರಿದರು. ನಾರಾಯಣರಾಯರ ಅಬಚಿ ಶೇಷಕ್ಕನು ಕುಮಾರವ್ಯಾಸ ಭಾರತವನ್ನು ಗಮಕ ಶೈಲಿಯಲ್ಲಿ ಹೇಳುತ್ತಿದ್ದರು. ಅವರ ಅಜ್ಜಿ, ಅಬಚಿ ಹಾಗೂ ತಾಯಿ ಪುರಂದರ ದಾಸರ ಹಾಗೂ ಅನ್ಯ ದಾಸರ ಪದ್ಯಗಳನ್ನು ಭಕ್ತಿಪೂರ್ವಕವಾಗಿ ದಿನನಿತ್ಯವೂ ಹಾಡುತ್ತಿದ್ದರು. ಮನೆಯ ಈ ಭಕ್ತಿಯ ಪರಿಸರ, ಕುಮಾರವ್ಯಾಸನ ಭಾರತದ ಶ್ರವಣ, ದಾಸರ ಪದಗಳ ಶ್ರವಣ ಈ ಚಿಕ್ಕ ಬಾಲಕನ ನಾಡಿಗಳಲ್ಲಿ ಭಕ್ತಿರಸ ಹಾಗೂ ದಾಸಸಾಹಿತ್ಯದ ಲಯಗಳನ್ನು ಓತಪ್ರೋತವಾಗಿ ಹರಿಸಿರಬೇಕು.

ಬಾಲಕ ನಾರಾಯಣನಿಗೆ ಸೂತ್ರದ ಗೊಂಬೆಯಾಟ, ಕಿಳ್ಳಿಕ್ಯೇತರ ಆಟ, ಬಯಲಾಟ, ಯಕ್ಷಗಾನ, ದೊಡ್ಡಾಟಗಳು ಎಂದರೆ ಬಹಳ ಇಷ್ಟ. ಅವರು ಅವನ್ನು ನೋಡಲು ತಪ್ಪದೇ ಹೋಗುತ್ತಿದ್ದರು. ದೊಡ್ಡಾಟಗಳನ್ನು ನೋಡಿ ಬರುವ ಪರಂಪರೆ ನಾವು ಚಿಕ್ಕವರಿದ್ದಾಗಿನವರೆಗೂ ಅಂದರೆ ೧೯೫೦ರ ವರೆಗೂ ನಡೆದು ಬಂದಿದೆ. ನನಗಿನ್ನೂ ನೆನಪಿದೆ ಕಳಸಾಪುರದಲ್ಲಿ ದೊಡ್ಡಾಟವಿದ್ದಾಗೆಲ್ಲ ಹುಯಿಲಗೋಳ ಮನೆ ಜನರ ಜೊತೆ ನಾವೆಲ್ಲಾ ಚಕ್ಕಡಿ ಮಾಡಿಕೊಂಡು ಹೋಗಿ ನೋಡಿ ಬರುತ್ತಿದ್ದೆವು. ಕೆಲವು ಸಲ ಸಂಗೀತ ಹಾಗೂ ನಾಟಕದ ಗೀಳಿದ್ದ ನಮ್ಮ ಅಕ್ಕ ಕಮಲಾ ಬೇಡವೆಂದರೂ ದೊಡ್ಡಾಟಕ್ಕೆ ಹೋಗುತ್ತೇನೆಂದು ಹಟ ಮಾಡಿ ನಮ್ಮ ಅಪ್ಪನ ಕಡಿಯಿಂದ ಹೊಡೆತ ತಿಂದದ್ದೂ ಉಂಟು. ನೋಡಿ ಬಂದ ಮೇಲೆ ಅಜ್ಜ ನಾನಾ (ನಾರಾಯಣರಾಯರು) ಅವರ ಬಗ್ಗೆ ಎಲ್ಲ ವಿವರಗಳನ್ನೂ ತಿಳಿಸಿ ಹೇಳುತ್ತಿದ್ದರು. ಅವರು ಚಿಕ್ಕವರಿದ್ದಾಗ ಅವುಗಳ ವಿಷಯಕ್ಕೆ ಎಲ್ಲವನ್ನೂ ಕೇಳಿ ತಿಳಿದುಕೊಳ್ಳುತ್ತಿದ್ದರಂತೆ. ಗೊಂಬೆಯಾಟದಲ್ಲಿ ಗೊಂಬೆಗಳನ್ನು ಹೇಗೆ ಕುಣಿಸುತ್ತಾರೆ? ಸೂತ್ರಗಳನ್ನು ಹೇಗೆ ಎಳೆಯುತ್ತಾರೆ? ಕಿಳ್ಳೆಕ್ಯೇತನನ್ನು ಏಕೆ ತರುತ್ತಾರೆ? ದೊಡ್ಡಾಟದ ಪಾತ್ರಗಳು ಏಕೆ ಅರ್ಭಟಿಸುತ್ತವೆ? ಮುಂತಾದ ವಿಷಯಗಳನ್ನು

ಕೇಳಿ ತಿಳಿಯುತ್ತಿದ್ದರಂತೆ. ಆದರೆ ನಾಟಕಗಳನ್ನು ನೋಡಲು, ಹಿರಿಯರು ಟಿಕೆಟ್ಟು ತೆಗೆದು ಕರೆದುಕೊಂಡು ಹೋದಾಗ ಮಾತ್ರ ಹೋಗುತ್ತಿದ್ದರಂತೆ.

ನಾರಾಯಣರಾಯರು ಶಾಂತಕವಿಗಳು ರಚಿಸಿದ "ಕೀಚಕ ವಧೆ", "ವತ್ಸಲಾಪಹರಣ" ನಾಟಕ ಪ್ರಯೋಗಗಳನ್ನು ನೋಡುತ್ತಿದ್ದರಂತೆ. ಸಂಗೀತ ನಾಟಕಗಳೇ ರಂಗಭೂಮಿಯಲ್ಲಿ ಪ್ರಧಾನವಾಗಿದ್ದ ಕಾಲವದು. ಎಳೆಯ ವಯಸ್ಸಿನಲ್ಲಿಯೇ ಸಾಹಿತ್ಯ ಹಾಗೂ ನಾಟಕದ ಅಭಿರುಚಿ ಹುಟ್ಟಿಸಲು ಇವೆಲ್ಲಾ ಪ್ರೇರಕವಾಗಿರಬಹುದು.

ಈ ಪ್ರೇರಣೆ ಉತ್ಕಟವಾಗಿ ಮಾಧ್ಯಮಿಕ ಶಾಲೆಯಲ್ಲಿರುವಾಗ ತಮ್ಮನಾದ ಶ್ರೀನಿವಾಸನೊಂದಿಗೆ "ಗರುಡ ಗರ್ವಭಂಗ" ಎಂಬ ನಾಟಕವನ್ನು ತಾವೇ ಮಾರ್ಪಡಿಸಿಕೊಂಡು ರಚಿಸಿ ಆಡಿದುದು ಬಹುಶಃ ನಾಟಕಕ್ಕೆ ನಾಂದಿಯಿರಬೇಕು. ಮನೆಯ ಚಾದರುಗಳನ್ನೇ ಪರದೆಗಳಾಗಿ ಬಳಸಿ ಗೆಳೆಯರೊಡನೆ ಈ ನಾಟಕ ಪ್ರಯೋಗ ಮಾಡಿದರಂತೆ. ತಾನು ನೋಡಿದ 'ಲಂಕಾದಹನ' ಎಂಬ ಯಕ್ಷಗಾನದ ಮಾದರಿಯಲ್ಲಿಯೇ "ಇಂದ್ರಜಿತ ವಧೆ" ಎಂಬ ಯಕ್ಷಗಾನ ರೂಪಕವನ್ನೂ ಪ್ರಯೋಗಿಸಿದರಂತೆ.

## ೫. ಶಿಕ್ಷಣ

ತಂದೆ ಕೃಷ್ಣರಾಯರು ಗೋಕಾಕದಲ್ಲಿ ಕೆಲಸ ಮಾಡುತ್ತಿದ್ದರಿಂದ ನಾರಾಯಣರಾಯರ ೧, ೨ ಹಾಗೂ ೩ನೇ ಇಯತ್ತೆಗಳ ಪ್ರಾಥಮಿಕ ಶಿಕ್ಷಣ ಗೋಕಾಕದಲ್ಲಿ ೪ನೇ ಇಯತ್ತೆಯ ಪ್ರಾಥಮಿಕ ಶಿಕ್ಷಣ ಗದಗಿನಲ್ಲಿ ಆಯಿತು. ೧ ರಿಂದ ೫ ಇಯತ್ತೆಗಳ ಮಾಧ್ಯಮಿಕ ಶಿಕ್ಷಣ ಗದಗಿನಲ್ಲಿ ಹಾಗೂ ೬ ಹಾಗೂ ಮ್ಯಾಟ್ರಿಕ್ ಶಿಕ್ಷಣ ಧಾರವಾಡದಲ್ಲಿ ಆಯಿತು. ೧೯೦೨ರಲ್ಲಿ ಮ್ಯಾಟ್ರಿಕ್ ಪರೀಕ್ಷೆಯನ್ನು ಉಚ್ಚ ಶ್ರೇಣಿಯಲ್ಲಿ ಪಾಸಾಗಿ ಉಚ್ಚ ಶಿಕ್ಷಣಕ್ಕಾಗಿ ಪುಣೆಯ ಫರ್ಗ್ಯುಸನ್ ಕಾಲೇಜು ಸೇರಿದರು. ಮತ್ತು ೧೯೦೭ರಲ್ಲಿ ಬಿ.ಎ. ಪದವಿಯನ್ನು ಪಡೆದರು. ಈ ಕಾಲಕ್ಕೆ ನಾರಾಯಣರಾಯರು ಮಲೇರಿಯ ಜ್ವರದಿಂದ ಪೀಡಿತರಾಗಿದ್ದರಿಂದ ವೈದ್ಯರು ವಿಶ್ರಾಂತಿ ಪಡೆಯಲು ಹೇಳಿದರು. ಆಗ ಅವರು ವಿದ್ಯಾಭ್ಯಾಸವನ್ನು ಕೆಲಕಾಲ ಮುಂದೆ ಹಾಕಿ ಧಾರವಾಡಕ್ಕೆ ಬಂದು ನೆಲೆಸಿದರು. ಈ ವಿಶ್ರಾಂತಿ ಸಮಯವನ್ನು ಅವರು ಹಾಸಿಗೆಯಲ್ಲಿ ಮಲಗಿ ಕಳೆಯದೆ ವಿಕ್ಟೋರಿಯಾ ಹೈಸ್ಕೂಲಿನಲ್ಲಿ (ಈಗಿನ ವಿದ್ಯಾರಣ್ಯ ಹೈಸ್ಕೂಲ್) ಶಿಕ್ಷಕರಾಗಿ ಎರಡು ವರ್ಷ ಕೆಲಸ ಮಾಡಿ ಒಳ್ಳೆಯ ಶಿಕ್ಷಕರೆಂಬ ಹೆಸರು ಪಡೆದರು. ಆಗ ಅಲ್ಲಿ ವರಕವಿ ಡಾ. ದ.ರಾ. ಬೇಂದ್ರೆಯವರು ಅವರ ವಿದ್ಯಾರ್ಥಿಯಾಗಿದ್ದರು. ಅವರಿಗೆ ನಾರಾಯಣರಾಯರು ವರ್ಗಶಿಕ್ಷಕರಾಗಿದ್ದರಲ್ಲದೆ ಇಂಗ್ಲೀಷ ಹಾಗೂ ಸಂಸ್ಕೃತ ಹೇಳಿ ಕೊಡುತ್ತಿದ್ದರು. ಇದೇ

ಸಮಯದಲ್ಲಿ ನಡೆದ ಅಪೂರ್ವ ಅನುಭವವೊಂದನ್ನು ನಾರಾಯಣರಾಯರು ಮೇಲಿಂದ ಮೇಲೆ ಹೇಳುತ್ತಿದ್ದರು. ಆಗ ದ.ರಾ. ಬೇಂದ್ರೆಯವರು ನಾಲ್ಕನೆ ವರ್ಗದಲ್ಲಿ ಇದ್ದರಂತೆ. (ಅಂದರೆ ಈಗಿನ ೮ನೇ ವರ್ಗ). ಶೇಕ್ಸಪಿಯರ್ ಕವಿಯ "ಮರ್ಚೆಂಟ್ ಆಫ್ ವೆನಿಸ್" ದ ಒಂದು ದೃಶ್ಯವನ್ನು ನಾರಾಯಣರಾಯರು ಕಲಿಸಿದರಂತೆ. ಮಾರನೇ ದಿನ "ಅದನ್ನು ಯಾರು ಬಾಯಿ ಪಾಠ ಹೇಳುತ್ತೀರಿ ?" ಎಂದು ಪ್ರಶ್ನಿಸಿದಾಗ ಬೇಂದ್ರೆ ಕೂಡಲೆ ಕೈಯೆತ್ತಿ ಎದ್ದು ನಿಂತು ಇಡೀ ದೃಶ್ಯವನ್ನು ಕಂಠಪಾಠ ಹೇಳಿದರಂತೆ.

ಬೇಂದ್ರೆಯವರ ಪ್ರತಿಭೆಯನ್ನು ಜಾಣ್ಮೆಯನ್ನೂ ಆಗಲೇ ಅರಿತ ನಾರಾಯಣರಾಯರು ಮುಂದೆ ಗದಗಿನಲ್ಲಿ ತಾವು ಸ್ಥಾಪಿಸಿದ ವಿದ್ಯಾದಾನ ಸಮಿತಿ ಶಾಲೆಯ ಮೊದಲ ಪ್ರಿನ್ಸಿಪಾಲರಾಗಿ (ಹೆಡ್‌ಮಾಸ್ತರಾಗಿ) ನಿಯುಕ್ತಿ ಮಾಡಿಕೊಂಡರು..ಆಗಿನಿಂದಲೇ ಬೇಂದ್ರೆಯವರಿಗೆ ಮಾಸ್ತರ್ ಎನ್ನುವ ಪರಿಪಾಠ ಬೆಳೆದು ಬಂದಿರಬೇಕು.

ಧಾರವಾಡದ ಈ ವಾಸ್ತವ ಸಾಕಷ್ಟು ಪ್ರಭಾವಶಾಲಿಯಾಗಿ ಪರಿಣಮಿಸಿತು. ಧಾರವಾಡದ ಸಾಂಸ್ಕೃತಿಕ ಪರಿಸರದಿಂದ ಸಾಹಿತ್ಯ, ನಾಟಕ ಹಾಗೂ ಕವಿತೆಗಳ ಬಗ್ಗೆ ಅವರಲ್ಲಿ ಹುದುಗಿದ್ದ ಭಾವನೆಗಳ ಅಲೆಗಳಿಗೆ ಮಹಾಪೂರ ಬಂದಂತಾಯಿತು. ಕನ್ನಡಾಭಿಮಾನವೂ ಗರಿಗೆದರಿತು. ಕನ್ನಡಕ್ಕಾಗಿ, ಕರ್ನಾಟಕಕ್ಕಾಗಿ ದುಡಿಯಲು ಪ್ರೇರಣೆ ಸಿಕ್ಕಿತು ಆಲೂರ ವೆಂಕಟರಾಯರು, ಮುದವೀಡು ಕೃಷ್ಣರಾಯರು, ದೇಶಪಾಂಡೆ ಗಂಗಾಧರರಾಯರು ಕನ್ನಡ ಚಳವಳಿ ಮಾಡುತ್ತಿದ್ದ ದಿನಗಳವು. ಮುಂದೆ ಮುಂಬಯಿಗೆ ಹೋಗಿ ಎಲ್.ಎಲ್.ಬಿ. ಕಲಿಯಲು ಲಾ ಶಾಲೆಯಲ್ಲಿ (ಆಗ ಅದು ಇನ್ನೂ ಲಾ ಕಾಲಜ ಆಗಿರಲಿಲ್ಲ) ಪ್ರವೇಶ ಪಡೆದರು. ಗಿರಗಾಂನಲ್ಲಿ ಇದ್ದು ಲಾ ಪದವಿ ಪಡೆದು ಮರಳಿ ಗದುಗಿಗೆ ಬಂದು ವಕೀಲಿ ವೃತ್ತಿಯನ್ನು ಪ್ರಾರಂಭಿಸಿದರು.

## ೬. ವೃತ್ತಿ ಹಾಗೂ ವೃತ್ತಿಗೌರವ

೧೯೧೧ ಲಾ ಪದವಿ ಮುಗಿಸಿ ಗದುಗಿಗೆ ಬಂದು ನಾರಾಯಣರಾಯರು ವಕೀಲಿ ವೃತ್ತಿಯಲ್ಲಿ ತೊಡಗಿದರು. ಧರ್ಮನಿಷ್ಠರೂ, ಸತ್ಯವಂತರೂ ಆಗಿದ್ದ ನಾರಾಯಣರಾಯರು ಕೆಲವೇ ವರ್ಷಗಳಲ್ಲಿ ಒಳ್ಳೆಯ ವಕೀಲರೆಂದು ಪ್ರಸಿದ್ಧಿ ಪಡೆದರು. ಕಾಯಿದೆ ಅಭ್ಯಾಸ ಮಾಡಿ ನ್ಯಾಯಾಧೀಶರಾಗುವ ಹಂಬಲ ಅವರಿಗಿತ್ತು. ಆದರೆ ಆ ಕನಸು ನನಸಾಗಲಿಲ್ಲ. ಆದರೆ ಒಂದು ರೀತಿಯಿಂದ ಅಪ್ರತ್ಯಕ್ಷವಾಗಿ ವರವಾಗಿಯೇ ಸಿದ್ಧವಾಯಿತೆನ್ನಬಹುದು. ಯಾಕೆಂದರೆ ನ್ಯಾಯಾಧೀಶರಾಗಿದ ರೆ ಆ ಹೊಣೆಯ ಭಾರದಲ್ಲಿ ಅವರಿಂದ ಇಷ್ಟು ಸಾಹಿತ್ಯ

ನಾರಾಯಣರಾಯರಿಂದ 'ವೃತ್ತಿಗೌರವ'ದ ದೊಡ್ಡ ಮೌಲ್ಯವನ್ನು ಕಲಿಯಲೇಬೇಕು. ಸಾಮಾನ್ಯವಾಗಿ ಯಶಸ್ವೀ ವಕೀಲರಾಗ ಬಯಸುವವರಿಗೆ ಬಾಯಿಯಿಂದ ಉದ್ಧಟ ಮಾತಾಡುವ ಗಡಸುತನವಿರಬೇಕೆಂದು ಜನರು ಯೋಚಿಸುತ್ತಾರೆ. ಆದರೆ ನಾರಾಯಣರಾಯರು ಇದಕ್ಕೆ ಅಪವಾದ. ಇವರು ಯಾವದೇ ರೀತಿಯ ಗಡಸುತನವಿಲ್ಲದೆಯೇ ಯಶಸ್ವಿ ವಕೀಲರಾದರು. ತಮ್ಮ ಸೌಜನ್ಯ, ಮಾರ್ದವ ಮತ್ತು ಕೋಮಲ ಸ್ವಭಾವದಿಂದಲೇ ತಮ್ಮ ಪಕ್ಷವನ್ನು ಕೋರ್ಟಿನಲ್ಲಿ ಸರಳವಾಗಿ, ನಿಚ್ಚಳವಾಗಿ ಸಮರ್ಥ ರೀತಿಯಲ್ಲಿ ಮಂಡಿಸಿ ಖ್ಯಾತಿ ಪಡೆದವರಲ್ಲಿ ಅವರು ಒಬ್ಬರಾಗಿದ್ದಾರೆ.

ನಾಲ್ಕೂವರೆ ದಶಕ ಕಾಲದವರೆಗೆ ಅವರು ವಕೀಲಿಯಲ್ಲಿಯೇ ನಿರತರಾಗಿದ್ದರು. ಅವರು ತಮ್ಮ ವೃತ್ತಿಯನ್ನು ನಿಷ್ಠೆಯಿಂದ, ಶ್ರದ್ಧೆಯಿಂದ ಹಾಗೂ ತುಂಬ ಅಕ್ಕರೆಯಿಂದ ನಿರ್ವಹಿಸಿದರು. ಯಾವಾಗಲೂ ನ್ಯಾಯಾಧೀಶರೊಂದಿಗೆ ಸಹಕರಿಸುತ್ತಿದ್ದರು. ತಮ್ಮ ಎಲ್ಲ ಮೊಕದ್ದಮೆಗಳ ಬಗ್ಗೆ ಕೂಲಂಕಷವಾಗಿ ಅಧ್ಯಯನ ನಡೆಸಿಯೂ ನ್ಯಾಯಾಲಯಕ್ಕೆ ಸಮಯಕ್ಕೆ ಸರಿಯಾಗಿ ಬರುತ್ತಿದ್ದರು. ಅವರು ಎಲ್ಲರ ವಿಶ್ವಾಸವನ್ನೂ ಗಳಿಸಿಕೊಂಡಿದ್ದರು. ತಮ್ಮ ಜತೆಯ ವಕೀಲರಲ್ಲಿಯೂ ಅತ್ಯಂತ ಸ್ನೇಹ ಭಾವದಿಂದ ವರ್ತಿಸುತ್ತಿದ್ದರು. ಹಿರಿಯ - ಕಿರಿಯರು ಎಂದು ಭೇದ ಭಾವವನ್ನು ಅವರು ಮಾಡುತ್ತಿರಲಿಲ್ಲ. ನ್ಯಾಯಾಲಯದಲ್ಲಿ ವಾದಿಸುವಾಗಲೂ ಅವರ ಮಾತಿನಲ್ಲಿ ಮಾರ್ದವತೆ ತುಂಬಿರುತ್ತಿತ್ತು. ಅಷ್ಟೇ ಏಕೆ ಅವರು ವಕೀಲರಾಗಿ ತಮ್ಮ ಕಕ್ಷಿದಾರರೊಂದಿಗಾಗಲಿ ಎದುರು ಪಕ್ಷದವರೊಂದಿಗಾಗಲೀ ಎಂದೂ ಒರಟಾಗಿ ವರ್ತಿಸಿದವರಲ್ಲ. ತಮ್ಮ ಕಕ್ಷಿದಾರರನ್ನು ಆತ್ಮೀಯವಾಗಿ ಬರಮಾಮಾಡಿಕೊಳ್ಳುತ್ತಿದ್ದರು. ಅವರು ವಹಿಸಿ ಕೊಡುವ ಯಾವ ಕೆಲಸವನ್ನೂ ಚೊಕ್ಕವಾಗಿ ನಿರ್ವಹಿಸುತ್ತಿದ್ದರು. ಜೊತೆಗೆ ಅವರ ಸುಖದುಃಖಗಳನ್ನೂ ವಿಚಾರಿಸುತ್ತಿದ್ದರು. ಈ ಅವಧಿಯಲ್ಲಿ ಅವರಿಂದ ಒಂದೇ ಒಂದು ಲೋಪ -ದೋಷ ಸಂಭವಿಸಲಿಲ್ಲ. ವಕೀಲಿ ವೃತ್ತಿಗೆ ಅವರೆಂದೂ ಕಲಂಕ ತರಲಿಲ್ಲ. ಅವರೆಂದೂ ಖೊಟ್ಟಿ ಕೇಸುಗಳನ್ನು ಕೈಗೆತ್ತಿಕೊಳ್ಳಲಿಲ್ಲ. ಮುಂದೆ ಅವರ ಎರಡನೇ ಮಗ ವಕೀಲರಾದಾಗ ಅವರಿಗೆ "ಖೊಟ್ಟಿ ಕೇಸುಗಳನ್ನು ಹಿಡಿಯಬೇಡ" ಎಂಬುದೇ ತಂದೆಯ ಉಪದೇಶವಾಗಿತ್ತು.

ಈ ವೃತ್ತಿಯಿಂದ ಅವರು ತುಂಬಾ ಹಣವನ್ನೇನೂ ಗಳಿಸಲಿಲ್ಲ. ಆದರೆ ಸಂಪಾದಿಸಿದ್ದು ಜನರನ್ನು, ಜನಾನುರಾಗವನ್ನು, ಜನರ ಗೌರವವನ್ನು. ಆ ಮೂಲಕವಾಗಿ ಜೀವನದಲ್ಲಿ ತೃಪ್ತಿಯನ್ನು ಕಂಡರು. ಈ ವೃತ್ತಿಯ ಉಪಯೋಗವನ್ನು ಅವರು ಸಾರ್ವಜನಿಕ ಜೀವನಕ್ಕೆ ಮಾಡಿಕೊಂಡರು. ಹೀಗೆ ೧೯೬೦ರ ವರೆಗೆ ವಕೀಲಿ ವೃತ್ತಿಯಲ್ಲಿ ತೊಡಗಿದ್ದರು. ಆಗ ಅವರ ಸಹೋದ್ಯೋಗಿಗಳಲ್ಲಿ ಪ್ರಮುಖರೆಂದರೆ ನೀಲಗುಂದ ಬಳವಂತರಾವ್, ಭೀಮರಾವ್ ಗೋಡಖಿಂಡಿ ಹಾಗೂ ಅನಂತರಾವ್ ಬಾಲಿಹಾಳ.

ಎರಡೇ ವರ್ಷವಾದರೂ ಅವರ ಶಿಕ್ಷಣ ಕ್ಷೇತ್ರದಲ್ಲಿಯ ಸೇವೆ ಸ್ಮರಣೀಯವಾದದ್ದು. ವೃತ್ತಿ ಯಾವದಾದರೂ ನಾರಾಯಣರಾಯರ ನಿರ್ವಹಣೆ ಅನುಕರಣೀಯವಾದದ್ದು. ಅವರ ಅಭಿಪ್ರಾಯದಂತೆ ಶಿಕ್ಷಕ ವೃತ್ತಿಯಲ್ಲಿ ಯಶಸ್ಸು ಪಡೆಯಬೇಕಾದರೆ ಶಿಕ್ಷಕನು ಅಭಿನಯ ಕಲೆಯಲ್ಲಿ ಪ್ರವೀಣನಾಗಿರಬೇಕು. ಶಿಕ್ಷಕನಾದವನು ಬಾಲಕರ ಮನಸ್ಸಿನ ಮೇಲೆ ಬೇರೆ ಬೇರೆ ಕಾಲದ - ದೇಶದ ವ್ಯಕ್ತಿ ವಿಷಯಗಳನ್ನು ಬಿಂಬಿಸಬೇಕಾದರೆ ಆಯಾ ಕಾಲ - ಪಾತ್ರಗಳ ತಕ್ಕಂತೆ ಆವರಣ ತಂದುಕೊಳ್ಳಲೇ ಬೇಕಾಗುವದು. ಈ ಭಿನ್ನ ಪಾತ್ರ ನಿರ್ವಹಣೆಯಿಂದಲೇ ಶಿಕ್ಷಕ ತನ್ನ ಸಾಮರ್ಥ್ಯ ಪಡೆಯಬಲ್ಲನೆಂದು ಅವರ ಅಭಿಪ್ರಾಯ.

ನಾರಾಯಣರಾಯರು ಕಾಲೇಜಿನ ರಜಾ ದಿನಗಳನ್ನೂ ವ್ಯರ್ಥವಾಗಿ ಕಳೆಯುತ್ತಿದ್ದಿಲ್ಲ. ರಜಾ ದಿನಗಳಲ್ಲಿ ಗದಗಿಗೆ ಬಂದಾಗ ಗದಗಿನಲ್ಲಿ ವೀರನಾರಾಯಣ ದೇವಸ್ಥಾನದ ಅರ್ಚಕ ಶ್ರೀ ಗುಡಿ ವೆಂಕಣ್ಣಾಚಾರ್ಯರು ನಡೆಸುತ್ತಿದ್ದ ಮೂರು ಇಯತ್ತೆಗಳ ಒಂದು ಖಾಸಗಿ ಶಾಲೆಯಲ್ಲಿ ಕಲಿಸುತ್ತಿದ್ದರಂತೆ. ತಮ್ಮ ರಜಾ ದಿಗಳಲ್ಲಿಯೂ ಶಿಕ್ಷಕ ವೃತ್ತಿಯನ್ನು ಮಾಡುತ್ತಿದ್ದ ನಾರಾಯಣರಾಯರ ಶಿಕ್ಷಣ ಪ್ರೇಮ ಸ್ಫುಟವಾಗಿ ಕಾಣುತ್ತದೆ. ಪ್ರಖ್ಯಾತ ವಿಜ್ಞಾನಿಯಾಗಿದ್ದ ಡಾ. ರಂಗರಾವ್ ಅಸುಂಡಿಯವರು ಇದೇ ಶಾಲೆಯ ಒಬ್ಬ ವಿದ್ಯಾರ್ಥಿಯಾಗಿದ್ದರಂತೆ.


ಶ್ರೀ ಹುಯಿಲಗೋಳ ನಾರಾಯಣರಾಯರ ಆತ್ಮೀಯ ಸ್ನೇಹಿತರೊಬ್ಬರು ಕರ್ಮ ಧರ್ಮ ಸಂಯೋಗದಿಂದ ಗದುಗಿಗೇನೆ ನ್ಯಾಯಾಧೀಶರಾಗಿ ಬಂದಿದ್ದರು. ಆಗ ನಾರಾಯಣರಾಯರು ಪರಿಣತ ವೃತ್ತಿ ನಿರತ ವಕೀಲರೆಂದು ಹೆಸರು ಪಡೆದಿದ್ದರು. ಮೊದಲನೆಯ ಭೇಟಿಯಲ್ಲಿಯೇ ಪರಸ್ಪರರು ಅನ್ಯೋನ್ಯವಾಗಿ ಮಾತನಾಡಿ ತಮ್ಮ ತಮ್ಮ ಸಂತೋಷವನ್ನು ಹಂಚಿಕೊಂಡರು. ಒಂದೆರಡು ವರ್ಷಗಳ ನಂತರ ಆ ನ್ಯಾಯಾಧೀಶರಿಗೆ ಬೇರೆ ಕಡೆಗೆ ವರ್ಗವಾಯಿತು. ವಾಡಿಕೆಯಂತೆ ಬೀಳ್ಕೊಡುವ ಸಮಾರಂಭ ನಡೆಯಿತು. ಆ ಸಮಾರಂಭದಲ್ಲಿ ಮಾತನಾಡುತ್ತ ನ್ಯಾಯಾಧೀಶರು - "ನಾನು ಮತ್ತು ಶ್ರೀ ಹುಯಿಲಗೋಳ ನಾರಾಯಣರಾಯರು ಇಬ್ಬರೇ ಇದ್ದಾಗ ಏಕವಚನದಲ್ಲಿ ಪರಸ್ಪರ ಸಂಬೋಧನೆ ಮಾಡುತ್ತಿದ್ದೆವು" ಎಂದು ಹೇಳಿದರು. ಇದನ್ನು ಕೇಳಿದ ವಕೀಲ ವೃಂದಕ್ಕೆ ಆಶ್ಚರ್ಯವೂ ಆನಂದವೂ ಏಕಕಾಲಕ್ಕೆ ಉಂಟಾದವು. ನಾರಾಯಣರಾಯರ ಹಾಗೂ ನ್ಯಾಯಾಧೀಶರ ಸಂಬಂಧ ಇಷ್ಟೊಂದು ಅನ್ಯೋನ್ಯವಾಗಿತ್ತೆಂದು ಎಲ್ಲರಿಗೂ ಆಗಲೇ ಗೊತ್ತಾಯಿತು. ನ್ಯಾಯಾಧೀಶರ ಪರಿಚಯ ಸಾಕಷ್ಟು ಇದ್ದಾಗಲೂ ನಾರಾಯಣರಾಯರು ಎಂದೂ ಅದನ್ನು ಇತರರಿಗೆ ಹೇಳಲಿಲ್ಲ - ತೋರಿಸಿಕೊಡಲಿಲ್ಲ. ಆ ಸ್ನೇಹ ಸಲುಗೆಯ

ದುರುಪಯೋಗ ಮಾಡಿಕೊಂಡು ತಮ್ಮ ವೃತ್ತಿಯಲ್ಲಿ ಹಿರಿಮೆ ಬೆಳೆಸಿಕೊಳ್ಳಲಿಲ್ಲ. ನಲವತ್ತು ವರ್ಷಗಳ ದೀರ್ಘಾವಧಿ ವಕೀಲಿ ವೃತ್ತಿಯಲ್ಲಿ ಅಪ್ಪಿ ತಪ್ಪಿಯಾದರೂ ತಮ್ಮ ಪವಿತ್ರ ವೃತ್ತಿಗೆ ಕುಂದು ಬರುವಂಥ ಒಂದಾದರೂ ಕೆಲಸ ಅವರಿಂದ ನಡೆಯಲಿಲ್ಲ. ವಕೀಲಿ ವೃತ್ತಿಗೆ ಗೌರವ ಕೊಟ್ಟು, ಶಾಶ್ವತ ಮೌಲ್ಯಪೂರಿತ ವೃತ್ತಿಗೌರವವನ್ನು ಪಡೆದರು.

"ವೃತ್ತಿಯು ಉಪಜೀವನದ ಒಂದು ಮಾರ್ಗ ಮಾತ್ರ. ಅದು ಜೀವನದ ಮೂಲಧ್ಯೇಯಕ್ಕೆ ಭಂಗ ತರುವಂತಾಗಬಾರದು" ಎಂಬುದು ದೀರ್ಘ ಕಾಲ ವಕೀಲಿ ವೃತ್ತಿಯನ್ನು ನಿರ್ವಹಿಸಿ ನಮಗೆಲ್ಲರಿಗೂ ಮಾರ್ಗದರ್ಶನ ಮಾಡಿದ ನಾರಾಯಣರಾಯರ ಅನುಭವಾಮೃತ ಸೂತ್ರ. ಸುಳ್ಳು ಕಪಟಗಳ ಕಪಿಮುಷ್ಠಿಯಲ್ಲಿ ಸಿಲುಕಿ ವಕೀಲಿ ವೃತ್ತಿ ಕಳಂಕಪ್ರಾಯವಾಗಿರುವಾಗ ಹುಯಿಲಗೋಳ ನಾರಾಯಣರಾಯರು ಅವುಗಳಿಂದ ಹರದಾರಿಯಷ್ಟು ದೂರ ಉಳಿದರು" ಎನ್ನುತ್ತಾರೆ ಶ್ರೀ ಬಾಳೀಹಳ್ಳಿಯವರು. ತಮ್ಮ ಶೀಲ, ಪ್ರೇಮ ಮತ್ತು ಪ್ರಾಮಾಣಿಕತೆಯಿಂದ ತಮ್ಮ ವಕೀಲಿ ವೃತ್ತಿಯಲ್ಲಿ ಸತ್ಯಯುಗವನ್ನು ತರಲು ದುಡಿದರು. ಉತ್ತಮ, ಪ್ರಾಮಾಣಿಕ, ನಿಷ್ಕಪಟ, ನಿಷ್ಕಳಂಕ ಹಾಗೂ ನೀತಿಯುಕ್ತ ವಕೀಲರಾಗಿಯೂ ಬಾಳುವೆಯನ್ನು ಸಾಗಿಸಿಕೊಂಡು ಹೋಗುವುದು ಸಾಧ್ಯವಿದೆ ಎಂಬ ಮಾತನ್ನು ದೃಢಪಡಿಸಿದ್ದಾರೆ ನಾರಾಯಣರಾಯರು. ಮೊದಲೊಮ್ಮೆ ನಾರಾಯಣರಾಯರ ಪಕ್ಷಗಾರರಾದವರು ಕೊನೆಯವರೆಗೂ ಅವರನ್ನೇ ನಂಬಿ ಉಳಿಯುತ್ತಿದ್ದರು. ಅವರ ಸರಳ ಜೀವನಕ್ಕೆ ಅವರ ವೃತ್ತಿ ಪೂರಕವಾಗಿತ್ತೇ ವಿನಃ ಗಳಿಕೆಯ ಸಾಧನವಾಗಿರಲಿಲ್ಲ. ಅಂತೆಯೇ ಅವರು ತಮ್ಮ ವಕೀಲಿ ವೃತ್ತಿಯಿಂದ ಬಹಳಷ್ಟು ಹಣವನ್ನೇನೂ ಸಂಪಾದಿಸಲಿಲ್ಲ. ಆದರೆ ಜನರ ಅಂತಃಕರುಣೆಯ ಮಾನಧನವನ್ನು ಸಂಪಾದಿಸಿದರು. ಶ್ರೀಮಂತರಾಗಲಿಲ್ಲ. ಆದರೆ ಜನಸಾಮಾನ್ಯರ ಹೃದಯ ಶ್ರೀಮಂತಿಕೆಯನ್ನು ಗಳಿಸಿದರು. ಆಸ್ತಿಯನ್ನು ಹೆಚ್ಚಿಸಿಕೊಳ್ಳಲಿಲ್ಲವೇನೊ ನಿಜ, ಆದರೆ ಸದ್ಗುಣಗಳ ಭವ್ಯ ಸ್ಥಿರಾಸ್ತಿಯನ್ನು ಮಾತ್ರ ಅಪರಂಪಾರವಾಗಿ ಪಡೆದರು. ತಮ್ಮಲ್ಲಿಯ ಸದ್ಗುಣಗಳ ಭಂಡಾರದಿಂದ ವಕೀಲಿ ವೃತ್ತಿಗೆ "ಸದ್ವೃತ್ತಿಭಾವ" ತುಂಬಿ ಅದರ ಗರಿಮೆಯನ್ನು ಹೆಚ್ಚಿಸಿದರು.

## ೭. ಕುಟುಂಬ ಜೀವನ

ಪುಣೆಯ ಕಾಲೇಜಿನಲ್ಲಿ ಕಲಿಯುತ್ತಿದ್ದಾಗಲೇ ಇವರ ಮದುವೆ ಹುಬ್ಬಳ್ಳಿಯ ಲಕ್ಷ್ಮೀಯವರ ಜೊತೆ ಹಿರಿಯರು ನಿಶ್ಚಯಿಸಿದರು. ೧೯೦೫ರಲ್ಲಿ ಲಕ್ಷ್ಮೀಬಾಯಿಯ ಜೊತೆ ಇವರ ವಿವಾಹ ಮಾಡಿದರು. ಆದರೆ ಈ ದಾಂಪತ್ಯ ಜೀವನ ಅಲ್ಪಕಾಲಿಕವಾದದ್ದು. ಏಕೆಂದರೆ ಲಕ್ಷ್ಮೀಬಾಯಿಯವರು ಅಕಾಲ ಮೃತ್ಯುವಿಗೆ ಈಡಾದರು. ಮುಂದೆ ಗದಗಿನಲ್ಲಿ



ನಾರಾಯಣರಾಯರು ಪತ್ನಿ ತುಳಸಾಬಾಯಿಯೊಂದಿಗೆ

ವಕೀಲಿ ವೃತ್ತಿ ಪ್ರಾರಂಭಿಸಿದ ಮೇಲೆ ೧೯೧೧ರಲ್ಲಿ ಕಡಕೋಳದ ಬಿಂದುರಾವ್ ದೇಶಪಾಂಡೆಯವರ ಮಗಳು ಅಹಲ್ಯಾಬಾಯಿಯನ್ನು ಹಿರಿಯರ ಆಗ್ರಹದ ಮೇರೆಗೆ ಮದುವೆಯಾದರು. ಅಹಲ್ಯಾಬಾಯಿಯವರನ್ನು ಮನೆಯಲ್ಲಿ ಎಲ್ಲರೂ "ಅವ್ವಕ್ಕ" ಎಂದು ಕರೆಯುತ್ತಿದ್ದರು. ಅವರ ಮದುವೆಯ ನಂತರದ ಹೆಸರು "ತುಳಸಾಬಾಯಿ". ತುಳಸಾಬಾಯಿಯವರಿಂದ ನಾರಾಯಣರಾಯರಿಗೆ ಏಳು ಗಂಡು ಮಕ್ಕಳೂ, ಮೂರು ಹೆಣ್ಣು ಮಕ್ಕಳೂ ಹುಟ್ಟಿದರು. ಇವರಲ್ಲಿ ಮೊದಲ ಮಗು ಕೃಷ್ಣ (ಅಜ್ಜನ ಹೆಸರಿಟ್ಟಿದ್ದರು) ಒಂದು ವರ್ಷದ್ದಾದಾಗಲೇ ಅಕಾಲ ಮೃತ್ಯುವಿಗೆ ಈಡಾಯಿತು. ಈಗ ಗಂಡುಮಕ್ಕಳು ಯಾರೂ ಉಳಿದಿಲ್ಲ. ಮೂವರು ಹೆಣ್ಣುಮಕ್ಕಳಲ್ಲಿ ಒಬ್ಬರು ಮಾತ್ರ ಜೀವಿಸಿದ್ದಾರೆ.

ಹಿರಿಯ ಮಗ ವೆಂಕಟರಾವ್ ಗದುಗಿನ ವಿದ್ಯಾದಾನ ಸಮಿತಿ ಶಾಲೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡಿ ನಿವೃತ್ತರಾದರು. ಎರಡನೆಯ ಮಗ ಮಾಧವರಾವ್ ಹುಬ್ಬಳ್ಳಿಯಲ್ಲಿ ಪೋಲಿಸ್ ಇನ್ಸ್‌ಪೆಕ್ಟರ ಆಗಿ ಕೆಲಸ ಮಾಡುತ್ತಿದ್ದರು. ೧೯೭೯ರಲ್ಲಿ ನಿಧನರಾದರು. ಮೂರನೆಯವರಾದ ಶ್ಯಾಮರಾವ್ ಧಾರವಾಡದಲ್ಲಿ ಸರಕಾರೀ ನೌಕರಿಯಲ್ಲಿದ್ದರು.

ಮುಂದೆ ಕೆಲವು ದಿನ ವಕೀಲಿ ವೃತ್ತಿಯನ್ನು ಮಾಡಿದರು. ಇವರಿಗಿಂತ ಚಿಕ್ಕವರಾದ ಗೋವಿಂದರಾಯರು ಕೃಷಿ ಪದವಿ ಪಡೆದುಕೊಂಡು ಬಳ್ಳಾರಿಯಲ್ಲಿ ಸರಕಾರೀ ಕೃಷಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ನಾರಾಯಣರಾಯರ ಹಿರಿಯ ಮಗಳು


ಸೋನುಬಾಯಿಯನ್ನು ನಿಪ್ಪಾಣಿಯ ಕಾಗವಾಡೆ ಮನೆತನಕ್ಕೆ ಕೊಟ್ಟಿದ್ದರು. ಇವರಿಗಿಂತ ಚಿಕ್ಕವಳು ಸೀತಮ್ಮ. ಈಗ ವಿಜಾಪುರದಲ್ಲಿದ್ದಾರೆ. ನಾರಾಯಣರಾಯರ ಮಕ್ಕಳಲ್ಲಿ ಈಗ ಸಧ್ಯ ಜೀವಿಸುವವರು ಇವರೊಬ್ಬರೇ. ಇವರ ಪತಿ ಶ್ರೀ ಆರ್.ಜಿ. ದೇಸಾಯಿ ವಿಜಾಪುರದ ಪಿ.ಡಿ.ಜೆ. ಹೈಸ್ಕೂಲಿನಲ್ಲಿ ಮುಖ್ಯೋಪಾಧ್ಯಾಯರಾಗಿ ಕೆಲಸ ಮಾಡುತ್ತಿದ್ದರು. ಸೀತಮ್ಮ ತಂದೆ ರಚಿಸಿದ ಅನೇಕ ಹಾಡುಗಳನ್ನು ಹಾಡುತ್ತಿದ್ದರು. ನಾರಾಯಣರಾಯರ ಕೊನೆಯ ಮೂರು ಮಕ್ಕಳೂ ಚಿಕ್ಕವರಿದ್ದಾಗಲೇ ತೀರಿದರು. ಧ್ರುವ ಎಂಬ ಮಗ ಹದಿನಾರನೇ ವಯಸ್ಸಿನಲ್ಲಿ ಹಾಗೂ ಪ್ರೇಮ ಎಂಬ ಮಗಳು ಹದಿನಾಲ್ಕನೇ ವಯಸ್ಸಿನಲ್ಲಿ ತೀರಿದರು. ಅದೂ ಇಬ್ಬರೂ ಒಂದೆರಡು ತಿಂಗಳ ಅಂತರದಲ್ಲಿಯೇ ತೀರಿದರು. ಕೊನೆಯ ಮಗು ಹುಟ್ಟಿದ ಕೂಡಲೆ ಮರಣವನ್ನಪ್ಪಿತು. ಇವೆಲ್ಲ ಮನೆಯ ಜನಕ್ಕೆ ಒಂದರ ಮೇಲೊಂದು ಆಘಾತಗಳು.

ನಾರಾಯಣರಾಯರ ಪತ್ನಿ ತುಳಸಾಬಾಯಿಯವರೂ ಬಹಳ ದಿನ ಹಾಸಿಗೆ ಹಿಡಿದಿದ್ದು ಸ್ವರ್ಗಸ್ಥರಾದರು. ಇದಕ್ಕೆ ಮೊದಲೇ ಇಬ್ಬರೂ ಸಹೋದರರೂ ಇಲ್ಲವಾಗಿದ್ದರು. ಇದೇ ವೇಳೆಗೆ ತಮ್ಮ ಶ್ರೀನಿವಾಸನ ಕುಟುಂಬದ ಪೂರ್ಣ ಭಾರ ನಾರಾಯಣರಾಯರ ಮೇಲೆ ಬಿದ್ದಿತು. "ಹೆತ್ತ ಮಕ್ಕಳು ನಿಲಲಿ । ತನ್ನನು ತೆತ್ತವರ ಬಿಡೆನೆಂಬ ಭಾಷೆಯಿತ್ತ" (ಕುಮಾರವ್ಯಾಸ ಭಾರತ) ಎಂಬ ಕೃಷ್ಣನ ಹೇಳಿಕೆಯಂತೆ ಅದೇ



ನಾರಾಯಣರಾಯರು ಮಗ ಗೋವಿಂದ ಹಾಗೂ ಸೊಸೆ,
ಮೊಮ್ಮಕ್ಕಳೊಡನೆ (ರಾಯಚೂರಿನಲ್ಲಿ)

ತತ್ವವನ್ನು ಅನುಸರಿಸಿ ಈ ಹೊಣೆಗಾರಿಕೆಯನ್ನು ಸಂಪೂರ್ಣವಾಗಿ ಹೊತ್ತುಕೊಂಡು ತಮ್ಮನ ಮಕ್ಕಳ ಪಾಲನೆ - ಪೋಷಣೆಯನ್ನು ವಾತ್ಸಲ್ಯದಿಂದ ಮಾಡಿದರು. ಅವರ ಇಬ್ಬರೂ ಮಕ್ಕಳಿಗೆ ಒಳ್ಳೇ ವಿದ್ಯಾಭ್ಯಾಸ ಮಾಡಿಸಿದರಲ್ಲದೇ ಅವರಿಬ್ಬರ ಮುಂಜಿವೆ, ಮದುವೆ ಮಾಡಿದರು. ಅವರಲ್ಲಿ ಹಿರಿಯವರಾದ ಶ್ರೀಹನುಮಂತ ರಾವ್ ಹುಯಿಲಗೋಳ ನಾರಾಯಣ ರಾಯರು ಸಂಸ್ಥಾಪಿಸಿದ ವಿದ್ಯಾದಾನ ಸಮಿತಿ ಶಾಲೆಯಲ್ಲಿಯೇ ಸೇವೆ ಸಲ್ಲಿಸಿದರು. ವಿದ್ಯಾದಾನ ಸಮಿತಿ ಬಾಲಕಿಯರ ಶಾಲೆ - ಹಾಗೂ ಕಾಲೇಜಿನ ಪ್ರಿನ್ಸಿಪಾಲರಾಗಿ ನಿವೃತ್ತಿಹೊಂದಿದರು. ಎರಡನೆಯವರಾದ ಅನಂತರಾವ್ ಭಾರತ ಸರಕಾರದ ವಾಯುದಳದಲ್ಲಿ ವಿಮಾನದ ಎಂಜನಿಯರಾಗಿದ್ದರು. ೧೯೪೭ರಲ್ಲಿ ಭಾರತದ ಗಡಿಯ ಸುರಕ್ಷೆ ಮಾಡುವಾಗ ವಿಮಾನ ಅಪಘಾತದಲ್ಲಿ ಮರಣ ಹೊಂದಿದರು. ಹಿಮಾಲಯದ ಎತ್ತರದ ಬರ್ಫಿನಲ್ಲಿ ಬಿದ್ದ ವಿಮಾನದ ಪತ್ತೆಯಾದದ್ದು ಮುಂದೆ ೧೯೮೪ರಲ್ಲಿ. ಭಾರತ ಸರಕಾರದದವರು ಅವರನ್ನು ಆಗ ಗೌರವಿಸಿ ಶವಸಂಸ್ಕಾರ ಮಾಡಿದರು. ತಮ್ಮನ ಹೆಣ್ಣುಮಕ್ಕಳಿಗೂ ಪ್ರಾಥಮಿಕ ಶಿಕ್ಷಣ ಕೊಡಿಸಿ ಮುಂದೆ ಮದುವೆ ಮಾಡಿಕೊಟ್ಟರು. ಇವರಿಬ್ಬರೂ - ನರ್ಮದಾ (ರಾಧಾಬಾಯಿ ಪಾಗೆ) ಹಾಗೂ ಕುಸುಮಾ (ಕುಸುಮಾ ಘೋಡೆ) ದೊಡ್ಡಪ್ಪನ ದೇಶಭಕ್ತಿಯ ಸಂಸ್ಕಾರ ಪಡೆದವರು. ಅವರ ಜೊತೆ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದರು.



ನಾರಾಯಣರಾವ್ ಮಗ ಮಾಧವರಾವ್ ಹಾಗೂ ಸೊಸೆ,
ಮೊಮ್ಮಕ್ಕಳೊಂದಿಗೆ

## ೮. ವಂಶ ವೃಕ್ಷ

ಹನುಮಂತರಾಯರು (ನಾರಾಯಣರಾಯರ ಮುತ್ತಜ್ಜನ ತಂದೆ)

೧ ೨ ೩ ೪ ೫ ೬ ೭

ನಾರಾಯಣರಾಯರು (ಮುತ್ತಜ್ಜ)

ಕೇಶವರಾಯರು (ಅಜ್ಜ)

೧ ತಾತೇರಾಯರು
೨ ಕೃಷ್ಣರಾಯರು (ತಂದೆ) ರಾಧಾಬಾಯಿ (ಬಹಿಣಕ್ಕ) (ತಾಯಿ)
೩ ಗೋಪಾಳರಾಯರು
೪ ಗುರುರಾಯರು

೧ ನಾರಾಯಣರಾಯರು (ತುಳಸಾಬಾಯಿ) (ಪತ್ನಿ) ಅವ್ವಕ್ಕ
೨ ಶ್ರೀನಿವಾಸರಾಯರು ಇಂದಿರಾಬಾಯಿ (ಪತ್ನಿ)
೩ ಕೇಶವರಾಯರು ರುಕ್ಮಿಣಿಯಬಾಯಿ (ಪತ್ನಿ)

೧ ಕೃಷ್ಣ
೨ ವೆಂಕಟೇಶ
೩ ಸೋನುಬಾಯಿ
೪ ಮಾಧವ
೫ ಶ್ಯಾಮ
೬ ಸೀತೂಬಾಯಿ
೭ ಗೋವಿಂದ
೮ ಧ್ರುವ
೯ ಪ್ರೇಮಾ
೧೦ ಗೋಪಾಲ


೧ ಹನುಮಂತ
೨ ನರ್ಮದಾ (ರಾಧಾಬಾಯಿ ಪಾಗೆ)
೩ ಅನಂತ
೪ ಕುಸುಮಾ

೧ ಶಾಂತಾ
೨ ಬಿಂದು
೩ ದಮಯಂತಿ
೪ ಸುಂದರಾ

೧ ಪ್ರಭಾ (ಕೆರೂರ)
೨ ಮೋಹನ (ಪಾಗೆ)
೩ ಕಮಲಾ (ಪುರಂದರೆ)
೪ ವಿಮಲಾ (ರಾಧಾ ಕುಲಕರ್ಣಿ) (ಲೇಖಿಕಿ)
೫ ಲೀಲಾ (ಮಾಲಿಸಿ ಪೂಜಾರ)

ಕುಟುಂಬದ ಎಲ್ಲ ಸದಸ್ಯರೂ ಅವರನ್ನು ಸಂಭೋದಿಸುತ್ತಿದ್ದುದು "ನಾನಾ" ಎಂದು. ಅವರ ಹಿರಿಯ ಮಗಳು ಚಿಕ್ಕವಳಿದ್ದಾಗ ಮನೆಯ ಜನ ಕರಿಯುವಂತೆ "ನಾರಾಯಣಾ" ಅನ್ನಲು ಹೋಗಿ ತೊದಲು ನುಡಿಯಿಂದ "ನಾನಾ" ಅನ್ನುತ್ತಿದ್ದಳಂತೆ. ಅದೇ ಹೆಸರು ಅವರಿಗೆ ಬಿದ್ದುಬಿಟ್ಟಿತು. ನಾವೆಲ್ಲರೂ ಅವರನ್ನು ಕರೆಯುತ್ತಿದ್ದುದು "ನಾನಾ" ಎಂತಲೇ. ಮೊಮ್ಮಕ್ಕಳಾದ ನಾವೂ ಅವರನ್ನು 'ಬಾ', 'ಹೋಗು' ಎಂದು ಏಕವಚನದಲ್ಲಿ ಕರೆಯುತ್ತಿದ್ದೆವು. ಇದರ ಬಗ್ಗೆ ನಮ್ಮ ಮನೆಯಲ್ಲಿ ಒಂದು ಪ್ರಸಂಗ ನಡೆಯಿತು. ನಮ್ಮ ಅಜ್ಜ (ತಂದೆಯ ತಂದೆ) ಜಿ.ಜಿ. ಪಾಗೆಯವರು ಮಹಾರಾಷ್ಟ್ರದವರು. ಶಿಷ್ಟತೆಗೆ ಮಹತ್ವ ಕೊಡುತ್ತಿದ್ದ ಮಹಾರಾಷ್ಟ್ರದ ಸಂಸ್ಕೃತಿಯ ಅವರು ನಮ್ಮನ್ನು "ನಾನಾ ನಿಮ್ಮ ಅಜ್ಜ, ಅವರನ್ನು ಬಾ, ಹೋಗು ಎಂದು ಕರೆಯಬಾರದು, 'ಬರ್ರಿ' 'ಹೋಗ್ರಿ' ಅನ್ನಬೇಕು" ಎಂದು ಬೈದರು. ಆಗ ಅಲ್ಲಿಯೇ ನಿಂತು ಅದನ್ನು ಕೇಳಿದ ನಾನಾ ಅವರು ಅವರಿಗೆ ಏನು ಹೇಳಿದರು ಗೊತ್ತೆ ? "ಡ್ಯಾಕರ , ಅವರು ನನಗ ಬಾ, ಹೋಗು ಅಂತನ ಅನ್ನಿ, ಯಾರೂ ದೇವರಿಗೆ ಅಥವಾ ತಮ್ಮ ತಾಯಿಗೆ 'ಬರ್ರಿ, ಹೋಗ್ರಿ' ಅನ್ನೂದಿಲ್ಲ. 'ಬಾ, ಹೋಗು' ಅಂದ್ರ ಹೆಚ್ಚಿಗಿ ಹತ್ರ ಅನಸ್ತದ, ಹೆಚ್ಚಿಗಿ ಆತ್ಮೀಯತಾ ಬರ್ತದ" ಅವರ ಈ ತರ್ಕ ನಮಗೆ ತುಂಬಾ ಹಿಡಿಸಿತು. ಅದನ್ನೆಂದೂ ಮರೆಯಲು ಸಾಧ್ಯವಿಲ್ಲ.

"ನಾನಾ" ಮನೆಯ ಎಲ್ಲರಿಗೂ ಪ್ರೀತಿ ಪಾತ್ರರು. ಎಲ್ಲರ ಬಗ್ಗೆಯೂ ಅವರಿಗೆ ಸಹೃದಯತೆ. ಅವರು ಎಂದೂ ಯಾರಿಗೂ ಬೈದದ್ದನ್ನು ಅಥವಾ ಸಿಟ್ಟಿಗೆ ಬಂದದ್ದನ್ನು ಯಾರೂ ನೋಡಿದವರಿಲ್ಲ.



## ೯. ನಾರಾಯಣರಾಯರ ಗದಗಿನ ಮನೆ

ನಾರಾಯಣರಾಯರ ಮನೆ ಇರುವದು ಗದಗಿನ ಹಾಳುದಿಬ್ಬದಲ್ಲಿ. ಬಹು ಇಕ್ಕಟ್ಟಾದ ಬೀದಿಯಲ್ಲಿ ಹಾದು ಹೋಗಬೇಕು. ಹಳೆಯ ಮಾದರಿಯ ಮಣ್ಣಿನ ಮನೆ. ಕಿಡಕಿಗಳ ಬದಲು ಬೆಳಕಿಂಡಿಗಳಿವೆ. ಮನೆಯನ್ನು ಪ್ರವೇಶಿಸುತ್ತಲೇ ಅಂಗಳ. ಮುಖ್ಯ ದ್ವಾರದ ಎರಡು ಕಡೆ ಕಲ್ಲಿನ ಕಟ್ಟೆಗಳು. ಮುಂದೆ ಜಗುಲಿ. ಅಲ್ಲಲ್ಲಿ ಕಂಬಗಳು. ಮನೆಯನ್ನು ಎರಡು ಭಾಗವಾಗಿ ವಿಂಗಡಿಸಲಾಗಿದೆ. ಒಂದು ಕಡೆಗೆ ನಾರಾಯಣರಾಯರ ಮನೆ, ಇನ್ನೊಂದು ಕಡೆ ಅವರ ತಮ್ಮನಾದ ಶ್ರೀನಿವಾಸರಾಯರ ಮನೆ.

ಇವರ ಮನೆ ಇರುವದು ವೀರನಾರಾಯಣ ದೇವಸ್ಥಾನದ ಸಮೀಪವೆ. ಈ ಹಾಳು ದಿಬ್ಬಕ್ಕೆ ಪೌರಾಣಿಕ ಆಖ್ಯಾಯಿಕೆಯಿದೆ. ಇಲ್ಲಿ ಜನಮೇಜಯ ರಾಜನು ಯಜ್ಞ ಮಾಡಿದ್ದನೆಂದು ಪ್ರತೀತಿಯಿದೆ. ಇಂದಿಗೂ ಇಲ್ಲಿ ಅಗಿದರೆ ಬೂದಿಯಿಂದ ಕೂಡಿದ ಮಣ್ಣಿನ ಹೆಂಟೆಗಳು ದೊರಕುತ್ತವೆಯಂತೆ. ಮೇಲಿನ ಮಣ್ಣೂ ಬೂದಿ ಬೂದಿಯಾಗಿಯೇ ಇದೆ. ಅಂತೂ ಜನಮೇಜಯ, ವೀರನಾರಾಯಣ, ಅಶ್ವತ್ಥಾಮ, ಕುಮಾರವ್ಯಾಸ ಇಂತಹ ಪವಿತ್ರ ಹೆಸರುಗಳ ಸಂಬಂಧಗಳಿಗಾಗಿ ಗದಗಿನ ಅಗ್ರಹಾರ, ಹಾಳುದಿಬ್ಬ ಮಹತಿ ಪಡೆದಿವೆ.

ಸಧ್ಯದ ನಾರಾಯಣರಾಯರ ಮನೆಯ ದೃಶ್ಯ ದಯನೀಯವಾಗಿದೆ. ಸಿ.ಜಿ.ಬಿ. ಹಿರೇಮಠರು ಹೇಳಿದಂತೆ "ಈ ನಾಡು ಕಟ್ಟಿದವರನ್ನು ಸದಾ ಮರೆಯುತ್ತಲೇ ಬಂದಿರುವ ನಾವು ಗದುಗಿನ ಕನ್ನಡಿಗ ಕವಿ, ನಾಟಕಕಾರ ಹುಯಿಲಗೋಳ ನಾರಾಯಣರಾಯರನ್ನೂ ಕೂಡ ಮರೆತವರ ಪಾಲಿಗೆ ಸೇರಿದ್ದೇವೆ." 'ನಾನಾ' ಅವರ ಮೇಲೆ ಪುಸ್ತಕ ಬರೆಯಲು ಯೋಚಿಸಿ ಕಳೆದ ವರ್ಷ ನಾನು ಗದುಗಿಗೆ ಹೋಗಿ ಅವರು ಕುಳಿತಿರುತ್ತಿದ್ದ ಜಾಗದ ಛಾಯಾಚಿತ್ರ ತೆಗೆದುಕೊಳ್ಳಲು ಅವರ ಮನೆಗೆ ಹೋದೆ. ಮನೆಯ ಈಕಡೆ ಭಾಗದಲ್ಲಿ ಅವರ ಮೊಮ್ಮಗ ಹಾಗೂ ಸೊಸೆ ಇರುತ್ತಾರೆ. ಹೊಸಮನೆಗೆ ಕೀಲಿ ಹಾಕಿದ್ದರು. ಅದನ್ನು ಅವರ ಸೊಸೆಯಿಂದ ತೆಗೆಯಿಸಿ ಒಳಗೆ ಹೋಗಿ ನೋಡಿದಾಗ ದಿಗ್ಭ್ರಾಂತಳಾದೆ. ಆ ಎರಡೂ ಕೋಣೆಗಳೂ ಮೊಣಕಾಲವರೆಗೆ ಮಣ್ಣು, ಜಾಡ, ಕಟ್ಟಿಗೆ ತುಂಡುಗಳು, ಮುರಿದ ಕುರ್ಚಿ, ಮನೆಯ ಹಳೆಯ ಸಾಮಾನುಗಳು, ಭರಣಿಗಳು ಬೇಕು ಬೇಕಾದಲ್ಲಿ ಬಿದ್ದು ಆ ದೃಶ್ಯ ನೋಡಲಸಾಧ್ಯವಾಗಿತ್ತು. ಅಲ್ಲಿ ಭೂಕಂಪವೇನಾದರೂ ಸಂಭವಿಸಿದೆಯೋ ಎನಿಸುತ್ತಿತ್ತು. ಆ ಮಣ್ಣಿನ ರಾಶಿಯಲ್ಲಿಯೇ ಒಂದೆರಡು ಹಳೆಯ ಟ್ರಂಕುಗಳು ಹುಗಿದು ಹೋಗಿದ್ದವು. ಅವನ್ನು ತೆಗೆಯುವದೂ ಸಾಧ್ಯವಿರಲಿಲ್ಲ. ಒಂದು ಕಾಲಕ್ಕೆ ಅತ್ಯಂತ ಚೊಕ್ಕವಾಗಿದ್ದ ಕೋಣೆಯಲ್ಲಿ 'ನಾನಾ' ಬರೆಯುತ್ತ ಕುಳಿತಿರುವ ದೃಶ್ಯ ಕಣ್ಣೆದುರು ಬಂದು ಕಣ್ಣು ನನಗರಿವಿಲ್ಲದೆಯೇ ತೇವವಾದವು. ಕೈಯಲ್ಲಿದ್ದ ಕ್ಯಾಮರಾ ಎತ್ತುವ ಧೈರ್ಯವೂ

ಆಗಲಿಲ್ಲ. ಕ್ಷಣವೂ ನಿಲ್ಲದೆ ಹೊರಗೆ ಬಂದೆ. ಬೆಂಗಳೂರಿಗೆ ಬಂದು ಅಣ್ಣ (ಮೋಹನ ಪಾಗೆ ) ಅವರಿಗೆ ಸಂಗತಿ ಅರುಹಿದೆ.

ಅವರು "ನೀನು ಅದು ಇದ್ದ ಸ್ಥಿತಿಯಲ್ಲಿಯೇ ಫೋಟೊ ತೆಗೆಯಬೇಕಿತ್ತು, ತಪ್ಪು ಮಾಡಿದೆ" ಎಂದರು. ಮತ್ತೆ ಕೆಲವು ತಿಂಗಳ ನಂತರ ಹೋಗಿ ಫೋಟೊ ತೆಗೆದುಕೊಂಡು ಬಂದೆ. ಅವನ್ನು ನೋಡಿದಾಗೆಲ್ಲ ನನ್ನ ಮನಸ್ಸು ಮಿಡುಕುತ್ತದೆ. ನಾನೇ ಹೋಗಿ ಆ ಸ್ಥಳದಲ್ಲಿ, ಆ ಪುಣ್ಯಾತ್ಮ ಕುಳಿತ ಜಾಗದಲ್ಲಿ ಒಂದು ಚಿಕ್ಕ ಕೋಣೆ ಕಟ್ಟಿಸಿ ಬರಲಾ ? ಎನಿಸುತ್ತದೆ. ಈ ನನ್ನ ಚಿಕ್ಕ ಆಶೆ ಈಡೇರುವುದೆಂತು ? ತಿಳಿಯದು.

## ೧೦. ನಾರಾಯಣರಾಯರ ಅಂತ್ಯಕಾಲ

ನಾರಾಯಣರಾಯರು ತಮ್ಮ ಜೀವನದ ಕೊನೆಯ ದಿನಗಳನ್ನು ಅವರ ಎರಡನೆ ಮಗ ಮಾಧವರಾಯರ ಮನೆಯಲ್ಲಿ ಹುಬ್ಬಳ್ಳಿಯಲ್ಲಿ ಕಳೆದರು. "ಶರಣರ ಮಹಿಮೆ ಮರಣದಲ್ಲಿ ನೋಡು" ಎಂಬಂತೆ ಒಂದು ದಿನವೂ ನರಳದೆ ಯಾರಿಗೂ ತೊಂದರೆ ಕೊಡದೆ ಸ್ವರ್ಗದ ಬಾಗಿಲು ತೆರೆದ ದಿನವಾದ ವೈಕುಂಠ ಏಕಾದಶಿಯ ದಿನ ನೇರವಾಗಿ ವೈಕುಂಠ ಸೇರುವಂತೆ ಹೊರಟು ಹೋದರು. ಆದರೆ ಅವರಿಗೆ ತನ್ನ ಕೊನೆಯ ದಿನಗಳಲ್ಲಿ ಗದಗಿನ ವೀರನಾರಾಯಣನ ದರ್ಶನದಿಂದ ವಂಚಿತರಾದದ್ದು ನೋವನ್ನುಂಟು ಮಾಡಿತ್ತು. ಆದರೂ ಎದುರಿಗೆ ತೂಗು ಹಾಕಿದ್ದ ವೀರನಾರಾಯಣನ ಫೋಟೋದ ಎದುರಿಗೆ ತನ್ನ ದಿನದ ಕ್ರಮದಂತೆ ಒಂದಾಣೆ ದಕ್ಷಿಣೆ ಇಡುವದನ್ನು ಮಾತ್ರ ಅವರು ತಪ್ಪಿಸಲಿಲ್ಲ, ೧೯೭೧ರ ಜುಲೈ ೪ ರಂದು ನಾನಾ ಸ್ವರ್ಗಸ್ಥರಾದರು. ಆಗ ಅವರಿಗೆ ಎಂಬತ್ತೊಂಬತ್ತು ವರ್ಷ. ಸಾರ್ಥಕತೆಯ ತುಂಬು ಜೀವನ ಬಾಳಿದ ಇವರು ನಿಜಕ್ಕೂ ಪುಣ್ಯಾತ್ಮರು.

ತಮ್ಮ ಸ್ಮಶಾನಯಾತ್ರೆಯನ್ನು ಆಡಂಬರದಿಂದ ಮಾಡಬಾರದೆಂದು ಮೊದಲೇ ಹೇಳಿದ್ದರಂತೆ. ಕಾರಣ ಸರಳ ರೀತಿಯಲ್ಲಿ ಅವರ ಅಂತ್ಯಯಾತ್ರೆ ಮುಗಿಸಲಾಯಿತು. ಈ ವೇಳೆಗೆ ಅನೇಕ ಮಹಾನುಭಾವರು, ಸಾಹಿತಿಗಳು, ರಾಜಕಾರಣಿಗಳು ದಿವಂಗತರಿಗೆ ಶ್ರದ್ಧಾಂಜಲಿ ಅರ್ಪಿಸಿದರು.

## ೧೧. ಉತ್ತುಂಗ ವ್ಯಕ್ತಿತ್ವ

"ಸರಳತೆ ಹಾಗೂ ನಿರಾಡಂಬರಕ್ಕೆ ಇನ್ನೊಂದು ಹೆಸರು ಹುಯಿಲಗೋಳ ನಾರಾಯಣರಾಯರು" ಎಂದಿದ್ದಾರೆ ಬಾಳಿದಳಿಯವರು. ಅವರ ಈ ಅಭಿವ್ಯಕ್ತಿಯಲ್ಲಿ ಅತಿಶಯೋಕ್ತಿಯಿಲ್ಲ. ಆರಡಿ ಎತ್ತರದ, ವಿಶಾಲ ಹಣೆಯ, ನೀಳವಾದ ಮೂಗುಳ್ಳ ಗೌರ

ಬಣ್ಣದ ಗಂಭೀರವಾದರೂ ಮಮತೆಯಿಂದ ಕೂಡಿದ ನಗು ಮುಖದ ಸ್ಫುರದ್ರೂಪ ನಾರಾಯಣರಾಯರದು. ಅವರು ಎಂದಿಗೂ ಶುದ್ಧ ಖಾದಿಧಾರಿಗಳು. ತಲೆಯ ಮೇಲೆ ಖಾದಿ ರುಮಾಲು, ಮೈಯಲ್ಲಿ ತುಂಬು ತೋಳಿನ ಖಾದಿ ಜೋಧಪುರಿ ಕೋಟು ಅಚ್ಚ ಬಿಳಿಪಿನ ಖಾದಿ ಧೋತರ, ಕೈಯಲ್ಲಿ ಕೋಲು.

ಸ್ಥಿತಪ್ರಜ್ಞ - ಕುಟುಂಬದಲ್ಲಿ ಅನೇಕ ಕಷ್ಟಗಳನ್ನು ಕಂಡರೂ, ನೋವನ್ನು ಉಂಡರೂ ಭಗವದ್ಗೀತೆಯ ಸ್ಥಿತಪ್ರಜ್ಞನಂತೆ "ಸುಖ-ದುಃಖೆ, ಸಮೇ ಕೃತ್ವಾ ಲಾಭಾಲಭೌ, ಜಯಾ ಜಯೌ" ಎಂಬಂತೆ ಸಮಚಿತ್ತರಾಗಿ, ನಿರ್ಲಿಪ್ತ, ಅನಾಸಕ್ತ ಕರ್ಮಯೋಗಿಯಂತೆ ಯಾವಾಗಲೂ ಪ್ರಸನ್ನವದನರಾಗಿಯೇ ಶಾಂತರೀತಿಯಿಂದ ಸಮಸ್ಯೆಗಳನ್ನು ಎದುರಿಸಿದ್ದಾರೆ ನಮ್ಮ ನಾನಾ. ಎಲ್ಲರನ್ನೂ ಎಲ್ಲವನ್ನೂ ಸಮನಾರ್ಥ ಚಿತ್ತದಿಂದ ನೋಡುವದೇ ಅವರ ವಿಶಿಷ್ಟ ಗುಣ.

ಸಮತಾ ದೃಷ್ಟಿ - ತಮ್ಮ ಸ್ವಂತ ಮಕ್ಕಳಂತೆಯೇ ತಮ್ಮ ಸೋದರನ ಮಕ್ಕಳನ್ನು ಪೋಷಿಸಿದುದು ಅವರ ಸಮತಾ ದೃಷ್ಟಿಯ ನಿದರ್ಶನ. ಸಂಯಮಶೀಲತೆ, ಕ್ಷಮಾಗುಣ ಶಾಂತ ಸ್ವಬಾವ ಅವರ ವ್ಯಕ್ತಿತ್ವದ ಅನ್ಯ ಆಯಾಮಗಳು.

ಸರಳತೆ - ನಾರಾಯಣರಾಯರು ತುಂಬಾ ಸರಳ ಜೀವಿಯಾಗಿ ಬಾಳಿದರು. ಅವರು ಅತ್ಯಂತ ಸಾದಾ, ಸಾತ್ವಿಕ, ಸಾಂಪ್ರದಾಯಿಕ ಜೀವನ ನಡೆಸಿದರೂ ದ್ವಿಜಶ್ರೇಷ್ಠರಾಗಿದ್ದರೂ ಒಣ ಕಟ್ಟುನಿಟ್ಟಿಲ್ಲದ ಉದಾರ ಮತವಾದಿಗಳು.

ವೃತ್ತಿಗೌರವ - ತಮ್ಮ ವೃತ್ತಿಯ ಗರಿಮೆಯನ್ನು ಕಾಯ್ದುಕೊಂಡು ಸದಾಚಾರ, ಶೀಲ, ಸಚ್ಚಾರಿತ್ರ್ಯ - ಸುಸಂಪನ್ನ ಜನಪ್ರಿಯತೆ ಎಂಬ ಅತ್ಯಮೌಲ್ಯ ಶಾಶ್ವತ ಭಾಂಡಾರವನ್ನು ಅವರು ಗಳಿಸಿದರು.

ಕನ್ನಡದ ಬಗ್ಗೆ ಕಳಕಳಿ, ಕನ್ನಡದ ಅಭಿಮಾನ ಅಲ್ಲದೆ ಈ ನಾಡಿನ ಉತ್ತರೋತ್ತರ ವಿಕಾಸಕ್ಕೆ ಹಂಬಲ - ಇವೆಲ್ಲಾ ಅವರಲ್ಲಿ ತುಂಬಿ ತುಳುಕುತ್ತಿದ್ದವು.

ರಾಷ್ಟ್ರದ ಬಗ್ಗೆ ಅಮಿತ ಭಕ್ತಿ, ಗೌರವ, ಅವರನ್ನು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಹಯೋಗ ನೀಡಲು ಪ್ರೇರೇಪಿಸಿತು.


ಧಾರ್ಮಿಕ ವೃತ್ತಿ - ಧರ್ಮಪ್ರಜ್ಞೆ, ಅವರ ನರನಾಡಿಗಳಲ್ಲಿ ಹಾಸುಹೊಕ್ಕಾಗಿತ್ತು. ನಾರಾಯಣರಾಯರು ಗದುಗಿನ ವೀರ ನಾರಾಯಣನ ಪರಮ ಭಕ್ತರು. ಬೆಳಿಗ್ಗೆ ಮತ್ತು ಸಾಯಂಕಾಲ ಎರಡೂ ಹೊತ್ತೂ ಶ್ರೀ ವೀರನಾರಾಯಣನ ದರ್ಶನವಿಲ್ಲದೇ ಅವರ



**ಕುಟುಂಬದ ಎಲ್ಲರ ಪ್ರೀತಿಯ 'ನಾನಾ'**

ಕಾರ್ಯ ಆರಂಭವಾಗುತ್ತಿದ್ದಿಲ್ಲ - ಮುಗಿಯುತ್ತಿದ್ದಿಲ್ಲ. ಈ ಪರಿಪಾಠ ನಮ್ಮ ಅಜ್ಜ ಜಿ.ಜಿ. ಪಾಗೆಯವರಿಗೂ ಆಗಿಬಿಟ್ಟಿತು. ಗದಗಿನಲ್ಲಿ ನಮ್ಮ ಮನೆ ವೀರನಾರಾಯಣನ ಗುಡಿಯಿಂದ ಒಂದೂವರೆ ಮೈಲು ಅಂತರದಲ್ಲಿ. ಆದರೂ ಅಜ್ಜ ದಿನಕ್ಕೆ ಎರಡು ಸಲ ಗುಡಿಗೆ ಹೋಗಿಯೇ ತೀರುತ್ತಿದ್ದರು. ಅಲ್ಲಿ ನಾನಾ, ಅಜ್ಜ ಪಾಗೆಯವರಲ್ಲದೆ ಇನ್ನೊಬ್ಬ ಇವರ ಗುಂಪಿನ ಆತ್ಮೀಯರೆಂದರೆ ರಾಮಚಂದ್ರಪ್ಪ ಕುಷ್ಟಗಿ. ಈ ಮೂರು ಜನ ಗುಡಿಯಲ್ಲಿ ದೇವರ ದರ್ಶನ ತೆಗೆದುಕೊಂಡ ಮೇಲೆ ಹೊರಗಿನ ಕಟ್ಟೆಯ ಮೇಲೆ ಗಂಟೆಗಟ್ಟಲೆ ಹರಟೆ ಹೊಡೆಯುತ್ತ ಕುಳಿತು, ಕುಷ್ಟಗಿ ಅವರ ಅಂಗಡಿಗೆ ಹೋಗಿ ಅಲ್ಲಿಯೂ ಸ್ವಲ್ಪ ಹೊತ್ತು ಕಳೆದು ಪಲ್ಯಕಾಯಿ, ಸಾಮಾನು ಖರೀದಿಸಿ ಮನೆಗೆ ತೆರಳುತ್ತಿದ್ದರು. ನಾನಾ ದಿನನಿತ್ಯ ದೇವರಿಗೆ ಮಂಗಳಾರತಿ ಮಾಡಿಸಿ ದಕ್ಷಿಣೆ ಹಾಕುವ ಪರಿಪಾಠ ಇಟ್ಟುಕೊಂಡಿದ್ದರು. ಇದನ್ನು

ಅವರು ಎಂದೂ ತಪ್ಪಿಸಿದವರಲ್ಲ. ಆದರೆ ಪರಸ್ಥಳಕ್ಕೆ ಹೋದರೆ, ಅನಿವಾರ್ಯ ಕಾರಣಗಳಿಂದ ವೀರನಾರಾಯಣನ ದರ್ಶನ ತಪ್ಪಿದರೆ ಅವರು ಮರುದಿನ ದರ್ಶನಕ್ಕಾಗಿ ಹೋದಾಗ ಪ್ರಾಯಶ್ಚಿತ್ತಾರ್ಥವಾಗಿ ತಪ್ಪಿದಷ್ಟು ದಿನಗಳ ದಕ್ಷಿಣೆಯ ಹಣ ಅರ್ಪಿಸುತ್ತಿದ್ದರು. ಅವರ ಕೊನೆಯ ದಿನಗಳಲ್ಲಿ ಹುಬ್ಬಳ್ಳಿಯಲ್ಲಿದ್ದಾಗ ಅವರು ಮಲಗುವ ಕೋಣೆಯಲ್ಲಿ ದೊಡ್ಡ ವೀರನಾರಾಯಣನ ಫೋಟೊ ಹಾಕಿಕೊಂಡಿದ್ದರು. ಪ್ರತಿದಿನ ಆ ಫೋಟೋದ ದೇವರಿಗೆ ದಕ್ಷಿಣೆ ಅರ್ಪಿಸುತ್ತಿದ್ದರಂತೆ.



ಮನೆಯಲ್ಲೂ ಅವರ ದಿನಚರಿ ಪ್ರಾರಂಭವಾಗುವದು ದೇವರ ಪೂಜೆಯಿಂದಲೇ. ಬೆಳಗಿನ ಜಾವ ೪ ಗಂಟೆಗೆ ಎದ್ದು ತಾವೇ ನೀರು ಕಾಯಿಸಿಕೊಂಡು ಸ್ನಾನ ಮಾಡಿ ದೇವರ ಮುಂದೆ ತಾವೇ ಸಾರಿಸಿ, ರಂಗೋಲಿ ಇಟ್ಟು ಪೂಜೆ ಮುಗಿಸಿ ಗಂಧ, ಅಕ್ಷತೆಗಳಿಂದ ಭೂಷಿತರಾಗಿ ತಮ್ಮ ಕೆಲಸದ ಕೋಣೆಗೆ ಹೋಗುತ್ತಿದ್ದರು. ಅವರು ಕೂಡುವ ಆ ಭಾಗದ ಮನೆಗೆ 'ಹೊಸಮನಿ' ಎನ್ನುತ್ತಿದ್ದರು. ಬಹುಶಃ ಅದನ್ನು ನಂತರ ಕಟ್ಟಿರಬೇಕು. ಈ ಚೊಕ್ಕವಾದ ಕೋಣೆಯಲ್ಲಿ ಗುಡಾರ (ಜಮಖಾನೆ) ಹಾಸಿರುತ್ತಿತ್ತು. ಮೂಲೆಯಲ್ಲಿ ಬರೆಯುವ ಮೇಜಿನ ಹಿಂದೆ ನಾನಾ ನೆಲದ ಮೇಲೆ ಕುಳಿತು ಬರೆಯುತ್ತಿದ್ದ ದೃಶ್ಯ ನಮಗೆಲ್ಲ ಕಣ್ಣಿಗೆ ಕಟ್ಟಿದ ಹಾಗಿದೆ. ಹಳೆಯ ಕಾಲದ ಮನೆ ಬೆಳಕಿಂಡಿಯಿಂದ ಬರುವ ಬೆಳಕೇ ಬೆಳಕು. ಗೋಡೆಗೆ ನಾರಾಯಣ ದೇವರ ಫೋಟೊ. ಬೆಳಗಿನ ಜಾವದಲ್ಲಿ ಎದ್ದು ತಾವೇ ಬರೆದಿದ್ದ ನಾರಾಯಣನ ಸ್ತೋತ್ರ "ಏಳು ನಾರಾಯಣಾ ಏಳು ಲಕ್ಷ್ಮೀ ರಮಣ । ಏಳಯ್ಯ ಏಳು ಬೆಳಗಾಯಿತು" ಉದಯರಾಗ ಹೇಳುತಿದ್ದುದು ನಮ್ಮೆಲ್ಲರಿಗೂ ಚಿರಪರಿಚಿತ.

ವೀರನಾರಾಯಣನೇ ಅವರಿಗೆ ಕಾವ್ಯ ಬರೆಯಲು ಸ್ಫೂರ್ತಿ ಎಂದು ಅವರು ಮನಃಪೂರ್ವಕವಾಗಿ ನಂಬಿದ್ದರು. ಅಂತೆಯೆ ಅವರ ಎಲ್ಲ ಕವನಗಳಲ್ಲಿ "ಗದುಗಿನ ವೀರನಾರಾಯಣ" ಎಂಬ ಅಂಕಿತವು ಇದೆ. ನಾರಾಯಣರಾಯರು ವೀರನಾರಾಯಣನ ಕಿಂಕರರು, ನಿಸ್ಸೀಮ ಭಕ್ತರು. ಗದಗಿನ ಭಾರತವಂತೂ ಅವರಿಗೆ ಪೂಜನೀಯ ಮೇರು ಕೃತಿ. ಕುಮಾರವ್ಯಾಸನೆಂದರೆ ಎಲ್ಲಿಲ್ಲದ ಭಕ್ತಿ. ನಾರಾಯಣದೇವರ ಗುಡಿಗೆ ಹೋದಾಗ ನಾರಾಯಣ ದೇವರಿಗೆ ನಮಸ್ಕಾರ ಮಾಡಿ ಹೊರಬಂದು ನವರಂಗ ಮಂಟಪದಲ್ಲಿ ಕುಮಾರವ್ಯಾಸನ ಕಂಬದ ಎದುರಿಗೆ ನಿಂತು ಧ್ಯಾನದಿಂದ ನಮಸ್ಕರಿಸಿಯೇ ಅವರು ಹೊರಗೆ ಬರುತ್ತಿದ್ದರು.

ಗದಗಿನ ನಾರಾಯಣ ದೇವರ ಗುಡಿಯ ಬಗ್ಗೆ ನಮಗೆಲ್ಲಾ ಬೇಕಾದಷ್ಟು ಆಖ್ಯಾಯಿಕೆಗಳನ್ನು ಹೇಳುತ್ತಿದ್ದರು. ಅಲ್ಲಿಯ ಹೊರಕಟ್ಟೆಯ ಕಲ್ಲು ಚಪ್ಪಡಿಗಳನ್ನು ತೆಗೆದರೆ ನೀರು ಹರಿಯುವ ಶಬ್ದ ಕೇಳುವದೆಂದೂ ಅಲ್ಲಿ ಗುಪ್ತ ಗಂಗೆ ಇರುವಳೆಂದು ಹೇಳುತ್ತಿದ್ದರು. ಮೊದಲು ನಾರಾಯಣದೇವರ ಗುಡಿಯಿಂದ ತ್ರಿಕೂಟೇಶ್ವರ ಗುಡಿಗೆ ಹೋಗಲು ಸುರಂಗ ಮಾರ್ಗವಿತ್ತಂತೆ. ಅದು ಬಂದಾದ ಮೇಲೆ ಇಲ್ಲಿಯೇ ಈಶ್ವರನ ಸ್ಥಾಪನೆ ಮಾಡಿದರು.

ಪರಧರ್ಮ ಸಹಿಷ್ಣುತೆ - ನಾರಾಯಣರಾಯರು ತುಂಬಾ ಸರಳ ಜೀವಿಯಾಗಿ, ಸಾಂಪ್ರದಾಯಿಕ ಜೀವನ ನಡೆಸಿದರೂ, ವಿಪ್ರಶ್ರೇಷ್ಠರಾಗಿದ್ದರೂ ಮತ ಧರ್ಮದ ವಿಷಯಗಳಲ್ಲಿ ಉದಾರ ಮತವಾದಿಗಳು. ಗದುಗಿನ ವೀರನಾರಾಯಣ - ತ್ರಿಕೂಟೇಶ್ವರ

ನಾನಾ ತಾವು ಬರೆದ ಕವನಗಳಿಗೆ ರಾಗ ಹಾಗೂ ತಾಳ ತಾವೇ ಹಾಕಿರುತ್ತಿದ್ದರು. ಈ ಸಂಗೀತ ಪ್ರಜ್ಞೆ, ಸಂಗೀತ ಜ್ಞಾನ ಅದೂ ಶಾಸ್ತ್ರೀಯ ಸಂಗೀತ ಜ್ಞಾನ ಅವರಿಗೆ ಹೇಗೆ ಬಂತು ಎನ್ನುವದು ನಮಗೆಲ್ಲಾ ಯಕ್ಷ ಪ್ರಶ್ನೆ. ಅವರ ಕವನಗಳಲ್ಲಿ ಭಕ್ತಿಗೀತೆಗಳೇ ಜಾಸ್ತಿ. ಇನ್ನುಳಿದವು ದೇಶಭಕ್ತಿಗೀತೆಗಳು ಅಥವಾ ನಾಡಭಕ್ತಿಗೀತೆಗಳು. ಈ ಹಾಡುಗಳನ್ನು ಬರೆದು ತಂದು ನಮಗೆ ಓದಿ ತೋರಿಸಿ ಅಕ್ಕ ಕಮಲಳಿಗೆ ಅವನ್ನು ರಾಗ ಬದ್ಧವಾಗಿ ಕಲಿಸಿಬಿಡುತ್ತಿದ್ದರು ನಾನಾ. ಯಾಕಂದರೆ ಕಮಲಳಿಗೆ ಒಳ್ಳೆಯ ಸುಮಧುರ ಕಂಠ ದೈವದತ್ತ. ಶಾಲೆಯಲ್ಲೂ ನಾನಾ ಅವರು ಬರೆದ ಹಾಡುಗಳನ್ನು ಕಮಲ ಮೇಲಿಂದ ಮೇಲೆ ಹಾಡುತ್ತಿದ್ದಳು. ಮುಂದೆ ಶಾಸ್ತ್ರೀಯ ಸಂಗೀತ ಕಲಿತು ಪ್ರವೀಣೆಯಾದ ಮೇಲೆ ಅನೇಕ ಸಭೆಗಳಲ್ಲಿ, ರೇಡಿಯೊ ಕಾರ್ಯಕ್ರಮಗಳಲ್ಲಿ ಅನೇಕ ಸಲ ಅವಳು ಹಾಡಿದ್ದಾಳೆ. ತಮ್ಮ ಹಾಡುಗಳನ್ನು ಹಾಡಲು ಚಿಕ್ಕಂದಿನಿಂದಲೂ ನಾನಾ ಅವಳನ್ನು ತಮ್ಮ ಜೊತೆ ಕರೆದುಕೊಂಡು ಹೋಗುತ್ತಿದ್ದರು. ನವೆಂಬರ ಒಂದು, ೧೯೫೬ - ಕರ್ನಾಟಕ ಏಕೀಕರಣದ ದಿನ ಗದಗಿನಲ್ಲಿ ನಡೆದ ಭವ್ಯ ಸಮಾರಂಭದಲ್ಲಿ ಕಮಲ 'ಉದಯವಾಗಲಿ' ಹಾಗೂ ಏಕೀಕರಣಕ್ಕಾಗಿಯೇ ರಚಿಸಿದ ಇನ್ನೆರಡು ಹಾಡುಗಳು - 'ಬೆಳಗಲೆಂದಿಗೂ ನಮ್ಮ ಚೆಲುವ ಕನ್ನಡ ನಾಡು' ಹಾಗೂ "ಮೂಡಿದುದು ಮೂಡಿದುದು ಕನ್ನಡದ ರವಿಬಿಂಬ" ಹಾಡುಗಳನ್ನು ಹಾಡಿದಳು.

ಈ ಕೊನೆಯ ಎರಡು ಹಾಡುಗಳನ್ನು ಏಕೀಕರಣದ ನಂತರ HMV ರೆಕಾರ್ಡ ಕಂಪನಿಯಲ್ಲಿ ಕನ್ನಡ ವಿಭಾಗಕ್ಕೆ ನಿರ್ದೇಶಕರಾಗಿದ್ದ ನಮ್ಮ ಚಿಕ್ಕಪ್ಪ ಶ್ರೀ ವಸಂತರಾವ್ ಪಾಗೆಯವರು ಪ್ರಸಿದ್ಧ ಗಾಯಕ ಶ್ರೀ ಮನ್ನಾಡೆ ಹಾಗೂ ಗಾಯಕಿ ಶ್ರೀಮತಿ ಲಕ್ಷ್ಮೀಶಂಕರ ಅವರಿಂದ ಹಾಡಿಸಲು ನಿರ್ಧರಿಸಿದರು. ಈ ಕನ್ನಡ ಪದ್ಯಗಳ ಸರಿಯಾದ ಉಚ್ಚಾರವನ್ನೂ ಹಾಗೂ ನಾನಾ ಹಾಕಿದ ರಾಗವನ್ನೂ ತೋರಿಸಿಕೊಡಲು ಅಕ್ಕ ಕಮಲಳನ್ನು (ಆಗ ಅವಳು ಕೇವಲ ೧೪ ವರ್ಷದವಳು) ಮುಂಬೈಯಲ್ಲಿ ಮನ್ನಾಡೆಯವರ ಮನೆಗೆ ಕರೆದುಕೊಂಡು ಹೋದರಂತೆ. ಆಗ ಅವರು ಇವಳ ಹಾಡು ಕೇಳಿ "ನೀವು ಈ ಮಗುವಿನಿಂದಲೇ ಏಕೆ ಹಾಡಿಸಬಾರದು ?" ಎಂದು ಹಿಂದಿಯಲ್ಲಿ ಕೇಳಿದರಂತೆ. (ಈ ಮುಂದೆ ಮನ್ನಾಡೆ ಹಾಗೂ ಲಕ್ಷ್ಮೀ ಶಂಕರ ಅವರು ಹಾಡಿದ ನಾನಾ ಅವರ ಹಾಡುಗಳ HMV ಪ್ರಕಟನೆಯನ್ನು ಮೂಲರೂಪದಲ್ಲಿ ಪ್ರಕಟಿಸಲಾಗಿದೆ.)

ನಾವು ಚಿಕ್ಕವರಿದ್ದಾಗ ನವರಾತ್ರಿಯ ಹೊತ್ತಿಗೆ ಕೋಟೆ ಹಾಕುವದು ಒಂದು ಸಂಪ್ರದಾಯ. ಇದರಲ್ಲಿ ಪ್ರತಿದಿನ ಕೋಟೆಯ ಹಾಡುಗಳನ್ನು ಹೇಳುತ್ತ ಕೈ ಬಳ್ಳಿ ಹಿಡಿದು ಗುಂಪಿನ ಎಲ್ಲ ಹುಡಿಗೆಯರೂ ಒಬ್ಬೊಬ್ಬರ ಮನೆಗೆ ಹೋಗುತ್ತಿದ್ದೆವು. ಇವೆಲ್ಲಾ

ವೆಂಕಟೇಶ ಮಾಹಾತ್ಮೆಯ ಹಾಡುಗಳಿದ್ದು ಕೋಲಾಟದ ಶೈಲಿಯಲ್ಲಿ ಅಳವಡಿಸಲಾಗಿರುತ್ತಿತ್ತು. ಕೆಲವು ಸಲ ಎರಡು ಕೋಟೆಯ ಗುಂಪುಗಳಲ್ಲಿ "ವಾದ" ಎಂದು ಆಗುತ್ತಿತ್ತು. ಅದರಲ್ಲಿ ಈ ಹಾಡುಗಳ ಸ್ಪರ್ಧೆ ಇರುತ್ತಿತ್ತು. "ಮುಯ್ಯ" ಒಯ್ಯುವದು ಒಂದು ಕ್ರಮ. ಗದುಗಿನಲ್ಲಿ ಪಕ್ಕದ ಮನೆ ಕೃಷ್ಣಾಚಾರ ಪೂಜಾರರ ಮನೆಯಲ್ಲಿ ಕೋಟೆ ಹಾಕಿದ್ದೆವು. ನಾವು ಬಳ್ಳಿ ಕಟ್ಟಿ ಹಾಡುತ್ತ ಹೋಗುವಾಗ ಕುಷ್ಟಗಿ ಚಾಳಿನ ಇನ್ನೊಂದು ಕೋಟೆಯ ಗುಂಪಿನವರು ಈರ್ಷೆಯಿಂದ ನಮ್ಮ ಮೇಲೆ ಕಲ್ಲು, ಮಣ್ಣು ಎರಚಿ ನಮ್ಮ ಸೀರೆಗಳನ್ನು ಕತ್ತರಿಸಿ ತೊಂದರೆ ಕೊಟ್ಟಿದ್ದರು. ಮಾರನೇ ದಿನ ಅವರು ನಮ್ಮ ಕಡೆಗೆ "ವಾದ" ಕ್ಕೆ ಬರಬೇಕಾಗಿತ್ತು. ನಮಗೂ ಅವರ ಮೇಲೆ ಸೇಡು ತೀರಿಸಿಕೊಳ್ಳಬೇಕಾಗಿತ್ತು. ನಮ್ಮ ಅಕ್ಕ ಕಮಲ ಸಂಜೆಗೆ ನಾನಾ ಅವರು ಬಂದಾಗ ವಿಷಯವನ್ನೆಲ್ಲ ಹೇಳಿ "ನಾನಾ ನಮಗ ಒಂದು ಕ್ಯಾಟಿ ಹಾಡು ಬರದ ಕೊಡಪ್ಪಾ, ಆ ಕುಷ್ಟಗಿ ಚಾಳಿನವರಿಗೆ ಪಾಠ ಕಲಿಸಬೇಕಾಗೇದ" ಅಂದಳು. ನಾನಾ ಅವರು ಆಗಿಂದಾಗ ಬರೆದೇ ಬಿಟ್ಟರು.

*"ಕ್ಯಾಟಿ ಹಾಕಿದವಳು ಇವಳು*
*ಕೋಣನಂಥವಳು*
*ಓಡಿ ಓಡಿ ಹೋಗತಾಳ*
*ಝಾಡಿಸಿ ಒದಿರೆ - ಕೋಲು ಕೋಲೆನ್ನ ಕೋಲ ॥"*

ಹೀಗೆ ನಾನಾ ಅವರ ಹಾಸ್ಯ ಪ್ರವೃತ್ತಿಯೇನೂ ಕಡಿಮೆ ಇರಲಿಲ್ಲ.

ಒಂದು ಸಲ ನಮ್ಮ ಮಾಮಾನ ಮಗಳನ್ನು ವರ ಪಕ್ಷದವರು ನೋಡಲು ಬರಬೇಕಿತ್ತು. ನಾನಾ ಅವರಿಗೆ ಕನ್ಯಾಪರೀಕ್ಷೆಯ ನೆಪದಲ್ಲಿ ಹೆಣ್ಣುಮಕ್ಕಳನ್ನು ಅವಹೇಳನೆ ಮಾಡುವದು ಒಂದಿಷ್ಟೂ ಇಷ್ಟವಿರಲಿಲ್ಲ. ಆ ವರಮಹಾಶಯನೋ ಏನಿಲ್ಲದ ಪ್ರಶ್ನೆಗಳನ್ನು ಕೇಳಿದನಂತೆ ಆ ಹುಡುಗಿಗೆ, "ಭಾರತದ ವಿತ್ತ ಮಂತ್ರಿ ಯಾರು ?", "ಮುಂಬೈಯ ವಿಮಾನ ನಿಲ್ದಾಣದ ಹೆಸರೇನು".... ಮುಂತಾಗಿ. ಅದು ಮುಗಿದ ಕೂಡಲೆ ನಾನಾ ನಮ್ಮ ಮನೆಗೆ ಬಂದರು. ಅವರು ತುಂಬಾ ನೊಂದಿದ್ದರೆಂದು ಅವರ ಮಾತಿನಿಂದ ಗೊತ್ತಾಯ್ತು. ಕೊನೆಗೆ ನಮ್ಮ ತಾಯಿಗೆ ಹೇಳಿದರು - "ನೋಡು ನರ್ಮಾ (ನರ್ಮದಾ), ಇಂಥಾವೆಲ್ಲ ಪ್ರಶ್ನಿ ಕೇಳಿ ಆ ಹುಡಗಿಗ್ನ ಕಾಡಲಿಕ್ಕೆ ಹತ್ತಿದ್ದ ಆ ಹುಡುಗ ಮನೆತನ ಭಲೊ ಅದ ಅಂತ. ನನಗಂತೂ - ಹೋಗ್ಲೆಪ್ಪಾ, ಆಕೀಗೆ ಕಪಾಳಿಗೆ ಎರಡು ಹೊಡಿ ಅದರ ಲಗ್ನಾ ಮಾಡಿಕೊ ಅಂತ ಅನ್ನೋಣ ಅನಿಸಿತ್ತು." ಇದು ಅವರ ಸಹೃದಯತೆಗೆ ನಿದರ್ಶನ.

ಒಂದು ರಾತ್ರಿ ನಾನಾ ಅವರಿಗೆ ಎಚ್ಚರವಾಯಿತು. ಅವಾಗ ಮನೆಯಲ್ಲಿ ಏನೋ

ಸಪ್ಪಳವಾಯಿತು. ಹೊಸಮನೆಯಲ್ಲಿ ಮಲಗಿದ್ದ ಅವರು ಬೆಕ್ಕೇನಾದರೂ ಒಳಗೆ ಬಂದಿರಬೇಕು ಎಂದುಕೊಂಡು ನೋಡಲು ಒಳಗೆ ಬಂದರು. ಇವರು ಅಡುಗೆಯಮನೆಯಲ್ಲಿ ಕಾಲಿಟ್ಟ ಕೂಡಲೇ ಹಿಂದಿನ ಕೋಣೆಯ ಜಂತಿ ಧಡಾರನೆ ಬಿದ್ದು ಬಿಟ್ಟಿತು. ಇವರು ಒಂದು ನಿಮಿಷ ತಡ ಮಾಡಿದ್ದರೆ ಜಂತಿಯ ಕೆಳಗೆ ಸಿಕ್ಕು ಬಿಟ್ಟಿರುತ್ತಿದ್ದರು. ಎಲ್ಲವೂ ನಾರಾಯಣನ ದಯೆ.

ಹೀಗೇ ಇನ್ನೊಂದು ಘಟನೆ ನಡೆಯಿತು. ಒಮ್ಮೆ ಯಲಗೂರ ಹಣಮಂತದೇವರ ದರ್ಶನ ಪಡೆಯುವ ಇಚ್ಛೆಯಾಯಿತು. ಆಗ ವಿಜಾಪುರದಲ್ಲಿದ್ದ ತಮ್ಮ ಮಗಳು ಹಾಗೂ ಅಳಿಯಂದಿರಿಗೆ "ಆಲಮಟ್ಟಿಗೆ ಬನ್ನಿರಿ. ನಾನೂ ಗದಗಿನಿಂದ ಅಲ್ಲಿಗೆ ಬರುವೆನು. ಅನಂತರ ಎಲ್ಲರೂ ಕೂಡಿ ಬಸ್ಸಿನಿಂದ ಯಲಗೂರಕ್ಕೆ ಹೋಗೋಣ. ನಾಳಿಲ್ಲದೆ ನಾಡಿದ್ದು ಗುರುವಾರ ಇಲ್ಲಿಂದ ಹೊರಡುತ್ತೇನೆ" ಎಂದು ಪತ್ರಬರೆದರು. ಆದರೆ ಕೊನೆಗೆ ಏನು ಅನಿಸಿತೊ ಬುಧವಾರವೇ ಗಾಡಿ ಹಿಡಿದು ವಿಜಾಪುರಕ್ಕೆ ಹೋಗಿಬಿಟ್ಟರು. "ಏನು ಇಂದೇ ಬಂದು ಬಿಟ್ಟಿರಿ ?" ಎಂದಾಗ "ಏನೋ ಇಂದೇ ಹೊರಡಬೇಕು ಅನ್ನಿಸಿತು, ಬಂದುಬಿಟ್ಟೆ" ಎಂದರು. ಮರುದಿನ ಎಲ್ಲರೂ ಆಲಮಟ್ಟಿ ಸ್ಟೇಶನ್ನಿಗೆ ಹೋದರು. ಅಲ್ಲಿ ಗೊತ್ತಾಯಿತು. ಆ ದಿನ ಗದಗಿನಿಂದ ಹೊರಟ ಗಾಡಿ (ಯಾವ ಗಾಡಿಯಿಂದ ನಾನಾ ಹೊರಡಬೇಕಿತ್ತೊ ಅದು) ದಾರಿಯಲ್ಲಿ ದೊಡ್ಡ ಅಪಘಾತಕ್ಕೆ ಈಡಾಗಿತ್ತು. ಹಾದಿ ಬಂದಾಗಿಬಿಟ್ಟಿತ್ತು. ನಾನಾ ಅವರ ದೇವರಲ್ಲಿದ್ದ ಶ್ರದ್ಧೆಯ ಪರಿಣಾಮವಿರಬೇಕು. ಪರಮಾತ್ಮನು ಅವರನ್ನು ಒಂದು ದಿನ ಮೊದಲೇ ಹೊರಡುವಂತೆ ಮಾಡಿ ಅವರ ರಕ್ಷಣೆ ಮಾಡಿದ್ದನು.

ಮನೆ ಜನ ಬೆಳಗಿನ ಜಾವ ನಾಲ್ಕು ಗಂಟೆಗೆ ಎದ್ದು ನಾನಾ ಅವರಿಗೆ ನೀರು ಕಾಯಿಸಿ ಕೊಡಲು ಬೇಸತ್ತು ರಾತ್ರಿ ಮಲಗುವ ಮೊದಲೇ ೧೦ ಗಂಟೆಯ ಹೊತ್ತಿಗೆ ನೀರಿನ ಬಾಯಲರ್‌ಗೆ ಉರಿ ಹಾಕುತ್ತಿದ್ದರು. ಒಮ್ಮೆ ಆ ಉರಿ ಇಡೀ ಬಚ್ಚಲು ಮನೆಗೆ ಹತ್ತಿ ಉರಿಯತೊಡಗಿತ್ತು. ಹಿಂದಿನ ಮನೆಯ ಜನ ಮಧ್ಯರಾತ್ರಿ ಎದ್ದು ಉರಿ ನೋಡಿ ಮುಂದಿನ ಬಾಗಿಲು ಬಡಿಯ ಹತ್ತಿದರು. ಎಲ್ಲರೂ ಕಳ್ಳರು ಬಂದಿರಬೇಕೆಂದು ಹೆದರಿ ಇನ್ನಷ್ಟು ಗಟ್ಟಿಯಾಗಿ ಬಾಗಿಲ ಹಾಕಿಕೊಳ್ಳತೊಡಗಿದರು. ಆಗ ಹೊರಗಿನಿಂದ ಬಂದವರಲ್ಲಿ ಒಬ್ಬನು ಮನೆಯ ಕುಂಬಿಯ ಮೇಲೆ ಹತ್ತಿ ಉರಿ ಹತ್ತಿದ ಸಮಾಚಾರ ಅರುಹಿದನು. ಆಗ ಬಾಗಿಲ ತೆಗೆಯಲಾಯಿತು. ಜನ ಒಳಗೆ ನುಗ್ಗಿ ಉರಿಗೆ ನೀರು ಉಗ್ಗಿ ಉರಿ ಆರಿಸಿದರು.

ಒಂದು ಸಲ ಮನೆಯ ಹೆಂಗಸರೆಲ್ಲಾ ಊರಿಗೆ ಹೋಗುವ ಪ್ರಸಂಗ ಬಂತು. ಮನೆಯಲ್ಲಿ ನಮ್ಮ ನಾನಾ, ಅವರ ಇಬ್ಬರು ಮಕ್ಕಳು ಶ್ಯಾಮು ಹಾಗೂ ಮಾಧು ಉಳಿದಿದ ರು. ಮೂವರಲ್ಲಿ ಒಬ್ಬರಿಗೂ ಅಡಿಗೆ ಬರುತ್ತಿರಲಿಲ್ಲ. ಮಕ್ಕಳಿಬ್ಬರೂ ನಾನಾಗೆ

ಹೋಗಿ ಕೇಳಿದರು. "ನಾನಾ ಅನ್ನಕ್ಕ ಅಕ್ಕಿ ಎಷ್ಟು ಹಾಕೋಣ?" ಎಂದು. ನಾನಾ ಹೇಳಿದರು - "ಮೂರು ಮಂದಿದ್ದೀವಿ, ಮೂರು ವಾಟಗಾ ಹಾಕರಿ". "ನಾನಾ ಬ್ಯಾಳಿ ಎಷ್ಟಿಡೋಣು ?" ಅಂದಾಗ ನಾನಾ "ಮೂರು ವಾಟಗಾ ಅಕ್ಕಿ ಹಾಕಿದ ಮ್ಯಾಲೆ ಮೂರು ವಾಟಗಾ ಬ್ಯಾಳಿ ಬ್ಯಾಡ ? ಹಾಕರಿ ಮೂರು ವಾಟಗಾ ಬ್ಯಾಳಿ." ಸರಿ ಅಕ್ಕಿ ಬ್ಯಾಳಿ ಹಾಕಿ ಅದು ತೊಯ್ಯುವಷ್ಟೇ ನೀರು ಹಾಕಿ ವಲೆಯ ಮೇಲೆ ಇಟ್ಟರು - ಶ್ಯಾಮ ಹಾಗೂ ಮಾಧು. ಅರ್ಧ ಗಂಟೆಯಲ್ಲಿ ಅಕ್ಕಿ ಬೇಳೆ ಎರಡೂ ಹೊತ್ತಿ ಕರಕಾಗಿ ಹೋಯ್ತು. ಆ ದಿನ ಕೊನೆಗೆ ಅವಲಕ್ಕಿ ಮೊಸರು ತಿಂದು ಕಾಲ ಕಳೆದರು. ಇದನ್ನು ನಾನಾ ಮೇಲಿಂದ ಮೇಲೆ ನಮಗೆಲ್ಲಾ ಒಳ್ಳೇ ತಮಾಷೆಯಾಗಿ ಹೇಳುತ್ತಿದ್ದರು.

ಮೊದಲೇ ಹೇಳಿದಂತೆ ದೊಡ್ಡ ಹಬ್ಬಗಳಿದ್ದಾಗ ಊರಿನ ಎಲ್ಲಾ ದೇವರಿಗೂ ತೆಂಗಿನ ಕಾಯಿ ಒಡೆಸುವದು ಸಂಪ್ರದಾಯ. ಒಮ್ಮೆ ನಾನಾ ೫೦ ತೆಂಗಿನ ಕಾಯಿ ತಂದು ಇಟ್ಟಿದ್ದರು. ಮನೆಯ ಹೆಣ್ಣುಮಕ್ಕಳು ಅವನ್ನು ತೊಳೆದು ಬಚ್ಚಲು ಮನೆಯ ಗಂಗಾಳದಲ್ಲಿ ತುಂಬಿ ಇಟ್ಟಿದ್ದರು. ಸಂಜೆಗೆ ಎಲ್ಲ ಗುಡಿಗಳಿಗೂ ಕಳಿಸಬೇಕಾಗಿತ್ತು. ಹಬ್ಬದ ಊಟ ಮಾಡಿ ಮನೆಯ ಹಿರಿಯರೆಲ್ಲಾ ಮಧ್ಯಾಹ್ನ ಮಲಗಿದ್ದರು. ಆಗ ನಾನಾ ಅವರ ಮಗ ಮಾಧು ಹಾಗೂ ಅವರ ತಮ್ಮನ ಮಗ ಅನಂತ ಇಬ್ಬರೂ ಸೇರಿ ಬಚ್ಚಲ ಮನೆ ನುಗ್ಗಿ ೫೦ ತೆಂಗಿನ ಕಾಯಿಗಳನ್ನು ಒಡೆದು ಇಟ್ಟುಬಿಟ್ಟಿದ್ದರು. ಎಂಥ ಪ್ರಸಂಗವಾದರೂ ನಾನಾ ಮಾತ್ರ ತಮ್ಮ ಸಂಯಮ ಕಳೆದುಕೊಳ್ಳುತ್ತಿರಲಿಲ್ಲ. ಅದನ್ನೂ ಅವರು ತಮಾಷೆಯಾಗಿಯೇ ಹೇಳುತ್ತಿದ್ದರು.

ಮತ್ತೊಂದು ಸಲ ಇವರಿಬ್ಬರೂ ಅಣ್ಣ - ತಮ್ಮಂದಿರು (ಮಾಧು ಹಾಗೂ ಅನಂತ) ಚಿಕ್ಕವರಿದ್ದಾಗ ಮಧ್ಯಾಹ್ನ ಎಲ್ಲರೂ ಮಲಗಿದಾಗ ದೇವರನ್ನೆಲ್ಲಾ ತೆಗೆದುಕೊಂಡು ಹೋಗಿ ಹಿತ್ತಲಲ್ಲಿ ಕೆಲಸದವಳು ಪಾತ್ರೆ ತೊಳೆಯಲೆಂದು ಇಟ್ಟುಕೊಂಡ ನೀರಿನ ಗಂಗಾಳಲ್ಲಿ ಮುಳುಗಿಸಿ ಇಟ್ಟಿದ್ದರು.

ನನ್ನ ಮದುವೆಯ ಸಮಯದಲ್ಲಿ ಅಕ್ಷತೆಯಾದ ತಕ್ಷಣ ಹಿರಿಯರಿಗೆಲ್ಲ ನಮಸ್ಕರಿಸಲು ನಾನು ನಮ್ಮ ಮನೆಯವರು ಹೊರಟೆವು. ಎಲ್ಲರಿಗಿಂತ ಹಿರಿಯರಾದ ನಾನಾ ಅವರಿಗೆ ಮೊದಲು ನಮಸ್ಕಾರ ಮಾಡಲು ಹೋದೆವು. ಅವರು ಎದ್ದು ನಿಂತು ನಮ್ಮಿಬ್ಬರನ್ನೂ ತಡೆದರು - "ಇವತ್ತು ನೀವಿಬ್ಬರೂ ಲಕ್ಷ್ಮೀ - ನಾರಾಯಣರ ಸ್ವರೂಪ. ಅದಕ್ಕ ನೀವು ನನಗಲ್ಲ, ನಾನೇ ನಿಮಗ ಇವತ್ತ ನಮಸ್ಕಾರ ಮಾಡ್ತೀನಿ" ಎಂದು ಹೇಳಿ ಬಗ್ಗಿ ನಮಸ್ಕರಿಸಿದರು. ಆ ಕ್ಷಣದಲ್ಲಿ ನನಗೆ ಅವರ ವ್ಯಕ್ತಿತ್ವದ ಉತ್ತುಂಗತೆಯ ಅರಿವಾಯಿತು.

ಮೊದಲಾದ ದೇವಸ್ಥಾನಗಳ ಟ್ರಸ್ಟ ಕಮೀಟಿಯ ಸದಸ್ಯರಾಗಿ ಸುಮಾರು ಇಪ್ಪತ್ತು ವರ್ಷ ಸೇವೆ ಸಲ್ಲಿಸಿದ ಹಿರಿಯರು ನಾರಾಯಣರಾಯರು. ಇವರ ಅಧಿಕಾರದ ಸಮಯದಲ್ಲಿ ವೆಂಕಟೇಶ್ವರ ದೇವಸ್ಥಾನವನ್ನು ಆಸ್ಥೆಯಿಂದ ಜೀರ್ಣೋದ್ಧಾರ ಮಾಡಿಸಿದರು. ಪ್ರತಿ ವರ್ಷ ೫೦ ರೂ. ಉತ್ಪನ್ನ ಬರುವಂತೆ ಮಾಡಿದರು. ಹಾಗೆಯೇ ಗದಗಿನ ಜುಮ್ಮಾ ಮಸೀದಿಗೂ ಉತ್ಪನ್ನ ಬರುವಂತೆ ನಾರಾಯಣರಾಯರು ಮಾಡಿದ್ದನ್ನು ನೋಡಿದರೆ ಅವರ ಮನೋವೈಶಾಲ್ಯದ ಅರಿವಾಗುತ್ತದೆ. ಪ್ರತಿ ವರ್ಷ ಹಬ್ಬ ಹುಣ್ಣಿಮೆಗಳಲ್ಲಿ ಗದಗಿನ ಎಲ್ಲ ದೇವಸ್ಥಾನಗಳಲ್ಲೂ ತೆಂಗಿನಕಾಯಿ ಒಡೆಸುತ್ತಿದ್ದರಲ್ಲದೆ ಈದ, ರಮಜಾನಗಳಲ್ಲಿ ಮಸೀದಿಯಲ್ಲಿ ಸಕ್ಕರೆ ಓದಿಸುತ್ತಿದ್ದರು. ಅವರ ಒಂದು ಕವನದಲ್ಲಿ "ದೇವನೊಬ್ಬನೆ ಎಂಬ ನುಡಿ ಸುಳ್ಳೇನು? ಅಲ್ಲಾ ಎಂದರೆ ಬರುವ ಶಿವನೆ ಎಂದರೆ ಬರುವಾ " ಎಂದಿದೆ. ಅವರು ಉದಾರ ಮತವಾದಿಗಳು ಎನ್ನುವುದಕ್ಕೆ ಇನ್ನೊಂದು ಜ್ವಲಂತ ಉದಾಹರಣೆಯನ್ನು ಅವರ ಅಳಿಯಂದಿರಾದ ಆರ್.ಜಿ. ದೇಸಾಯಿಯವರ ಮಾತಿನಲ್ಲೇ ಕೇಳಬಹುದು - "ಮಧ್ವಮತದಲ್ಲಿ, ಅವರಿಗೆ ನಂಬಿಕೆ ಇದ್ದರೂ ಬೇರೆ ಮತಾನುಯಾಯಿಗಳ ಬಗ್ಗೆ ತಾತ್ಸಾರ, ಜುಗುಪ್ಸೆಗಳಿರಲಿಲ್ಲ. ನಾನು ಶ್ರೀ ಅರವಿಂದರ ಯೋಗವನ್ನು ಅನುಸರಿಸುತ್ತೇನೆ. ಅದಕ್ಕಾಗಿ ನನ್ನ ಅನೇಕ ಹಿರಿಯರು ನನ್ನನ್ನು ತರಾಟೆಗೆ ತೆಗೆದುಕೊಂಡರು, ಟೀಕಿಸಿದರು. ಆದರೆ ನನ್ನ ಮಾವನವರಾದ ನಾರಾಯಣರಾಯರು ಮಾತ್ರ ಎಂದಿಗೂ ಚಕಾರ ಶಬ್ದ ಎತ್ತಲಿಲ್ಲ. ವಿಜಾಪುರಕ್ಕೆ ಬಂದಾಗ ಶ್ರೀ ರಾನಡೆ ಗುರುದೇವರ ಭೇಟಿಗೂ ಹೋಗಿದ್ದೆವು. ಗುರುದೇವರ ಬಗ್ಗೆ ಅವರು ಅಪಾರ ಗೌರವ ಇಟ್ಟುಕೊಂಡಿದ್ದರು."

ಜಾತೀಯತೆಯಿಂದ ದೂರ - ನಾರಾಯಣರಾಯರಿಗೆ ಜಾತೀಯತೆಯ ಅಂಧ ವಿಶ್ವಾಸವಿರಲಿಲ್ಲ. ಅವರಲ್ಲಿ ಬೇಕಾದಷ್ಟು ಸಾಂಪ್ರದಾಯಿಕತೆಯಿದ್ದರೂ ಜಾತಿ ಭೇದ, ಅನ್ಯಜಾತಿಯವರಲ್ಲಿ ತಾತ್ಸಾರ ಭಾವ ಎಳ್ಳಷ್ಟೂ ಇರಲಿಲ್ಲ. ವಕೀಲರಾದ ನಾರಾಯಣರಾಯರ ಹತ್ತಿರ ಬರುವ ಕಕ್ಷಿದಾರರಲ್ಲಿ ಹರಿಜನರೂ, ಲಮಾಣಿಗಳೂ ಹಾಗೂ ದೀನದಲಿತರೂ ಹೆಚ್ಚಾಗಿ ಇರುತ್ತಿದ್ದುದು ಒಂದು ವಿಶೇಷ. ಅವರ ಬಗ್ಗೆ ನಾರಾಯಣರಾಯರಿಗೆ ಅಂತಃಕರಣದ ಅನುಕಂಪ ಹೆಚ್ಚು. ಮನೆಗೆ ಬಂದಾಗ ಅವರನ್ನೂ ಪ್ರೀತಿಯಿಂದ ಒಳಗೆ ಬರಮಾಡಿಕೊಂಡು ಕೂಡ್ರಿಸಿ ಬೆಲ್ಲ, ನೀರು ಕೊಡುತ್ತಿದ್ದರು. ಅವರು ಸ್ವಲ್ಪ ಸುಧಾರಿಸಿಕೊಂಡ ನಂತರ ಅವರ ಅಹವಾಲನ್ನು ಕೇಳಿಸಿಕೊಳ್ಳುತ್ತಿದ್ದರು. ಅವರಿಗೆ ಬಂದೊದಗಿದ ಕಷ್ಟಕಾರ್ಪಣ್ಯಗಳ ಸತ್ಯಾಸತ್ಯತೆಯನ್ನೂ ತಮ್ಮ ಅಂತರಾತ್ಮನ ಒರೆಗೆ ಹಚ್ಚಿ ತಿಕ್ಕಿ ನೋಡುತ್ತಿದ್ದರು. ಇದರಿಂದ ದೀನ - ದಲಿತರ ಹರಿಜನರ ಬಗ್ಗೆ ನಾರಾಯಣರಾಯರು ಬಹಳವಾಗಿ ಚಿಂತಿಸುತ್ತಿದ್ದರೆಂದು ತಿಳಿಯುತ್ತದೆ. "ಪತಿತರಾದ ದೀನದಲಿತರ ನಿಜವಾದ ಉದ್ಧಾರವಾಗಬೇಕು, ಅವರ ಸಮಸ್ಯೆಗಳಿಗೆ ಸಮಂಜಸವಾದ

ಪರಿಹಾರ ದೊರಕಬೇಕು" ಎಂದು ಹಗಲಿರುಳೂ ಚಿಂತಿಸುತ್ತಿದ್ದ ನಾರಾಯಣರಾಯರು ಗಾಂಧೀತತ್ವವನ್ನು ಎಷ್ಟು ಅಳವಡಿಸಿಕೊಂಡಿದ್ದರೆಂದು ಮನವರಿಕೆಯಾಗುತ್ತದೆ. ಸಂಪ್ರದಾಯಸ್ಥರಾದರೂ ಸಂಪ್ರದಾಯದ ಕಟ್ಟುನಿಟ್ಟುಗಳಿಂದ, ಅಂಧ ವಿಶ್ವಾಸಗಳಿಂದ ದೂರವಿದ್ದ ಉದಾರ ಮನೋಭಾವದ ಮಹಾನುಭಾವರವರು. ಅಂತೆಯೇ ಪತಿತರ ಸಮಸ್ಯೆಗಳನ್ನು ಅವರ ಉದ್ಧಾರದ ಬಗ್ಗೆ ತಮಗಿರುವ ಕಳಕಳಿಯನ್ನು ತಮ್ಮ "ಪತಿತೋದ್ಧಾರ" ನಾಟಕದ ಮೂಲಕ ವ್ಯಕ್ತಪಡಿಸಿ ಜನಸಾಮಾನ್ಯರಲ್ಲಿ ಜಾಗೃತಿ ತರಲು ಹೆಣಗಾಡಿದರು.

ಅವರಲ್ಲಿ ಜಾತಿಭೇದ ಲವಲೇಶವೂ ಇರಲಿಲ್ಲ ಎನ್ನುವದಕ್ಕೆ ಇನ್ನೊಂದು ದೃಷ್ಟಾಂತವನ್ನು ಶ್ರೀ ಗೋವಿಂದಮೂರ್ತಿ ದೇಸಾಯಿಯವರು ಅವರ ಮನೆಗೆ ಹೋದಾಗ ಹೇಳಿದರು. ಅದೆಂದರೆ ನಾರಾಯಣರಾಯರಿಗೆ ತುಂಬಾ ಆಪ್ತ ಮಿತ್ರರಲ್ಲಿ ರಾಮಚಂದ್ರಪ್ಪ ಕುಷ್ಟಗಿಯವರು. ಅವರು ವೈಶ್ಯರು. ಇವರು ಒಬ್ಬರಿಗೊಬ್ಬರು ಭೇಟಿಯಾಗದ ದಿನವೇ ಇರಲಾರದು. ಕುಷ್ಟಗಿಯವರು ತೀರಿದಾಗ ತುಂಬಾ ಹೊತ್ತು ಅವರ ಮಕ್ಕಳಲ್ಲಿ ಯಾರು ನೀರು ಬಿಟ್ಟರೂ ಕಾಗಿಪಿಂಡವಾಗಲಿಲ್ಲವಂತೆ. ಕೊನೆಗೆ ನಾರಾಯಣರಾಯರು ಹೋಗಿ ನೀರು ಬಿಟ್ಟಾಗ ಕಾಗಿಪಿಂಡವಾಯಿತಂತೆ.

ಅವರ ಈ ಉದಾರ ಮನೋಭಾವಕ್ಕೆ ಇನ್ನೊಂದು ಪ್ರಸಂಗವನ್ನೂ ಉದಹರಿಸಬಹುದು. ೧೯೧೬ರಲ್ಲಿ ಉತ್ತರಾದಿಮಠದ ಶ್ರೀಗಳಾದ ಶ್ರೀ ಶ್ರೀ ಸತ್ಯಧ್ಯಾನ ಶ್ರೀಪಾದಂಗಳವರು ಗದುಗಿಗೆ ಬಂದಾಗ ಮಹಾಸಮಾರಾಧನೆಯಲ್ಲಿ ಸಭೆಗೆ ಉದ್ದೇಶಿಸಿ ಪ್ರವಚನ ಮಾಡಿ ಮುಗಿದ ಮೇಲೆ "ಯಾರಿಗಾದರೂ ಏನಾದರೂ ಸಂಶಯಗಳಿದ್ದರೆ ಕೇಳಬಹುದು" ಎಂದು ಹೇಳಿದರಂತೆ. ಆಗ ನಾರಾಯಣರಾಯರು ಬಹು ವಿನಮ್ರತೆಯಿಂದ ಕೈಜೋಡಿಸಿಕೊಂಡು ನಿಂತು "ಪೂಜ್ಯರೆ, ಶ್ರೀ ಕೃಷ್ಣಪರಮಾತ್ಮನು ಗೀತೆಯಲ್ಲಿ "ಚಾತುರ್ವರ್ಣ್ಯಂ ಮಯಾಸೃಷ್ಟಂ ಗುಣಕರ್ಮ ವಿಭಾಗಶಃ" ಎಂದು ಹೇಳಿದ್ದಾನೆ. ಉಪನ್ಯಾಸ ನೀಡುವಾಗ ಪೂಜ್ಯರಾದ ತಾವೂ ಸಹ ಇದರ ಬಗ್ಗೆ ಸಾಕಷ್ಟು ವಿವರಣೆ ನೀಡಿ ಅದನ್ನು ಪುಷ್ಟೀಕರಿಸಿದ್ದೀರಿ. ಮೊದಲಿನ ಮೂರು ವರ್ಗಗಳಾದ ಬ್ರಾಹ್ಮಣ, ವೈಶ್ಯ, ಕ್ಷತ್ರಿಯರ ಸಂಗಡ ಸಾಕಷ್ಟು ಬಳಕೆ ಮಾಡುವ ನಾವೆಲ್ಲರೂ, ಅಂತ್ಯಜರನ್ನು ಮಾತ್ರ ದೂರವಿಟ್ಟ ಕಾರಣವೇನು ? ಮತ್ತು ಈಗ ನಮ್ಮನ್ನು ಆಳುತ್ತಿರುವ ಯುರೋಪಿಯನ್ನರನ್ನು ಯಾವ ವರ್ಣದಲ್ಲಿ ಸೇರಿಸುವಿರಿ ? ಎಂಬೆರಡು ನನ್ನ ಸಂಶಯಗಳು. ದಯವಿಟ್ಟು ಅಪ್ಪಣೆ ಕೊಡಿಸಬೇಕಾಗಿ ಪ್ರಾರ್ಥನೆ" ಎಂದು ಕೇಳಿ ಕುಳಿತುಕೊಂಡರಂತೆ. ಅದಕ್ಕೆ ಶ್ರೀಗಳವರು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸುತ್ತ ಮಾತು ನಿಲ್ಲಿಸಿ ಮೌನ ತಾಳಿದರಂತೆ.

ಧಾರ್ಮಿಕ - ಪ್ರವಚನಗಳಲ್ಲಿ ರುಚಿ, ಆಸ್ಥೆ - ನಾರಾಯಣರಾಯರ ಮನೆ ವೀರ ನಾರಾಯಣ ದೇವಸ್ಥಾನಕ್ಕೆ ತೀರ ಹತ್ತಿರ. ದೇವಸ್ಥಾನದಲ್ಲಿ ನಡೆಯುವ ಯಾವ ಧಾರ್ಮಿಕ ಪುರಾಣ ಪ್ರವಚನಗಳನ್ನೂ ನಾರಾಯಣರಾಯರು ತಪ್ಪಿಸುತ್ತಿದ್ದಿಲ್ಲ. ಪ್ರಸಿದ್ಧ ಭಾರತ ಬಿಂದೂರಾಯರ ಪ್ರವಚನಗಳು ವರ್ಷಗಟ್ಟಲೆ ಪ್ರತಿದಿನ ನಡೆಯುತ್ತಿದ್ದವು. ಬೆಳಗಿನ ಆರು ಗಂಟೆಯಿಂದ ಏಳರವರೆಗೆ ಅವರು ಕುಮಾರವ್ಯಾಸನ ಭಾರತ ಹೇಳುತ್ತಿದ್ದರೆ ದೇವಸ್ಥಾನದ ಪೂರ್ಣ ಪರಿಸರ ಒಂದು ವಿಶಿಷ್ಟ ವಿದ್ಯುತ್ ಅಲೆಗಳಿಂದ ರೋಮಾಂಚಿತಗೊಳ್ಳುತ್ತಿತ್ತು. ದೊಡ್ಡಪ್ಪನ ಈ ಸಂಸ್ಕಾರ ನಮ್ಮ ತಾಯಿಗೂ ತಟ್ಟದಿರಲಿಲ್ಲ. ಒಂದೂವರೆ ಮೈಲು ದೂರದಲ್ಲಿದ್ದರೂ ಬೆಳಗಿನ ನಾಲ್ಕು ಗಂಟೆಗೇ ಎದ್ದು ಸ್ನಾನ ಮುಗಿಸಿ ಪಕ್ಕದ ಮನೆಯ ಪೂಜಾರ ಚಂಪಕ್ಕ ಹಾಗೂ ಪುರಾಣಿಕ ಗಂಗಕ್ಕನವರೊಂದಿಗೆ ಒಂದು ದಿನವೂ ತಪ್ಪಿಸದೆ ಈ ಪ್ರವಚನಗಳಿಗೆ ಹೋಗುತ್ತಿದ್ದರು. ಮುಂದೆ ಪಂಢರಿನಾಥಾಚಾರ್ಯ ಗಲಗಲಿಯವರು ಭಾರತ ಹೇಳುವಾಗಲೂ ಅಷ್ಟೆ. ಕೃಷ್ಣ ಜನ್ಮಾಷ್ಟಮಿಗೆ ಪ್ರತಿವರ್ಷ ರಾತ್ರಿ ೧೨ ಗಂಟೆವರೆಗೆ ನಡೆಯುತ್ತಿದ್ದ ಹರಿಸರ್ವೋತ್ತಮಾಚಾರ ಪುರಾಣಕ್ಕೂ ತಪ್ಪುತ್ತಿರಲಿಲ್ಲ. ನಮ್ಮ ಶಾಲೆಗಳಿಗೆ ರಜೆಯಿದ್ದಾಗ ನಾವೂ ಅಮ್ಮನ ಜೊತೆ ಹೋಗುತ್ತಿದ್ದೆವು. ಬೆಳಗಿನ ಜಾವದ ಆ ಶಾಂತ ವಾತಾವರಣದಲ್ಲಿ ಭಾರತ ಬಿಂದೂರಾಯರು ತಮ್ಮ ತಂಬೂರಿಯನ್ನು ಮಿಡಿಸುತ್ತ ಅದರ ಝೇಂಕಾರವನ್ನು ಮೀರಿಸುವ ಸುಮಧುರ ಕಂಠದಿಂದ "ಶ್ರೀ ವನಿತೆಯರಸನೆ ವಿಮಲರಾಜೀವ ಪೀಠನ ಪಿತನೆ, ಜಗಕತಿ ಪಾವನನೆ, ಸನಕಾದಿ ಸಜ್ಜನ ನಿಕರ ದಾತಾರಾ" ಎಂದಾಗ ಯಾವದೋ ಅವರ್ಣನೀಯ ಲೋಕದಲ್ಲಿ ಸಂಚರಿಸುತ್ತಿರುವ ಅನುಭೂತಿ. ಈ ಎಲ್ಲ ಪುರಾಣ ಪ್ರವಚನಗಳಲ್ಲೂ 'ನಾನಾ' ಅವರು ಎಲ್ಲರಿಗಿಂತ ಮುಂದೆ ಕಂಬಕ್ಕೆ ಆನಿಕೊಂಡು ಕುಳಿತು ಧ್ಯಾನದಿಂದ, ಭಕ್ತಿಯಿಂದ ಆಲಿಸುವ ಆ ಚಿತ್ರ ಇಂದಿಗೂ ಕಣ್ಣಿಗೆ ಕಟ್ಟಿದಂತಿದೆ.

## ೧೨. ಅವಿಸ್ಮರಣೀಯ ಅನುಭೂತಿಗಳು

### (ಮರೆಯಲಾರದ ಪ್ರಸಂಗಗಳು)

'ನಾನಾ' ಅವರ ನೆನಪಿನ ಸುಳಿಯಲ್ಲಿ ಮರೆಯಲಾರದ ಪ್ರಸಂಗಗಳು ಅನೇಕ. ಕುಟುಂಬದ ಜನವೆಲ್ಲಾ ಸೇರಿದಾಗ ಅವುಗಳನ್ನು ಮೆಲುಕು ಹಾಕುವದು ವಾಡಿಕೆ. ಅವುಗಳಲ್ಲಿ ಕೆಲ ನೆನಪುಗಳನ್ನು ಇಲ್ಲಿ ಉಲ್ಲೇಖಿಸಲು ಇಷ್ಟಪಡುತ್ತೇನೆ. ನಾವು ಚಿಕ್ಕವರಿದ್ದಾಗ ವಾರದಲ್ಲಿ ೨ - ೩ ಸಲವಂತೂ 'ನಾನಾ' ನಮ್ಮ ಮನೆಗೆ ಬಂದೇ ಬರುತ್ತಿದ್ದರು. ಮೊದಲೇ ಹೇಳಿದಂತೆ ನಮ್ಮ ಅಜ್ಜ, ಜಿ.ಜಿ.ಪಾಗೆ ಹಾಗೂ 'ನಾನಾ' ತುಂಬಾ ಆತ್ಮೀಯರು. ಅಜ್ಜ (ಜಿ.ಜಿ.ಪಾಗೆ) ಮಹಾರಾಷ್ಟ್ರದವರಾದರು. ನಾನಾ ಅವರ ಜೊತೆ

ಜೀಗತನ ನಡೆಸಿದ್ದಲ್ಲದೇ ಒಬ್ಬರಿಗೊಬ್ಬರು ತುಂಬಾ ಅನ್ಯೋನ್ಯವಾಗಿದ್ದರು. ನಾನಾ ಬರುವಾಗ ನಮಗಾಗಿ ಕಲ್ಲುಸಕ್ಕರೆ, ಉತ್ತತ್ತಿ ಮುಂತಾದವನ್ನು ತರುತ್ತಿದ್ದರು. ಆದ್ದರಿಂದ ಅವರು ಬಂದ ಕೂಡಲೆ ನಾವೆಲ್ಲಾ ಅವರಿಗೆ ಮುಗಿ ಬೀಳುತ್ತಿದ್ದೆವು.

ಒಂದು ಸಲ ನಾವೆಲ್ಲ ಕುಳಿತಾಗ ಒಂದು ಪತ್ರ ಬಂದಿತು. ಅಜ್ಜ (ಜಿ.ಜಿ. ಪಾಗೆ) ಅದನ್ನು ಓದಿ ಅಲ್ಲಿಯೇ ಕುಳಿತಿದ್ದ 'ನಾನಾ' ಅವರಿಗೆ ಓದಲು ಕೊಟ್ಟರು. ಪತ್ರ ಇಂಗ್ಲೀಷ್‌ನಲ್ಲಿ ಇತ್ತು. ಆಗ ನನ್ನ ತಂಗಿ ಲೀಲಾ (ಈಗ ಮಾಲಿನಿ ಪೂಜಾರ) ನಾನಾನ ಹತ್ತಿರ ಹೋಗಿ ಆಶ್ಚರ್ಯದಿಂದ ನೋಡಿ ಕೇಳಿದಳು, "ನಾನಾ ನಿನಗೂ ಇಂಗ್ಲೀಷ್ ಬರ್ತದೇನಪಾ ?" ಅಂತ. ನಾನಾ "ಹೂಂನವಾ, ನನಗೂ ಚೂರ ಚೂರ ಇಂಗ್ಲೀಷ್ ಬರ್ತದ" ಎಂದರು ನಾವೆಲ್ಲ ನಕ್ಕಿದ್ದೇ ನಕ್ಕಿದ್ದು. ಲೀಲಾ ಸ್ಕೂಲಿನಲ್ಲಿದ್ದಾಗ ಕಾತಿಯಿಂದ ಕಾಲು ಒರೆಸುವುದನ್ನು ಅಥವಾ Door mat ಮಾಡಲು ಅವರಿಗೆ ಕಲಿಸಿದ್ದರು. ಅವಳು ಅವನ್ನು ತುಂಬಾ ಚೆನ್ನಾಗಿ ಹಾಗೂ ಆಸಕ್ತಿಯಿಂದ ಮಾಡುತ್ತಿದ್ದಳು. ೪ - ೫ ಬಾರಿ ಅವಳು ಕಾತಿಯಿಂದ Door mat ಹೆಣೆಯುವುದನ್ನು ನೋಡಿದ ನಾನಾ ಒಂದು ಸಲ ಬಂದಾಗ ಎದುರಿಗೆ ಲೀಲಾ ಕಾಣದೇ ಇದ್ದಾಗ "ಎಲ್ಲಿದ್ದಾಳಕಿ ಮ್ಯಾದಾರಾಕಿ ?" ಎಂದು ಕೇಳಿದರು.

ಶನಿವಾರ ದಿನ ಬರುವಾಗ ನಾನಾ ತಮ್ಮ ಒಗೆಯಬೇಕಾದ ಬಟ್ಟೆಗಳನ್ನು ಚೀಲದಲ್ಲಿ ಹಾಕಿ ನಮ್ಮ ಮನೆಗೆ ತರುತ್ತಿದ್ದರು. ಮನೆಯಲ್ಲಿ ಅವರ ಸೊಸೆಗೆ ಕೆಲಸ ಜಾಸ್ತಿಯಾಗುತ್ತಿದ್ದುದರಿಂದ ಆಗುತ್ತಿದ್ದಿಲ್ಲ. ನಾವು ಮೂವರು ಅಕ್ಕ ತಂಗಿಯರು ನಾನಾನ ಬಟ್ಟೆಗಳನ್ನು ಶುಭ್ರವಾಗಿ ಒಗೆದು, ಒರಣವಾಗಿ ಮಡಿಸಿ ಇಟ್ಟಿರುತ್ತಿದ್ದೆವು. ಭಾನುವಾರ ಬಂದು ನಾನಾ ಅವನ್ನು ತೆಗೆದುಕೊಂಡು ಹೋಗುತ್ತಿದ್ದರು. ಅವರ ಈ ಸೇವೆ ನಮಗೆ ಸಿಕ್ಕಿದ್ದು ನಮ್ಮ ಭಾಗ್ಯವೇ ಸರಿ. ನಮ್ಮ ತಾಯಿಯೂ ಅವರ ಮೇಲೆ ಬಹಳೇ ಪ್ರೀತಿ. ಅವರು ಬಂದಾಗ ಅವರಿಗೆ ಓಡಿಸಿದ ತಿನಸು ಮಾಡಿ ಕೊಡುವದೆಂದರೆ ಅವಳಿಗೆ ಎಲ್ಲಿಲ್ಲದ ಆನಂದ.

ನಾನಾ ಹೊಸ ಪದ್ಯಗಳನ್ನು ಬರೆದರೆಂದರೆ ಅವನ್ನು ನಮ್ಮ ಮನೆಗೆ ತೆಗೆದುಕೊಂಡು ಬಂದು ನನಗೆ ಹಾಗೂ ಅಕ್ಕ ಕಮಲಗೆ ಓದಿ ತೋರಿಸುವದು ವಾಡಿಕೆ. ಈಗ ದೊಡ್ಡವರಾದ ಮೇಲೆ ನಾವಿಬ್ಬರೂ ಕವನ ರಚನೆಯನ್ನು ಮೈಗೂಡಿಸಿಕೊಂಡಿದ್ದೇವೆ. ಅವಳ ಒಂದು ಪದ್ಯ ಸಂಕಲನ ಪ್ರಕಟವಾಗಿದೆ. ನನ್ನ ಪದ್ಯಸಂಕಲನ ಪ್ರಕಟನೆಯ ದಾರಿಯಲ್ಲಿದೆ. ನನ್ನ ಎರಡು ಚಿಕ್ಕ ನಾಟಕಗಳ ಸಂಕಲನಗಳು ಪ್ರಕಟವಾಗಿವೆ. ಇದೆಲ್ಲದರ ಶ್ರೇಯಸ್ಸು ನಮ್ಮ ನಾನಾಗೆ. ನಮಗೆ ಅವರದೇ ಸಂಸ್ಕಾರ, ಅವರದೇ ತರಬೇತಿ. ಅಂತೆಯೇ ನಾನು ನನ್ನ ಮೊದಲ ಪ್ರಕಟಿತ ಪುಸ್ತಕವನ್ನು ನಮ್ಮ 'ನಾನಾ' ಅವರಿಗೆ ಅರ್ಪಿಸಿದ್ದೇನೆ.

ನಾನಾ ಅವರ ಕೊನೆಯ ದಿನಗಳಲ್ಲಿ ಅವರು ಹುಬ್ಬಳ್ಳಿಯಲ್ಲಿದ್ದ ಎರಡನೆಯ ಮಗ ಮಾಧವನ ಮನೆಯಲ್ಲಿದ್ದರು. ಅವನು ಪೋಲಿಸ್ ಇನ್ಸಪೆಕ್ಟರ್. ಆಗ ಪ್ರತಿದಿನ ವಿದ್ಯಾವರ್ಧಕ ಸಂಘದವರೆಗೂ ಸಾಯಂಕಾಲ ಹೋಗಿ ಬರುತ್ತಿದ್ದರಂತೆ. ವಯಸ್ಸಾಗಿದ್ದರಿಂದ ಒಬ್ಬರನ್ನೇ ಕಳಿಸಲು ಮನಸ್ಸಿಲ್ಲದೆ ನಮ್ಮ ಮಾಮಿ (ಉಷಾಬಾಯಿ) ಮಾಮಾನ ಕಚೇರಿಯ ಒಬ್ಬ ಪೋಲೀಸನನ್ನು ನಾನಾ ಅವರ ಜೊತೆ ಕಳಿಸಲು ಶುರು ಮಾಡಿದರಂತೆ. ಅದಕ್ಕೆ ನಾನಾ ಅವರು "ಉಷಾಬಾಯಿ, ನನ್ನ ಹಿಂದ ದಿನಾ ಆ ಪೋಲೀಸನ್ನ ಕಳಸಬ್ಯಾಡವ್ವಾ, ಜನಾ ಏನಂದಾರು ? ಈ ವಯಸ್ಸಿನೊಳಗ ಈ ಮುದುಕ ಅದೇನು ಅಪರಾಧಾ ಮಾಡಿದ್ದಾನು, ಪೋಲಿಸರ ತಾಬಾದಾಗಿದ್ದಾನ ಅಂದಾರು" ಎಂದರಂತೆ. ಮಾಮಿ ಇನ್ನೂವರೆಗೆ ಆ ಮಾತನ್ನು ನೆನೆಸಿಕೊಳ್ಳುತ್ತಾರೆ.

ಅಲ್ಲಿ ಇದ್ದಾಗ ನಮ್ಮ ಮಾಮಾನ ಮಕ್ಕಳಿಗೆಲ್ಲಾ ದಿನಾಲು ಸಾಯಂಕಾಲ ನಾನಾ ರಾಮಾಯಣ, ಮಹಾಭಾರತದ ಕಥೆಗಳನ್ನು ಹೇಳುತ್ತಿದ್ದರಂತೆ. ಅದಕ್ಕೆ ಅವರಿಗೆಲ್ಲ ನಾನಾ ಯಾವಾಗಲೂ ತಮ್ಮ ಮನೆಯಲ್ಲೇ ಇರಬೇಕೆಂದು ಆಶೆ, ನಾನಾ ಇವರಿಗೆಲ್ಲಾ ಕಥೆ ಹೇಳುವಾಗ ಹತ್ತಿರವೇ ಇದ್ದ ಕಚೇರಿಯ ಪೋಲಿಸರೆಲ್ಲಾ ಬಂದು ಕುಳಿತು ಕಥೆ ಕೇಳಿ ಸಂತೋಷಪಡುತ್ತಿದ್ದರಂತೆ.

ಹುಬ್ಬಳ್ಳಿಯಲ್ಲಿ ಅವರಿರುವ ಮನೆಯಲ್ಲಿ ಹೊರ ಅಂಗಳದಲ್ಲಿ ನಾನಾ ತಾವೇ ಒಂದು ಮಾವಿನ ಗಿಡ ನೆಟ್ಟಿದ್ದಾರೆ. ಮಾಮಿ ಹೇಳುತ್ತಾರೆ - ಅದರ ವಿಶೇಷವೆಂದರೆ ಸುಮಾರು ಇಡೀ ವರ್ಷ ಕಾಯಿ ಆಗುತ್ತಿರುತ್ತದಂತೆ ಆ ಗಿಡಕ್ಕೆ.

ನಾನಾ ಇನ್ನಿಲ್ಲ. ಆದರೆ ಅವರ ಆಶೀರ್ವಾದದ ಕವಚ ನಮಗೆ ಯಾವಾಗಲೂ ಇದೆ ಅನ್ನುವದಕ್ಕೆ ನನ್ನಲ್ಲಿ ಹಲವಾರು ಉದಾಹರಣೆಗಳಿವೆ. ನಾವೇನಿದ್ದೇವೊ ನನಗೆ ತಿಳಿಯದು. ಆದರೆ ನಾವು ಅವರ ಮೊಮ್ಮಕ್ಕಳು ಅಂದಾಗ ಎಲ್ಲ ಬಾಗಿಲಗಳು ತೆಗೆದು ನಿಲ್ಲುತ್ತವೆ. ನಾನು ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದುದು ಕೇಂದ್ರೀಯ ವಿದ್ಯಾಲಯದಲ್ಲಿ. ನವ್ಹೆಂಬರ್ ಒಂದರಂದು ಏಕೀಕರಣ ದಿನ ಆಚರಿಸಬೇಕಿತ್ತು. ನಾನು ನಾನಾ ಅವರ ಚಿಕ್ಕ ಜೀವನಚರಿತ್ರೆ ಬರೆದು ಒಂದು ಹುಡಿಗಿಯ ಕೈಯಿಂದ ಓದಿಸಿ "ಉದಯವಾಗಲಿ" ಹಾಡನ್ನು ೮ - ೧೦ ಮಕ್ಕಳಿಂದ ಹೇಳಿಸಿದೆ. ನಮ್ಮ ಪ್ರಿನ್ಸಿಪಾಲರು ನಾನು ನಾನಾ ಅವರ ಮೊಮ್ಮಗಳೆಂದು ಹೇಳಿದಾಗ ಶಾಲೆಯ ಸಮಸ್ತ ಬಳಗ ಚಪ್ಪಾಳೆ ತಟ್ಟಿತು.

ಒಂದು ದಿನ ಬೆಳಗಿನ ಜಾವ ಅಣ್ಣಾ (ಮೋಹನ ಪಾಗೆ)ನ ಫೋನ್ ಬಂತು - "ಬೇಗ ಈ ಟೀವಿ ಕನ್ನಡ ಹಚ್ಚು. ಯಾರೊ ಸುಬ್ಬಾರಾವ್ ಅವರ ಸಂದರ್ಶನ ನಡೆದಿದೆ.

ನಮ್ಮ ನಾನಾ ಹಾಗೂ ಸದಣ್ಣ (ಗರೂಡ ಸದಾಶಿವರಾಯರು) ಅವರ ಬಗ್ಗೆ ಮಾತಾಡ್ತಿದ್ದಾರೆ" ಎಂದ. ಬೇಗ ಹಚ್ಚಿದೆ. ಹೌದು ಅವರು ಎಂ.ವ್ಹಿ. ಸುಬ್ಬರಾವ್, ಸಾಹಿತ್ಯ ಕುಟೀರದ ಅಧ್ಯಕ್ಷರು. ಕಾರ್ಯಕ್ರಮ ಮುಗಿದ ಮೇಲೆ ಅವರಿಗೆ ಫೋನ್ ಮಾಡಿದೆ. "ನಾನು ಹುಯಿಲಗೋಳ ನಾರಾಯಣರಾಯರ ಮೊಮ್ಮಗಳು" ಎಂದೆ. ಆ ತುದಿಯಿಂದ ಸಂತೋಷದ ಉದ್ಗಾರವೇ ಉದ್ಗಾರ. ನನ್ನ ಮನೆಯ ಪತ್ತೆ ತೆಗೆದುಕೊಂಡರು. ನಂಬಿ ಇಲ್ಲಾ ಬಿಡಿ. ಮಾರನೇ ದಿನ ಬೆಳಿಗ್ಗೆ ಸುಬ್ಬರಾವ್ ನಮ್ಮ ಮನೆ ಹುಡುಕಿಕೊಂಡು ಬಂದರು. ಅವರ ಹತ್ತಿರವಿದ್ದ ನಾನಾ ಅವರ ಬಗ್ಗೆ ಪುಸ್ತಕಗಳು, ಅವರೇ ಸನ್ಮಾನಿಸಿದಾಗ ತೆಗೆದ ಸ್ಮರಣಿಕೆ ಅರ್ಪಣ, ಅನೇಕ ಸಮಾಚಾರ ಪತ್ರದ ಲೇಖನಗಳು ಎಲ್ಲಾ ಹೊತ್ತುತಂದು ನನಗೆ ಕೊಟ್ಟರು. ಆಗಿನಿಂದಲೇ ಸುಬ್ಬಣ್ಣ "ನೀವು ನಾರಾಯಣರಾಯರ ಮೇಲೆ ಬರೆಯಿರಿ" ಎಂದು ನನ್ನ ಹಿಂದೆ ಬಿದ್ದಿದ್ದಾರೆ. ಸುಬ್ಬಣ್ಣ ಅವರ ಮೂಲಕ ನನಗೆ ಅನೇಕ ಗಣ್ಯ ಸಾಹಿತಿಗಳ ಕಲಾಕಾರರ ಸಂಪರ್ಕವಾಯಿತು. ನೇತ್ರಾವತಿ ಕಲಸ್ಕರ್ ತಮ್ಮ 'ಕರುಣಾ' ಎಂಬ ಅರ್ಧಮಾಸಿಕದಲ್ಲಿ ಶಿಕ್ಷಣದ ಮೇಲೆ ಲೇಖನ ಬರೆದು ಕೊಡಲು ಒಂದು ಅಂಕಣವನ್ನೇ ನೀಡಿದರು. ಒಂದು ವರ್ಷದ ಮೇಲೆ ಅದಕ್ಕೆ ಲೇಖನ ಬರೆಯುತ್ತಿದ್ದೆ.

ಒಂದು ಸಲ ನಮ್ಮ ಯಜಮಾನರ ಚಿಕ್ಕಂದಿನ ಮಿತ್ರರಾದ ಆರ್.ಎಲ್.ಎಮ್ ಪಾಟೀಲರ ಮನೆಯ ಗೃಹ ಪ್ರವೇಶಕ್ಕೆ ಹೋಗಿದ್ದೆವು. ಅಲ್ಲಿ ಜಯಂತ ಕಾಯ್ಕಿಣಿ ಬಂದಿದ್ದರು. ಪಾಟೀಲರು ನಾನು ನಾರಾಯಣರಾಯರ ಮೊಮ್ಮಗಳೆಂದು ಪರಿಚಯಿಸಿದಾಗ ಕಾರ್ಯಕ್ರಮದ ಅಂತ್ಯದವರೆಗೆ ಜಯಂತ ನನ್ನನ್ನು ಬಿಟ್ಟು ಕದಲಲಿಲ್ಲ. ನವ್ಹೆಂಬರ್ ತಿಂಗಳಿಗೆ ಮೊದಲೇ ವಿಜಯ ಕರ್ನಾಟಕದ ವೆಂಕಟಲಕ್ಷ್ಮಿಯನ್ನು ಮನೆಗೆ ಕಳಿಸಿ ನಾರಾಯಣರಾಯರ ಮೇಲೆ ಸಂದರ್ಶನ ಪಡೆದು ಪ್ರಕಟಿಸಿದರು. ಹೀಗೆ ಪರಿಚಯವಾದ ಜಯಂತರಿಗೆ ನನ್ನ ಬೇಂದ್ರೆಯವರ ಮೇಲಿನ ಲೇಖನ ಕೊಟ್ಟಾಗ 'ನಾರಾಯಣರಾಯರ ಮೊಮ್ಮಗಳು' ಎಂಬ ಬಾವುಟದೊಂದಿಗೆ ದೂರದರ್ಶನದ ಮೇಲೆ ಕಾರ್ಯಕ್ರಮ ಪ್ರಸಾರ ಮಾಡಿದರು.

ಎಂ.ವ್ಹಿ. ಸುಬ್ಬರಾವ್ ಜೊತೆ ಸಾಹಿತ್ಯಪ್ರೇಮಿಗಳ ಒಂದು ಗುಂಪು ಮಾಡಿಕೊಂಡು ಕೆ.ಎಸ್. ನರಸಿಂಹಮೂರ್ತಿ, ಕಮಲಾ ಹಂಪನಾ, ನಾಗರಾಜ ಹಂಪನಾ ಎಲ್ಲರ ಸಂಪರ್ಕ ಸಿಕ್ಕಿತು. ನಾಗರಾಜ ಹಂಪನಾ ಫೋನು ಮಾಡಿದಾಗ "ನೀನು ನಾರಾಯಣರಾಯರ ಮೊಮ್ಮಗಳೆಂದರೆ, ನಮಗೆ ಮಗಳಿದ್ದಂತೆ, ನಮ್ಮನೆಗೆ ಬಾ" ಎಂದು ಆತ್ಮೀಯತೆಯಿಂದ ಕರೆದರು. ಗೋವಿಂದಮೂರ್ತಿ ದೇಸಾಯಿಯವರ ಮನೆಗೆ ಹೋದಾಗ ಮೊದಲ ಸಲ 'ಉದಯವಾಗಲಿ' ಹಾಡಿದ ೧೯೨೪ ನೇ ವರ್ಷದ ಕಾಂಗ್ರೆಸ್ ಅಧಿವೇಶನದ

ಹೊತ್ತಿಗೆಯನ್ನೇ ತೋರಿಸಿದರು. "ಗದಗಿನಲ್ಲಿ ನಿಮ್ಮ ಮನೆಯಲ್ಲಿಯೇ ಬಾಡಿಗೆಗೆ ಇದ್ವೆ. ನಾರಾಯಣರಾಯರ ಜೊತೆಯಲ್ಲೂ ಬೇಕಾದಷ್ಟು ಸಲ ಮಾತಾಡಿದ್ದೇನೆ" ಎಂದೆಲ್ಲ ಹೇಳಿದರು. ಮಾಸ್ಟರ್ ಹಿರಣ್ಣಯ್ಯ ಅವರ ಮನೆಗೆ, ನಿಟ್ಟೂರ ಶ್ರೀನಿವಾಸರಾಯರ ಮನೆಗೆ ಕೂಡ ಹೋಗಿದ್ದೆವು. ನಿಟ್ಟೂರರವರು ನಾನು ನಾರಾಯಣರಾಯರ ಮೊಮ್ಮಗಳೆಂದು ಪರಿಚಯಿಸಿದಾಗ ಹತ್ತಿರ ಕೂಡಿಸಿಕೊಂಡು ಹಿಂದಿನ ಅವರ ಸ್ನೇಹದ ಬಗ್ಗೆ ಹೇಳಿದರು - "ನಾನು ಗದಗಿಗೆ ಬಂದಾಗ ನಿಮ್ಮ ಅಜ್ಜನ ಮನೆಯಲ್ಲಿ ಭಕ್ರಿ ಊಟಾ ಮಾಡಿದ್ದೇನೆ. ಅವರು 'ಉದಯವಾಗಲಿ' ಎನ್ನುವದೇ ಸರಿ 'ಉದಯವಾಯಿತು' ಅಂದರೆ ಆ ಆಶಯ ಮುಗಿದು ಹೋದಂತೆ " ಎಂದೆಲ್ಲಾ ಹೇಳಿದರು. ಅದನ್ನೆಲ್ಲಾ ನೇತ್ರಾವತಿ ಧ್ವನಿಮುದ್ರಣ ಮಾಡಿಕೊಂಡಿದ್ದಾರೆ.

ಕಳೆದ ವರ್ಷ ನಾನು ೮ - ೧೦ ಏಕಾಂಕಿ ನಾಟಕಗಳನ್ನು ಬರೆದೆ. ಏಕಾಂಕಿಗಳೆಂದ ತಕ್ಷಣ ನನಗೆ ಶ್ರೀ ಎನ್.ಕೆ. ಕುಲಕರ್ಣಿಯವರದೇ ಧ್ಯಾನ. ನಾವು ಶಾಲೆಯಲ್ಲಿದ್ದಾಗೆಲ್ಲಾ ಅವರ ನಾಟಕಗಳನ್ನೇ ಮಾಡುತ್ತಿದ್ದೆವು. ಅವರ ಸಲಹೆ ಪಡೆಯಬೇಕೆಂದು ಅಳುಕುತ್ತ ಅಂಜುತ್ತ ಧಾರವಾಡದಲ್ಲಿ ಅವರ ಮನೆಗೆ ಹೋದೆ. ನನ್ನನ್ನು ಪರಿಚಯಿಸಲು ನನ್ನ ನಾನಾ ಅವರ ಬಾವುಟವನ್ನೇ ಎತ್ತಿ ಹಿಡಿದೆ. "ಅಯ್ಯೋ ಹುಯಿಲಗೋಳ ನಾರಾಯಣರಾಯರ ಮೊಮ್ಮಗಳ ನೀನು ! ಹಂಗಾದರ ನನ್ನ ಮಗಳನವಾ ನೀನು. ನನಗ ಮೊಟ್ಟ ಮೊದಲು ಅನ್ನ ಹುಟ್ಟಿಸಿದವರು ಅವರು. ನಾನೂ ಗದಗಿನವ. ನಾನೂ ಎನ್ಕೆ ಅವರೂ ಎನ್ಕೆ " ಎನ್ನುತ್ತ 'ನಾನಾ' ಅವರ ಗುಣಗಾನ ಮಾಡಿದ್ದೇ ಮಾಡಿದ್ದು. "ಅವರ ವಜ್ರಮುಕುಟ ನಾಟಕ ನನ್ನತ್ರ ಹಸ್ತಪ್ರತಿ ಅದ. ನಿನಗ ಕೊಡ್ತೀನಿ" ಎಂದು ಹೇಳಿ ನನ್ನ ನಾಟಕಗಳನ್ನು ಕೂಲಂಕಷವಾಗಿ ಓದಿ ಮುನ್ನುಡಿಯನ್ನು ಬರೆದುಕೊಟ್ಟರು. ಅವರು ತೀರುವ ತಿಂಗಳು ಮೊದಲು ಅವರ ಮನೆಗೆ ನಾವೆಲ್ಲ ಅಕ್ಕ ತಂಗಿಯರು ಹೋಗಿದ್ದೆವು. ಅಕ್ಕ ಕಮಲನ ಕಡಿಯಿಂದ 'ನಾನಾ' ಅವರ ತಮಗೆ ಸೇರುವ ಎರಡು ಹಾಡು ಅನ್ನಿಸಿಕೊಂಡು ಎರಡುಗಂಟೆ ಮಾತಾಡಿ ಕಳಿಸಿದರು. ಅಂದು ಅಂತ್ಯ ಅಷ್ಟು ಹತ್ತಿರವಿದೆ ಅನಿಸಲಿಲ್ಲ.

ನಂತರ ಒಮ್ಮೆ ನಾನು ಬರೆದ ಕವನಗಳನ್ನು (ಸುಮಾರು ೫೫) ತೋರಿಸಲು ಪ್ರಸಿದ್ಧ ಕವಿ ಡಾ|| ಎಚ್.ಎಸ್. ವೆಂಕಟೇಶ್ ಮೂರ್ತಿಯವರ ಮನೆಗೆ ಹೋದೆ. ಡಾ. ಆಮೂರರು ಮತ್ತೆ ನನ್ನ ಪರಿಚಯ ಹೇಳುವಾಗ 'ನಾರಾಯಣರಾಯರ ಮೊಮ್ಮಗಳು' ಎಂದು ಹೇಳಿದ್ದರಂತೆ. ನಾನು ಹೋದ ತಕ್ಷಣ ಅವರು 'ಉದಯವಾಗಲಿ' ಯ ಬಗ್ಗೆ ಮಾತಾಡಿ ಅದನ್ನು ಗುಣಗುಣಿಸ ತೊಡಗಿದರು. ಹಾಗೇ "ನೀವು ನಾರಾಯಣರಾಯರ ಮೇಲೆ ಪುಸ್ತಕ ಬರೆಯಲೇಬೇಕು. ನಿಮಗೆ ಗೊತ್ತಿರುವಷ್ಟು ಇನ್ನಾರಿಗೂ ಗೊತ್ತಿರಲಾರದು.

ಖಂಡಿತ ಬರೆಯಿರಿ" ಎಂದು ಒತ್ತಿ ಒತ್ತಿ ಹೇಳಿ ನನ್ನ ಸ್ಫೂರ್ತಿಗೆ ಇಂಧನ ಹಾಕಿದರು.

ಕುಳಿತು ಯೋಚಿಸುವಾಗ ನನ್ನಂಥವಳಿಗೆ ಇಂಥ ಎಲ್ಲ ಮಹಾನುಭಾವರ ಸಂಪರ್ಕ ಬರಲು ಕಾರಣೀಭೂತರು ನನ್ನ 'ನಾನಾ', ಅವರಿಲ್ಲದಿದ್ದರೂ ಪರೋಕ್ಷವಾಗಿ ಅವರ ಆಶೀರ್ವಾದ ನನ್ನ ಜೊತೆ ಇದೆಯೆಂದೇ ನನ್ನ ನಂಬಿಕೆ.

ಪ್ರತಿದಿನ ಸಂಜೆ ಮನೆಯ ಅಂಗಳದಲ್ಲಿ ನಾನಾ ಮಕ್ಕಳ ಹಿಂಡನ್ನು ಸುತ್ತಲೂ ಕೂಡಿಸಿಕೊಂಡು ಕಥೆಗಳನ್ನು ಹೇಳುತ್ತಿದ್ದರು. ನಾನಾ ಅವರಿಗೆ ಮಕ್ಕಳನ್ನು ಕಂಡರೆ ಅತ್ಯಂತ ಮಮತೆ. ಅವರು ರಾಮಾಯಣ, ಮಹಾಭಾರತ, ಪಂಚತಂತ್ರಗಳ ಕಥೆಗಳನ್ನು ತುಂಬಾ ಆಕರ್ಷಕವಾಗಿ ಹೇಳುತ್ತಿದ್ದರು. ಇನ್ನೊಂದು ಅವರಲ್ಲಿ ವಿಶೇಷವೆಂದರೆ ಕಥೆಯನ್ನು ಬಹಳ ಸಲ ಅರ್ಧಕ್ಕೆ ಮುಗಿಸಿ ಬಿಟ್ಟುಬಿಡುತ್ತಿದ್ದರು. ಧಾರವಾಹಿ ಕಥೆಯಂತೆ ಮರುದಿನ ಮಕ್ಕಳು ಮುಂದಿನ ಭಾಗ ಕೇಳಲು ಕಾತರದಿಂದ ಕಾಯ್ದು ಕುಳಿತಿರುತ್ತಿದ್ದರು. ಗಣೇಶ ಚತುರ್ಥಿಯಂದು ಅವರು ಶಮಂತಕ ಮಣಿಯ ಕಥೆ ಹೇಳುವದು ಸಾಮಾನ್ಯ.

ನಾನಾ ಅವರ ಮನೆಯಲ್ಲಿ ಆಗಿನ ಕಾಲ ಗ್ರಾಮೊಫೋನೊ ಇತ್ತು. ಅವರಲ್ಲಿ ಇದ್ದ ರೆಕಾರ್ಡ್‌ಗಳೆಲ್ಲ ಭಕ್ತಿಗೀತೆಗಳು ಅಥವಾ ನಾಡಭಕ್ತಿಗೀತೆಗಳು. ಎಮ್.ಎಸ್. ಸುಬ್ಬುಲಕ್ಷ್ಮಿಯ ಮೀರಾ ಭಜನೆಗಳು, ಭೀಮಸೇನ ಜೋಷಿಯವರ 'ಉದಯವಾಗಲಿ', ಬೇಂದ್ರೆಯವರೇ ಸ್ವಂತ ಹಾಡಿದ ಅವರ ಕವನಗಳು - "ತುಂಬಿ ಬಂದಿತ್ತ ತಂಗಿ ತುಂಬಿ ಬಂದಿತ್ತ" ಹಾಗೂ "ಮುಗಿಲ ಮಾರಿಗೆ ರಾಗ ರತಿಯ ನಂಜ ಏರಿತ್ತ ಆಗ ಸಂಜೆಯಾಗಿತ್ತ" ಮುಂತಾದ ರೆಕಾರ್ಡುಗಳಿದ್ದವು.

ನಾನಾ ಅವರ ಸಂಬಂಧದಲ್ಲಿ ಕೆಲವು ಅವರ್ಣನೀಯ ಔಚಿತ್ಯಗಳಿವೆ. ನಾನಾ ಅವರ ಹಾಗೂ ನನ್ನ ರಾಶಿ ನಕ್ಷತ್ರಗಳು ಒಂದೇ - ವೃಶ್ಚಿಕ ರಾಶಿ, ನನ್ನ ಜನ್ಮನಾಮ ನನ್ನ ಜಾತಕದಲ್ಲಿ "ನಾರಾಯಣಿ" ಎಂದಿದೆ. ನಾನಾ ಅವರ ತಾಯಿಯವರ ಹೆಸರು (ಮದುವೆಯಾದ ನಂತರ) "ರಾಧಾ", ತಂದೆಯವರ ಹೆಸರು "ಕೃಷ್ಣ". ನನ್ನ ಪತಿಯ ಹೆಸರು ಕೃಷ್ಣ, ನನ್ನ ಮದುವೆಯ ನಂತರದ ಹೆಸರು ರಾಧಾ. ನನ್ನ ತಾಯಿಯ ಮದುವೆಯ ನಂತರದ ಹೆಸರು ರಾಧಾ. ನಾನಾ ಅವರಿಗೆ ರಾಷ್ಟ್ರಪತಿ ರಾಜೇಂದ್ರಪ್ರಸಾದರಿಂದ ಪದಕ, ಪ್ರಶಸ್ತಿ ಸಿಕ್ಕಿದೆ. ನನಗೂ ರಾಷ್ಟ್ರಪತಿ ಕೆ.ಆರ್. ನಾರಾಯಣರಿಂದ ಪದಕ, ಪ್ರಶಸ್ತಿ ಸಿಕ್ಕಿದೆ.

ಆಶ್ಚರ್ಯದ ಸಂಗತಿಯೆಂದರೆ ನಮ್ಮ ತಾಯಿ (ರಾಧಾಬಾಯಿ ಪಾಗೆ). ತನ್ನ ಕೊನೆಯ ದಿನಗಳಲ್ಲಿ ತನ್ನ ಸ್ಮರಣ ಶಕ್ತಿಯನ್ನು ಆಗಾಗ ಕಳೆದುಕೊಳ್ಳುತ್ತಿದ್ದಳು. ಅದೇ

ಊಟ ಹಾಕಿ ಕೈ ತೊಳಿಸಿದಾಗ "ನನಗೆ ಬೇಗ ಉಟಕ್ಕೆ ಹಾಕಿ ಬಿಡು" ಎನ್ನುತ್ತಿದ್ದಳು. ಮಧ್ಯರಾತ್ರಿಗೆ ಎದ್ದು "ಸ್ನಾನ ಮಾಡಿಸು" ಎನ್ನುತ್ತಿದ್ದಳು. ಕೆಲ ಜನರನ್ನು ಪರಿಯಚಿಸುವದರಲ್ಲೂ ತಪ್ಪುಮಾಡುತ್ತಿದ್ದಳು. ಆದರೆ ನಮ್ಮ ನಾನಾ ಅವರ ವಿಷಯ ಏನಿದ್ದರೂ ಸರಿಯಾಗಿ ಹೇಳುತ್ತಿದ್ದಳು. ಅವರ ನಾಟಕಗಳ ಹೆಸರು ಅದರಲ್ಲಿಯ ಕೆಲವು ಹಾಡುಗಳು ಅವಳಿಗೆ ಸರಿಯಾಗಿ ನೆನಪಿರುತ್ತಿದ್ದವು. ತಾವು ೧೯೨೪ರ ಬೆಳಗಾವಿ ಕಾಂಗ್ರೆಸ್ಸಿಗೆ ಹೋದ ಎಲ್ಲ ವಿವರಗಳನ್ನು ಚಾಚೂ ತಪ್ಪದೆ ಹೇಳುತ್ತಿದ್ದಳು. ನನ್ನ ತಂಗಿ (ಲೀಲಾ ಪೂಜಾರ) ಅವಳಿಗೆ ದಿನಾಲೂ ನಾನಾ ಅವರ ಹಾಡು ಅಂದು ತೋರಿಸುತ್ತಿದ್ದಳು. ಆಗ ಅವಳ ಜೊತೆಗೆ ನಮ್ಮ ತಾಯಿ ಆ ಎಲ್ಲ ಹಾಡುಗಳನ್ನು ಅನ್ನುತ್ತಿದ್ದಳು. ಇವಳು ಬೇಕಂತಲೇ ನಡುವೆ ಬಿಟ್ಟರೆ ಮುಂದಿನ ಸಾಲುಗಳನ್ನು ಅಂದುಕೊಂಡು ಹೋಗುತ್ತಿದ್ದಳು. ಹಾಗೆಯೇ ಮೇಲಿಂದ ಮೇಲೆ ನಾನಾ ಅವರ ನೆನಪು ತೆಗೆದು - "ನಮ್ಮ ನಾನಾ ಭಾಳ ಒಳ್ಳೇ ಮನಷಾ. ಯಾರಿಗೂ ಕೆಟ್ಟ ಮಾಡಾವಲ್ಲಾ, ಯಾರಿಗೂ ಕೆಟ್ಟ ಬಯಸಾವಲ್ಲಾ" ಎನ್ನುತ್ತಿದ್ದಳು. ಕೆಲವು ಸಲ "ನಾನು ನಾನಾನ್ನ ನೋಡಬೇಕು, ನನ್ನ ಗದಗಿಗೆ ಕರಕೊಂಡು ಹೋಗ್ರಿ" ಎಂದು ಹಟ ಮಾಡುತ್ತಿದ್ದಳು. ನಾನಾ ಅವರಿಗೆ ಇದ್ದಂತೆ ಇವಳು ಮಲಗಿದ ಜಾಗದಲ್ಲಿ ಎದುರಿಗೆ ಗದಗಿನ ವೀರನಾರಾಯಣನ ದೊಡ್ಡ ಫೋಟೊ ಹಾಕಿದ್ದರು. ನಾನಾ ಅವರಿಗೂ ಹಾಗೇ ಎದುರಿಗೆ ಅವರ ಆರಾಧ್ಯದೇವರ ಫೋಟೊ ಹಾಕಿದ್ದರಂತೆ. ಅವರು ಕೊನೆಯ ಕಾಲದಲ್ಲಿ ಮೇಲಿಂದ ಮೇಲೆ "ನಾರಾಯಣಾ ನನ್ನ ನಿನ್ನ ಪಾದದೊಳಗ ಕರಕೊಳ್ಳಪ್ಪಾ" ಅನ್ನುತ್ತಿದ್ದರಂತೆ. ನಮ್ಮ ತಾಯಿಯೂ ಅದೇ ರೀತಿ ನಾರಾಯಣ ದೇವರಿಗೆ ಕೈ ಮುಗಿದು ಕೇಳುತ್ತಿದ್ದಳು. ಅವಳು ತೀರುವ ಒಂದೇ ದಿನ ಮೊದಲು ನಾವೆಲ್ಲ ಅವಳನ್ನು ನೋಡಲು ಹೋಗಿದ್ದೆವು. ಅವರ ಹಾಡುಗಳೆಲ್ಲಾ ಅನ್ನುವದಾದ ಮೇಲೆ ನಮ್ಮ ತಾಯಿ ಇದ್ದಕ್ಕಿದ್ದಂತೆ "ಅಯ್ಯೊ ನಾನಾ ಬಂದಾನ, ನನ್ನ ಎಬ್ಬಿಸಿ ಕೂಡಸರಿ, ಅರ್ಚನಾ" ಎಂದು ಒಂದೇ ಸಮನೆ ಹೇಳತೊಡಗಿದಳು. ನನ್ನ ತಂಗಿ ಮಗಳು ಅರ್ಚನಾ ಅವಳಿಗೆ, "ಅಜ್ಜಿ, ನಾನಾ ಪ್ಯಾಟಿಗೆ ಹೋಗಿ ಬರ್ತಾರಂತ , ಅಲ್ಲಿ ತನಕ ನೀ ಮಲಕೋ ಅವರು ಬಂದಿಂದ ಎಬ್ಬಿಸ್ತೀವಿ" ಎಂದು ಚಿಕ್ಕ ಮಕ್ಕಳಿಗೆ ಹೇಳುವಂತೆ ಸುಳ್ಳು ಹೇಳಿ ಮಲಗಿಸಿದಳು. ಅದೇ ಅವಳ ಕೊನೆಯ ಮಾತಾಯಿತು.

ನಾನಾ ವಕೀಲರಿದ್ದಾಗಿನ ಪ್ರಸಂಗ, ಆಗಿನ ಕಾಲದಲ್ಲಿ ಫ್ಯಾನುಗಳಿದ್ದಿದ್ದಿಲ್ಲ. ಆಗ ಬೇಸಿಗೆಯ ದಿನಗಳಲ್ಲಿ ಬಾರ್-ರೂಮಿನಲ್ಲಿ ಗಾಳಿಗಾಗಿ ಒಂದು ವ್ಯವಸ್ಥೆ ಮಾಡಿಕೊಂಡಿದ್ದರಂತೆ. ಕೋಣೆಯ ಛತ್ತಿನಿಂದ ಒಂದು ಹಗ್ಗ ಕಟ್ಟಿ ಅಡ್ಡಕ್ಕೆ ಮೇಲಿನಿಂದ ಕೆಳಗಿನವರೆಗೆ ಒಂದು ಪರದೆ ತರಹ ಕಟಿ. ಒಬ್ಬ ಜವಾನನು ಅದನು ಸತತವಾಗಿ ಆ

ಪಕ್ಕಕ್ಕೆ ಈಪಕ್ಕಕ್ಕೆ ಚಲಿಸಿದಾಗ ಗಾಳಿ ಬರುತ್ತಿತ್ತು. ಸಂವೇದನಾಶೀಲರಾದ ನಾನಾ ಅವರಿಗೆ ಅವನು ಸತತವಾಗಿ ಅದನ್ನು ಚಲಿಸುವದು ಬೇಸರ ತರಿಸುತ್ತಿತ್ತು. ತಾವು ಒಬ್ಬರೇ ಇದ್ದರೆ ಆ ಜವಾನನಿಗೆ ಅದನ್ನು ಮಾಡದಿರಲು ಹೇಳುತ್ತಿದ್ದರಂತೆ ನಾನಾ. ಎಂಥ ಸಹೃದಯತೆ ಅವರದು!

# ಭಾಗ ೨

# ಹುಯಿಲಗೋಳ ನಾರಾಯಣರಾಯರ ಸಾಧನೆಗಳು

## ೧. ರಾಷ್ಟ್ರಗೀತೆಯ ರಚನೆ

೧೯೨೪ರ ಸಮಯ. ಸಂಪೂರ್ಣ ಭಾರತ ಪರದಾಸ್ಯದ ಸಂಕೋಲೆಗಳಿಂದ ಮುಕ್ತವಾಗಲು ಪರದಾಡುತ್ತಿದ್ದ ದಿನಗಳು. ಸ್ವಾತಂತ್ರ್ಯ ಸಂಗ್ರಾಮದ ಕಿಚ್ಚು ನಾಡ ಮೂಲೆ ಮೂಲೆಗಳಲ್ಲಿ ಹಬ್ಬಿ ಜನಮನವನ್ನು ಉತ್ತೇಜಿಸಿದ ಕಾಲ! ದೇಶಕ್ಕಾಗಿ ಕಳವಳ ಪ್ರತಿಯೊಬ್ಬ ಭಾರತೀಯನ ಮನದಲ್ಲಿ ಜಾಜ್ವಲ್ಯಮಾನವಾಗಿ ಉರಿಯುತ್ತಿದ್ದ ಕಾಲ! ದೇಶದ ಸಾವಿರಾರು ಕಾಂಗ್ರೆಸ್ ಧುರೀಣರು ಗಾಂಧೀಜಿಯ ಪದಚಿಹ್ನೆಯನ್ನು ಅನುಸರಿಸಿ ಮುಂದೆ ಸಾಗಿದ್ದರು. ಪ್ರತಿವರ್ಷ ಕಾಂಗ್ರೆಸ್ ಅಧಿವೇಶನ ಭಾರತದ ಬೇರೆ ಬೇರೆ ಭಾಗಗಳಲ್ಲಿ ನಡೆಯುತ್ತಿತ್ತು. ಡಿಸೆಂಬರ್೧೯೨೪ರಲ್ಲಿ ಈ ಅಧಿವೇಶನ ಕರ್ನಾಟಕದ ಬೆಳಗಾವಿಯಲ್ಲಿ ಮಾಡುವದು ನಿರ್ಧಾರವಾಗಿತ್ತು. ಸ್ವತಃ ಗಾಂಧೀಜಿ ಅಧಿವೇಶನಕ್ಕೆ ಅಧ್ಯಕ್ಷರು.

ಈ ಅಧಿವೇಶನದ ಸ್ವಾಗತ ಸಮಿತಿಯವರು ಸ್ವಾಗತ ಗೀತೆಯನ್ನು ರಚಿಸಿ ಕಳಿಸಲು ವೃತ್ತಪತ್ರಿಕೆಗಳ ಮುಖಾಂತರ ವಿನಂತಿಸಿಕೊಂಡಿದ್ದರಂತೆ. ನಾರಾಯಣರಾಯರ ಗೆಳೆಯರಾದ ಗುಡಿ ನಾರಾಣಾಚಾರ್ಯರು ಈ ಪತ್ರಿಕೆಯನ್ನು ತಂದು ಮಲೇರಿಯ ಜ್ವರದಿಂದ ಹಾಸಿಗೆ ಹಿಡಿದು ಮಲಗಿದ್ದ ನಾರಾಯಣರಾಯರಿಗೆ ಕೊಟ್ಟು 'ನೀವೇಕೆ ಬರೆಯಬಾರದು?' ಎಂದರಂತೆ. ನಿಷ್ಠಾವಂತ ಕಾಂಗ್ರೆಸ್ಸಿಗರಾದ, ಗಾಂಧೀಜಿಯವರ ಶ್ರದ್ಧಾವಂತ ಅನುಯಾಯಿಯಾದ ನಾರಾಯಣರಾಯರ ಮನದಲ್ಲಿ ಕೂಡಲೆ ದೇಶಭಕ್ತಿಯ ಅಲೆಗಳೆದ್ದು ಅವರ ಸಂವೇದನಾಶೀಲ ಹೃದಯ ಈ ಕರೆಗೆ ಸ್ಪಂದಿಸಿತು. ಭಾವಾವೇಶದ ಅಲೆಗಳು ಓತಪ್ರೋತವಾಗಿ ಹೊರಹೊಮ್ಮಿ ಹರಿದು ಬಂದು ಕವನ ರೂಪ ತಾಳಿತು - "ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು" ಎಂದು ನಿರರ್ಗಳವಾಗಿ ಪ್ರವಹಿಸಿತು. ಅವರ ಕನ್ನಡದ ಅಭಿಮಾನ - ಕವನದ ಚೌಕಟ್ಟಿನಲ್ಲಿ! ಗುಡಿಯವರೇ ಅದನ್ನು ಸ್ವಾಗತ ಸಮಿತಿಯವರಿಗೆ ಕಳಿಸಿ ಬಂದರು.

ಮುಂದೆ ಸ್ವಾಗತ ಸಮಿತಿಯು ಅದನ್ನೇ ಸ್ವಾಗತ ಗೀತೆಯಾಗಿ ಆಯ್ಕೆ ಮಾಡಿತು. ಸಮಿತಿಯಲ್ಲಿ, 'ಕರ್ನಾಟಕ ಸಿಂಹ' ಎಂದು ಪ್ರಸಿದ್ಧರಾಗಿದ್ದ ದೇಶಪಾಂಡೆ ಗಂಗಾಧರರಾಯರು ಸ್ವಾಗತಾಧ್ಯಕ್ಷರಾಗಿದ್ದರು. ಡಾ. ಹರ್ಡಿಕರ, ಮುದವೀಡು ಕೃಷ್ಣರಾಯರು, ಬೆಟಗೇರಿ ಕೃಷ್ಣಶರ್ಮರು, ಗರೂಡ ಸದಾಶಿವರಾಯರು ಮುಂತಾದವರು ಸದಸ್ಯರಾಗಿದ್ದರು. ಈ ಪವಿತ್ರ ಪ್ರಸಂಗದಲ್ಲಿ 'ಉದಯವಾಗಲಿ' ಯ ಉದಯವಾಯಿತು. ಧಾರವಾಡದ ಗವಾಯಿ ಸುಬ್ಬರಾಯರು ಸಂಗಡಿಗರೊಂದಿಗೆ ಇದನ್ನು ಸುಶ್ರಾವ್ಯವಾಗಿ ಸಭೆಯ ಮುನ್ನ ಹಾಡಿದರು. ಈ ಸಮೂಹದಲ್ಲಿ ಪ್ರಸಿದ್ಧ ಗಾಯಕಿ ಗಂಗೂಬಾಯಿ ಹಾನಗಲ ಇದ್ದರಂತೆ. ಈ ಮೇರು ಕೃತಿಗೆ ಮಾರು ಹೋಗಿ ಮಹಾತ್ಮಾ ಗಾಂಧಿಯವರು ನಾರಾಯಣರಾಯರಿಗೆ ಪುಷ್ಪಹಾರ ಹಾಕಿ ಗೌರವಿಸಿದರು. ಜನಸ್ತೋಮವೆಲ್ಲ ಕನ್ನಡದ ವೈಭವವನ್ನು ವರ್ಣಿಸುವ ಈ ಗೀತೆಯನ್ನು ಕೇಳಿ ಕುಣಿದಾಡಿ ಬಿಟ್ಟರು. ಈ ಗೀತೆಯನ್ನು ಬರೆದ ಕವಿ ಹುಯಿಲಗೋಳ ನಾರಾಯಣರಾಯರನ್ನು ಜನತೆಗೆ ಪರಿಚಯ ಮಾಡಿಕೊಟ್ಟಾಗ ಜನರ ಚಪ್ಪಾಳೆಯಿಂದ ಸಭೆ ತುಂಬಿತು. ಕೈ ಮುಗಿದುಕೊಂಡು ನಿಂತ ಸರಳ, ನಿರಾಡಂಬರದ, ನಿರಹಂಕಾರದ ಖಾದೀಧಾರಿ ನಾರಾಯಣರಾಯರನ್ನು ಸಂತಸ ಹಾಗೂ ಭಾವೋದ್ವೇಗದ ಮುಗುಳುನಗೆಯಿಂದ ಮಹಾತ್ಮಾ ಗಾಂಧಿಜಿಯವರು ಅಭಿನಂದಿಸುತ್ತಿದ್ದುದು ರೋಮಾಂಚನಕಾರಿ ದೃಶ್ಯವಾಗಿತ್ತು. ಕನ್ನಡ ನಾಡು ನುಡಿಗಳ ಏಳ್ಗೆಗೆ ಕಂಕಣ ಕಟ್ಟಿಸಿದ ಈ ಹಾಡು, ಮಹಾತ್ಮರ ಶುಭ ಆಶೀರ್ವಾದದ ಬಲದಿಂದ ಕನ್ನಡ ನಾಡಗೀತೆಯಾಗಿ ಮುಕ್ಕೋಟಿ ಜನರ ಹೃದಯವನ್ನು ಪುಲಕಿತಗೊಳಿಸಿತು. ನಾಡಿನ ಮೂಲೆ ಮೂಲೆಗಳಲ್ಲಿ ಪ್ರತಿಧ್ವನಿಗೊಂಡಿತು. ಕನ್ನಡ ಚೇತನವನ್ನು ಉದ್ದೀಪನಗೊಳಿಸಿತು. ಅಂದಿನಿಂದ ಶ್ರೀ ಹುಯಿಲಗೋಳ ನಾರಾಯಣರಾಯರು "ನಾಡಗೀತೆ ನೀಡಿದ ನಾರಾಯಣರಾಯರು" ಎಂದೇ ನಾಡಿನಾದ್ಯಂತ ಚಿರಪರಿಚಿತರಾದರು.

ಬೆಳಗಾವಿಯ ಈ ಅಧಿವೇಶನಕ್ಕೆ ನಾನಾ ತಮ್ಮ ಕುಟುಂಬದ ಎಲ್ಲ ಜನರನ್ನೂ ಕರೆದುಕೊಂಡು ಹೋಗಿದ್ದರಂತೆ. ಅವರಲ್ಲಿ ನಮ್ಮ ತಾಯಿಯೂ ಇದ್ದರು. ಅವರ ಬಾಯಿಂದ ಅಲ್ಲಿಯ ವಿವರಗಳನ್ನು ಕೇಳುವದು ನಮಗೆ ತುಂಬಾ ಆಶೆ. ನಮ್ಮ ತಾಯಿಗೂ ಅದನ್ನು ಹೇಳುವಾಗ ಎಲ್ಲಿಲ್ಲದ ಸ್ಫೂರ್ತಿ. ಈ ಅಧಿವೇಶನ ಈಗಿನ ತಳಕವಾಡಿಯಲ್ಲಿ ನಡೆಯಿತಂತೆ. ಅಧಿವೇಶನಕ್ಕಾಗಿಯೇ ನಿರ್ಮಿಸಿದ್ದ ಸ್ಥಳಕ್ಕೆ 'ವಿಜಯನಗರ'ವೆಂದು ಹೆಸರಿಸಿದ್ದರಂತೆ. ಕರ್ನಾಟಕ ಗತ ವೈಭವದ ಕುರುಹಾಗಿ ಆ ಹೆಸರನ್ನು ಆಯ್ದುಕೊಂಡಿರಬಹುದು. ಭವ್ಯವಾದ ಪೆಂಡಾಲ ಹಾಕಿ ಪ್ರವೇಶದ್ವಾರ ನಿರ್ಮಿಸಿದ್ದರಂತೆ. ಅದಕ್ಕೆ ಹಂಪೆಯ ವಿರೂಪಾಕ್ಷನ ದ್ವಾರ ಎಂದು ಹೆಸರಿಸಿದರಂತೆ. ಚಿಕ್ಕವರಿದ್ದ ಅಮ್ಮ..

ಚಿಕ್ಕಮ್ಮ ಎಲ್ಲರಿಗೂ ನಾನಾ ರಿಬ್ಬನ್, ಬಳೆ ಕೊಡಿಸಿದ್ದನ್ನು ಅಪ್ಪ ಜ್ಞಾಪಿಸಿಕೊಳ್ಳುತ್ತಿದ್ದಳು.

**ರಾಷ್ಟ್ರಗೀತೆಯ ಆಶಯ** – ಆ ವೇಳೆಗಾಗಲೇ ಹರಿದು ಹಂಚಿಹೋಗಿದ್ದ ಕನ್ನಡ ನೆಲವನ್ನು ಒಂದಾಗಿಸುವ ಮಹದಾಕಾಂಕ್ಷೆ ಕರ್ನಾಟಕದ ಜನತೆಯಲ್ಲಿ ಅದಮ್ಯವಾಗಿತ್ತು. ಇಂಥ ಉದ್ದೇಶ ಸಫಲವಾಗಲು ಧುರೀಣರು ಹೆಣಗುತ್ತಿದ್ದರು. ಜನತೆಯಲ್ಲಿ ಈ ಸದುದ್ದೇಶವನ್ನು ಮಾರ್ದನಿಸಿತು ಈ ಗೀತೆ. ನಮ್ಮದು ಸ್ವಾಭಿಮಾನ, ದುರಭಿಮಾನವಲ್ಲ ಎಂಬ ಮಾತನ್ನು ಒತ್ತಿ ಒತ್ತಿ ಹೇಳಿತು. ಈ ಸ್ಥಳದ ಮಹಿಮೆಯನ್ನು ಸಾರಿತು. ಪರಶುರಾಮನ ತಾಯಿ ರೇಣುಕಾಂಬೆಯ ಸ್ಥಲ ಸವದತ್ತಿಯ ಮಹಿಮೆಯನ್ನೂ ಸಾರಿತು. ಶ್ರೀರಾಮನ ಭಕ್ತ, ಸಾಗರವನ್ನೇ ಸಹಜವಾಗಿ ಹಾರಿದ ಸ್ವಾಮಿಭಕ್ತ ಅಂಜನೇಯನ, ಹನುಮಂತನ ಹುಟ್ಟಿದ ನಾಡು ಕರ್ನಾಟಕದ ಹಂಪೆಯೇ ರಾಮಾಯಣ ಕಾಲದ ಕಿಷ್ಕಿಂದೆ. ವೈಭವದಿಂದ ರಾಜ್ಯವಾಳಿದ ಪರಾಕ್ರಮಿ ಅರಸರ ನಾಡಿದು. ತಮ್ಮ ಪ್ರಭಾವವನ್ನು ಎಲ್ಲೆಡೆಗೆ ಹರಡುವ ವೀರರ ಪರಂಪರೆಯ ಭೂಮಿ ಈ ಕರ್ನಾಟಕ. ಇಂಥ ಸುಂದರವಾದ ನಮ್ಮ ಕನ್ನಡ ನಾಡಿಗೆ ಅಭ್ಯುದಯವಾಗಲಿ.

ಈ ನಾಡಿನಲ್ಲಿ ಅನೇಕ ವಿಜ್ಞಾನಿಗಳು, ಕವಿಪುಂಗವರು ಬೆಳೆದರು. ಇಲ್ಲಿ ಜಗತ್ಪ್ರಸಿದ್ಧ ಜಕ್ಕಣನಂಥ ಶಿಲ್ಪಕಾರರೂ ಆಗಿ ಹೋದರು. ಈ ಜಕ್ಕಣನ ಶಿಲ್ಪಕಲೆಗೆ ಹೆಸರಾದ ಬೇಲೂರ, ಹಳೇಬೀಡು, ಸೋಮನಾಥಪುರ, ಕುರವತ್ತಿ, ಇಟಗಿ, ಲಕ್ಕುಂಡಿ, ಗದಗ ಮುಂತಾದವು ಇಂದಿಗೂ ಕನ್ನಡಿಗರ ಹೆಮ್ಮೆಯ ತಾಣಗಳು. ಈ ನಾಡಿನಲ್ಲಿ ಬೌದ್ಧ, ಜೈನ, ಶೈವ, ದ್ವೈತ, ಅದ್ವೈತ, ಮುಂತಾದ ಧರ್ಮಗಳನ್ನು ಸಾರಿದ ಮಹಾಪುರುಷರು ಇದ್ದದ್ದು ಇಲ್ಲಿಯ ಧರ್ಮಸಮಾನತೆಯ ದ್ಯೋತಕ. ಸಂಪನ್ಮೂಲಗಳು ಧಾರಾಳವಾಗಿರುವ ನೆಲವಿದು. ವಿಜಯನಗರದಂಥ ಸಾಮ್ರಾಜ್ಯಗಳಲ್ಲಿ ಮುತ್ತು, ರತ್ನಗಳನ್ನು ಅಳೆದು ಕೊಡುತ್ತಿದ್ದ ಸಿರಿವಂತಿಕೆ ನಮ್ಮದು, ವೈಭವ ನಮ್ಮದು !

ಈ ನಾಡಿನಲ್ಲಿ ನಿಸರ್ಗ ಸಿರಿಗೇನೂ ಕೊರತೆಯಿಲ್ಲ. ಪರಮ ಪಾವನ ನದಿಗಳಾದ ಕೃಷ್ಣಾ, ಭೀಮಾ, ಕಾವೇರಿ, ಗೋದಾವರಿ ಈ ನೆಲವನ್ನು ಸಿಂಚನಗೊಳಿಸಿವೆ. ಗದುಗಿನ ವೀರನಾರಾಯಣ ಇಲ್ಲಿಯ ಕವಿಗಳಿಗೆ ಸದಾಕಾಲ ಸ್ಫೂರ್ತಿಯನ್ನು ನೀಡಿ ಮುಂದೆ ಮುಂದೆ ನಡೆಯಲು ಪ್ರಚೋದಿಸಲಿ ಎಂಬ ಆಶಯ ವ್ಯಕ್ತವಾಗಿದೆ.

ಈ ಸಂದೇಶ, ಈ ಹಾರೈಕೆಯಿಂದ ಕೂಡಿದ ಕರ್ನಾಟಕದ ವೈಭವಗೀತೆ ಜನರನ್ನು ಮೈಮರೆಸಿತು. ಗೀತೆ ಮುಗಿಯಿತು. ಸಭೆಯ ಮೌನ ಹರಿಯಿತು. ಹರ್ಷೋದ್ಗಾರದ ಕರತಾಡನ ಮುಗಿಲ ಮುಟ್ಟಿತು. ಎಂಥ ರೋಚಕ ಗಳಿಗೆ !

**ಗೀತೆಯ ಕುರಿತು** - "ಈ ಹಾಡು ಕನ್ನಡಿಗರೆಲ್ಲರಿಗೂ ಕರ್ನಾಟಕದ ಏಕೀಕರಣದ ವೇದಮಂತ್ರವಾಯಿತು" **- ಶಂಕರ ಪಾಟೀಲ**

"ಉದಯವಾಗಲಿ" ಗೀತೆಯನ್ನು ಕರ್ನಾಟಕ ನಾಡಗೀತೆ ಎಂದು ಸ್ವೀಕರಿಸಲ್ಪಟ್ಟಿದ್ದು ಮುಖ್ಯಮಂತ್ರಿಗಳಾಗಿದ್ದ ಎಸ್. ನಿಜಲಿಂಗಪ್ಪನವರು ನಾರಾಯಣರಾಯರನ್ನು ಬೆಂಗಳೂರಿಗೆ ಕರೆಯಿಸಿ ಸತ್ಕರಿಸಿದರು" **- ಎಸ್. ಎನ್. ಸಾವಕಾರ**

"ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" - ಅದೇ ಅವರ ಮಂತ್ರವಾಗಿದೆ. ನಾಡಿಗೆ ನೀಡಿದ ಮಂತ್ರವಾಗಿದೆ. ಕನ್ನಡಿಗರು "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಎಂದು ನಾಡಿನ ನಿತ್ಯೋದಯ ಸಾಧಿಸುತ್ತಲಿರುವಾಗ ಗೋತ್ರ ಋಷಿಗಳಂತೆಯೇ ನಾರಾಯಣರಾಯರಿಗೆ ಸಂತೋಷವಾಗುವದು. " **- ನೆಗಳೂರ ರಂಗನಾಥ**

"ಈ ನಾಡಗೀತೆ ನುಡಿಸದೇ ಯಾವ ಸಭೆ, ಸಮಾರಂಭಗಳೂ, ಪ್ರಾರಂಭವಾಗುತ್ತಿರಲಿಲ್ಲ. ಹುಯಿಲಗೋಳ ನಾರಾಯಣರಾಯರ ಹೆಸರು ಅಜರಾಮರವಾದದ್ದು ಈ ನಾಡಗೀತೆಯಿಂದ" **- ಡಾ|| ವರದರಾಜ ಹುಯಿಲಗೋಳ**

"ಉದಯವಾಗಲಿ" ಯಲ್ಲಿ ಅನಂತವಾದ ಹಾರೈಕೆಯಿದೆ. ಉದಯವು ಮುಗಿಯದ ಪ್ರಗತಿಪರ ಶಬ್ದ" **- ಡಾ. ಆನಂದ ಉಮಚಗಿ**

"ಹುಯಿಗೋಳ ನಾರಾಯಣರಾಯರು ಪ್ರಾತಃ ಸ್ಮರಣೀಯರಲ್ಲಿ ಒಬ್ಬರು". ೧೯೨೪ರಲ್ಲಿ ಅವರು ರಚಿಸಿದ ಕನ್ನಡ ಕವಿತ್ವದ ಕ್ರಮ ಸಾಲಿನಲ್ಲಿ ಮೈರೋಮಾಂಚನವಾಗಿ ಕನ್ನಡ ಹೃದಯ ಶ್ರೀಮಂತತನವನ್ನು ಹುಯಿಲು ಎಬ್ಬಿಸಿತು. ಎಷ್ಟು ಹಾಡಿದರೂ ಕರ್ಣ ಪಾನಕವದು - ಮಧುರ ಸ್ಮೃತಿಯದು - ಬಿದ್ದ ಕನ್ನಡಿಗರನ್ನು ಕೈಕೊಟ್ಟು ಎಬ್ಬಿಸಿ ವಿಚಾರಿಸಿದ ಪದಗುಚ್ಛವದು - ಪರಂಪರೆಯನ್ನು ಪರಿಚಯ ಮಾಡಿಸಿದ ಪಾವನ ಕೃತಿಯದು. ಚರಿತ್ರೆಯನ್ನು ಒಂದೆ ಒಮ್ಮೆ ತಿರುಗಿ ನೋಡಿ, ಮುಂದೆ ಹೇಗೆ ನಡೆಯಬೇಕೆಂಬ ಎಚ್ಚರಿಕೆಯ ಅರಿವಿನ ಸೂಚಿಯದು. ಕನ್ನಡಿಗರ ಮನೆಮನೆ ಉದಯವಾಗಬೇಕು, ಮನ ಮನದಲ್ಲಿ ಕನ್ನಡಿಗರೆಂಬ ಚಿಂತನ ಉದಯವಾಗಬೇಕು. ಸರ್ವತೋಮುಖವಾಗಿ ಬೆಳೆದು ಉದಯವಾದ ನಮ್ಮ ನಾಡು ಧಾರ್ಮಿಕ, ಸಾಂಸ್ಕೃತಿಕ, ಸಾಹಿತ್ಯ - ರಾಷ್ಟ್ರೀಯತೆಯಲ್ಲಿ ಅಸ್ತಂಗತವೇ ಆಗಬಾರದೆಂಬ ಹೆಬ್ಬಯಕೆಯ ಅದ್ಭುತ ಅಪೇಕ್ಷೆಯ ಗೀತೆಯದು. ನಾಟಕ - ಕವಿತೆಗಳನ್ನೆಷ್ಟೋ ಬರೆದಿರಬಹುದು "ಈ ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಉಲಿಯುತ್ತಲೇ ಇದೆ. ಕನ್ನಡ ಜನ, ಕನ್ನಡದ ಮಣ್ಣಿನ ಬಗ್ಗೆ ಕಾವ್ಯ, ಕವನ - ಗೀತೆಗಳನ್ನೆಷ್ಟೋ ಹಾಡಿದ್ದಾರೆ. ಆದರೆ ಹುಯಿಲಗೋಳರ ಈ ಗೀತೆ ಅದೊಂದು ಚಿರಂಜೀವಿ ಸಂಜೀವಿನಿ ಸಾಹಿತ " - ಕಲಾಕೇಸರಿ ಉದಯಕುಮಾರ

ಉದಯವಾಗಲಿ ನಾಡಗೀತೆಯನ್ನು ಮದ್ರಾಸ ಸರಕಾರದ ಪಠ್ಯಪುಸ್ತಕದಲ್ಲಿ ಸಮಾವೇಶ ಮಾಡಲಾಗಿತ್ತು. ಅನಂತರ ೧೯೩೮ರಲ್ಲಿ ದಿವಂಗತ ಬಿ.ಎಂ. ಶ್ರೀಕಂಠಯ್ಯ - ನವರು ಸಂಪಾದನೆ ಮಾಡಿದ "ಕನ್ನಡ ಬಾವುಟ" ಕಾವ್ಯಸಂಗ್ರಹದಲ್ಲಿ "ನಾಡ ಪದಗಳು" ಎಂಬ ವಿಭಾಗದಲ್ಲಿ ಆಯ್ದುಕೊಂಡದ್ದು, ಕಾವ್ಯದ ಸತ್ವದ ದೃಷ್ಟಿಯಿಂದ ಗಮನಾರ್ಹವಾದದ್ದು. ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ "ಉದಯವಾಗಲಿ" ಇಂಗ್ಲೀಷಿಗೆ ಭಾಷಾಂತರವಾಗಿದ್ದರೆ, ಅಲಿಗಡ ವಿಶ್ವವಿದ್ಯಾಲಯದಲ್ಲಿ ಉರ್ದುವಿಗೆ ತರ್ಜುಮೆ ಹೊಂದಿತು. ಅತ್ತ ಕಾಳಿಂಗರಾಯರು ಇತ್ತ ಭೀಮಸೇನ ಜೋಶಿ 'ಉದಯವಾಗಲಿ' ನಾಡಗೀತೆಯನ್ನು ತಮ್ಮ ಸುಮಧುರ ಕಂಠಗಳಿಂದ ಹಾಡಿ ಜನರನ್ನು ನಲಿಸಿದರು. ಭಾಷಾವಾರು ಪ್ರಾಂತರಚನೆಯ ಸಂದರ್ಭದಲ್ಲಿ (೧, ನವೆಂಬರ್, ೧೯೫೬) ಕರ್ನಾಟಕ ಸರಕಾರವು ಬಾಬೂ ರಾಜೇಂದ್ರ ಪ್ರಸಾದ ಅವರ ಹಸ್ತದಿಂದ ನಾಡಗೀತೆಯನ್ನು ರಚಿಸಿದ ನಾರಾಯಣರಾಯರನ್ನೂ ಸುಶ್ರಾವ್ಯವಾಗಿ ಹಾಡಿ ಜನಮನ ಸೆಳೆದ ಕಾಳಿಂಗರಾಯರನ್ನೂ ವಿಶೇಷವಾಗಿ ಸನ್ಮಾನಿಸಿತು **- ಡಾ. ಜಿ.ಡಿ. ಜೋಷಿ**

ಕನ್ನಡದ ಕುಲಕೋಟಿಯನ್ನು ಜಾಗೃತಗೊಳಿಸಿದ "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಎಂಬ ಹದಿನಾಲ್ಕು ಪಂಕ್ತಿಗಳ ನಾಡಹಾಡನ್ನು ಕೇಳಿದರೆ ಇಂದಿಗೂ ರೋಮಾಂಚನವಾಗುತ್ತದೆ. ಹರಿದು ಹಂಚಿ ಹೋಗಿದ್ದ ನಮ್ಮ ಕರ್ನಾಟಕ ರಾಜ್ಯವನ್ನು ಒಂದುಗೂಡಿಸುವಾಗ ಈ ಹಾಡು ಅತ್ಯಂತ ಮಹತ್ವದ ಪಾತ್ರ ವಹಿಸಿತು. ಕನ್ನಡ ನಾಡಿನ ಭವ್ಯ ಪರಂಪರೆ, ಸಂಸ್ಕೃತಿ ಸ್ವರೂಪವನ್ನು ಚೊಕ್ಕವಾಗಿ ತಿಳಿಸುವ ಈ ಹಾಡನ್ನು ಹಾಡದೇ ಉತ್ತರ ಕರ್ನಾಟಕದಲ್ಲಿ ಯಾವ ಸಾರ್ವಜನಿಕ ಸಮಾರಂಭಗಳೂ, ಶಾಲೆಗಳೂ ಪ್ರಾರಂಭವಾಗುತ್ತಿರಲಿಲ್ಲ. ಏಕೀಕರಣಕ್ಕೆ ಹೋರಾಟ ನಡೆದಾಗ ಈ ಹಾಡು ತಾರಕ ಮಂತ್ರವಾಗಿತ್ತು. ಬಂಕಿಮಚಂದ್ರ ಚಟರ್ಜಿ ಅವರ "ವಂದೇ ಮಾತರಂ" ಗೀತೆಯಷ್ಟೇ ಪರಿಣಾಮವನ್ನು ಈ ಗೀತೆ ಮಾಡಿತೆಂದರೆ ಅತಿಶಯೋಕ್ತಿಯಲ್ಲ. ಈ ಹಾಡನ್ನು ಮುಂದೆ ನಾಡಹಾಡನ್ನು ಮಾಡಿ ಹುಯಿಲಗೋಳ ನಾರಾಯಣರನ್ನು ಹೆಚ್ಚು ಬೆಳಕಿಗೆ ತಂದವರೆಂದರೆ ಮುದವೀಡು ಕೃಷ್ಣರಾಯರು. ಈ ಹಾಡನ್ನು ತುಂಬಾ ಮೆಚ್ಚಿಕೊಂಡ ಕೃಷ್ಣರಾಯರು ಪ್ರತಿ ಸಮಾರಂಭದಲ್ಲಿ ಹಾಡಿಸಲು ಪ್ರಾರಂಭಿಸಿದರು. ನಾರಾಯಣರಾಯರ ಕವಿವಾಣಿ ಕರ್ನಾಟಕದ ತುಂಬಾ ಪ್ರತಿಧ್ವನಿಸಹತ್ತಿತ್ತು. ಈ ಹಾಡನ್ನು ಮತ್ತಷ್ಟು ಬೆಳಕಿಗೆ ತಂದವರು ಹಾಡುಗಾರ ಕಾಳಿಂಗರಾಯರು" **- ಗೋವಿಂದಮೂರ್ತಿ ದೇಸಾಯಿ**

ಇದು ತುಂಬ ಸರಳವಾದ ಹಾಡು ಮೊದಲ ಚರಣ ಈ ನಾಡಿನ ಪೌರಾಣಿಕ ವೀರರನ್ನು ಸ್ಮರಿಸುತ್ತದೆ. ಇತಿಹಾಸದ ಶೂರರಾಜರು, ವೀರವೃಂದ ಇವರನ್ನು

ನೆನೆಯುತ್ತದೆ. ಅನಂತರ ಇಲ್ಲಿನ ವಿಜ್ಞಾನಿಗಳು ಶಿಲ್ಪಿಗಳು, ಚೊಕ್ಕ ಮತಗಳನ್ನು ಸಾರಿದವರು, ವಿದ್ವತ್ತಿನ ತವರಾದವರು ಎಲ್ಲರನ್ನೂ ಸ್ಮರಿಸುತ್ತದೆ. ಕಡೆಯ ಚರಣ ಇಲ್ಲಿನ ನದಿಗಳನ್ನು ಹೆಸರಿಸುತ್ತದೆ.

"ಆವಗಂ ಸ್ಫೂರ್ತಿಸುವ ಕಬ್ಬಿಗರ ನಡೆ ಮಾಡು" ಎನ್ನುತ್ತದೆ. ಕಾವ ಗದುಗಿನ ವೀರನಾರಾಯಣನನ್ನು ಸ್ಮರಿಸುತ್ತದೆ. ಮೋಹನ ರಾಗಕ್ಕೆ ಸೊಗಸಾಗಿ ಹೊಂದಿಕೊಳ್ಳುವ ಈ ಹಾಡಿನ ಭಾಷೆ ಬಹು ಸರಳ. ಇದರ ಮಹತ್ವದ ಗುಣವೆಂದರೆ ಮಾತಿನ ಮಿತವ್ಯಯ.

**- ಎಲ್.ಎಸ್. ಶೇಷಗಿರಿ ರಾವ್**

"ಉದಯವಾಗಲಿ" ಅನ್ನುವ ಬದಲು "ಉದಯವಾಯಿತು" ಅನ್ನಬಹುದೆ ? ೧೯೫೬ ನವ್ಹೆಂಬರ್ ೧ ರಂದು ಕರ್ನಾಟಕ ರಾಜ್ಯೋದಯವಾಯಿತು. ನಾಡಿನ ಕೆಲವು ಜನರು ನಾರಾಯಣರಾಯರ ಚೆಲುವ ಕನ್ನಡನಾಡು ಉದಯವಾಯಿತು. ಆದ್ದರಿಂದ" ಉದಯವಾಗಿದೆ ನಮ್ಮ ಚೆಲುವ ಕನ್ನಡ ನಾಡು" ಎಂದು ಬದಲಿಸಿ ಹಾಡೋಣ ಎಂದು ಅಭಿಪ್ರಾಯಪಟ್ಟರು. ಇದನ್ನು ಅರಿತ ನಾರಾಯಣರಾಯರು ಕೂಡಲೆ ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದರು - "ಉದಯವಾಗಲಿ ಎಂಬುದು ಶುಭಾಶಯವನ್ನು ಸೂಚಿಸುತ್ತದೆ. ಶ್ರೇಯಸ್ಸನ್ನು ಅಪೇಕ್ಷಿಸುತ್ತದೆ. ಕಾರಣ 'ಉದಯವಾಗಲಿ' ಎಂದು ಹಾಡುವುದೇ ಯೋಗ್ಯ ಎಂದು "ಉದಯ ಎಂದರೆ ಅಭ್ಯುದಯ. ಅಭ್ಯದಯ ಎಂದರೆ ಸರ್ವತೋಮುಖ ಬೆಳವಣಿಗೆ, ಸುಖ, ಸಂತೋಷ, ಸಮೃದ್ಧಿ - ಇವುಗಳನ್ನೆಲ್ಲ ಸಾಧಿಸಿದರೆ ನಿಜವಾದ ಅಭ್ಯುದಯವಾದಂತೆ "ಉದಯವಾಯ್ತು" ಅಂದರೆ ಎಲ್ಲ ಮುಗಿಯಿತು. ಇನ್ನು ಮುಂದೆ ಹೆಚ್ಚಿನ ಬೆಳವಣಿಗೆಗೆ ಆಸ್ಪದ ಇಲ್ಲವೆಂಬಂತೆ. ಸೂರ್ಯನ ಉದಯವಾಯ್ತು ಅಂದರೆ ಮುಂದಿನ ಸ್ಥಿತಿ ಯಾವದು ? ಅಸ್ತವಾಗುವದು. ಹಾಗೆ ನಮ್ಮ ನಾಡು ಆಗಬಾರದು. ನಾಡಗೀತೆಯಾಗಿ ಯಾವುದನ್ನೇ ಹಾಡಲಿ, ನನ್ನ ನಾಡಿನ ಅಭ್ಯುದಯವನ್ನೇ ನಾನು ಯಾವಾಗಲೂ ಹಾರೈಸುವದು. ನಾನಾ ಅವರ ಎಚ್ಚರಿಕೆಯ ಉತ್ತರ - "ಇದು ಪ್ರಾರ್ಥನೆಯ ಗೀತೆ. ಭೂತಕಾಲದಲ್ಲಿ ಪ್ರಾರ್ಥನೆ ಎಂದೂ ಇರಬಾರದು. ಬಲುಹಿನ ನಿಧಿಯು ಹೋಗಿ ಬಲುಹೀನ ನಿಧಿಯು ಆದೀತು" ಎಂಬುದು. ಮುಂದೆ ಅವರ ಮನೋಭಿಲಾಷೆಯಂತೆಯೇ ಇಂದಿಗೂ "ಉದಯವಾಗಲಿ" ಎಂದೇ ಹಾಡಲಾಗುತ್ತದೆ.

೧೯೭೦ರಲ್ಲಿ ಅಧಿಕೃತ ನಾಡಗೀತೆ ಪಟ್ಟಿಯಿಂದ ತೆಗೆದು ಹಾಕಿದರು. ನಾನಾ ಆಗಲೂ ಸ್ಥಿತಪ್ರಜ್ಞರು. ಅದನ್ನು ಅಧಿಕೃತವಾಗಿ ಸ್ವೀಕರಿಸಿದಾಗ ಹಿಗ್ಗಲಿಲ್ಲ. ತೆಗೆದುಹಾಕಿದಾಗ ಅವರು ಕುಗ್ಗಲಿಲ್ಲ. 'ಲೋಕೋ ಭಿನ್ನರುಚಿಃ 'ಎಂದು ಸುಮ್ಮನಾಗಿಬಿಟ್ಟರು.

## ೨. ಕಾವ್ಯ ರಚನೆ ಹಾಗೂ ಗದ್ಯರಚನೆ

ನಾರಾಯಣರಾಯರು ತಾವು ಬೆಳೆದ ಸಾಹಿತ್ಯ ಸಂಸ್ಕೃತಿಯ ಪರಿಸರದಿಂದಾಗಿ ಮತ್ತು ಹುಟ್ಟು ಪ್ರತಿಭೆಯಿಂದಾಗಿ ಅವರಲ್ಲಿ ಸಾಹಿತ್ಯಪ್ರಜ್ಞೆ ಅಂಕುರಿಸಿತು. ಸುಪ್ತವಾಗಿ ಅಡಗಿದ್ದ ಪ್ರತಿಭೆ ಜಾಗೃತಗೊಂಡು ಬೆಳೆದು ಪರಿಸರದ ತನಿವುಂಡು ಚಿಗುರಿ ವೃಕ್ಷವಾಯಿತು. ಈ ಅವಧಿಯಲ್ಲಿ ಅವರು ಬರೆದ ಮೊದಲ ಕವಿತೆಗಳಲ್ಲಿ ಕುಮಾರವ್ಯಾಸನ ಪ್ರಭಾವ ಎದ್ದು ತೋರುತ್ತದೆ.

ನಾರಾಯಣರಾಯರ ಕಾವ್ಯ ಶೈಲಿಯನ್ನು ಈ ಕೆಳಗಿನ ಪ್ರಮುಖ ರೂಪಗಳಲ್ಲಿ ವಿಂಗಡಿಸಬಹುದು -

೧. ಭಾಮಿನಿ ಷಟ್ಪದಿಯಲ್ಲಿ ಬರೆದ ನೀಳ್ಗವಿತೆಗಳು - ೧೩

೨. ಭಕ್ತಿಗೀತೆಗಳು - ಸುಮಾರು ೧೦೦

೩. ಸ್ವಾಗತ ಪದ್ಯಗಳು - ೮


೪. ಅನ್ಯ ಬಿಡಿ ಹಾಡುಗಳು - ಕೆಲವು ಮಾತ್ರ (ದುಂದುಮೆ, ಲಾವಣಿ....)

ಇವುಗಳನ್ನು ಕುರಿತು ವಿವರವಾಗಿ ಅವಲೋಕಿಸೋಣ.

**I. ರಾಷ್ಟ್ರ, ನಾಡು ಹಾಗೂ ನುಡಿಯ ಕುರಿತು ಷಟ್ಪದಿಗಳು.**

ಚಿಕ್ಕಂದಿನಿಂದಲೂ ಕುಮಾರವ್ಯಾಸನ ಭಾರತವನ್ನು ಆಲಿಸುತ್ತ ಬಂದಿದ್ದ ನಾರಾಯಣರಾಯರಿಗೆ ಭಾಮಿನಿ ಷಟ್ಪದಿಯ ಪ್ರಭಾವ ಆಳವಾಗಿ ಆಗಿರಲು ಸಾಕು. ನಾರಾಯಣರಾಯರ ಷಟ್ಪದಿಗಳನ್ನು ಓದಿದಾಗ ಅವರು ಅವುಗಳನ್ನು ಎಷ್ಟು ಸರಾಗವಾಗಿ ಹಾಡಬಹುದಾದ ಶೈಲಿಯಲ್ಲಿ ರಚಿಸಿದ್ದಾರೆ ಎನ್ನುವದು ಅರಿವಾಗುತ್ತದೆ. ಈ ಎಲ್ಲ ಷಟ್ಪದಿಗಳನ್ನು ಅವರು ಆದಿ ಪ್ರಾಸವನ್ನು ಬಳಸಿ ಬರೆದಿದ್ದಾರೆ. ಈ ಷಟ್ಪದಿಗಳಲ್ಲಿ ಅವರ ವೈವಿಧ್ಯಮಯವಾದ ವಿಷಯಗಳ ಆಯ್ಕೆ, ತರ್ಕಬದ್ಧವಾದ ವಿಚಾರ ಪ್ರತಿಪಾದನೆ, ಹಾಗೂ ಅವರ ಸಂವೇದನೆಯ ಪರಾಕಾಷ್ಠೆಯ ಅನುಭೂತಿಯಾಗುತ್ತದೆ. ಅವರು ಬರೆದ ಷಟ್ಪದಿಗಳ ಒಂದು ಇಣುಕು ನೋಟ ಈ ಕೆಳಗಿದೆ.

೧. "ಕನ್ನಡಮ್ಮನ ಸ್ಥಿತಿ" - (೧೯೦೮) ಇದರಲ್ಲಿ ಬೆಂಗಳೂರಿನಲ್ಲಿ ನಡೆದ ಮೊಟ್ಟ ಮೊದಲನೆಯ ಕನ್ನಡ ಸಾಹಿತ್ಯ ಸಮ್ಮೇಳನದ ವಿವರವಿದೆ. ಈ ಕವನದ ಆರಂಭದ



ಬರವಣಿಗೆಯಲ್ಲಿ ತಲ್ಲೀನರಾದ ನಾರಾಯಣರಾಯರು

ಸಾಲುಗಳು - "ಮೊದಲು ಕಥೆಯನು ಪೇಳೆ ಶಕ್ತಿಯ । ನೊದವಿ ಪೊರೆಯುವ ಕರುಣಾಶರಧಿಯ ಗದುಗಿನಲ್ಲಿಯ ವೀರ ನಾರಾಯಣನ ಬಲದಿಂದ" ಎಂದಿವೆ. ಕುಮಾರವ್ಯಾಸನಂತೆ ಹಾಗೂ ಲಕ್ಷ್ಮೀಶನಂತೆ ಕಾವ್ಯ ಶಕ್ತಿ ದೈವದತ್ತವಾದುದು ಎಂದು ಸಂಪೂರ್ಣವಾಗಿ ನಂಬಿದ್ದಾರೆ ಕವಿ. ಅವರ ಈ ಮೊದಲ ಕವನ ಮುಂದೆ "ಕನ್ನಡಮ್ಮನ ಇತಿಹಾಸ" ಎಂಬ ಶೀರ್ಷಿಕೆಯಲ್ಲಿ "ಕರ್ನಾಟಕದ ವೃತ್ತ" ಎಂಬ ಪತ್ರಿಕೆಯಲ್ಲಿ ಪ್ರಕಟವಾಯಿತು.

೨. 'ಕನಸು' (೧೯೦೮) - ಈ ಕವನದಲ್ಲಿ ಕನ್ನಡಾಂಬೆಯ ಹೀನಸ್ಥಿತಿಯ ದಾರುಣಮಯ ಚಿತ್ರಣವಿದೆ. ಕವಿ ತನ್ನ ಕನಸಿನಲ್ಲಿ ಬೇರೆ ಬೇರೆ ಭಾಷಾ ದೇವಿಯರ ವೈಭವಯುತ ಮಂದಿರಗಳನ್ನು ನೋಡುತ್ತ ಸಾಗಿದಾಗ ಸಂಸ್ಕೃತ ದೇವಿಯ ಮಂದಿರಕ್ಕೆ ಬರುತ್ತಾನೆ. ಆಗ ಅವಳು ತನ್ನ ಭಕ್ತರು ಸೇರಿ ತನ್ನ ಏಳ್ಗೆ ಮಾಡುತ್ತಿದ್ದ ಬಗ್ಗೆ ತೃಪ್ತಿ ಸೂಚಿಸಿ. ತನ್ನ ಸಖಿ ಕನ್ನಡ ದೇವಿಗೆ ಒದಗಿದ ದಾರುಣ ಸ್ಥಿತಿಯನ್ನು ಅರಹುತ್ತಾಳೆ -

*"ಅಗರುಗಾಣದ ಮುರುಕು ಮನೆಯೊಳು*
*ಪೊಗರುವಿಲ್ಲದೆ ಪೊಗೆಯ ತುಂಬಿದೆ*
*ಜಿಗಡು ಹರಡಿಹ ಕರಡು ನೆಲದೊಳು ಬರದು ಕಾಲಿಡಲು ।*
*ಮಗನೆ ಕರ್ನಾಟಕದ ದೊರೆಯಳ*
*ಜಗುಲಿಯದು ಜಗುಳಿದುದು ಒಳಗಣ*
*ಬಗೆಯ ಪೇಳಲು ಬಗೆಯ ಕಾಣೆನು ಮಾಡಲಿನ್ನೇನು ॥"*

ಎಂದು ಹೇಳಿ "ಅವಳ ಸ್ಥಿತಿಯದು ನೀಗುವಂದದಿ ಬೇಗ ಮಾಡಿರಿ" ಎಂದು ಕನ್ನಡದೇವಿಯ ಜೀರ್ಣವಾದ ಮಂದಿರವನ್ನು ಕುರಿತು ಹೇಳುತ್ತಾಳೆ.

೩. ಕರ್ನಾಟಕನ ಮಿಡುಕು - (೧೯೧೬) - ಈ ಕವನದಲ್ಲಿ ಕರ್ನಾಟಕನು ಕನ್ನಡ ಸ್ಥಿತಿಯ ಪ್ರಾತಿನಿಧಿಕ ವ್ಯಕ್ತಿ. ಹಿಂದಿನ ವೈಭವ ಕಂಡವನು, ಇಂದಿನ ಹೀನ ಸ್ಥಿತಿಯನ್ನು ನೋಡಲಾಗದೆ ಕಣ್ಣುಮುಚ್ಚಿ ಕುಳಿತಿದ್ದಾನೆ. ತನ್ನ ಹಿಂದಿನ ವೈಭವವನ್ನು ಹೀಗೆ ವರ್ಣಿಸಿದ್ದಾನೆ -

*"ಪಿಂತಣೆನ್ನಯ ಸೊಬಗನಿಷ್ಟೆಂ*
*ದೆಂತು ಬಣ್ಣಿಸಲಾಪೆ ? ಮಕ್ಕಳೆ*
*ಕಂತು ಪಿತವರ ವೀರನಾರಯಣನ ದಯದಿಂದ ।*
*ಸಂತಸಂ ಗಡ । ಎಲ್ಲ ಕೆಲದೊಳು*
*ಸಂತತಂ ಸೊಗಮಿತ್ತು ಜನರನು*
*ನಿಂತು ಭಾಗ್ಯದ ದೇವಿ ನೋಡಿದಳೊಂದೆ ಮನಸಿನಲಿ " ॥ ೩ ॥*

೪. "ರಥೋತ್ಸವ" - (೧೯೧೮) - ಈ ಕವನದಲ್ಲಿ ಕನ್ನಡ ಮಾತೆಯು ತನ್ನ ಮಕ್ಕಳ ಶಕ್ತಿಯನ್ನು ಉಪಾಯದಿಂದ ಪರೀಕ್ಷಿಸಿ ಕೊನೆಗೆ ಎಲ್ಲರೂ ಒಟ್ಟಾಗಿ ಕನ್ನಡದ ರಥವನ್ನೆಳೆದರೆ ಮಾತ್ರ ಅದು ಸುಲಭ ಸಾಧ್ಯ ಎಂದು ಅರಿತು ದೇವರು ಮಕ್ಕಳಿಗೆ ಶಕ್ತಿ ಕೊಟ್ಟು, ತನ್ನ ರಥವನ್ನು ಮುಂದೆ ಸಾಗಿಸಲು ಬೇಡಿಕೊಳ್ಳುವ ಷಟ್ಪದಿಗಳಿವು.

*"ಎಂದು ನೋಕಿದ ಬಳಿಕ ಸಕಲರು*
*ಸಂದರ್ಭೆ ತಾಯ್ ಬಹಳ ಮನದೊಳು*
*ನೊಂದಳೈ ವಿಧಿ ತನ್ನನಿನ್ನೂ ಬಿಟ್ಟು ಬಿಡದೆಂದು ।*
*ನಂದನಂದನ ದೇವ ಹರಿಗೋ -*
*- ವಿಂದ ಮುರಹರ ನಿರುತ ನನ್ನನು*
*ತಂದೆ ರಕ್ಷಿಸೊ ಎಂದು ಕರುಣವ ಬೇಡಿದಳು ದೇವಿ ॥ ೨೭ ॥*

ಯುಕ್ತಿಯಲಿ ತಾಯ್ ತನ್ನ ಸುತರನು
ರಕ್ತಿಯಲಿ ಪರಕಿಸಿದವರೊಳು
ಶಕ್ತಿಯಿಲ್ಲದೆ ಬಳಲುತಿಹರೆಂತೆಂದು ಹಂಬಲಿಸಿ ।
ಭಕ್ತಿಯಲಿ ಬೇಡಿದಳು ಬೇಗನೆ
ಮುಕ್ತಿಯನು ಕೊಡು ನಿನ್ನ ಶುಭನಾ -
ಮೋಕ್ತಿಯಲಿ ದಿನಗಳೆವೆ ಗದುಗಿನ ವೀರನಾರಾಯ್ಣ" ॥ ೨೮ ॥

**೫. "ಭಾರತ ಭೂವನ" - (೧೯೨೧) -** ಇದರಲ್ಲಿ ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಬ್ರಿಟಿಷರು ಭಾರತದ ಸಂಪತ್ತನ್ನು ಹಿತಚಿಂತಕರ ಸೋಗು ಹಾಕಿ ಸೂರೆಗೈದ ಕಥೆಯಿದೆ. ಆರಂಭದಲ್ಲಿ ಭೂವನ ಸುಫಲವಾಗಿದ್ದ ವರ್ಣನೆಯಿದೆ -

*"ಶ್ರೀವರನ ಕೃಪೆಯಿಂದ ಭಾರತ*
*ಭೂವನವು ತಾಂ ಬೆಳೆದು ಬಂದುರೆ*
*ತೀವಿದಾ ಸುಗ್ಗಿಗಳ ಫಲಗಳ ಭರದ ಬಲದಿಂದ " ॥ ೧ ॥*

ಪರದೇಶಿಯ ಸವಿನುಡಿಯಿಂದ ಮೋಸ ಹೋದ ಭಾರತಮಾತೆಯು ವಿಷ್ಣುವಿನಲ್ಲಿ ಭಕ್ತಿಯಿಂದ ಹೀಗೆ ಮೊರಯಿಡುತ್ತಾಳೆ -

*"ಎಲವೊ ದೇವನೆ ಗಜನ ಕಾಯ್ದನೆ*
*ಒಲಿದು ಕೃಷ್ಣೆಯ ಮಾನ ಕಾಯ್ದನೆ*
*ಬಲದ ಹೆಮ್ಮೆಯ ಬಲಿಯ ಹೊಯ್ದನೆ ಸಲಹೊ ಧೂರ್ತನಿವಂ ।*
*ಸಲುಗೆ ತೋರಿಸಿ ಸಿರಿಯನೊಯ್ದನೆ*
*ಖಳರು ನಾನೆಂದೆನಗೆ ಬಯ್ದನೆ*
*ಸುಲಿದು ನನ್ನನು ಅಹಿತಗೆಯ್ದನೆ ಎಂದು ಕೂಗಿದಳು ॥೨೦*

**III ಇತರ ಕಾಲ್ಪನಿಕ ಹಾಗೂ ವರ್ಣನಾತ್ಮಕ ಷಟ್ಪದಿಗಳು.**

೧. **"ಚಂದ್ರಮ - ಜ್ಯೋತಿ ಸಂವಾದ" - (೧೯೧೯)** - ಇದರಲ್ಲಿ ಚಂದ್ರ ಹಾಗೂ ಜ್ಯೋತಿಗಳಲ್ಲಿ ಯಾವದು ಶ್ರೇಷ್ಠ ಎನ್ನುವ ಕಾಲ್ಪನಿಕ ಸಂಭಾಷಣೆಯಿದೆ. ಈ ಸಂವಾದದಲ್ಲಿ ಚಂದ್ರಮ ಜ್ಯೋತಿಗಿಂತ ತಾನು ಶ್ರೇಷ್ಠನೆಂದು ಕೆಲವು ತರ್ಕಗಳೊಂದಿಗೆ ಪ್ರತಿಪಾದಿಸುತ್ತಾನೆ.

*"ಹೆಣ್ಣುಗಳ ಮೊಗಕನ್ನ ಹೋಲಿಸಿ*
*ಬಣ್ಣಿಪಂ ಕವಿಯೆಂದಲಾ ಮು*
*ಕ್ಕಣ್ಣ ಪೊತ್ತಿಹನೆನ್ನನುತ್ತಮನೆಂದು ತಲೆಯಲ್ಲಿ" ॥೪॥*

ಕೊನೆಯ ನುಡಿಯಲ್ಲಿ ಜ್ಯೋತಿಯ ತರ್ಕವನ್ನು ಕಾಣಬಹುದು.

*"ಮುನಿಸತಿಯ ಕಾಮಿಸಲೊಡಾತನು*
*ಮುನಿದು ನಿನ್ನನು ಸುಡಲು ಬರುತಿರೆ*
*ಮುನಿಪ ಶಿವನಾ ಜಡೆಯೊಳಡಗಿದೆಯೆಂಬುದನು ನೆನೆದು ।*
*ಘನತೆಯಾಢ್ಯತೆಯನ್ನು ಬಿಡು ಬಿಡು*
*ಮನದಿ ಪಶ್ಚಾತ್ತಾಪದಿಂದನು*
*ದಿನದಿ ಗದುಗಿನ ವೀರನಾರಾಯಣನ ಮೊರೆ ಹೋಗು" ॥೧೩॥*

೨. **"ಆಗುಂಬೆಯ ಸೂರ್ಯಾಸ್ತ" - (೧೯೩೧)** - ಕವಿ ಆಗುಂಬೆಗೆ ಹೋದಾಗ ಅಲ್ಲಿಯ ಸೂರ್ಯಾಸ್ತದ ನಿಸರ್ಗ ರಮಣೀಯತೆಯಿಂದ ಪುಳಕಿತರಾಗಿ ಈ ಕವನವನ್ನು ರಚಿಸಿದ್ದಾರೆ. ಈ ಕವನ ನಾರಾಯಣರಾಯರಿಗೆ ಅಚ್ಚುಮೆಚ್ಚಿನದು. ಯಾಕೆಂದರೆ ಪ್ರಕೃತಿಯ ವರ್ಣನೆ ಮಾಡುವಾಗ ಅವರು ತಮ್ಮ ರಾಷ್ಟ್ರಭಕ್ತಿಯನ್ನು ಇದರಲ್ಲಿ ಅಳವಡಿಸಿದ್ದಾರೆ. ಅವರ ಗಾಂಧೀ ತತ್ವಗಳ ಆಳವಾದ ಪ್ರಭಾವ, ಕಾಂಗ್ರೆಸ್ಸಿನ ನಿಷ್ಠೆ, ರಾಷ್ಟ್ರೀಯ ಮನೋಭಾವ ಅವರಲ್ಲಿ ಎಷ್ಟು ಘನೀಭೂತವಾಗಿದ್ದವೆಂಬುದು ಈ ಕವನದಲ್ಲಿ ಪ್ರಕಟವಾಗುತ್ತದೆ. ನಿಸರ್ಗದಲ್ಲಿಯೂ ಅವರು ನೂಲುವ ರಾಟಿ, ಹಿಂಜಿದರಳೆಯ ರಾಶಿ, ಶುಭ್ರ ಖಾದಿ ಬಟ್ಟೆಯ ರಾಷ್ಟ್ರಧ್ವಜ ಇವುಗಳನ್ನು ಕಾಣುವದು ಅವರ ರಾಷ್ಟ್ರೀಯ ವಿಚಾರಧಾರೆಯ ಪರಾಕಾಷ್ಠೆಯನ್ನು ಬಿಂಬಿಸುತ್ತದೆ.

*"ಸಂಜೆವೆಣ್ಣ ಗೆದಿಟ್ಟ ತೇಜಃ*
*ಪುಂಜ ಚಿನ್ನದ ರಾಟಿಯದೆ ಎನೆ*
*ಪಂಜುಗದಿರನು ಪಶ್ಚಿಮಾಂಗಣದಲ್ಲಿ ಶೋಭಿಸಿದ ।*
*ಹಿಂಜಿದರಳೆಯ ರಾಶಿಯೋ ಬಿಳಿ*

*ಗಂಜಿ ಹಿಡಿಸಿದ ಖದ್ದರೊ (ಖಾದಿ) ಎನೆ*
*ರಂಜಿಸಿದನಾಗಂತು ಎಂದಿನ ಕಡಲದೊರೆ ಕಣ್ಗೆ ॥ ೮॥*

*ದೆಸೆಯೊಳಗೆ ಕೇಸರಿಯ ಬಣ್ಣದ*
*ವಿಸರ ರತ್ನಾಕರನ ಹಬ್ಬಿದ*
*ವಸನ ಭೂಮಿಯ ಹಸುರು ತೊಡಿಗೆಯು ಮತ್ತೆ ಮಧ್ಯದೊಳು ।*
*ಮಿಸುಪ ಸೂರ್ಯನ ಚರಕದಂದದೊ*
*ಳೆಸೆಯೆ ಸೋಜಿಗವೆನಲು ಜಗದೊಳು*
*ಹೆಸರು ಪಡೆದಿಹ ಭಾರತ ರಾಷ್ಟ್ರಧ್ವಜದ ನೆನಪಾಯ್ತು ॥ ೯॥*

೩. **"ಸ್ವದೇಶೀ ಚಳುವಳಿ" - (೧೯೩೨)** ಇದರಲ್ಲಿ ಸ್ವದೇಶೀಯತೆಯ ಮಹತ್ವ ತಿಳಿಸಿ ಚಳುವಳಿಯ ವರ್ಣನೆಯನ್ನು ಮಾಡಿದ್ದಾರೆ.

೪. **"ಶ್ರೀ ಮಧ್ವಮಹಾಮಂಡಲದ ಹುಂಡಿ ನಿಧಿ" - (೧೯೬೯).** ಈ ಕವನವನ್ನು ಉಡುಪಿಯಲ್ಲಿ ಜರುಗಿದ ಏಳನೆಯ ಮಾಧ್ವತತ್ವಜ್ಞಾನ ಸಮ್ಮೇಲದ ಪ್ರಸಂಗದಲ್ಲಿ ಬರೆದಿದ್ದಾರೆ. ಧರ್ಮ ಜಾಗೃತಿಗಾಗಿ ಸ್ಥಾಪಿಸಲ್ಪಟ್ಟ ಮಂಡಲದ ಹುಂಡೀ ನಿಧಿಗೆ ಎಲ್ಲರೂ ತಮಗೆ ಭಾರವಾಗದಂತೆ ಕಾಣಿಕೆ ನೀಡಲು ಕಳಕಳಿಯ ಪ್ರಾರ್ಥನೆಯಿದೆ.

೨. **ಭಕ್ತಿ ಗೀತೆಗಳು** - ನಾರಾಯಣರಾಯರ ನರ-ನಾಡಿಗಳಲ್ಲಿ, ರೋಮ - ರೋಮಗಳಲ್ಲಿ ಭಕ್ತಿರಸ ಓತಪ್ರೋತವಾಗಿ ಹರಿಯುತ್ತಿತ್ತು. ಅವರು ರಚಿಸಿದ ಭಕ್ತಿಗೀತೆಗಳು ಸುಮಾರು ನೂರರಷ್ಟು. ಅವುಗಳಲ್ಲಿ ಕೆಲವನ್ನು ಮಾತ್ರ ಗದುಗಿನ ವಿದ್ಯಾದಾನ ಸಮಿತಿ ಶಾಲೆಯವರು ನಾರಾಯಣರಾಯರ ಸ್ಮರಣಿಕೆಯಲ್ಲಿ ಪ್ರಕಟಿಸಿದ್ದಾರೆ.

ಈ ಎಲ್ಲ ಭಕ್ತಿಗೀತೆಗಳು ಅವರ ಮನದಾಳದಿಂದ ನಿರರ್ಗಳವಾಗಿ ಉತ್ಸ್ಫೂರ್ತವಾಗಿ ಹೊರಹೊಮ್ಮಿವೆ. ಅಂತೆಯೇ ಅವುಗಳಲ್ಲಿಯ ಅವರ ತೀವ್ರ ಸಂವೇದನೆ, ಸ್ಪಂದನೆ ನಮ್ಮ ಹೃದಯದಾಳವನ್ನು ತಟ್ಟುತ್ತವೆ. ಭಕ್ತಿ ಎಂದರೆ ನಿಷ್ಕಳಂಕ ಪ್ರೀತಿ, ಪೂಜೆ, ಪ್ರಾರ್ಥನೆ, ಸಂಪೂರ್ಣ ಸಮರ್ಪಣೆ, ವರ್ಣನೆ, ನಿಶ್ಚಲವಾದ ವಿಶ್ವಾಸ, ನಂಬಿಕೆ, ಅವರ್ಣನೀಯ ಆಕರ್ಷಣೆ, ಯಾಚನೆ. ನಾರಾಯಣರಾಯರ ಭಕ್ತಿಗೀತೆಗಳು ಈ ಎಲ್ಲ ಭಾವನೆಗಳಿಂದ ತುಂಬಿ ತುಳುಕುತ್ತವೆ. ಇವರ ಭಕ್ತಿಗೀತೆಗಳಲ್ಲಿ ಗಣೇಶ, ಗೌರಿ, ಲಕ್ಷ್ಮಿ, ನಾರಾಯಣ, ಹನುಮಂತ, ಕೃಷ್ಣ ಹೀಗೆ ಅನೇಕ ದೇವರ ಬಗ್ಗೆ ಗೀತೆಗಳಿವೆ.

*"ಪರಮ ಮಂಗಳ ಧಾಮಾ ಶ್ರೀರಾಮ । ಕರುಣಾಮೃತ ಸಾಗರ ನಿಸ್ಸೀಮ ।*
*ಚರಣಕೆರಗುವೆ ಸಾಸಿರ ನಾಮಾ ॥ "*

*"ಏನು ವೈಭವವೊ । ಶ್ರೀನಿವಾಸ ದೊರೆಯ ನಿನ್ನದೇನು ವೈಭವವೊ. "*

- ಇಲ್ಲಿ ಅವರ ನಿಸ್ಸೀಮ ಪ್ರೀತಿ ಗೋಚರಿಸುತ್ತದೆ.

*"ಕೇಳಿಸಲೊಲ್ಲದೇನೋ ಕೃಷ್ಣ ಕೇಳಿ ಕೇಳದಂತಿರುವಿಯೇನೊ ....*
*.... ಬಾಧೆಯ ಬಿಡಿಸೆಂದು ಬೇಡುವೆ ಗದುಗಿನ*
*ಆಧಾರಿ ದೇವನೆ ವೀರ ನಾರಾಯಣ "*

*"ಕರುಣಿಸಲಾರೆಯಾ । ಇನ್ನಷ್ಟು ನೀ । ಸಿರಿಪತಿರಾಯಾ ।*
*ಕರುಣಾಕರನೆಂಬೊ ಬಿರುದನುಳಿಸಿಕೊಳ್ಳಲಾರೆಯಾ ॥ "*

ಎಂಬ ಅನೇಕ ಪ್ರಾರ್ಥನೆಗಳಿವೆ.

*"ಏಳು ನಾರಾಯಣ । ಏಳು ಲಕ್ಷ್ಮೀರಮಣ । ಏಳಯ್ಯ ಬೆಳಗಾಯಿತು. "*

*"ಮಂಗಳಾರುತಿ ತಂದು ಬೆಳಗಿರೆ ರಂಗನಾಥನ ರಾಣಿಗೆ । "*

*"ಭಾರತಿ - ರಮಣ ಸಮೀರಣ ನಿನ್ನಯ ಚಾರುಲೀಲೆಯನೆಂತು ಬಣ್ಣಿಪೆ । "*

*- ಎಂಬ ಹಲವು ಪೂಜೆಯ, ಆರತಿಯ ಹಾಡುಗಳಿವೆ.*

*"ಆಣೆಯಾರೊ ನಿನಗೆ ಈ ತ್ರಿಭುವನದೊಳಗೆ । ಹಣಮಂತ ಗುಣವಂತ*
*ಮಣಿಯುವೆನೊ ನಿನಗೆ ॥ "*

*"ಧನ್ಯ ಧನ್ಯನೊ ಶ್ರೀ ಗುರುರಾಯಾ । ಧನ್ಯ ಶ್ರೀ ರಾಘವೇಂದ್ರ ಯತಿವರ್ಯಾ"*

"ಮೀಸಲಾಗಿ ನಿನ್ನದೊಂದು ಚೆಲ್ವ ರೂಪವನ್ನಿಡೊ । ವಾಸುದೇವ ನಿನ್ನನಂತ ದಿವ್ಯರೂಪಗಳಲಿ ಎನಗೆ । "

"ಚಂದಲಾ ಪರಮೇಶ್ವರಿ ವಂದಿಸುವೆನು ಚಂದಲಾ ಪರಮೇಶ್ವರಿ ಚಂದಾಗಿ ಮನಿಸಿಗಾನಂದ ನೀಡುವ ನಿನ್ನ । ಮುಂದೆ ಕಂದ ತಾ ಬಂದು ನಿಂತಿಹೆನವ್ವ । "

- ಎಂದು ಮುಂತಾಗಿ ಬಾಯಿ ತುಂಬಾ ಹೊಗಳಿ ಹಾಡಿದ್ದಾರೆ.

*"ಯಾವಲ್ಲಿ ಅಡಗಿರುವಿ ಕೃಷ್ಣಯ್ಯ ನೀ ಯಾವಲ್ಲಿ ಅಡಗಿರುವಿ ।*
*ಬದರಿ ಕಾಶಿ ಕಂಚಿಯೊ ನೀನಿರುವದು ಮಥುರೆ ಪಂಢರಪುರವೊ*
*ಪದುಮಾವತಿಯ ಗಿರಿಯೊ ಉಡುಪಿ ದ್ವಾರಕೆಯೊ*
*ಗದುಗೊ ನೀ ಹೇಳಯ್ಯಾ ವೀರ ನಾರಾಯಣ "*

*"ಎಂದು ಕಾಂಬುವೆ ನಿನ್ನ ಚರಣ ನಾರಾಯಣ । ತಂದು ತೋರಯ್ಯಾ ನಾ ಬಂದೆನು ಶರಣ "*

*"ಹುಡುಕುತಲಿಹೆನವನಾ ಮಾಧವನಾ । "*

- ಎಂಬ ಗೀತೆಗಳಲ್ಲಿ ಕವಿಗೆ ಭಗವಂತನ ಬಗ್ಗೆ ಇರುವ ಕಾತರ, ಆಕರ್ಷಣೆ, ಅವನಲ್ಲಿ ಯಾಚನೆ ಕಂಡು ಬರುತ್ತದೆ.

*"ಇಟ್ಟಂತೆ ಇರುವೆನೊ ಹರಿಯೆ ನೀನು ।*
*ಕೊಟ್ಟಿದ್ದನ್ನುಣ್ಣುವೆ ಮತ್ತೇನು ದೊರೆಯೆ ।*
*.... ನೀ ಕೊಟ್ಟರುಂಟು, ಕೊಡದಿದ್ದರೇನುಂಟು ।*
*ಬೇಕು ಬೇಡಗಳುಲಿ ನಿನ್ನಿಚ್ಛೆಯಾಧೀನ "*

*"ಎಲ್ಲವೂ ನಿನ್ನಧೀನವಲ್ಲವೆ ಹರಿಯೆ । ಸಲ್ಲದ ಅನುಮಾನ*
*ಖುಲ್ಲ ದೈವವ ತಿರುವಬಲ್ಲೆಯಲ್ಲವೆ ನೀನು । "*

*"ನಿನ್ನವನಲ್ಲವೇನೊ ಶ್ರೀಹರಿಯೆ ನಾ ನಿನ್ನೊಳಗಿಲ್ಲವೇನೊ ।*
*.... ಗದುಗಿನೊಳ್ ಮೆರೆವ ವೀರ ನಾರಾಯಣನ । ಪದವ ನಂಬಿದೆ ಪೂರಾ*
*ವಿಧ ವಿಧ ಪರಕಿಸು । ಬದುಕಿಸು ಮುಳಗಿಸು । ಬೆದರಿಸು ಕರುಣಿಸು ।*
*ಕದಲಲೊಲ್ಲೆನೊ ದೇವ ।। "*

- ಈ ಪಂಕ್ತಿಗಳಲ್ಲಿ ಕವಿಯ ಸಂಪೂರ್ಣ ಸಮರ್ಪಣ ಭಾವ ಅವರು ದೇವರಲ್ಲಿಟ್ಟ ಅನ್ಯೋನ್ಯ ನಂಬಿಕೆಯ ಅರಿವಾಗದಿರದು. ಪರಿಪೂರ್ಣ ಶರಣಾಗತಿ ನಾರಾಯಣರಾಯರ ನಿಸ್ಸೀಮ ಭಕ್ತಿಯನ್ನು ಸ್ಪಷ್ಟವಾಗಿ ತೋರುತ್ತದೆ.

ಇನ್ನು ಕೆಲವು ಕವನಗಳಲ್ಲಿ ಕವಿ ತನ್ನ ಸಂಸಾರ ತಾಪತ್ರಯಗಳನ್ನು ತನ್ನ ವೇದನೆಯನ್ನು ತನಗೆ ಆತ್ಮೀಯನಾದ ದೇವರಲ್ಲಿ ತೋಡಿಕೊಂಡಿದ್ದಾನೆ.

*"ಬಡವ ನಾನೊಬ್ಬನೆ ಕಡು ಕರುಣೆಯ ಭಿಕ್ಷೆ ಕೊಡು*
*ಸಂಸಾರದಿ ಕುದಿಸುವದೆನ್ನ ಚಿಂತೆ ।"*

ಮುಂದೆ -

*"ಹಿತದ ಮಕ್ಕಳು ಬಡವರಾದರು*
*ಮತಿಯು ಪೋಯಿತು ದೇವ ಮುಂದಿನ*
*ಗತಿಯದಾವುದು ತೋರು ಗದುಗಿನ ವೀರ ನಾರಾಯಣಾ ॥ ೨೧ ॥"*

ಇಲ್ಲಿ ರಾಷ್ಟ್ರದ ಬಗ್ಗೆ ಕವಿಗೆ ಇರುವ ಕಳಕಳಿಯು ಸ್ಪಷ್ಟವಾಗಿ ತೋರುತ್ತದೆ.

ಪರದೇಶಿಯ ಮೋಸಕ್ಕೆ ಬಲಿಯಾಗಿ ಬಳಲಿ ಅನಂತರ ಜಾಗೃತಳಾಗಿ, (ದೇಶದ ಜನರೆಲ್ಲಾ ಒಂದಾಗಿ) ಪರದೇಶಿಯನ್ನು ಹೊರಗೆ ತಳ್ಳುವಳು ಹಾಗೂ ಸ್ವಾತಂತ್ರ್ಯ ಪಡೆಯುವಳು.

೬. "ವಿಜಯನಗರದ ವೀರವಾಣಿ" - (೧೯೩೬) - ವಿಜಯನಗರದ ಷಟ್ ಶತಮಾನೋತ್ಸವದ ಸಂದರ್ಭದಲ್ಲಿ ರಚಿತವಾದ ಈ ಕವನದಲ್ಲಿ ಕನ್ನಡಿಗರಿಗೆ ಸ್ವಾರ್ಥತ್ಯಾಗ ಮಾಡಿ ವೀರರಾಗಿ ಶೌರ್ಯ ಮೆರೆದು ನಾಡು ನುಡಿ ರಕ್ಷಣೆ ಮಾಡಲು ಕರೆಯಿದೆ. ಕನ್ನಡ ನಾಡಿನ ದೇವಿ ಭಾರತದ ವೀರ ಪರಂಪರೆಯನ್ನು ತಿಳಿಸುತ್ತಾ ತನ್ನ ಗರ್ಭದಲ್ಲಿ ಹುಟ್ಟಿದ ಅಂಜುಗುಳಿಗಳಾದ ಕನ್ನಡಿಗರನ್ನು ಹುರಿದುಂಬಿಸಲು ಪ್ರಯತ್ನಿಸುತ್ತಾಳೆ -

*"ಲೋಕ ಮೆಚ್ಚಿದ ಫಲಗುಣನು ಜಗ*
*ದೇಕ ಜಟ್ಟಿಯು ಭೀಮನೆನ್ನ ವಿ*
*ವೇಕ ಮೊಟ್ಟೆಯ ರಾಮಕೃಷ್ಣರು ಮಕ್ಕಳೆಲೆ ಕೇಳಿ ।*
*ಏಕೆ ಹುಟ್ಟಿದಿರಂಜುಗುಳಿಗಳೆ*
*ಸಾಕು ಕೆಟ್ಟೆನು ಬಸಿರು ಕಟ್ಟದ*
*ಕಾಕು ಬುಟ್ಟಿಯಿದೆಂಬ ನಾಡಿನ ದೇವಿಯರ ವಾಣಿ " ॥ ೯ ॥*

ವೀರ ಪರಂಪರೆ ಅಳಿದು ಹೋಗುತ್ತಿದ್ದುದು ಕವಿಗೆ ದುಗುಡ ತಂದಿದೆ.

೭. "ಒಂದಾದ ಕನ್ನಡ ನಾಡು" - (೧ - ೧೧ - ೧೯೫೬) - ರಾಜಕೀಯ ಕಾರಣಗಳಿಂದ ಬೇರೆ ಬೇರೆ ಪ್ರಾಂತಗಳಲ್ಲಿ ಹಂಚಿ ಹೋಗಿದ್ದ ಕನ್ನಡ ನಾಡು ಭಾಷಾವಾರು ಪ್ರಾಂತ ರಚನೆಯ ತತ್ವದಂತೆ ಕನ್ನಡ ನಾಡಿನ ಬಹುಭಾಗ ಒಂದಾದಾಗ ಕನ್ನಡ ನಾಡಿನ ವೈಭವ ಮತ್ತೆ ಶಿಖರಕ್ಕೇರಲೆಂದು ಕವಿ ಹಾರೈಸುತ್ತಾನೆ. ಈ ಕವನವನ್ನು ನಾರಾಯಣರಾಯರು ಪ್ರಥಮ ರಾಜ್ಯೋತ್ಸವ ಸಮಾರಂಭದ ಸಂದರ್ಭದಲ್ಲಿ ರಚಿಸಿದರು. ಕವನದಲ್ಲಿ ಪಡೆದ

ರಾಜ್ಯವನ್ನು ಕಾಯ್ದುಕೊಳ್ಳಲು ಕನ್ನಡಿಗರು ಮಾಡಬೇಕಾದ ಕರ್ತವ್ಯಗಳನ್ನು ತಿಳಿಸುತ್ತಾ ಕನ್ನಡ ನಾಡಿನ ಬೇಸಾಯ, ಉದ್ದಿಮೆಗಳನ್ನು ಬೆಳೆಸಿ ಭಾರತಕ್ಕೆ ನಿಷ್ಠೆ, ನಡತೆಯಲ್ಲಿ ಇಂಬು ಕೊಡಬೇಕೆಂದು ಕೇಳಿಕೊಂಡಿದ್ದಾರೆ.

*"ಒಳ ಜಗಳದೊಡಲುರಿಯ ನಂದಿಸಿ*
*ಬೆಳಸುತೊಳಗಿನ ನಲುಮೆ ನಂಬಿಗೆ*
*ಗಳಲಿ ನಡೆವುದು ಮತ್ತೆ ತನುಮನದಿಂದ ದುಡಿವುದು*
*ಗಳಿಸುವುದು ಬೇಸಾಯದುದ್ದಿಮೆ*
*ಬೆಳೆಸಿ ನಾಡಿನ ಮೇಲ್ಮೆಯೇಳ್ಗೆಯ*
*ಬಳಸಿ ಭಾರತಕಿಂಬು ಕೊಡುವದು ನಿಷ್ಠೆ ನಡತೆಯಲಿ ॥೪॥ "*

ಮುಂದೆ ಕವಿಯು ಹೀಗೆ "ಒಂದಾದ ಕನ್ನಡ ನಾಡು" ತನ್ನ ವೈಭವದಿಂದ ಮೆರೆದ ಭೂಷಣಪ್ರಾಯವಾಗಲೆಂದು ಹಾರೈಸುತ್ತಾನೆ.

*"ಉದಿಸಿ ಬಂದೀ ನಾಡು ವಿಭವದ*
*ತುದಿಯನೇರಲಿ ಮತ್ತೆಯಲ್ಲಿಂ*
*ದುದರದಿರಲದು ಭಾರತಕ್ಕೆ ಘನ ಭೂಷಣವಾಗುತಲಿ ॥೮॥ "*

**II ಪೌರಾಣಿಕ ಪ್ರಸಂಗಗಳನ್ನೊಳಗೊಂಡ ಷಟ್ಪದಿಗಳು.**

೧. **"ಜೋಕುಮಾರನ ಜನಸೇವೆ -" (೧೯೨೩)** ಇದು ಜೋಕುಮಾರನ ಜಾನಪದ ಕಥೆಯುಳ್ಳ ಕವನ. ಕವನದ ಆರಂಭ ಹೀಗಿದೆ -

*"ಶ್ರೀರಮಣ ನಾರಾಯಣನ ಘನ*
*ಚಾರು ಚರಣಕೆ ಶರಣು ಪೋಗಲು*
*ತೋರಿ ಕರುಣನ ಪ್ರೇರಿಸಿದ ಕಥೆಯನ್ನು ಪೇಳುವೆನು ॥ "*

ಇದೊಂದು ಪೌರಾಣಿಕ - ಕಥನ ಕವನ.

೨. ಗಜೇಂದ್ರ ಮೋಕ್ಷ - **(೧೯೨೮)** ಈ ಕವನದಲ್ಲಿ ವಿಷ್ಣು ಭಕ್ತ ಗಜೇಂದ್ರನ (ಆನೆ) ಮೊರೆಗೆ ಮೆಚ್ಚಿ ಮೊಸಳೆಯ ಹಿಡಿತದಿಂದ ಕಾಲು ಬಿಡಿಸಿ ರಕ್ಷಿಸಿದ ಪೌರಾಣಿಕ ಕಥೆಯಿದೆ. ಸಂಪೂರ್ಣ ಶರಣು ಬಂದ ಭಕ್ತನಿಗೆ (ಗಜೇಂದ್ರನಿಗೆ) ವಿಷ್ಣು ಮೋಕ್ಷವನ್ನು ದಯಪಾಲಿಸಿದ ಕಥೆಯಿದೆ. ಆರಂಭದ ಷಟ್ಪದಿಯಲ್ಲಿ ಭಕ್ತಿರಸ ಸೂಸುತ್ತಿದೆ -

*"ಶ್ರೀ ಗಜನ ಕಾಯ್ವಾತನತಿಮರನ*
*ಭೋಗಿ ಶಯನದ ಪಿರಿದುದಾರನ*
*ಯೋಗಿ ಪತಿಯಾ ವೀರನಾರಾಯಣನ ಚರಣದಲಿ*
*ಬಾಗಿ ನಮಿಸುತೆ ಭಕ್ತಿರಸಯುತ*
*ನಾಗಿ ಪೇಳುವೆ ಕೇಳಿರೋದಿರಿ*
*ನಾಗ ವಲ್ಲಭನಂದು ಮೋಕ್ಷ ಪಡೆದ ಕಥೆಯನ್ನು" ॥*

ಮೊಸಳೆಯು ಆನೆಯನ್ನು ಕೊಲ್ಲುವದಕ್ಕಾಗಿ ಕಾಲು ಬಾಯಲ್ಲಿ ಹಿಡಿದು ರಕ್ತ ಹೀರುತ್ತಿದ್ದಾಗ ಗಜೇಂದ್ರ ಆನೆ ವಿಷ್ಣುವನ್ನು ಆರ್ತತೆಯಿಂದ ಬೇಡಿಕೊಳ್ಳುತ್ತದೆ -

*"ಮೋಸ ಮಾಡಿದನಕಟ ನಕ್ರನು*
*ಗಾಸಿ ಮಾಡುವುದಿನ್ನು ಬದುಕುವೊ*
*ದಾಸೆ ತನಗಿಲ್ಲೆಂದು ಗಜವರನಾಗ ತಲೆವಾಗಿ*
*ಮೀಸಲಂಬುಜವನೊಂದನರ್ಚನೆ*
*ಗೋಸುಗಾಗಳು ಪಿಡಿದು ಸೊಂಡೆಯ*
*ಬೀಸಿ ಮುಗಿಲೊಳಗೆತ್ತಿ ತುತಿಸಿದ ಪರಮ ಭಕ್ತಿಯಲಿ " ॥೧೬॥*

ಮುಂದಿನ ಷಟ್ಪದಿಯಲ್ಲಿ ಸರಾಗವಾಗಿ ಹರಿದು ಬರುವ ಪ್ರಾಸಮಯ ಶಬ್ದಗಳ ಸೌಂದರ್ಯ ಸ್ಫುಟವಾಗಿ ಕಂಡು ಬರುತ್ತದೆ -

*"ಬಾರ ವೇದದ ಸಾರ ಜಗದಾ*
*ಧಾರ ನಿರುಪಮ ವೀರ ಗುಣಗಂ*
*ಭೀರ ಭಕ್ತರ ತೋರ ಮುತ್ತಿನ ಹಾರ ಸುವಿಚಾರ।*
*ಘೋರ ರಿಪು ಸಂಹಾರ ದುರಿತ ವಿ*
*ದೂರ ದುಃಖಿತ ಭಾರ ಹರ ವರ*
*ಪೂರ ಸೌಖ್ಯಾಗಾರ ಪೊರೆಯಲು ಬಾ ನಿರಾಕಾರ ॥೧೮॥ "*

ಗಜೇಂದ್ರನ ಈ ದಾರುಣ ಪ್ರಾರ್ಥನೆಯನ್ನು ಕೇಳಿ ಭಕ್ತರ ಕಿಂಕರನಾದ ದೇವ ವಿಷ್ಣು ಸುಮ್ಮನೆ ಕುಳಿತಾನೆ ?

*"ಎಂದು ಹೊಗಳಲು ದೇವ ತಿಲಕನು*
*ನೊಂದ ಭಕ್ತರ ದಾಸ ಗರುಡನ*

*ಸ್ಕಂಧವನು ತಾನೇರಿ ಬಂದನು ಗಂಧವಹನಂತೆ ।*
*ನಿಂದು ನೋಡುತೆ ಮೊಗದಿ ನಗೆಯನು*
*ತಂದು ನುಡಿದನು ದಯದ ದನಿಯಲಿ*
*ಕಂದ ಜಾಣನೋ ಮೂರ್ಖನೋ ನೀಂ ತಿಳಿಯೆ ನಾನೆಂದ " ॥ ೨೦॥*

ಈ ಕವನದಲ್ಲಿ ಒಟ್ಟಾರೆ ಭಕ್ತಿರಸವೇ ಪ್ರಧಾನವಾಗಿ ಹರಿದಿದೆ.

**3. "ಶ್ರೀಮದಾನಂದತೀರ್ಥರು" - (೧೯೬೬)** ಈ ಕವನದಲ್ಲಿ ಮಧ್ವಾಚಾಂ
ಜೀವನ ಹಾಗೂ ತತ್ವಗಳ ಸಂಕ್ಷಿಪ್ತ ಪರಿಚಯವಿದೆ. ಅವರ ಅವತಾರ, ಮತ ತ
ನಿರೂಪಣೆಯ ಸಂಕ್ಷಿಪ್ತ ರೂಪ ಇದರಲ್ಲಿದೆ. ಇಲ್ಲಿಯೂ ಭಕ್ತಿರಸಕ್ಕೆ ಪ್ರಾಧಾನ್ಯತೆ.
ಸಾಧನೆಗೂ ಪರಮಾತ್ಮನ ಕೃಪೆ ಎಂಬುದನ್ನು ಹೀಗೆ ಹೇಳಿದ್ದಾರೆ -

*"ಸಾಧಿಸುವೊಡಷ್ಟು ಭಕುತಿಯ*
*ನಾಧರಿಸಿ ಪೇಳಲ್ಕೆ ಮತಿಯನು*
*ಮೋದದಿಂ ಕರುಣಿಪುದು ಗದುಗಿನ ವೀರನಾರಾಯ್ಣ ॥ "*

ಮಧ್ವಾಚಾರ್ಯರ ಹುಟ್ಟು, ಬಾಲ್ಯ ಹಾಗೂ ವ್ಯಾಸ ಮುನಿಗಳ ಬಳಿ ಅ
ಆದ ಮೇಲೆ ಉಡುಪಿಗೆ ಬಂದು ತಪಸ್ಸಿನಲ್ಲಿದ್ದಾಗ ಒಂದು ದಿನ ಒಂದು ಹಡಗಿನ ಒ
ಬಂದು ಭಕ್ತಿಯಿಂದ ಕೈ ಮುಗಿದನು. ಅವನ ಹಡಗು ಮಲ್ಪೆಯ ಬಳಿ ಬಿರು
ಸಿಕ್ಕಿತ್ತು. ಅದನ್ನು ಹೇಗೋ ತೀರಕ್ಕೆ ತಂದಿದ್ದನು. ಆಗ ಬಲರಾಮ ಕೃಷ್ಣರ ಮ
ದೊರೆತ ಪ್ರಸಂಗವನ್ನು ಹೀಗೆ ವರ್ಣಿಸಲಾಗಿದೆ -

*"ನುಡಿದನುಪಕೃತನಾದೆ ಪೂಜ್ಯರೆ*
*ಕೊಡುವೆ ಬೇಡಿದುದೆನಲು ಮುನಿಗಳು*
*ಕೊಡುವುದಾದರೆ ಕೊಡುವುದೆಯಾ ನಿಂತ ಹಡಗದಲಿ ।*
*ಬುದದಲಿರುವಾ ಗೋಪಿಚಂದನ*
*ದಿಡಿಯ ಮೊಟ್ಟೆಯನೆನಲು ಹರುಷದಿ*
*ಕೊಡುವೆನೆಂದನು ಯತಿಗಳಿಮರಲಿ ಮೊಟ್ಟೆಯ ನಿಟ್ಟ ॥೬॥ "*

ಈ ಕವನ ಉಡುಪಿಯಲ್ಲಿ ಜರುಗಿದ ಏಳನೆಯ ಮಾಧ್ವತತ್ವಜ್ಞಾನ ಸಮ್ಮೇ
ಸ್ಮೃತಿ ಸಂಪುಟ "ಆರಾಧನೆ" ಯಲ್ಲಿ ಪ್ರಕಟವಾಗಿದೆ.

"ಬಡತನದ ಭೂತವ ಎದುರಿಸುವುದು । ತಾಯೇ ತಡೆಯಲಾರೆನು ಇನ್ನು
ಕರುಣಿಸು ತಾಯೆ"

"ಅಪಶಕುನಗಳು ಆ ವಿಘ್ನಗಳೆಲ್ಲವೂ ವಿಪರೀತ ಕಾಲವು ಉಪದ್ರವಂಗಳು ।
... ಕೃಪೆಯಿಂದ ಮಾಡಯ್ಯ ಭಕ್ತವತ್ಸಲನೆ । "

"ನರಳುವ ಕೂಸನು ಚರಣಕೆ ಹಾಕಲು
ಮೊರೆಯಿಡೆ ಕರುಣದಿ ಕರಗಿತು ಹೃದಯ" (ಅನಾರೋಗ್ಯದಿಂದ ಬಳಲುವ ಮೊಮ್ಮಗ ಚೇತರಿಸಿಕೊಂಡಾಗ ದೇವರಿಗೆ ಕೃತಜ್ಞತೆ ಹೇಳುತ್ತಿದ್ದಾರೆ.)

"ಬಡವನು ಮತಿಯೊಳು, ಸಿರಿಯೊಳು ಸಹ ಎನ್ನ
ಪಡಿಪಾಟಲನು ಕಡಿದು ಕಾಪಾಡೊ । "

"ಹಿಡಿದ ಕಾರ್ಯಗಳೆಲ್ಲ ಬಿಡದೆ ನಿಷ್ಫಲವಾಗಿ
ಒಡವೆ ಇಲ್ಲದ ಬರಿಯ ಒಡೆತನಕೆ ಆಣೆ ಮಾಡಿ
ಮಡದಿ ಮಕ್ಕಳ ಬಿರುಸು ನುಡಿ ಕೇಳಿ ಮನನೊಂದು ಸುಡು ಬಾಳ್ವೆ ಇದನೆಂದು ಮಿಡುಕುವಂದದಿಗೈದಿ । "

"ಅಣುಗರಿಗೆ ಉಣಿಸಲಿಕೆ ಹಣವೆತ್ತ ಗಳಿಸಲಿ
ಬಾಳಿನೊಳು ಸೌಖ್ಯವೇ ಆಳುವೈಶ್ವರ್ಯವೆ
ತೋಳಿನೊಳು ದಾರ್ಢ್ಯವೆ ಚಿತ್ತದೊಳು ಸ್ಥೈರ್ಯವೇ
ಹೇಳು ಗದುಗಿನ ವೀರನಾರಾಯಣ"

"ಧನಕೆ ಮೆಚ್ಚಿ ನಿನ್ನ ಮರೆತು ಕಹಿಯ ಫಲವ ತಿಂದೆನೊ
ವನಿತೆ ಸುತರು ಪೊರೆವರೆಂಬ ಭ್ರಮದೊಳಾತ್ಮ ಕೊಂದೆನೊ । "

ಈ ಕವನಗಳನ್ನು ಓದಿದಾಗ ಕವಿಯು ಸಂಸಾರದಲ್ಲಿ ಪಟ್ಟ ಕಷ್ಟದ ಸೂಚನೆ ಸಿಗುತ್ತದೆ. ಒಮ್ಮೆ ಅವರು ಮಂತ್ರಾಲಯಕ್ಕೆ ರಾಘವೇಂದ್ರ ಸ್ವಾಮಿಗಳ ದರ್ಶನಕ್ಕೆ ಹೋಗಲು ಬಯಸಿದರಂತೆ. ಆದರೆ ಹಣದ ಅಭಾವದಿಂದ ಹೋಗಲು ಸಾಧ್ಯವಾಗಲಿಲ್ಲವಂತೆ. ಆಗ ಬರೆದ ಅವರ ಈ ಕವನ ಯಾರ ಮನವನ್ನಾದರೂ ಕದಡಿಸುತ್ತದೆ.

"ಕರುವು ತಾಯನು ನೋಡಬರಲೊಡೆ
ಕರೆದು ಕೊಳ್ಳದೆ ದೂಡಬಹುದೆ ।
ಭರದೆ ದರುಶನಕೆಂದು ಧಾವಿಸಿ
ಬರಲು ಬರಗೊಡದಂತೆ ಮಾಡಿದೆ ।
ಹಣದೊಳಾಶೆಯನಿಟ್ಟೆನೆಂದೊಡೆ
ಹಣವು ಸಂಸಾರಿ ಕಡೆ ಬೇಡವೆ ।
ಸೆಣನ ಗದುಗಿನ ವೀರನಾರಾಯಣನ ಭಕುತನ ಸಲಹದೆ ।"

- ಇನ್ನು ಕೆಲವು ಪದ್ಯಗಳು ದೇವರಿಗೇ ಸವಾಲು ಹಾಕುವಂತಿವೆ. ಇವುಗಳಲ್ಲಿ ದೇವರ ಜೊತೆಗೆ ಅವರಿಗಿರುವ ಸಲುಗೆಯನ್ನು ತೋರುತ್ತವೆ.

"ಏಕೆ ಬೇಕಾಗಿತ್ತು ನಿನಗೆ ಈ ಆಟ ।
ಲೋಕೇಶ ಸಾಕಯ್ಯ ಇಲಿ ಬೆಕ್ಕಿನಾಟ ।
ಸ್ವರ್ಗನರಕಗಳ್ಯಾಕೆ ಪಾಪಪುಣ್ಯಗಳ್ಯಾಕೆ ।
ದುರ್ಗ ಮದ ವೈಕುಂಠದಾಸೆ ತೋರುವದ್ಯಾಕೆ ।
ನಿರ್ಗುಣನೆ ಸಲ್ಲದೀ ಉದ್ಯೋಗವೇಕೆ ।"

"ಸಾವಿರ ಕಿವಿಗಳಿದ್ದೆನ್ನಯ ಪಾಲಿಗೆ
ದೇವಾ ಅವೆಲ್ಲವು ಕಿವುಡಾದವೇನೊ । ಕೇಳಿಸಲೊಲ್ಲದೇನೊ ।
ಕೃಷ್ಣಾ ಕೇಳಿ ಕೇಳದಂತಿರುವಿಯೇನೊ ।"

"ಏನೆಂದು ಹರಿಯನರಸಿದೆಯೇ ಲಕುಮಿ ತಾಯೆ ।
ತಾನು ಸೇವೆಯ ಕೊಂಡು ಮಾನವನು ಪಡೆವನೆ ।
ದೀನ ನಂದಿನಿ ಭಕ್ತಜನ ಸೇವೆಗಳಿಸುವನೆ ।
ಆನೆ ಕರೆದೊಡೆ ನಿನ್ನ ಬಿಟ್ಹೋಡಲಿಲ್ಲವೆ ।"

- ನಾರಾಯಣರಾಯರ ಕೆಲವು ಪದ್ಯಗಳಲ್ಲಿ ಮಾನವನ ಮನದ ದುರ್ಬಲತೆ, ಚಂಚಲತೆಯನ್ನು ಕುರಿತು ನಿದರ್ಶನಗಳಿವೆಯಲ್ಲದೆ ಭಗವಂತನಲ್ಲಿ ಇವುಗಳನ್ನು ನೀಗಿಸಲು ಯಾಚನೆಯಿದೆ -

"ಚಂಚಲಿಸಲು ಕೊಡದಿರು ನೀನೆನ್ನ ಮನಕೆ ಶ್ರೀಹರಿಯೇ ।
ವಂಚಿಸುತಿಹುದೀ ಮನವ ನಿರಗೋಳಿಸಲರಿಯೆ ॥"

(ಲಾವಣಿ ಶೈಲಿ) " ಖೋಡಿ ಮನಸು ಇದು ಓಡಿ ಹೋಗುತದ ಬೇಡಂದರು ಕೇಳದು".

*"ಇಂದ್ರಿಯಗಳ ತೀತಬಲ್ಲೆ ಮನ ತೀಡುವ ಯತ್ನವು ಬರೆ ಬರೆಯೆ ।*
*ಕೋಡಗನಂತಿದು ಕಿಡಿಗೇಡಿ ಜಿಗಿದಾಡಿ । ಪೋಗುವದು ತ್ವರೆ ಮಾಡಿ ।*
*ಕೂಡಿಸಿದರು ಬಹುಕಾಡಿ ಡಿಟಿಸ್ಯಾಡಿ । ನೋಡಲದು ಅಡನಾಡಿ ಕಾಡಿ ಕಾಡಿ ।*
*ಪೀಡಿಸುತಿರುವುದು ಕಾಡುವುದೇನಿದು । ಈ ಪರಿಯೆ ಜೋಡಿಸಿ ಕೈಗಳ ॥*
*... ತುಣುಕು ಮನಸು ಇದು ಕಣಮೊಳು ಪಿಡಿವುದು ತಿಣಿಕಿ ತಿಣಿಕಿ ಗಡ ।*
*ಇದ ಹಿಡಿಯ ಹೆಣಗಲ್ಯಾತಕೆಂದು ಗೊಣಗುತಿಹರು ಜನರು ।*
*ಇಣಚಿ ಹಾಂಗೆ ಚಪಲವೂ, ಅಣಕಿದ್ಯಾಂಗ ಕುಣಿಕುಣಿಯೇ ।*
*ಬಣಗು ಜನರು ನಮಗದು ಹೊಣೆಯೆ*
*(ದುಡುಕು) ಮಣೆಯದು ದಣಿಯದು ಹಣಿಯದು ತಣಿಯದು "*

"ಚೇಷ್ಟೆಗಳದರದು ಯಥೇಷ್ಟವಾಗಿ ಕಾಣಾ ಕಾಣಾ ಶಿಷ್ಟರನೆಲ್ಲ ಭ್ರಷ್ಟ ಮಾಡುವದು .... ನಷ್ಟ ಮಾಡೊ ಈ ಚೇಷ್ಟೆಗುಣ ", "ಕಿವಿಗೊಡದೆ ಕಿವುಡಾದೆನು", "ಎದಿರೊಳು - ನಿಂತಿರೆ ನೋಡದ ನಾನು"

- ಎಂದು ಮನಸ್ಸಿನ ಮರ್ಕಟತನವನ್ನು ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

"ಸಂಸಾರದಿ ಕುದಿಸುವುದೆನ್ನ ಚಿಂತೆ ...." "ಬೇಡಲೊ ಜೀವ ಜನಿಸಲೆ ಬೇಡ

"ಮನಸ್ಸಿನ ಸ್ಥೈರ್ಯ ಕಳೆಯಲು । ಸಂಸಾರದ ತಾಪತ್ರಯಗಳೇ ಕಾರಣ । ಅವುಗಳನು ನಿವಾರಿಸು", "ಯೋಚಿಸುವೆ ನಾನು, ಯೋಜಿಸುವೆ ನೀನು" ಎಂಬುದಾಗಿ ಸಂಸಾರ ತಾಪತ್ರಯಗಳಲ್ಲಿ ತೊಳಲುವ ಭಕ್ತನ ಅಸಹಾಯಕ ಸ್ಥಿತಿಯ ವರ್ಣನೆ ಬಂದಾಗಲೆಲ್ಲ ನಾರಾಯಣರಾಯರು ತಮ್ಮ ಸ್ವಂತ ಅನುಭವವನ್ನೂ ಅರುಹುತ್ತಿರುವಂತೆ ಭಾಸವಾಗುತ್ತದೆ. ಜೀವನದಲ್ಲಿಯ ಜಿಗುಪ್ಸೆ, ನೋವು ತೋರುತ್ತದೆ.

ನಾರಾಯಣರಾಯರು ನಾರಾಯಣನನ್ನು ಸಂಪೂರ್ಣ ನಂಬಿದ್ದರು ಎನ್ನುವದಕ್ಕೆ ಅವರ ಶರಣಾಗತಿಯ ಅನೇಕ ಹಾಡುಗಳಲ್ಲಿ ಎದ್ದು ತೋರುತ್ತದೆ.

*"ಶರಣಾಗತರನು ಕರವಿಡಿದು ನೇಮಾ ।*
*ಶರಣ ಬಂದೆನಯ್ಯ ರಘುಕುಲ ಸೋಮಾ ।"*

*"ರಾಗ ನಿನಗೆಯೆ ತಾಳ ನಿನಗೆಯೆ ಗೊತ್ತು*
*ರಾಗ ತಾಳಗಳಲಿ ಹಗುರಾಗಿ ಹಾಡಲಿಕೆ*
*ತೂಗಿ ಶಬ್ದಗಳಿಡಲು ಸನ್ಮತಿಯ ನೀಡೊ ।"*

*"ತನುಮನಗಳಿವು ನಿನ್ನವೆ ನನದೆಂಬುದೇನುಂಟು"*

*"ಏನು ತಿಳಿಯದವನಾನೀ ಗುಟ್ಟು । ಜ್ಞಾನದ ಸಿಂಗಡಿ ಸಂಗಡ ಕೊಟ್ಟು ।*
*ಧ್ಯಾನದ ಪಾಶದ ಬಿಗಿಯಲಿ ಕಟ್ಟು । ಶ್ರೀನಿವಾಸನೇ ನೀ ದಯವಿಟ್ಟು ॥"*

*"ಸಾರಾಸಾರ ವಿಚಾರವಿಲ್ಲವೊ ಗಡ । ತೀರ ಅಲ್ಪನು ತಿಳಿ"*

- ಎಂದೆಲ್ಲ ವಿನಮ್ರತೆಯಿಂದ, ವಿನಯದಿಂದ ಹೇಳುವಾಗ ಅವರ ನಿಷ್ಕಲ್ಮಷ ಮನದ, ವಿನೀತಭಾವದ, ಅಹಂಕಾರ ರಹಿತ ಮನೋವೃತ್ತಿಯ ಪರಿಚಯ ನಮಗಾಗುತ್ತದೆ.

"ಸ್ಮರಿಸುವದು ರಘುನಂದನನ" ಎಂಬ ಕವನದಲ್ಲಿ ಐದು ನುಡಿಗಳಲ್ಲಿ ಸಂಪೂರ್ಣ ರಾಮಾಯಣದ ಚಿತ್ರಣ ನೀಡಿದ್ದಾರೆ. ಕೊಡದಲ್ಲಿ ಸಾಗರ ತುಂಬುವ ಅವರ ಈ ಕಲೆ ಮೆಚ್ಚುವಂಥಾದ್ದು.

ಕೆಲವು ಪದ್ಯಗಳಲ್ಲಿ ದೇವರಲ್ಲಿ ಅವರು ತೋರುವ ಸಲುಗೆ, ಅವನಿಗೆ ಮಾಡುವ ಹಾಸ್ಯ ಅವರ ಕಾವ್ಯಶೈಲಿ ಇನ್ನೊಂದು ಆಯಾಮವನ್ನು ನಿದರ್ಶಿಸುತ್ತದೆ -

*"ಒಲಿಯುವೆ ನೀನೆಂತು ಹಲಧರನನುಜಾ ।*
*ಹೊಗಳಲು ನೀ ಮರುಳಾಗುವನಲ್ಲ ।*
*ತೆಗಳಲು ನೀ ಮುನಿಯುವನಲ್ಲ ।....*
*.... ಪಂಚಪಕ್ವಾನ್ನವ ಹಂಚೇನೆಂದರೆ ।*
*ಲಂಚಗುಳಿಯು ನೀನಲ್ಲ । ...*
*ಧನವ ಕೊಟ್ಟು ನಿನ್ನೊಲಿಸೇನೆಂದರೆ ।*
*ಧನಲಕ್ಷ್ಮೀಪತಿ ನೀನಹುದೊ ।"*

- "ತೇನ ವಿನಾ ತೃಣಮಪಿ ನ ಚಲತಿ" ಎಂಬ ಸತ್ಯವನ್ನು ದೃಢವಾಗಿ ನಂಬಿದ ಅವರು ಹೇಳುವ ಮಾತಿನಿಂದ ಪ್ರತೀತಿಯಾಗುತ್ತದೆ.

*"ನನ್ನದೇನಿದೆಯೊ ದೇವ ನಿನ್ನದೇ ಎಲ್ಲವೂ*
*ಅವನಿಯೊಳು ಪುಟ್ಟಿಸುವವ, ಭುವನದೊಳು ಸಾಕುವವ*

*ಕಿವಿ ಮೂಗು ಕಣ್ಣು ವದನ ತ್ವಚೇಂದ್ರಿಯದಿ*
*ಅವಿತ ಅಗಮ್ಯನಾಗಿ ವ್ಯವಹರಿಸುವ ನೀನೆ ।*
*... ಕೊಳುವವ ನೀನೆ, ಕಳೆಯುವವ ನೀನೆಯೊ*
*... ಗಳಿಸುವವ ನೀನೆ, ಬಳಸುವವ ನೀನೆಯೊ*
*... ಅವಸರದಿ ಕಾಯುವ ದೇವ ನೀನೆಯೊ ॥ "*

- ಸಂಸಾರದ ಭವಣೆಯಿಂದ ಹುಟ್ಟು ಸಾವುಗಳ ಜಂಜಾಟದಿಂದ ಮುಕ್ತಿ ಕೊಡೆಂದು ದೇವರನ್ನು ಬೇಡುವ ಪದ್ಯದ ಕೆಲ ಸಾಲುಗಳು ಕೆಳಗಿನಂತಿವೆ. ಇಲ್ಲಿ ಪ್ರಾಸದ ಸೊಬಗನ್ನು ಕಾಣಬಹುದು.

*"ಬೇಡಲೊ ಜೀವ ಜನಿಸಲೆ ಬೇಡೊ ।*
*ಬೇಡ ನಿಜಸುಖ ದೊರೆಯದು ನೋಡೊ ॥ ಅ. ಪ ॥*

*ಹೆಣ್ಣೊ ಗಂಡೊ ಆಗಿ ಮೆರೆಯುವೆ*
*ಮಣ್ಣು ಹೊನ್ನಿಗೆ ನೀ ಹಾತೊರೆಯುವೆ*
*ಉಣ್ಣುತ ಪ್ರಾರಬ್ಧವ ಬಾಯ್ದೆರೆಯುವೆ*
*ಹಣ್ಣಾಗುವೆ ನೀ ಪರೀಕ್ಷೆ ಮಾಡೊ ॥ ೧ ॥*

*ಆರು ಹಗೆಗಳು ಗಡ ಮುತ್ತುವವೊ*
*ಮೂರು ತಾಪಗಳು ಕಡು ಹತ್ತುವವೊ*
*ನೂರೊಂದೊಗಟಗಳಿರ ದೊತ್ತುವವೊ*
*ಪಾರಾಗಲು ಬಿಡವೆಂದಿಗೂ ಕೇಡೊ ॥ ೨ ॥*

*ಹುಟ್ಟು ಸಾವುಗಳ ಸುಳಿಯಲಿ ಸುತ್ತುವೆ*
*ಒಟ್ಟು ಮರಳಿ ಸಂಚಿತವನು ಬಿತ್ತುವೆ*
*ಗಟ್ಟಿಸಿ ಗದುಗಿನ ವೀರ ನಾರಾಯ್ಣಗೆ*
*ಹುಟ್ಟಿಸಬೇಡೆಂದಿಚ್ಛಿಸಿ ಬೇಡೊ ॥ ೩॥*

ಅವರು ಹೋದ ಯಾತ್ರಾ ಸ್ಥಳಗಳಲ್ಲಿ ಅನೇಕ ಪದ್ಯ ರಚಿಸಿದಿದ್ದಾರೆ - ತಿರುಪತಿ, ಮಂತ್ರಾಲಯ, ಯಲಗೂರ, ಚಂದಲಾ ಪರಮೇಶ್ವರಿ, ಕೊಲ್ಹಾಪುರ.

**ಹಿರಿಯ ಕವಿಗಳಲಿ ಭಕ್ತಿ ಗೌರವ** - ಮತ್ಸರದ ಲವಲೇಶವೂ ಇಲ್ಲದ ನಾರಾಯಣರಾಯರಿಗೆ ಅನ್ಯ ಹಿರಿಯ ಕವಿಗಳ ವಿಷಯಕ್ಕೆ ಅನನ್ಯ ಭಕ್ತಿ, ಗೌರವ.

ಚಿಕ್ಕಂದಿನಿಂದಲೂ ಪ್ರಭಾವ ಬೀರಿದ ಕುಮಾರವ್ಯಾಸರನ್ನಂತೂ ಅತೀ ಭಕ್ತಿಯಿಂದ ಕಾಣುತಿದ್ದರು ಇಬ್ಬರ ಹೆಸರುಗಳೂ ಒಂದೇ, ನಂಬಿದ ದೇವರೂ ಒಂದೇ, ಕಾವ್ಯದ ಅಂಕಿತವೂ ಒಂದೇ - " ಗದುಗಿನ ವೀರ ನಾರಾಯಣ." ನಾರಾಯಣ ದೇವರ ಗುಡಿಗೆ ಹೋದಾಗ ದೇವರಿಗೆ ನಮಿಸಿದ ನಂತರ ಹೊರಗಿನ ನವರಂಗ ಮಂಟಪಕ್ಕೆ ಬಂದಾಗ ಅಲ್ಲಿರುವ "ಕುಮಾರವ್ಯಾಸನ ಕಂಬ"ಕ್ಕೆ ಭಕ್ತಿಯಿಂದ ಕೈ ಜೋಡಿಸಿ ಪ್ರಾರ್ಥಿಸಿ ಬರುತ್ತಿದ್ದರು ನಾನಾ. ಗದುಗಿನ ಭಾರತವಂತೂ ಅವರಿಗೆ ಪೂಜನೀಯ ಮೇರು ಕೃತಿ. "ಹಿಂದೆ ಕುಮಾರವ್ಯಾಸನಿಗೆ ವರವಿತ್ತಂತೆ ನನಗೂ "ನಿನ್ನನ್ನೆ ಪೊಗಳುವ ಪದಗಳನು ಸೊಗಸಾಗಿ ರಚಿಸುವ ಬಗೆಯನ್ನು ನೀಡೊ " ಎಂದು ಕವಿ ದೇವರನ್ನು ಪ್ರಾರ್ಥಿಸುತ್ತಾನೆ. "ತೋರ ಕನ್ನಡದಲ್ಲಿ ವರ ಕವಿಯಾದ । ಕುಮಾರವ್ಯಾಸನಿಂದ ಭಾರತ ರಚಿಸಿದ ॥ ಧೀರ ಪುರಂದರದಾಸರು ಕರೆದರೂ । ಭಾರತಮಲ್ಲ ಶ್ರೀ ವೀರನಾರಾಯಣ ॥ " ಎನ್ನುವಾಗ ಅವರಿಗೆ ಕುಮಾರವ್ಯಾಸನ ಬಗ್ಗೆ ಅಥವಾ ಪುರಂದರ ದಾಸರ ಬಗ್ಗೆ ಇದ್ದ ಗೌರವದ ನಿದರ್ಶನ ಕಂಡು ಬರುತ್ತದೆ. ನಾರಾಯಣರಾಯರು ಚತುರೋಕ್ತಿಯನ್ನು ಬಳಸಿ ಪುರಂದರ ದಾಸರನ್ನು ಕುರಿತು ಬರೆದ ಕವನ ಅವರ ಕಾವ್ಯದ ಗುಣಮಟ್ಟದೊಂದಿಗೆ ಹೃದಯ ವೈಶಾಲ್ಯತೆಯನ್ನು ತೋರುತ್ತದೆ.

*"ಜಿಪುಣರ್‍ಯೆ ನೀವೆಂದು ಹೇಳಿದುದು ಸುಳ್ಳಲ್ಲ ।*
*ನಿಪುಣಮತಿ ಪುರಂದರದಾಸ ಮಲ್ಲ ॥*
*ವನಜನಾಭನ ಸ್ತುತಿಗೆ ಶಬ್ದ ಸಂಪತ್ತೆಲ್ಲ ।*
*ಒಸೆದು ನೀವೇ ಬಳಸಿ ನಮಗೇನೂ ಕೊಡಲಿಲ್ಲ ॥*

*ಖಂಜೂಸತನದ ಕತೆಯನು ಹೇಳಲಾಸಲ್ಲ ।*
*ಕಂಜನಾಭನ ಮಹಿಮೆ ಬಣ್ಣಿಸುವ ನೆಪದಲ್ಲಿ ॥*
*ರಂಜನೆಯ ಶಬ್ದಗಳ ಸವಿದುಂಡೆಯಲ್ಲ ।*
*ಎಂಜಲವನುಳಿದೆಮಗೆ ಕಿಂಚಿತ್ತು ಬಿಡಲಿಲ್ಲ ॥"*

ಕನಕದಾಸರ ವಿಷಯಕ್ಕೂ ನಾರಾಯಣರಾಯರಿಗೆ ಅನನ್ಯ ಗೌರವ, ಅವರ ಬಗ್ಗೆಯೂ ನಾರಾಯಣರಾಯರು ಬರೆದದ್ದು ಚತುರೋಕ್ತಿಯಲ್ಲೇ -

*"ಕನಕಾ ನಿನ್ನ ಕೆಣಕಿ ತಿಣಕಲಾರೆನೋ ।*
*ಕ್ಷಣ ಕ್ಷಣಕೂ ತಿಣಕಿ ತಿಣಕಿದಣಕಲಾರೆನೋ ॥*
*ಅಡಿಗಡಿಗೆ ಮುಂಡಿಗೆಯನು ಒಡೆಯಲಾರೆನೋ ।*
*ಒಡೆಯಲು ಮಡಕಿ ಮಡಕಿ ಪದವನು ತಡಕೊಳ್ಳಾರೆನೋ ।*

*ಒಡೆಯ ದೇವನೆಂದಟ್ಟುವ ಶುನಕನ ಮುಟ್ಟಲಾರೆನೊ ॥*
*ಪಾತ್ರೆಯ ಒಳಮೈ ಮಾತ್ರವ ತೊಳೆದುದು ತಿಳಿಯಲಾರೆನೊ ।*
*ಗೋತ್ರವ ಕೇಳಿ ಸುಸೂತ್ರದೊಳುತ್ತರ ಪಡೆಯಲಾರೆನೊ ॥ "*

ಎಂದು ಒಳ್ಳೇ ಮಾರ್ಮಿಕವಾಗಿ ಬಣ್ಣಿಸಿದ್ದಾರೆ. ಹೀಗೇ ತಮ್ಮ ಕುಮಾರವ್ಯಾಸ ಭಾರತ ಪ್ರವಚನದಿಂದ ಜನರ ಮನ ಸೂರೆಗೊಂಡ ಭಾರತ ಬಿಂದೂರಾಯರ ಮೇಲೆ ಕವನ ಬರೆದಿದ್ದಾರೆ ನಾರಾಯಣರಾಯರು. ಹಾಗೆ ನಾರಾಯಣರಾಯರನ್ನು ದಾಸ ಸಾಹಿತ್ಯದ ಕೊನೆಯ ಕೊಂಡಿ ಎಂದಿದ್ದಾರೆ ಕೆಲವರು.

**ನಾಡಭಕ್ತಿ ಗೀತೆಗಳು** - ನಾರಾಯಣರಾಯರು ಬರೆದ ಎರಡು ನಾಡ ಭಕ್ತಿಗೀತೆಗಳು "ಬೆಳಗಲೆಂದಿಗೂ ನಮ್ಮ ಚೆಲುವ ಕನ್ನಡ ನಾಡು " ಹಾಗೂ "ಮೂಡಿದುದು ಮೂಡಿದುದು ಕನ್ನಡದ ರವಿಬಿಂಬ " HMV ಗ್ರಾಮೊಫೋನೊ ರೆಕಾರ್ಡ ಕಂಪನಿಯಿಂದ ಪದ್ಮವಿಭೂಷಣ. ಮನ್ನಾಡೆ ಹಾಗೂ ಲಕ್ಷ್ಮಿಶಂಕರ ಅವರಿಂದ ಧ್ವನಿ ಮುದ್ರಿತಗೊಂಡಿವೆ. (೧೯೬೧) ಇನ್ನೆರಡು ಗೀತೆಗಳು - " ಭಾರತ ಮಾತೆ ಜಯ ಜಯ ಸನ್ನುತೆ "ಬನ್ನಿರೋ ನೋಡ ಬನ್ನಿರೊ " - ಇಲ್ಲಿ ಭಾರತಮಾತೆ ಗುಣಗಾನವಿದೆ. ಬಹುಶಃ : ಭಾರತ ಸ್ವಾತಂತ್ರ್ಯ ಸಮಯದಲ್ಲಿ ಬರೆದ "ದುಮದುಮ್ಮಿ" ಧಾಟಿ. "ವಂದೇ ಮಾತರಂ" ನ ಸಾರವಿದೆ.

### ಧ್ವಜ ಗೀತೆ

*ಏರಿಸಿರಿ ಹಾರಿಸಿರಿ ಭಾರತದ ನಾಡಗುಡಿ ।*
*ಮೂರು ಬಣ್ಣದ ಧ್ವಜಕೆ ಜಯವೆಂದು ಭೇರಿ ಹೊಡಿ ॥ ಪ ॥*

*ಹಾಸಿ ಮನೆಯಲಿ ನೇಯ್ದ ಖದ್ದರದ ಬಟ್ಟೆಯಲಿ ।*
*ಕೇಸರಿ ಬಿಳಿ ಹಸಿರು ಬಣ್ಣಗಳ ಪಟ್ಟೆಯಲಿ ।*
*ಸೂಸಿ ನೀಲಿಯಲಿಟ್ಟು ಚಕ್ರ ನಡು ಮೆಟ್ಟಿನಲಿ ।*
*ಬೀಸುತಿಹ ಗಾಳಿಯಲಿ ಭಾರತದ ನಿಟ್ಟೆಯಲಿ ॥೧ ॥*

*ಸತ್ಯ, ದಮೆ, ದಯೆ, ಶಾಂತಿ, ಪ್ರೇಮಗಳ ಗುರುತೆಂಬ ।*
*ಸ್ತುತ್ಯ ಬಣ್ಣದ ನಡುವೆ ಧರ್ಮಚಕ್ರದ ಬಿಂಬ ।*
*ನಿತ್ಯ ಅಭಯ ಅಹಿಂಸೆಗಳ ತೋರ್ಪಧ್ವಜ ಕಂಬ ।*
*ಪ್ರತ್ಯಕ್ಷದಲಿ ನೋಡಿ ವಂದಿಸಿರಿ ಮನದುಂಬ ॥೨ ॥*

ಖಡಖಡನೆ ಗಾಳಿಯಲಿ ಬೀಸಿ ಶಬ್ದವ ಮಾಡಿ ।
ಛಡಛಡನೆ ಹಗೆಗಳೆಡೆ ಬಿರಿವಂತೆ ಹಾರಾಡಿ ।
ಒಡೆಯ ಗದುಗಿನ ವೀರ ನಾರಾಯಣನ ಪಾಡಿ।
ಗುಡಿ ತನ್ನ ಮೊಗವೆತ್ತಿ ನಿಲುವಂತೆ ಮೇಲ್ಮಾಡಿ ॥ ೩ ॥

(ಲಕ್ಷ್ಮೀ ಶಂಕರ, ಮನ್ನಾಡೇ ಮತ್ತು ಮೇಳದವರಿಂದ ಹಾಡಲ್ಪಟ್ಟ ಈ ಗೀತೆಗಳು HMV ರೆಕಾರ್ಡ್ ಕಂಪನಿಯಿಂದ ಡಿಸ್ಕ್‌ನಲ್ಲಿ ಧ್ವನಿಮುದ್ರಿತವಾಗಿವೆ.)

೧. ಮೂಡಿದುದು ಮೂಡಿದುದು ಕನ್ನಡದ ರವಿಬಿಂಬ ॥ ಪ ॥

ನಾಡಿಡಿದ ನಿಶೆಹರಿದು ಬೆಳಕಾಯ್ತು ನೆಲದುಂಬ ॥ ಅನು ಪ ॥

ಹೊತ್ತಿನೊಳಗೆಚ್ಚರಿಸಿ ಕವಿಕೋಳಿ ಕರೆಯುತಿರೆ ।
ಮುತ್ತಿರುವ ಪರವಶತೆಯಾ ಮಂಜು ಕರಗುತಿರೆ ॥
ಬಿತ್ತರಿಪ ಜಾತಿಭೇದದ ಚಿಕ್ಕೆ ಸರಿಯುತಿರೆ ।
ಮತ್ತೆ ನಾವೊಂದೆಂಬ ತಿಳಿಗಾಳಿ ತಿರುಗುತಿರೆ ॥ ೧ ॥

ವೈಭವವ ಬಯಸಿ ಚಿತ್ತಪಕ್ಷಿ ಹಾರಾಡುತಿರೆ ।
ಸ್ವಾಭಿಮಾನದ ಸುಧೆಯ ಕವಿ ಭ್ರಮರ ನೀಡುತಿರೆ ॥
ಕ್ಷೋಭಿಸುವ ಬಡತನದ ಭೂತನಿಲದೋಡುತಿರೆ ।
ಶೋಭೆತಹ ಧನಲಕ್ಷ್ಮಿ ಕಣ್ದೆರೆದು ನೋಡುತಿರೆ ॥ ೨ ॥

ಬಯಕೆ ಕೈಗೂಡಿತೆಂದೊರೆದು ಜನಗಳು ಸಾರೆ ।
ನಯಪ್ರೇಮ ಕನ್ನಡಿಗರೊಬ್ಬೊಬ್ಬರೊಳು ಬೀರೆ ॥
ಜಯ ಜಯತು ಕರ್ನಾಟಕೆಂಬ ಧನಿ ನಭಕೇರೆ ।
ದಯವ ಗದುಗಿನ ವೀರನಾರಾಯಣನು ತೋರೆ ॥ ೩ ॥

೨. ಬೆಳಗಲೆಂದಿಗು ನಮ್ಮ ಚಲುವ ಕನ್ನಡ ನಾಡು ॥ ಪ ॥

ಇಳೆಯೊಳಗೆ ಗೆಲುಪಡೆದು ಭಾರತದ ಒಳನಾಡು ॥ ಅ. ಪ. ॥

ತನು ಬೇರೆಯಾದರೆಯು ಜನ ಹೃದಯವೊಂದಾಗಿ ।
ಜನಗಳೊಳಜಗಳಿದು ವಿಶ್ವಾಸ ತುಂಬಾಗಿ ॥

*ಕೊನರಿಹೇವವು ನಾಡಿನೇಳ್ಗೆಯಿಂ ಚೆಂದಾಗಿ ।*
*ಘನತೆ ಗೌರವ ಬೆಳೆದು ಅಧ್ಯಾತ್ಮದಿಂಬಾಗಿ ।।೧ ।।*

*ತೋರ ಕಾವೇರಿ ಕೃಷ್ಣೆಯರು ಪಾವನ ಮಾಡೆ ।*
*ನೀರುಣಿಸಿ ತುಂಗೆ ಘಟಪ್ರಭೆಯರು ಬೆಳೆಗಳ ನೀಡೆ ।*
*ಚಾರು ಕಲೆಗಳು ಬೆಳೆದು ಗೊಮ್ಮಟನು ಮೇಲ್ನೋಡೆ ।*
*ಶ್ರೀರಂಗ ವಿರುಪಾಕ್ಷ ಚಾಮುಂಡಿ ಕಾಪಾಡೆ ।। ೨ ।।*

*ಚಿಕ್ಕತನ ಬಿಟ್ಟೈಕ್ಯ ಶಾಂತಿಗಳ ಸಾಧನದಿ ।*
*ಸಕ್ಕರೆಯು ಬೆರೆತ ಸವಿ ಹಾಲಿನೊಲು ಸಮರಸದಿ ।।*
*ಕಕ್ಕುಲತೆ ಸ್ವೈರಣೆಯೊಳೆಲ್ಲರಿರಲೊಮ್ಮತದಿ ।*
*ಚೊಕ್ಕ ಗದುಗಿನ ವೀರನಾರಾಯಣನ ದಯದಿ ।। ೩।।*

**ಸದಾಚಾರ ಕುರಿತು ಗೀತೆಗಳು** - ನಾರಾಯಣರಾಯರು ತಮ್ಮ ಜೀವನದುದ್ದಕ್ಕೂ ಸದಾಚಾರವನ್ನು ಸಾರಿದುದಲ್ಲದೆ ಸದಾಚಾರವನ್ನೂ ನೈತಿಕತೆಯನ್ನು ತಮ್ಮ ಜೀವನದಲ್ಲಿ ಚಾಚೂ ತಪ್ಪದೆ ಅಳವಡಿಸಿಕೊಂಡು ಬಂದಿದ್ದಾರೆ. ನೀತಿಯಿಂದ ನಡೆಯುವವರಿಗೆ ಮಾತ್ರ ನೀತಿಯನ್ನು ಸಾರುವ ಅಧಿಕಾರವಿದೆ. ಸದಾಚಾರದ ಸಾರವನ್ನೊಳಗೊಂಡ ಅವರ ಎರಡು ಪದ್ಯಗಳನ್ನು ಉಲ್ಲೇಖಿಸಬಹುದು. ಮೊದಲಿನ ಅವರ ಪದ್ಯ " ನಿಜ ವೈಷ್ಣವಾ " ಈ ಗೀತೆಯಲ್ಲಿ ನಾರಾಯಣರಾಯರು ನಿಜವಾದ ವೈಷ್ಣವ ಎಂದರೆ ಹೇಗಿರಬೇಕು ಎನ್ನುವುದನ್ನು ವರ್ಣಿಸುತ್ತಾರೆ. ಈ ಪದ್ಯ ಮಹಾತ್ಮಾ ಗಾಂಧೀಜಿಯವರ ಪ್ರಾರ್ಥನಾ ಪದ್ಯಗಳಲ್ಲಿ ಅತೀ ಜನಪ್ರಿಯವಾದ "ವೈಷ್ಣವ ಜನ ತೊ ತೇನೆ ಕಹಿಯೆ ಜೆ ಪೀಡ ಪರಾಯೆ ಜಾಣೇರೆ " ಎಂಬ ನರಸೀ ಭಗತರು ರಚಿಸಿದ ಗೀತೆಯ ಭಾವಾನುವಾದವನ್ನು ಹೊಂದಿದೆ. ಈ ಗೀತೆಯ ಪ್ರಕಾರ ನಿಜ ವೈಷ್ಣವನ ಲಕ್ಷಣಗಳು ಈ ಕೆಳಗಿನಂತಿವೆ.

೧. "ಇತರರ ದುಃಖವು ತನದೆಂದರಿವಾ

೨. ಸತತದಿ ಸೇವೆ ತತ್ಪರನಿರುವಾ

೩. ಹೆಮ್ಮೆಯ ತೊರೆದು ಸರ್ವರ ನಮಿಸುವಾ

೪. ಪರರನ್ನು ಜರಿಯಾ । ನಿರ್ಮಲನಿರುವಾ

೫. ಪರಸತಿಯನು ತಾಯಿಯೊಲು ಮನ್ನಿಸುವಾ

೬. ಸಟೆಯನು ನುಡಿಯಾ, ಪರಧನ ಹಿಡಿಯಾ

೭. ಕಟ್ಟಿಲಿ ಸಿಕ್ಕದೆ ಸಮಮನಸಿನವಾ

೮. ನಡೆನುಡಿಗಳಲಿ ಮಡಿಯಿಂದಿರುವಾ

೯. ದೃಢ ಮನದಿಂ ಬಹು ಶಾಂತಿಯಲಿರುವಾ

೧೦. ಪ್ರತಿ ಪ್ರಾಣಿಯಲಿ ಹರಿಯನು ನೋಡುವ

೧೧. ಅತಿಶಯ ದಯವನು ತೋರುತಲಿರುವ

೧೨. ಕಾಮಕ್ರೋಧಗಳ ಗಡ ಜೈಸಿರುವಾ

೧೩. ರಾಮನಾಮವ ನೇಮದಿ ಭಜಿಸುವಾ

೧೪. ಗದುಗಿನ ವೀರನಾರಾಯಣನನ್ನು ಸತತ ನೆನೆವಾ । "

ಈ ನೀತಿಗಳ ಪಟ್ಟಿ ಸದಾಚಾರದ ಎಲ್ಲ ಆಯಾಮಗಳನ್ನು ಹೊಂದಿದೆ. ಅವರ ಇನ್ನೊಂದು ಪದ್ಯ " ಏನು ಮಾಡಿದೆ ಮೂಢಾ ಮನುಜಾ, ಮಾನವ ಜನುಮದಿ ಬಂದೀ ಜಗದಿ ", "ಇದರಲ್ಲಿ ಕವಿ ಮಾನವ ಜನ್ಮ ಎಷ್ಟು ಅಮೂಲ್ಯವಾದದ್ದು. ಇದನ್ನು ಪಡೆದು ಬಂದ ಮೇಲೆ ಮಾನವತೆಯ ಗೌರವವನ್ನು ಅವನು ಕಾಪಾಡಬೇಕು" ಎಂದು ಹೇಳುತ್ತ ಮಾನವನ ಮೂಢತೆಗಾಗಿ ಮರುಗುತ್ತಾರೆ. ಇಂದಿನ ಮಾನವನನ್ನು ಅವರು ಕೆದಕಿ ಕೇಳುತ್ತಿದ್ದಾರೆ.

*"ಏನು ಮಾಡಿದಿ ಮೂಢಾ ಮನುಜಾ । ಮಾನವ ಜನುಮದಿ ಬಂದೀ ಜಗದಿ ॥*
*ದೇಶದ ಸೇವೆಗೆ ತನು ನೀಡಿದೆಯಾ ।ಭಾಷೆಯ ಏಳ್ಗೆಗೆ ಮನ ಮಾಡಿದೆಯಾ ।*
*ಕಾಸಿಗಾಗಿ ವಂಚಿಸಿ ನಿನ್ನೊಡಲಿನ । ಪೋಷಣೆಗಾಗಿ ದುಡಿದೆಯಲ್ಲದೆ ।"*

ಮುಂದೆ " ಆರ್ತರ ದುಃಖ ಕಡಿಮೆ ಮಾಡಿದೆಯಾ ? ಸ್ವಾರ್ಥದ ಹಂಬಲ ಬಿಟ್ಟೆಯಾ ? ಜನಹಿತ ನೋಡಿದೆಯಾ ? ಮದ ಮತ್ಸರ ತೊರೆದೆಯಾ ? ಹೃದಯವನ್ನು ನಿರ್ಮಲಗೊಳಿಸಿದೆಯಾ ? ಮುದದಿಂದ ನುಡಿದೆಯಾ ? ಗದುಗಿನ ವೀರನಾರಾಯಣನನ್ನು ಒಮ್ಮೆಯಾದರೂ ಸ್ಮರಿಸಿದೆಯಾ ? ಇದನ್ನೆಲ್ಲಾ ಬಿಟ್ಟು ನೀನು ಬರೀ ಧೂರ್ತತನ ತೋರಿದಿ" ಎಂದು ತಮ್ಮ ಕನಲನ್ನು ತೋಡಿಕೊಳ್ಳುತ್ತಾರೆ. "ಸಹಜೀವನ" (೧೯೬೫) ಇನ್ನೊಂದು ನೀತಿ ಪದ್ಯ.

## ೩. ಸ್ವಾಗತ ಗೀತೆಗಳು

೧."ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು - (೧೯೨೪) ಭಾರತದ ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ೧೯೨೪ ರಲ್ಲಿ ನಡೆದ ಬೆಳಗಾವಿಯ ಕಾಂಗ್ರೆಸ್ ಅಧಿವೇಶನದ ಸ್ವಾಗತ ಗೀತೆಯಾಗಿ ಆಯ್ಕೆಯಾದ ಈ ಗೀತೆ ಮುಂದೆ ನಾಡಗೀತೆಯಾಗಿ ಮಾರ್ಪಟ್ಟು ನಾರಾಯಣರಾಯರ ಖ್ಯಾತಿಗೆ ಕಾರಣವಾಯಿತು. ಅರ್ಧ ಶತಮಾನ ಉತ್ತರ ಕನ್ನಡ ನಾಡಿನಲ್ಲಿ ಈ ಗೀತೆಯಿಂದಲೇ ಪ್ರತಿಯೊಂದು ಸಭೆ ಸಮಾರಂಭಗಳು ಪ್ರಾರಂಭವಾಗುತ್ತಿದ್ದವು. ಶಾಲೆಗಳ ಪ್ರಾರ್ಥನೆ ಶುರು ಆಗುತ್ತಿದ್ದವು. ಪಿ. ಕಾಳಿಂಗರಾಯರ "ಉದಯವಾಗಲಿ" ಯಿಂದ ಬೆಂಗಳೂರ ರೇಡಿಯೊ ಕಾರ್ಯಕ್ರಮ ಪ್ರಾರಂಭವಾಗುತ್ತಿದ್ದವು. ಈ ಹಾಡು ಕರ್ನಾಟಕದ ಜನರ ಒಕ್ಕೂಟಕ್ಕೆ ಕರೆಯಿತ್ತು, ಏಕೀಕರಣಕ್ಕೆ ಕಹಳೆಯಾಗಿ, ಕನ್ನಡ ಪ್ರೇಮಕ್ಕೆ ಪಾಂಚಜನ್ಯವಾಗಿ ಒಂದುಗೂಡಿದ ಕರ್ನಾಟಕದ ನಾಂದಿಯಾಯಿತು.

ಏಕೀಕರಣದ ನಂತರ ಈ ಹಾಡನ್ನು 'ಉದಯವಾಯಿತು' ಎಂದು ಹೇಳಬೇಕೆಂಬ ಅಭಿಪ್ರಾಯ ಕೆಲವರದು. ಆದರೆ ನಾರಾಯಣರಾಯರ ಪ್ರಕಾರ 'ಉದಯವಾಗಲಿ'ಎಂದೇ ಇರಬೇಕು. ಇದೊಂದು ಆಶಯ ಹಾರೈಕೆ. 'ಉದಯವಾಯಿತು' ಎಂದರೆ ಆಗಬೇಕಾದದ್ದೆಲ್ಲ ಆಗಿಹೋಯಿತು. ಇನ್ನು ನಾವು ಏನೂ ಮಾಡಬೇಕಾದುದಿಲ್ಲ ಎಂಬ ಆಲಸ್ಯ, ಅಹಂಕಾರ, ಭ್ರಾಂತಿ. ಅವರ ತರ್ಕವನ್ನು ತಿಳಿಯಲೇಬೇಕು. "ಎಷ್ಟೇ ವಯಸ್ಸಿನವರು ಬಂದು ಆಶೀರ್ವಾದ ಕೇಳಿದರೂ "ದೀರ್ಘಾಯುಷಿಯಾಗು" ಎಂದೇ ಅಲ್ಲವೇ ನಾವು ಹಾರೈಸುವುದು, ಹರಸುವುದು ? ಅದೊಂದು ಮಂಗಲಕರ ಮಾತು. ಆ ಹಾರೈಕೆಯಲ್ಲಿ ಅದೆಷ್ಟೊ ಆಶೋತ್ತರಗಳು ಇವೆ. ಗುರಿ ಇದೆ. ಅದೊಂದು ಉಜ್ವಲ ಕ್ರಾಂತಿಯ ವೈಭವದ ಆದರ್ಶ. ಅದರಲ್ಲಿ ಒಂದು ಚಿರಂತನ ಆಶಯ ತುಂಬಿದೆ.

೧೯೭೦ ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ತನ್ನ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಹುಯಿಲಗೋಳ ನಾರಾಯಣರಾಯರ "ಉದಯವಾಗಲಿ" ಗೀತೆಯನ್ನು ಅಧಿಕೃತ ನಾಡಗೀತೆಯ ಪಟ್ಟಿಯಿಂದ ಅಳಿಸಿತು. ಸ್ಥಿತಪ್ರಜ್ಞರಾದ ನಾರಾಯಣರಾಯರಿಗೆ ಇದರಿಂದ ಯಾವ ವ್ಯತ್ಯಾಸವೂ ಆಗಲಿಲ್ಲ.

೨. "ಗೆಲು ಬರಲಿ ಭಾರತದ ಮಾಸಭೆಗೆ " - (೧೯೩೫) ಎಂಬ ೨೨ ಸಾಲಿನ ಈ ಸ್ವಾಗತಗೀತೆಯನ್ನು ಸುವರ್ಣ ಮಹೋತ್ಸವ ಆಚರಿಸಲು ಸೇರಿದ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನ ಅಧಿವೇಶನಕ್ಕಾಗಿ ಹುಯಿಲಗೋಳ ನಾರಾಯಣರಾಯರು ರಚಿಸಿದ್ದಾರೆ.

ಇದರಲ್ಲಿ ರಾಷ್ಟ್ರೀಯ ಏಕತಾಭಾವ, ಅಸ್ಪೃಶ್ಯತೆ ನಿವಾರಣೆಯ ಆಶಯ, ಕರ್ನಾಟಕ ಏಕೀಕರಣದ ಹಂಬಲ, ನಾಡಿನ ಆರ್ಥಿಕ ಭದ್ರತೆಗಾಗಿ ಉದ್ಯೋಗ, ವ್ಯಾಪಾರ, ವ್ಯವಸಾಯಗಳ ಅಭಿವೃದ್ಧಿಯ ಅವಶ್ಯಕತೆ ಇವುಗಳನ್ನು ಬಣ್ಣಿಸಲಾಗಿದೆ. " ಹಳ್ಳಿಗರು ತಾಯಿಬೇರು, ಕೆಲಸಗೇಡೆಂಬ ಕಳ್ಳ ಹುಳುವನು ತಳ್ಳಿ ನೀರುಣಿಸಿ, ತಿಳಿವೆಂಬ ಒಳ್ಳೆಯ ಪರಿಯಲಿ ಫಲವನೀವಂತೆ ತಳ್ಳಿ ಬಳ್ಳಿಯನು ಬೆಳೆಯಿಸಲು ನಿಂತ ಸಬ್ಬಕೆ ತುಂಬ ಗೆಲು ಎಂದು ಹಾರೈಕೆ" ಎನ್ನುತ್ತಾರೆ.

೩. **"ಬನ್ನಿ ಬನ್ನಿ ದಯಮಾಡಿಸಿ " - (೧೯೩೭)** ಜಮಖಂಡಿಯಲ್ಲಿ ೨೨ ನೆಯ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನ ಡಿಸೆಂಬರ ೧೯೩೭ರಲ್ಲಿ ನಡೆಯಿತು. ಆ ಸಮ್ಮೇಳನಕ್ಕಾಗಿ ವಿಶೇಷವಾಗಿ ರಚಿತವಾದ ಸ್ವಾಗತ ಗೀತವಿದು. ಸಾರಂಗ ರಾಗ. ರೂಪಕ ತಾಳದಲ್ಲಿ ರಚಿತವಾದ ಈ ಗೀತೆಯಲ್ಲಿ ಹದಿನಾಲ್ಕು ಸಾಲುಗಳಿವೆ. ಇದರಲ್ಲಿ ಜಮಖಂಡಿ ಪ್ರದೇಶದ ಮಹಿಮೆಯನ್ನು ಬಣ್ಣಿಸಲಾಗಿದೆ. ಜಂಬುಕೇಶನ ಕೃಪೆಯಿರುವ, "ಗದಾಯುದ್ಧ" ರಚಿಸಿದ ಮಹಾಕವಿ ರನ್ನನ ಪ್ರದೇಶವಾಗಿದ್ದು (ಮುಧೋಳವು ಜಮಖಂಡಿಯ ಹತ್ತಿರವಿದೆ), ವಿಭಿನ್ನ ಮತಗಳ ಜನರೊಡನೆ ವೀರಶೈವವು ಸಮರಸವಾಗಿ ಬೆರೆತು ಜೀವನ ನಡೆಸುತ್ತಿದ್ದ ಮತ್ತು ಹಿಂದೆ ಅರಸರಾದ ಚಾಲುಕ್ಯರು ಆಳಿದ ನಾಡು - ಜಮಖಂಡಿ.

*"ರನ್ನ ಕನ್ನಡಕಡರಿ ಹುಡಿಯಾ,ಮುತ್ತಿ ಕಳೆಗೆಡಿಸುವ ತೆರದಿ ಸೇರಿ ।*
*ದನ್ಯ ನುಡಿಯ (ಮರಾಠಿ) ಮೋಹ ಬಿಡಿಸಿ ಕನ್ನಡದಲ್ಲಿ ಹೇವ ಸೂರಿ ॥*
*ಕನ್ನಡ ನುಡಿಯರಿದು ಮೆರೆವ ರನ್ನ ಚೆಲುವ ತನವ ತೋರಿ ।*
*ಉನ್ನತಿಯ ಮಾಳ್ಪ ಮನದಿ ಜಮಖಂಡಿಗೆ ದಯವ ಬೀರಿ ॥ "*

ಎನುವಾಗ ಅವರ ಕನ್ನಡದ ಅಭಿಮಾನವನ್ನು ಗಮನಿಸಬಹುದು.

೪. **"ಸ್ವಾಗತವು ಸ್ವಾಗತವು ಕನ್ನಡದ ಪುತ್ರರಿಗೆ - (೧೯೪೦).** ಬೆಳಗಾವಿಯಲ್ಲಿ ೧೯೪೦ ರಲ್ಲಿ ಜರುಗಿದ ಕರ್ನಾಟಕ ವಿಶ್ವವಿದ್ಯಾಲಯದ ಪರಿಷತ್ತಿಗಾಗಿ ನಾರಾಯಣರಾಯರು ಈ ಸ್ವಾಗತಗೀತೆಯನ್ನು ರಚಿಸಿದ್ದಾರೆ. ಈ ಹಾಡು ಸಾರಂಗ ರಾಗದಲ್ಲಿ ಝಂಪೆ ತಾಳದಲ್ಲಿದೆ.

ಚೊಕ್ಕ ಶಿಕ್ಷಣ ಕೊಟ್ಟು ಅಕ್ಷರಸ್ತರನ್ನು ಬೆಳೆಯಿಸಿ ತಕ್ಕ ನಾಗರಿಕರನ್ನಾಗಿ ಮಾಡಬೇಕು. ಒಳ ಭೇದಗಳನ್ನು ಅವರು ಮರೆಯುವಂತೆ ಮಾಡಿ ಅವರಲ್ಲಿ ಒಕ್ಕಟ್ಟು, ಪ್ರೇಮ ಹುಟ್ಟಿಸಬೇಕು. ಹರಿದು ಹೋದ ಕನ್ನಡ ನಾಡು ಒಂದಾಗಿ ಹೊಸ ಹುರುಪಿನಿಂದ ಎಲ ರೀತಿಯ ಕಾರ್ಯ ನಡೆಸಿ ಯಶ ಪಡೆಯಲಿ ಎಂಬುದು ಅಭಿಲಾಷೆ.

ಬೀಜಕ್ಕೆ ತಕ್ಕಂತೆ ಫಲ. ಉತ್ತಮ ಬೀಜ ಬಿತ್ತಿ ಕನ್ನಡಿಗರನ್ನು ಚೆನ್ನಾಗಿ ಬೆಳೆಸಲು ವಿಶಾಲ ಕರ್ನಾಟಕ ನಿರ್ಮಿಸಲು ಕರ್ನಾಟಕ ವಿಶ್ವವಿದ್ಯಾಲಯ ನಿರ್ಮಾಣ ಅವಶ್ಯಕವಾಗಿದೆ ಎಂದು ಕವಿ ಅಭಿಪ್ರಾಯ ಪಡುತ್ತಾರೆ. ಕವಿಯ ಅಭಿಲಾಷೆಯಂತೆ ಆ ನಂತರ ಧಾರವಾಡದಲ್ಲಿ ೧೯೫೦ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನೆಯಾಯಿತು.

**೫. " ಸ್ವಾಗತವು ಸ್ವಾಗತವು ಸ್ವಾಗತವು ಸಕಲರ್ಗೆ " - (೧೯೪೦) (?)**

ಧಾರವಾಡ ಜಿಲ್ಲೆಯಲ್ಲಿ ಜರುಗಿದ ಕರ್ನಾಟಕ ಸಾಹಿತ್ಯ ಪರಿಷತ್ತಿಗಾಗಿ ಈ ಸ್ವಾಗತಗೀತೆ ರಚಿಸಲಾಯಿತು. ಇದು 'ನಾಟಿ' ರಾಗದಲ್ಲಿ ಝುಂಪೆ ತಾಳದಲ್ಲಿದೆ.

ಕನ್ನಡ ನಾಡಿನ ರಾಜರ ಹಿರಿಮೆಯನ್ನು ವರ್ಣಿಸುತ್ತ ಪಲ್ಲವ, ಚಾಲುಕ್ಯ, ಕದಂಬ, ಗಂಗ, ಬಲ್ಲಾಳ, ರಾಷ್ಟ್ರಕೂಟ, ಪಾಂಡ್ಯ, ವಿಜಯನಗರ ರಾಜರಾಳಿದ ಹೆಮ್ಮೆಯ ನಾಡಿದು ಎಂದು ವರ್ಣಿಸಿದ್ದಾರೆ. ಭಾರತದಲ್ಲಿ ನಾವು ಕನ್ನಡಿಗರಿದ್ದೇವೆ ಎಂಬ ಕವಿಯ ಆಶಯಗಳು ಆಗಿನ ಕಾಲದ ಕನ್ನಡಿಗರ ಆಸೆ ಆಕಾಂಕ್ಷೆಗಳ ಕೈಗನ್ನಡಿಯಾಗಿದೆ.

**೬. "ದಯಮಾಡಿ ದಯಮಾಡಿ ಕನ್ನಡದ ಮನ್ನೆಯರೆ - " (೧೯೬೧).**

ಗದುಗಿನಲ್ಲಿ ೪೩ನೆಯ ಕರ್ನಾಟಕ ಸಾಹಿತ್ಯ ಪರಿಷತ್ತು ಡಿಸೆಂಬರ ೧೯೬೧ ರಲ್ಲಿ ಸೇರಿತ್ತು. ಆ ಪ್ರಸಂಗಕ್ಕಾಗಿ ಬರೆದ ಸ್ವಾಗತ ಗೀತೆಯಿದು. " ಜಯನಯ ತರುವ ತಮ್ಮ ಅರಿವ ಹುಡಿ ಬಿದ್ದು ಗದುಗು ಇನ್ನೂ ಹೆಚ್ಚು ಪಾವನಗೊಳ್ಳಲಿ" ಎಂಬ ವಿಚಾರ ಅಮೋಘವಾಗಿದೆ. ಗದುಗಿನ ಮಹಿಮೆಯು ಸಂಕ್ಷಿಪ್ತವಾಗಿ ಇಲ್ಲಿ ವರ್ಣಿಸಲ್ಪಟ್ಟಿದೆ.

ಗದುಗು ಎಂದ ಕೂಡಲೆ ಸಾಮಾನ್ಯವಾಗಿ ಎಲ್ಲರಿಗೂ ಪರಿಚಿತವಿರುವುದು ವೀರ ನಾರಾಯಣನ ಗುಡಿ. ಆದರೆ ಜಕ್ಕಣನ ಶಿಲ್ಪಕಲೆ ಮೆರೆಸುವ ತ್ರಿಕೂಟೇಶ್ವರ ದೇವಸ್ಥಾನ ತುಂಬಾ ಸುಂದರವಾಗಿದೆ. ಜಗದ್ಗುರು ತೋಂಟದಾರ್ಯರ ಮಠ ಇಲ್ಲಿದೆ. ಕವಿ ಕುಮಾರ-ವ್ಯಾಸ- ಚಾಮರಸರು ಮೆರೆದ ಪ್ರದೇಶವಿದು. ನಾಟ್ಯ ಕಲೆಗೆ ಪ್ರೋತ್ಸಾಹ ಕೊಟ್ಟು ಗದಗಿನಲ್ಲಿ ನಿಯಮಿತವಾಗಿ ಐಶ್ವರ್ಯ- ಸುಖಗಳು ವರ್ಧಿಸುವ ಊರು ಇದು. ನಿರಂತರವಾದ ಕನ್ನಡ ಅಭಿಮಾನ, ಪ್ರೀತಿ ವಿಶ್ವಾಸ ಬೆಳೆಯುತ್ತಿದೆ. ಕೃತು ಋಷಿಯ ಬಿನ್ನಹಕ್ಕೆ ಮನ್ನಿಸಿ ವೀರನಾರಾಯಣನು ಗುದುಗಿನಲ್ಲಿ ನೆಲೆ ನಿಂತಿದ್ದಾನೆ. ಅಂಥ ಪುಣ್ಯ ಕ್ಷೇತ್ರಕ್ಕೆ ತಮಗೆಲ್ಲಾ ಸುಸ್ವಾಗತ, ಎಂದಿದ್ದಾರೆ ಗದುಗಿನ ಅಭಿಮಾನಿ ಕವಿ ನಾರಾಯಣರಾಯರು.

**೭. "ಸ್ವಾಗತ ಸ್ವಾಗತ ಶ್ರೀಗಳ ವೃಂದಕೆ " - (೧೯೬೪)**

ಗದುಗಿನಲ್ಲಿ ಜರುಗಿದ ಮಾಧ್ವ ಮಹಾಮಂಡಲದ ಅಧಿವೇಶನಕ್ಕಾಗಿ

ನಾರಾಯಣರಾಯರು ಈ ಸ್ವಾಗತ ಗೀತೆಯಯನ್ನು ರಚಿಸಿದರು.

ಅಧಿವೇಶನಕ್ಕೆ ಬಂದ ಮಹಾಬುಧರಿಗೆ ನಮಿಸಿ ಗದುಗಿನ ಜನರ ಅಲ್ಪ ಆತಿಥ್ಯವನ್ನು ಸ್ವೀಕರಿಸಲು ಕವಿ ಕೇಳಿಕೊಳ್ಳುತ್ತಾರೆ. ಅಂಥ ಸಂದರ್ಭದಲ್ಲಿ ವ್ಯವಸ್ಥಾಪಕರು ಮಾಡುವ ಏರ್ಪಾಡುಗಳಲ್ಲಿ ಲೋಪ-ದೋಷಗಳಾಗುವದು ಸ್ವಾಭಾವಿಕ. ಅಂಥ ಲೋಪಗಳನ್ನು ಕ್ಷಮಿಸಿ ಕೃಪೆ ಮಾಡಲು ಕೇಳಿ ಬಂದವರಿಗೆ "ಕಡುಮುದ ಕೊಡುವುದು ಭಾಗ್ಯವು ನಮ್ಮದು " ಎಂದಿದ್ದಾರೆ.

ಮಾಧ್ವರನ್ನು ಒಂದಾಗಿಸಲು , ಹೃದಯ ವೈಶಾಲ್ಯ ಬೆಳೆಸಲು ನೆರೆದ ವಿದ್ವಜ್ಜನರಿಗೆ ಅರಿಕೆ ಮಾಡಿಕೊಳ್ಳುತ್ತಾರೆ. ಕುಮಾರವ್ಯಾಸನಿಗೆ ಪ್ರೇರಣೆ ನೀಡಿದ ವೀರನಾರಾಯಣನ ಸನ್ನಿಧಿಗೆ ಸ್ವಾಗತ ಕೋರುತ್ತಾರೆ. ಈ ಹಾಡು ಸಾರಂಗ ರಾಗದಲ್ಲಿದ್ದು ಆದಿತಾಳದಲ್ಲಿ ಬದ್ಧವಾಗಿದೆ.

## ಗದ್ಯ ರಚನೆ

ನಾಟಕ ಹಾಗೂ ಕಾವ್ಯರಚನೆಗೆ ಹೋಲಿಸಿದರೆ ನಾರಾಯಣರಾಯರ ಗದ್ಯ ರಚನೆ ತುಂಬಾ ಕಡಿಮೆ ಎಂದೇ ಹೇಳಬೇಕು.

"ಮೂಡಲು ಹರಿಯಿತು" ಅವರು ಬರೆದ ಏಕೈಕ ಕಾದಂಬರಿ. ಅದರ ಹಸ್ತಪ್ರತಿಯನ್ನು ಓದಲೆಂದು ತೆಗೆದುಕೊಂಡು ಹೋದ ಆತ್ಮೀಯ ಗೆಳೆಯರೊಬ್ಬರು (ಕದಡಿ ಬಾಳ ಕೃಷ್ಣರಾಯರು) ಅದನ್ನು ಮರಳಿ ಕೊಡಲೇ ಇಲ್ಲ.

"ನೆತ್ತರದ ಔತಣವು" ಎಂಬ ಚಿಕ್ಕ ಕಥೆ "ಸಚಿತ್ರ ಭಾರತ" ಎಂಬ ತ್ರೈಮಾಸಿಕ ಪತ್ರಿಕೆಯಲ್ಲಿ ಪ್ರಕಟವಾಗಿತ್ತು (೧೯೧೫). ಇದು ವಿಜಯನಗರದ ಸಾಮ್ರಾಜ್ಯಕ್ಕೆ ಸಂಬಂಧಿಸಿದ ಘಟನೆಯನ್ನು ಕುರಿತ ಐತಿಹಾಸಿಕ ಕಥೆ.

ನಾರಾಯಣರಾಯರು ಅನ್ಯ ಕಥೆಗಳನ್ನು ಬರೆದಿರಬಹುದು ಆದರೆ ಅವು ಎಲ್ಲೂ ಪ್ರಕಟಗೊಂಡಿಲ್ಲ.

ನಾರಾಯಣರಾಯರ ಲೇಖನಗಳು

೧. "ವಿಜಯನಗರದ ಕಾಲದ ಕಲಾ ಕೌಶಲ್ಯ, ಕೈಗಾರಿಕೆಗಳು " - ಈ ಲೇಖನವು "ಅರುಣೋದಯ" ಪತ್ರಿಕೆಯಲ್ಲಿ ೧೫-೧೨-೧೯೩೫ ರಂದು ಪ್ರಕಟವಾಗಿದೆ.

೨. "ಕುಮಾರವ್ಯಾಸನು" - ಎಂಬ ಲೇಖನ "ವಾಗ್ಭೂಷಣ" ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಇದರಲ್ಲಿ ಕುಮಾರವ್ಯಾಸನ ಬಗೆಗೆ ಅವರಿಗಿದ್ದ ಪ್ರಭುತ್ವ ನಿಚ್ಚಳವಾಗಿ ಕಾಣುತ್ತದೆ.

೩. "ಏಳು ಕೊಟಿಗ್ಯೊ" - ಈ ಲೇಖನ 'ಕರ್ನಾಟಕ ಬಂಧು' ಪತ್ರಿಕೆಯಲ್ಲಿ ೮-೧೧-೧೯೫೦ ರಂದು ಪ್ರಕಟವಾಗಿದೆ. ಶಿವನ ಇಲ್ಲವೆ ಮಲ್ಲಾರಿಯ ಭಕ್ತರು "ಏಳು ಕೊಟಿಗ್ಯೊ" ಎಂದು ಏಕೆ ಕೂಗುತ್ತ ದೇವಸ್ಥಾನಕ್ಕೆ ಹೋಗುತ್ತಾರೆ ಎಂಬುದರ ವಿವೇಚನೆ ಇಲ್ಲಿದೆ.

೪. "ಪುರಂದರದಾಸರ ೩೮೮ ನೆಯ ಪುಣ್ಯತಿಥಿ " - ಇದರಲ್ಲಿ ಪುರಂದರದಾಸರ ಸಮಗ್ರ ಜೀವನದ ಒಂದು ಇಣುಕು ನೋಟ ಸಿಗುತ್ತದೆಯಲ್ಲದೆ ಅವರು ರಚಿಸಿದ ೪,೭೫,000 ಪದ್ಯಗಳಲ್ಲಿ ಕಂಡು ಬರುವ ಪ್ರಮುಖ ಲಕ್ಷಣಗಳನ್ನು ಉದಾಹರಣೆಯ ಜೊತೆ ವಿವರಿಸಲಾಗಿದೆ.

೫. "ವ್ಯವಸಾಯಿ ರಂಗಭೂಮಿಯ ಸಮಸ್ಯೆ" - ಈ ಲೇಖನದಲ್ಲಿ ಕರ್ನಾಟಕದಲ್ಲಿ ರಂಗಭೂಮಿಯ ಸ್ತರ ಕಡಿಮೆಯಾದುದಕ್ಕೆ ಕಾರಣಗಳನ್ನು ಹೇಳುತ್ತ ಈ ಸಮಸ್ಯೆಗೆ ಕೆಲವು ಪರಿಹಾರಗಳನ್ನು ಸೂಚಿಸಿದ್ದಾರೆ. ಈ ಲೇಖನ ೧೯೫೫ ರಲ್ಲಿ "ರಂಗಭೂಮಿ" ಪತ್ರಿಕೆಯಲ್ಲಿ ಪ್ರಕಟಿತವಾಗಿದೆ.

೬. "ಲಕ್ಕುಂಡಿ" - ಈ ಲೇಖನ "ಕರ್ನಾಟಕ ಬಂಧು" ಪತ್ರಿಕೆಯಲ್ಲಿ ೧೯೫೬ರಲ್ಲಿ ಪ್ರಕಟವಾಗಿದೆ. ಗದುಗಿನ ಹತ್ತಿರವಿದ್ದ ಚಿಕ್ಕ ಗ್ರಾಮ ಲಕ್ಕುಂಡಿ ತನ್ನ ಐತಿಹಾಸಿಕ ಹಿನ್ನೆಲೆಗೆ ಪ್ರಸಿದ್ಧವಾಗಿದೆ. ಹಿಂದೊಮ್ಮೆ ಹೊಯ್ಸಳರ ರಾಜಧಾನಿಯಾಗಿತ್ತಂತೆ ಈ ಲಕ್ಕುಂಡಿ, ಇಲ್ಲಿ ೧೦೮ ಗುಡಿಗಳು ಹಾಗೂ ೧೦೮ ಬಾವಿಗಳು ಇವೆ. ಇವುಗಳಲ್ಲಿ ಕೆಲವನ್ನು ಪ್ರಸಿದ್ಧ ಶಿಲ್ಪಿ ಜಕ್ಕಣಾಚಾರಿ ಕಟ್ಟಿದ್ದಾನೆ.

೭. "ಮಹಾಕವಿ ಕುಮಾರವ್ಯಾಸನ ಮತ" - ಈ ಲೇಖನ 'ಕರ್ನಾಟಕ ರಾಜ್ಯ' ಪತ್ರಿಕೆಯಲ್ಲಿ ೧-೧-೧೯೬೧ ರಂದು ಸಂಚಿಕೆ ೨೩ ರಲ್ಲಿ ಪ್ರಕಟವಾಗಿದೆ. ಇದರಲ್ಲಿ ಕುಮಾರವ್ಯಾಸನು ಯಾವ ಮತದವನು ಎಂಬ ಮತಭೇದವನ್ನು ಕುರಿತು ಪ್ರತಿಪಾದಿಸಲಾಗಿದೆ. ಇವನು ವೈಷ್ಣವನೋ ರಾಮಾನುಜ ಮತದವನೊ, ಸ್ಮಾರ್ತನೊ, ವೀರಶೈವನೊ ಎಂಬ ವಿವಾದದ ವಿವೇಚನೆಯನ್ನು ಇಲ್ಲಿ ಮಾಡಲಾಗಿದೆ.

೮. "ಪ್ರಚಲಿತ ಸಂಗೀತ ನಾಟಕಗಳನ್ನು ಮೊದಲು ಹುಡುಕಿದವರಾರು ?"- ಈ ಲೇಖನವು "ಕರ್ನಾಟಕ ಬಂಧು" ಪತ್ರಿಕೆಯಲ್ಲಿ ೧೯೬೨ ರಲ್ಲಿ ಪ್ರಕಟವಾಗಿದೆ. ಸಂಗೀತ ನಾಟಕಗಳು ಮೊದಲು ಕನ್ನಡದಲ್ಲಿ ಆರಂಭವಾದವೊ ಅಥವಾ ಮರಾಠಿಯಲ್ಲೊ ಎಂಬ ವಿವಾದಕ್ಕೆ ಪ್ರಮಾಣ ಸಹಿತವಾಗಿ ಕನ್ನಡದ (ಬೆಳಗಾವಿಯ) ಶೇಷಗಿರಿರಾಯರು ಮೊದಲಿಗರು ಎಂಬುದನ್ನು ನಾರಾಯಣರಾಯರು ಸಿದ್ಧಪಡಿಸಿದ್ದಾರೆ. ಅವರು ೧೮೭೧ ರಲ್ಲಿ ಸಂಗೀತನಾಟಕ "ಶಾಕುಂತಲ" ಬರೆದರೆನ್ನುವದಕ್ಕೆ ಪ್ರಮಾಣಗಳಿವೆ.

೯. "ಉತ್ತರ ಕರ್ನಾಟಕದ ರಂಗಭೂಮಿಯ ಸಂಕ್ಷಿಪ್ತ ಇತಿಹಾಸ " - ಈ ಲೇಖನವನ್ನು ನಾರಾಯಣರಾಯರು "ರಂಗಭೂಮಿ" ಪತ್ರಿಕೆಗಾಗಿ ಬರೆದರು. ಇದರಲ್ಲಿ ಉತ್ತರ ಕರ್ನಾಟಕದ ಅನೇಕ ನಾಟಕ ಮಂಡಳಿಗಳನ್ನು ಕುರಿತಾದ ವಿವರಗಳಿವೆ.

೧೦. "ಶ್ರೀ ವೀರನಾರಾಯಣ ಪ್ರಾಸಾದಿಕ ಕೃತುಪುರ ನಾಟಕ ಮಂಡಳಿಯ ಸಂಕ್ಷಿಪ್ತ ಇತಿಹಾಸವು "- ನಾರಾಯಣರಾಯರು ಈ ಲೇಖನದಲ್ಲಿ ಈ ನಾಟಕ ಮಂಡಳಿ ಸ್ಥಾಪಿತವಾದ ಕಾರಣ, ಇದರ ವಿಶೇಷತೆಗಳನ್ನು ಕುರಿತು ಬರೆದಿದ್ದಾರೆ. ನಾರಾಯಣರಾಯರ ಅಜ್ಜ ಉಮಚಗಿ ಲಚ್ಚಪ್ಪನಾಯಕರು ಈ ನಾಟಕ ಮಂಡಳಿಯನ್ನು ೧೮೭೨ ರಲ್ಲಿ ಪ್ರಾರಂಭಿಸಿದರು. ಈ ಲೇಖನ "ರಂಗಭೂಮಿ" ಪತ್ರಿಕೆಯಲ್ಲಿ ಪ್ರಕಟವಾಗಿದೆ.

೧೧. "ರಂಗಭೂಮಿಯ ಹಿರಿಯರು-ಗರೂಡ ಸದಾಶಿವರಾಯರು" - ಗರೂಡ ಸದಾಶಿವರಾಯರ ಜೊತೆ ನಾರಾಯಣರಾಯರ ಸಂಬಂಧ ಅತೀ ಅನ್ಯೋನ್ಯವಾಗಿತ್ತು. ಇಬ್ಬರೂ ರಂಗಭೂಮಿಯಲ್ಲಿ ಸುಧಾರಣೆ ತರುವಲ್ಲಿ ಆಸಕ್ತರು. ಇವರಿಬ್ಬರೂ ನಮ್ಮ (ಪಾಗೆ) ಮನೆತನಕ್ಕೆ ಬೀಗರು. ಸದಾಶಿವರಾಯರ ಮಗ ಶ್ರೀಪಾದರಾವ್ ಗರೂಡ ಅವರಿಬ್ಬರನ್ನೂ 'ನಿರ್ನಿಮಿತ್ತ ಬಂಧುಗಳು' ಎಂದು ಹೇಳುತ್ತಾರೆ. ಈ ಲೇಖನವನ್ನು ಗರೂಡ ಸದಾಶಿವರಾಯರ ನಿಧನದ ನಂತರ ಶ್ರದ್ಧಾಂಜಲಿಯ ರೂಪದಲ್ಲಿ ಬರೆದದ್ದು.

೧೨. "ಲೋಕಮಾನ್ಯರ ಸ್ಮರಣೆಗಳು " - ನಾರಾಯಣರಾಯರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ತೀವ್ರವಾಗಿ ಸ್ಪಂದಿಸಿದವರಲ್ಲೊಬ್ಬರು. ಇವರು ಶಿಕ್ಷಣಕ್ಕಾಗಿ ಪುಣೆಯಲ್ಲಿದ್ದಾಗ ತಿಲಕರ ಪ್ರಭಾವ ಅತಿಯಾಗಿತ್ತು. ಅವರೂ ಅದೇ ಫರ್ಗ್ಯುಸನ್ ಕಾಲೇಜಿನಿಂದ 'ಲಾ' ಪರೀಕ್ಷೆ ಪಾಸಾದವರು ಅವರನ್ನು ಸ್ವಾತಂತ್ರ್ಯ ಸಂಗ್ರಾಮದಲ್ಲಿ

ಕ್ರಿಮಿನಲ್ ಆರೋಪದ ಖಟ್ಲೆಯಲ್ಲಿ ಆಪಾದಿಸಿದ್ದರು. ಸಹಪಾಠಿಗಳೊಡನೆ ನಾರಾಯಣರಾಯರೂ ಕೋರ್ಟಿಗೆ ಈ ಕೇಸು ನೋಡಲು ಹೋಗಿದ್ದರಂತೆ. ಹೈಕೋರ್ಟಿನಲ್ಲಿ ಅಪೀಲು ಮಾಡಿದಾಗ ನಿರ್ದೋಷಿಯೆಂದು ಶಿಕ್ಷೆ ರದ್ದಾಯಿತು. ಗೆಳೆಯರೊಂದಿಗೆ ನಾರಾಯಣರಾಯರು ಪುಣೆಯಲ್ಲಿ ತಿಲಕರ ಮನೆಗೆ ಹೋದರಂತೆ. ಕೇಸಿನಿಂದ ಹೊರ ಬಂದದ್ದಕ್ಕಾಗಿ ಸಂತೋಷ ವ್ಯಕ್ತಪಡಿಸಿ ತಿಲಕರನ್ನು ಅಭಿನಂದಿಸಿದರಂತೆ. ಆಗ ತಿಲಕರು ಹಿರಿಯಣ್ಣನಂತೆ ವಾತ್ಸಲ್ಯದಿಂದ "ಆರೋಗ್ಯ ಕಾಪಾಡಿಕೊಳ್ಳಿ, ಚೆನ್ನಾಗಿ ಅಭ್ಯಾಸ ಮಾಡಿ" ಎಂದು ಹೇಳಿದರಂತೆ. ಮುಂದೆ ೧೯೧೬ ರಲ್ಲಿ ತಿಲಕರು ಗದುಗಿಗೆ ಬಂದರು. ಇದಕ್ಕೆ ಕೆಲಮಟ್ಟಿಗೆ ನಾರಾಯಣರಾಯರೇ ಕಾರಣರು. ಗದುಗಿನಲ್ಲಿ ತಿಲಕರನ್ನು ಸಾರ್ವಜನಿಕ ಸಭೆಯಲ್ಲಿ ಸನ್ಮಾನಿಸಲಾಯಿತು. ಈ ಲೇಖನ ತಿಲಕರ ಸಂಪರ್ಕದ ಆ ರಸಗಳಿಗೆಗಳ ಸ್ಮರಣೆಯನ್ನೊಳಗೊಂಡಿದೆ. ಮುಂದೆ ನಮಗೆಲ್ಲಾ ಈ ಅನುಭವಗಳನ್ನು ಹೇಳುವಾಗಲೂ ನಾನಾ ಅಕ್ಷರಶಃ ಪುಲಕಿತರಾಗುತ್ತಿದ್ದರು.

## ಭಾಷಣಗಳು ಹಾಗೂ ಸಂದರ್ಶನಗಳು

೧. "ದಿ ಮರಾಠಿ ಸ್ಟೇಜ, ಇಟ್ಸ ಪ್ರೆಜೆಂಟ ಕಂಡಿಶನ್ ಆಂಡ್ ಫ್ಯೂಚರ್ ಪ್ರಾಸ್ಪೆಕ್ಟ್ಸ"(The marathi stage, Its present condition and future prospects". (ಇಂಗ್ಲೀಷ್ ಭಾಷಣ)

ಬೆಂಗಳೂರಿನ ಅಮೆಚುರ ಡ್ರಾಮೆಟಿಕ ಅಸೋಸಿಯೆಷನ್ ೧೯೨೧ ರಲ್ಲಿ ಏರ್ಪಡಿಸಿದ ಲಲಿತ ಕಲೆಗಳ ಸಮಾರೋಹವನ್ನು ಶ್ರೀಮತಿ ಸರೋಜಿನಿ ನಾಯಡು ಉದ್ಘಾಟಿಸಿದರು. ಈ ಸಮಾರೋಹದಲ್ಲಿ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ ಅವರು "ಸಾಮಾಜಿಕ ನಾಟಕಗಳು ಹಾಗೂ ಅವುಗಳ ಕಾರ್ಯಕ್ಷೇತ್ರ" ಎಂಬ ಪ್ರಬಂಧವನ್ನು ಪ್ರಸ್ತುತಪಡಿಸಿದರು. ನಾರಾಯಣರಾಯರು ಇಂಗ್ಲೀಷಿನಲ್ಲಿ ಮರಾಠಿ ರಂಗಭೂಮಿಯ ಆಗಿನ ಸ್ಥಿತಿ ಹಾಗೂ ಭವಿಷ್ಯದಲ್ಲಿ ಅದರ ಬೆಳವಣಿಗೆಯ ಬಗ್ಗೆ ಮಾತನಾಡಿದರು.

೨. ವಿಜಾಪುರ ಜಿಲ್ಲೆಯ ನಾಟ್ಯ ಸಮ್ಮೇಲನದ ಅಧ್ಯಕ್ಷೀಯ ಭಾಷಣ (೧೯೨೪) ಸಮ್ಮೇಲನದ ಅಧ್ಯಕ್ಷರಾದ ನಾರಾಯಣರಾಯರು ಕರ್ನಾಟಕದ ನಾಟಕಗಳ ಅವನತಿಗೆ ಕಾರಣಗಳು ಹಾಗೂ ಸುಧಾರಿಸಲು ಬೇಕಾದ ಪ್ರಯತ್ನಗಳನ್ನು ವಿವರಿಸಿದರು.

೩. "ಗಳಗನಾಥರ ಶತಾಬ್ದಿ ಸಮಾರಂಭ" - ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ನಾರಾಯಣರಾಯರು 'ಗಳಗನಾಥ' ಎಂದರೆ ಗಲಗಿನ ಮೇಲೆ ಪ್ರಭುತ್ವ ಉಳ್ಳವರು ಎಂದು ಹೇಳಿ ಅವರನ್ನು ಗೌರವಿಸಿದರು.

೪. ವಿದ್ಯಾರಣ್ಯರ ಪುಣ್ಯತಿಥಿ - ಶಾಂತೇಶ ವಾಚನಾಲಯದಲ್ಲಿ ಮಾಡಿದ ಭಾಷಣ. ಈ ಭಾಷಣದಲ್ಲಿ ವಿದ್ಯಾರಣ್ಯರ ವಿವಿಧ ಕ್ಷೇತ್ರಗಳಲ್ಲಿಯ ಕೊಡುಗೆ, ಅವರ ವ್ಯಕ್ತಿತ್ವದ ಮಹಾನತೆಯನ್ನು ಕುರಿತು ಸೊಗಸಾಗಿ ಮಾತನಾಡಿದರು.

೫. ಕುಮಾರವ್ಯಾಸನ ಬಗ್ಗೆ ಕೊಟ್ಟ ಸಂದರ್ಶನ - ಕುಮಾರವ್ಯಾಸನ ಮೇಲೆ ಇಷ್ಟು ಪ್ರಬುದ್ಧವಾಗಿ ಮಾತನಾಡಲು ನಾರಾಯಣರಾಯರಿಗೆ ಮಾತ್ರ ಸಾಧ್ಯವಿತ್ತು. ಯಾಕೆಂದರೆ ಕುಮಾರವ್ಯಾಸನ ಕುರಿತು ಅವರಿಗಿದ್ದ ಜ್ಞಾನ, ಅವರು ಮಾಡಿದ ಅಭ್ಯಾಸ, ಸಂಶೋಧನೆ ಇನ್ನಾರೂ ಮಾಡಿರಲಾರರು.

೬. ಧಾರವಾಡ ರೇಡಿಯೊ ಕೇಂದ್ರದಲ್ಲಿ ಸಂದರ್ಶನ - ಈ ಸಂದರ್ಶನವನ್ನು ತೆಗೆದುಕೊಂಡವರು ಶ್ರೀ ಎನ್. ಕೆ. ಕುಲಕರ್ಣಿಯವರು. ಇದರಲ್ಲಿ 'ಉದಯವಾಗಲಿ' ಯ ಬಗ್ಗೆ, ಬೆಳಗಾವಿಯ ಕಾಂಗ್ರೆಸ್ ಅಧಿವೇಶನದ ಬಗ್ಗೆ, ಗಾಂಧೀಜೀಯ ಬಗ್ಗೆ ಅನೇಕ 'ವಿಚಾರಗಳನ್ನು ಪ್ರಸಾರಪಡಿಸಿದರು. ಈ ಸಂದರ್ಶನವನ್ನು ಅನೇಕ ಸಲ ಧಾರವಾಡ ಆಕಾಶವಾಣಿಯಿಂದ ಬಿತ್ತರಿಸಲಾಯಿತೆಂದು ಶ್ರೀ ಎನ್. ಕೆ. ಕುಲಕರ್ಣಿಯವರು ಹೇಳಿದರು.

## ೩. ನಾಟಕದ ಗೀಳು ಹಾಗೂ ನಾಟಕ ರಚನೆ

### ರಂಗಭೂಮಿಯ ಕುರಿತು
### ನಾರಾಯಣರಾಯರ ವೈಯಕ್ತಿಕ ವಿಚಾರಗಳು

### ನನ್ನ ನೆನಪುಗಳು

ವಾಡಿಕೆಯಂತೆ ಎಲ್ಲ ಹುಡುಗರಿಗೂ ಆಟನೋಟಗಳನ್ನು ನೋಡುವ ಬಯಕೆಗಳಿದಂತೆ ನಾನು ಹುಡುಗನಿದ್ದಾಗ್ಗೆ ಇದ್ದವು. ಗದುಗಿನಲ್ಲಿ ಎಲ್ಲಿಯಾದರೂ ಗೊಂಬೆಯಾಟ, ಕಿಳ್ಳೇಕೇತನ ಆಟ, ಬಯಲಾಟ, ಯಕ್ಷಗಾನದಾಟ, ದೊಡ್ಡಾಟಗಳು ನಡೆದರೆ ಅಲ್ಲಿ ನಾನು ಹೋಗಲಿಕ್ಕೆ ತಪ್ಪುತ್ತಿದ್ದಿಲ್ಲ. ಬಕ್ಕಣದಲ್ಲಿ ರೊಕ್ಕವಿರುತ್ತಿದ್ದಿಲ್ಲವಾದರಿಂದ ರೊಕ್ಕದ ನಾಟಕಗಳಿಗೆ ಹೋಗುವದಕ್ಕಾಗುತ್ತಿದ್ದಿಲ್ಲ.

ಹಿರಿಯರು ತಮ್ಮ ಸಂಗಡ ಕರೆದುಕೊಂಡು ಹೋದಾಗ್ಗೆ ಮಾತ್ರ ಆಯಾ ನಾಟಕಗಳನ್ನು ನೋಡಲಿಕ್ಕೆ ಸಿಕ್ಕುತ್ತಿತ್ತು.

ಗೊಂಬೆಯಾಟಗಳೆಂದರೆ ಸುಭದ್ರಾಕಲ್ಯಾಣ, ವತ್ಸಲಾಹರಣ ಮುಂತಾದ ಆಖ್ಯಾನಗಳನ್ನು ಗೊಂಬೆಗಳಿಂದಲೆ ಆಡಿಸಿ ತೋರಿಸುತ್ತಿದ್ದರು. ಸುಭದ್ರೆಯ ಪಾತ್ರವನ್ನೆ ತೆಗೆದುಕೊಳ್ಳುವ. ಸುಭದ್ರೆಯ ಗೊಂಬೆಯನ್ನು ಸೂತ್ರಗಳಿಂದಲೆ ಅಭಿನಯಿಸುವಂತೆ ನರ್ತನ ಮುಂತಾದುವುಗಳನ್ನು ಮಾಡಿಸುತ್ತಿದ್ದರು. ಮಾತುಗಳನ್ನು ಆ ಗೊಂಬೆಯನ್ನು ಕುಣಿಸುವವನೆ ಹೇಳುತ್ತಿದ್ದನು. ರಂಗಸ್ಥಳದ ಸಲುವಾಗಿ ಒಂದು ಮಂಚ, ಮಂಚದ ಹಿಂದೆ ಒಂದು ಕರಿ ಪರದೆಯನ್ನು ಎಡಬಲದಲ್ಲಿ ಕಂಬಗಳನ್ನು ನಿಲ್ಲಿಸಿ, ಅಡ್ಡವಾಗಿ ಒಂದು ಗಟ್ಟಿಯಾದ ಬಂಬನ್ನು ಕಟ್ಟಿ ಅದರ ಆಧಾರದ ಮೇಲೆ ಆಡಿಸುವವರು ಆ ಗೂಂಬೆಯನ್ನು ಕುಣಿಸುತ್ತಿದ್ದರು. ಅವನು ತನ್ನ ಕಾಲಲ್ಲಿ ಗೆಜ್ಜೆ ಕಟ್ಟಿಕೊಂಡು ಗೊಂಬೆಯು ಥೈಯೆಂದಾಗ್ಗೆ ತಾನೇ ತನ್ನ ಕಾಲನ್ನು ನೆಲಕ್ಕೆ ಬಡಿಯುತ್ತಿದ್ದನು. ಈ ಪ್ರಕಾರವಾಗಿ ಆ ಗೊಂಬೆಯ ಆಟವು ನಡೆಯುತ್ತಿತ್ತು. ಅದು ಬಹು ಮನೋರಂಜಕವಾಗಿರುತ್ತಿತ್ತೆಂದು ಹೇಳುವ ಕಾರಣವೇ ಇಲ್ಲ.

ನಂತರ ಕಿಳ್ಳಿ ಕೇತನ ಆಟ. ಈ ಆಟದಲ್ಲಿ ವ್ಯವಸ್ಥೆಯು ಇಂತಿರುತ್ತಿತ್ತು:

ಒಂದು ನಾಲ್ಕುಮೊಳ ಎತ್ತರದ ಮಂಟಪ, ಮುಂದಿನ ಮಗ್ಗಲಿಗೆ ಬಿಳಿಯ ಅರಿವೆಯ ಪರದೆ, ಉಳಿದ ಮೂರು ಕಡೆಗಳಲ್ಲಿ ಕರಿ ಅರಿವೆಯ ಪರದೆ, ಒಳಗೆ ಒಂದು ದೀಪ, ಬಣ್ಣದ ತೊಗಲಿನ ಗೊಂಬೆಗಳನ್ನು ರಾಮಚಂದ್ರ ಸೀತಾದೇವಿ ಹನುಮಂತ ಮೊದಲಾದವರೆಂದು ತೋರಿಸಿ ಕುಣಿಸಿ ಮಂಟಪದೊಳಗಿನ ಮನುಷ್ಯರೇ ಆಯಾ ಪಾತ್ರಗಳ ಮಾತುಗಳನ್ನು ಆಡುತ್ತಿದ್ದರು. ನಡುನಡುವೆ ಕಿಳ್ಳಿಕೇತನೆಂಬದೊಂದು ಅಶ್ಲೀಲ ಗೊಂಬೆಯನ್ನು ತರುತ್ತಿದ್ದರು. ಗ್ರಾಮದಲ್ಲಿ ಮಳೆಯಾಗದಿದ್ದರೆ ಈ ಆಟವನ್ನು ಜನಗಳು ಬೇಕಂತಲೆ ಆಡಿಸುತ್ತಿದ್ದರು. ಈ ಆಟವನ್ನು ಆಡಿದರೆ ಮಳೆಯಾಗುವುದೆಂದು ಅವರ ಭಾವನೆ.

ಯಕ್ಷಗಾನದ ಆಟವೆಂದರೆ ಬಯಲಲ್ಲಿ ಒಂದು ಹಂದರವನ್ನು ಹಾಕಿ ಅಟ್ಟವನ್ನು ಕಟ್ಟಿ, ಕಥೆಗಾರನು ಆಯಾ ಆಖ್ಯಾನದ ಪದವನ್ನು ಯಕ್ಷಗಾನದಲ್ಲಿ ಹೇಳುವುದು. ಮತ್ತು ಪಾತ್ರಗಳು ತಾವು ಕಲಿತ ಮಾತುಗಳನ್ನು ಹೇಳುವುದು. ಲಂಕಾದಹನವೆಂಬ ಆಖ್ಯಾನವನ್ನು ನಾನು ನೋಡಿದ್ದು ನೆನಪುಂಟು. ಇದಲ್ಲದೆ ನಮ್ಮ ಒಣೆಯವರಿಗೆ ಈ ಮಾದರಿಯ ಆಟವನ್ನೇ ಬರೆದುಕೊಟ್ಟಿದ್ದೆನು. ಅದರ ಹೆಸರು 'ಇಂದ್ರಜಿತುವಧ', ಇದನ್ನು ಅವರು ಆಡುತ್ತಿದ್ದರು.

ದೊಡ್ಡಾಟ, ಬಯಲಾಟ, ಮೂಡಲಪಾಯದ ಆಟಗಳೆಂದರೆ ಬಯಲಲ್ಲಿ ದೊಡ್ಡ ಹಂದರವನ್ನು ಹಾಕಿ ಅಟ್ಟಕಟ್ಟಿ ಅಟ್ಟದ ಮೇಲೆ ಪಾರ್ವತೀಕಲ್ಯಾಣ, ಬಭ್ರುವಾಹನ ಯುದ್ಧ ಮುಂತಾದವುಗಳನ್ನು ಆಡುವುದು. ಕಥೆಗಾರನು ಹಾಡುವುದು, ಪಾತ್ರಗಳು ಕುಣಿಯುವುದು, ಮಾತುಗಳನ್ನಾಡುವುದು. ಇದರಲ್ಲಿ ವಿಶೇಷ ಹೇಳುವುದೆಂದರೆ ಈಗ ಭರತನಾಟ್ಯ ನೃತ್ಯವೆಂದು ಹೇಳುವ ನೃತ್ಯಗಳನ್ನು ಶಾಸ್ತ್ರಶುದ್ಧವಾಗಿ ಮಾಡಿತೋರಿಸುತ್ತಿದ್ದರು. ಅವುಗಳನ್ನೇ ಈಗಿನವರು ಝಗಝಗಿಸುವ ವೇಷಭೂಷಣಗಳಿಂದ ಅಲಂಕೃತರಾಗಿ ತೋರಿಸುತ್ತಿರುವರು.

ನನ್ನ ಹಿರಿಯರ ಸಂಗಡ ಹೋಗಿ ನೋಡಿದ ನಾಟಕಗಳೆಂದರೆ ವೈ. ಶಾಂತಕವಿಗಳು ರಚಿಸಿದ ಕೀಚಕವಧ, ವತ್ಸಲಾಹರಣ ಮುಂತಾದವುಗಳು. ಇವನ್ನು ನಾಟಕಶಾಲೆಯಲ್ಲಿ ಆಡಿತೋರಿಸುತ್ತಿದ್ದರು. ನಾನು ಬಹಳ ಸಣ್ಣವನಿದ್ದರಿಂದ ನನಗೆ ನೆನಪಿನಲ್ಲಿದ್ದಷ್ಟು ಹೇಳುವೆನು. ಮೊದಲು ಸೂತ್ರಧಾರನು ಬರುವನು. ಅನಂತರ ಅವನ ಸಹಾಯಕ್ಕೆ ಬೇವಿನಗೊಂಚಲುಗಳನ್ನು ಮುಡಿದುಕೊಂಡು ಸವಿಗಾರ ಬಂದು ಅಡ್ಡಡ್ಡ ಕುಣಿಯುವನು. ಅವನ ವಿಶೇಷದಲ್ಲಿ ಶಾಂತಕವಿಗಳ ಪದವಿಂತಿದೆ - ||ಬಂದಾ ಸವಿಗಾರ ಬಂದ| ಬಂದ ಸವಿಗಾರ ಬಂದ || ಬೇವುಗೊಂಚಲ ಮುಡಿದು | ಕುಣಿದು ಕುಣಿದು ದಣಿದು || ಅನಂತರ ಗಣಪತಿ ಸರಸ್ವತಿಯರು ಬಂದು ಆಶೀರ್ವಾದಗಳನ್ನು ಮಾಡುವರು. ಆಮೇಲೆ ನಾಟಕವು ಆರಂಭವಾಗುವುದು.

ಮಹಾರಾಷ್ಟ್ರದಲ್ಲಿ ಸಂಗೀತನಾಟಕಗಳು ಆರಂಭವಾದ ಬಳಿಕ ನಮ್ಮ ಉತ್ತರ ಕರ್ನಾಟಕದಲ್ಲಿಯೂ ಸಂಗೀತ ನಾಟಕಗಳು ಆರಂಭವಾದವು. ರಾಣೆಬೆನ್ನೂರು, ಹಿರೆಹರಕುಣಿ ಮುಂತಾದ ಊರುಗಳಿಂದ ಬಂದು ಸಣ್ಣ ನಾಟಕಶಾಲೆಗಳಲ್ಲಿ ಹರಿಶ್ಚಂದ್ರ, ಚಂದ್ರಹಾಸ ನಾಟಕಗಳನ್ನು ಆಡುತ್ತಿದ್ದರು. ಈ ಸಂಗೀತ ನಾಟಕಗಳನ್ನು ಬಣ್ಣಿಸುವುದು ಅವಶ್ಯಕವಿಲ್ಲ. ಏಕೆಂದರೆ ಈಗ ಅವೇ ಪ್ರಚಾರದಲ್ಲಿದ್ದುದ್ದರಿಂದ ಎಲ್ಲರಿಗೂ ತಿಳಿದ ವಿಷಯವಾಗಿದೆ.

ಆದರೆ ಈ ಮಂಡಳಿಯವರು ಪ್ರಯೋಗಿಸುತ್ತಿದ್ದ ನಾಟಕಗಳಲ್ಲಿ ವೇಷ ಭೂಷಣಗಳು ಕಡಿಮೆ, ಅಭಿನಯವಂತೂ ಇಲ್ಲವೇ ಇಲ್ಲ. ಪಾತ್ರಗಳು ತಾವು ಕಲಿತಂಥ ಮಾತುಗಳನ್ನು ಗಿಳಿಗಳಂತೆ ಹೇಳುವುದು. ಶಿಸ್ತು ಇಲ್ಲ. ಒಮ್ಮೊಮ್ಮೆಯಂತೂ ರಂಗಭೂಮಿಯು ಬಹಳ ಹೊತ್ತು ಹಾಳುಬೀಳುತ್ತಿತ್ತು. ಈ ಅವ್ಯವಸ್ಥಿತವಾದ ನಾಟಕಮಂಡಳಿಗಳನ್ನು ನೋಡಿ ವ್ಯಥೆಗೊಂಡು ಉತ್ತರಕರ್ನಾಟಕದ ರಂಗಭೂಮಿಯ ಮೇಲೆ ಸುಧಾರಣೆಗಳನ್ನು ಮಾಡಬೇಕೆಂದು ವೈ. ವಾ. ಮುದವೀಡು ಕೃಷ್ಣರಾಯರು ಧಾರವಾಡದಲ್ಲಿ ಭರತ ಕಲೋತ್ತೇಜಕ ಸಂಗೀತ ನಾಟಕ ಮಂಡಳಿ ಎಂಬ ಸಂಸ್ಥೆಯನ್ನು

ಸ್ಥಾಪಿಸಿ ಅದರಲ್ಲಿ ಕೇವಲ ಕಲೋಪಾಸಕರಿಗೆ ಅನುವುಮಾಡಿಕೊಟ್ಟು ಚುರುಮರಿಯವರ ಶಕುಂತಲಾ, ಸುಭದ್ರಾಪರಿಣಯ, ಮೃಚ್ಛಕಟಿಕವೆಂಬ ನಾಟಕಗಳನ್ನು ಆಡತೊಡಗಿದರು.

ಈ ಕಾಲದಲ್ಲಿ ನಾನು ಪುಣೆಯಲ್ಲಿ ಫರ್ಗ್ಯುಸನ್ ಕಾಲೇಜದಲ್ಲಿ ಅಭ್ಯಾಸ ಮಾಡುತ್ತಿದ್ದೆನು. ಅಲ್ಲಿಯ ಕನ್ನಡ ವಿದ್ಯಾರ್ಥಿಗಳು ನನ್ನ ಮಿತ್ರರು ಸಾಯಂಕಾಲದಲ್ಲಿ ಒಂದು ಕೋಣೆಯಲ್ಲಿ ಕೂಡಿ ಹರಟೆಹೊಡೆಯುತ್ತಿದ್ದರು. ಆಗ್ಗೆ ಮಾತಿಗೆ ಮಾತು ಹೊರಟು ಕೆಲವರು "ಏನು ಕನ್ನಡ, ಕನ್ನಡ ಭಾಷಾ! ಕನ್ನಡ ನಾಟಕ ಒಂದಾದರೂ ಚಂದವಿದೆಯೇ? ಅದೇ ಮರಾಠೀ ನಾಟಕಗಳನ್ನು ನೋಡಿ, ಭಾಷೆಯನ್ನು ಕೇಳಿರಿ!" ಎಂದು ಕನ್ನಡವನ್ನು ತೆಗಳುತ್ತ ಮರಾಠಿಯನ್ನು ಹೊಗಳುತ್ತಿದ್ದರು. ಅದನ್ನು ಕೇಳಿ ನನಗೆ ಒಳಗಿಂದೊಳಗೆ ಒಂದು ತರದ ವ್ಯಥೆಯಾಗುತ್ತಿತ್ತು. ಮರಾಠೀ ನಾಟಕ, ಕಾದಂಬರಿ, ಮರಾಠೀ ಭಾಷೆಗಳೇನೋ ಒಳ್ಳೆಯ ಮಟ್ಟಿಗೆ ಏರಿದ್ದೇನೋ ನಿಜವಿತ್ತು. ಆದರೆ ಕನ್ನಡದಲ್ಲಿ ಈ ತರದ ಇಳಿವು ಇದ್ದುದರಿಂದ ನನಗೆ ಕೆಡಕೆನಿಸುತ್ತಿತ್ತು. ಆಗ್ಗೆ ನನ್ನಿಂದಾದಷ್ಟು ಕನ್ನಡ ನಾಟಕಗಳನ್ನು ತಕ್ಕರೀತಿಯಲ್ಲಿ ಬರೆದು ಅವುಗಳನ್ನು ಆಡಿಸಿ ತೋರಿಸಬೇಕೆನ್ನಿಸುತ್ತಿತ್ತು.

ಆದುದರಿಂದ ನಾನು ಕೆಲವು ಮರಾಠೀ ನಾಟಕಗಳನ್ನು ನೋಡಲಿಕ್ಕೆ ಹೋಗುತ್ತಿದ್ದೆನು. ಭಾಷೆಯು ಚನ್ನಾಗಿ ತಿಳಿಯುತ್ತಿಲ್ಲವಾದರೂ ಹೋಗಿ ನೋಡಿಬರುತ್ತಿದ್ದೆನು. ಅಲ್ಲಿಯ ಅಚ್ಚುಕಟ್ಟುತನ ಮುಂತಾದವುಗಳನ್ನು ನೋಡಿ ಅಂಥವುಗಳನ್ನು ಕನ್ನಡ ರಂಗಭೂಮಿಯಲ್ಲಿ ರೂಢಿಗೆ ತರಬೇಕೆಂಬ ಹಂಬಲವು ದಿನದಿನಕ್ಕೆ ಬೆಳೆಯುತ್ತಿತ್ತು.

ಸನ್ ೧೯೦೩ ನೇ ಇಸವಿಯಲ್ಲಿ ಕಾಲೇಜದಿಂದ ಗದುಗಿಗೆ ಬಂದಿದ್ದೆನು. ಆಗಿನ ಕಾಲದಲ್ಲಿ ಕೈ. ಶಿರಹಟ್ಟಿ ವೆಂಕೋಬರಾಯರೆಂಬುವವರು ಒಂದು 'ಮಹಾಲಕ್ಷ್ಮಿ ಪ್ರಾಸಾದಿಕ ಕಂಪನಿ'ಯೆಂದು ಒಂದು ಮಂಡಳಿಯನ್ನು ಕರಕೊಂಡು ಗದುಗಿನಲ್ಲಿ ತಮ್ಮ ಪದ್ಮಾವತಿ ಪರಿಣಯವೆಂಬ ನಾಟಕವನ್ನು ಆಡಿದರು. ಅದನ್ನು ನೋಡಲಿಕ್ಕೆ ಹೋಗಿದ್ದೆವು. ಅಲ್ಲಿ ಶಿಸ್ತು ಇದ್ದಿಲ್ಲ. ರಂಗಭೂಮಿಯು ಕೆಲಕೆಲವು ವೇಳೆ ಹಾಳು ಬೀಳುತ್ತಿತ್ತು. ಸಂಗೀತವೇನೋ ಚನ್ನಾಗಿರುತ್ತಿತ್ತು. ಆದರೆ ಅಭಿನಯವಿಲ್ಲ. ಮೈ ಕೈ ಮೋರೆಗಳನ್ನು ಬಿಕ್ಕೊಂಡು ಹಾಡುವುದು, ಮಾತನಾಡುವುದು ಮಾಡುತ್ತಿದ್ದರು. ಅದನ್ನು ನೋಡಿ ನನ್ನ ಮಿತ್ರರು ಹೇಳಿದ ಮಾತುಗಳ ಅರ್ಥವು ನನಗೆ ತಿಳಿಯಿತು. ಮತ್ತೆ ಪುಣೆ, ಮುಂಬಯಿಗಳಿಗೆ ನನ್ನ ವಿದ್ಯಾಭ್ಯಾಸದ ಸಲುವಾಗಿ ಬಂದ ಬಳಿಕ ಕೊಲ್ಹಟಕರ್, ಗಡಕರಿ, ಖಾಡಿಲಕರ ಮುಂತಾದವರು ರಚಿಸಿದ ನಾಟಕಗಳನ್ನು ನೋಡಿ ನಾನು ನಮ್ಮ ಕನ್ನಡ ನಾಟಕಗಳ ಸ್ಥಿತಿಯನ್ನು ಸುಧಾರಿಸಬೇಕೆಂದು ಆತುರನಾದೆ. ಇನ್ನೂ ನನಗೆ ಅನುಕೂಲವಾದ ಪರಿಸ್ಥಿತಿ ಬಂದಿರಲಿಲ್ಲ. ಆದರೂ ಸಂಸ್ಕೃತ ನಾಟಕಗಳನ್ನು ಓದುವ ಚಟವನ್ನು ಹಾಕಿಕೊಂಡೆನು.

ನಾಟಕಗಳು ಹೇಗಿರಬೇಕು, ನಿಯಮಗಳೇನು, ಅಂಕುಗಳೇತಕೆ, ಪ್ರವೇಶಗಳೇಕೆ, ವಿಷ್ಕಂಭಕಗಳ ಉಪಯೋಗವೇನು ಎಂಬ ವಿಷಯಗಳನ್ನು ಅಭ್ಯಾಸಿಸತೊಡಗಿದೆನು.

ಇನ್ನು ನಾನು ಯಾವ ಯಾವ ನಾಟಕಗಳಲ್ಲಿ ಸೋಜಿಗದ ಸಂಗತಿಗಳನ್ನು ನೋಡಿದೆನೆಂಬುವದನ್ನು ಹೇಳುವೆನು.

ನಾನು ಮೊದಲು ನೋಡಿದ ಸಂಗೀತ ನಾಟಕವೆಂದರೆ ಸಂಗೀತ ಹರಿಶ್ಚಂದ್ರ. ಅದರಲ್ಲಿ ಹರಿಶ್ಚಂದ್ರರಾಜನ ವೇಷವು ಹೇಗಿತ್ತೆಂದರೆ, ಒಂದು ಪಾರ್ಸಿ ಉದ್ದನ್ನ ಕೋಟು, ಹಿಂಬಡದವರೆಗೆ ಉದ್ದನ್ನ ಕೋಟು, ಹಿಂಬಡದವರೆಗೆ ಉದ್ದನ್ನ ಚಣ್ಣ, ಕಾಲ್ಗಳಲ್ಲಿ ಕರಿ ಬಣ್ಣದ ಬೂಟುಗಳು, ತಲೆಯ ಮೇಲೆ ರಟ್ಟಿನ ಟೊಪ್ಪಿಗೆ ಅದಕ್ಕೆ ಸಣ್ಣನ್ನ ಬೇಗಡಿಯ ತುರಾಯಿ. ತ್ರೇತಾಯುಗದ ಹರಿಶ್ಚಂದ್ರರಾಜನಿಗೆ ಪಾರ್ಸಿಕೋಟು ಬೂಟುಗಳು ಇದ್ದುದ್ದನ್ನು ನೋಡಿ ಸೋಜಿಗವೆನಿಸಿತು.

ಇನ್ನೊಂದು ಸ್ತ್ರೀ ಸಂಗೀತ ನಾಟಕ ಮಂಡಳಿಯವರು ಚುರುಮರಿ ಶೇಷಗಿರಿರಾಯರ ಶಾಕುಂತಲವನ್ನು ಆಡಿ ತೋರಿಸಿದರು. ಅದರಲ್ಲಿ ಶಕುಂತಲೆಯ ಕಾಲ್ಗಳಲ್ಲಿ ಬೆಳ್ಳಿಯಸರಪಳಿ, ಪೈಜಣ, ಮುಂಗೈಗಳಲ್ಲಿ ಬಂಗಾರದ ಸರಪಳಿ(ತೋಡೆಗಳು), ಮೊಳಕೈಗಳಲ್ಲಿ ಬಂಗಾರದ ವಂಕಿ ನಾಗಮುರಿಗೆಗಳು, ಕೊರಳಿನಲ್ಲಿ ಸರಗಿ ಗೆಜ್ಜೆಟೀಕೆ ಮುತ್ತಿನ ಸರಗಳು ಶೋಭಿಸುತ್ತಿದ್ದವು. ಅವಳಂತೆಯೆ ಅವಳ ಗೆಳತಿಯರಾದ ಅನುಸೂಯೆ ಪ್ರಿಯಂವದೆಯರು ಆಭರಣಗಳನ್ನು ಧರಿಸಿದ್ದರು. ಉಡುವ ಶೀರೆಗಳಂತೂ ಭರ್ಜರಿಯ ರೇಶಿಮೆಯ ಶೀರೆಗಳು. ಯಾವಾಗಲೂ ವನದಲ್ಲಿಯೆ ಜನ್ಮಕಳೆದ ಋಷಿಯ ಸಾಕುಮಗಳಾದ ಶಕುಂತಲೆಯು ಎಂದೂ ಕಾಣದ ಬಂಗಾರದ ವಸ್ತ್ರ ಒಡವೆಗಳನ್ನು ಧರಿಸಿಕೊಂಡು ಬಂದುದು ಆಶ್ಚರ್ಯವಲ್ಲವೇ? ಇದಲ್ಲದೆ ದುಷ್ಯಂತ ರಾಜನಿಗೆ ಅಷ್ಟೊಂದು ಅಲಂಕಾರವಿದ್ದಿಲ್ಲ. ಶಕುಂತಲೆಯ ಕಣ್ಣಲ್ಲಿ ಹೂವಿನ ಎಸಳು ಬಿದ್ದು ನೋವಾದಾಗ್ಗೆ ದುಷ್ಯಂತನು ಅವಳ ಕಣ್ಣಲ್ಲಿ ಊದಿ ಎಸಳನ್ನು ಹೊರಗೆ ಕೆಡವಿದನು. ಆಗ್ಗೆ ದುಷ್ಯಂತನಿಗೂ ಶಕುಂತಲೆಗೂ ಅಂತರವು ನಾಲ್ಕೈದು ಮೊಳವಿದ್ದಿತಿಷ್ಟೇ!

ಮತ್ತೊಂದು ಪಂಢರಪುರದ ವಿಠ್ಠಲನ ಭಕ್ತರಾದ ಜ್ಞಾನದೇವ ನಾಮದೇವ ಮೊದಲಾದವರು ಕಬೀರದಾಸನ ಮನೆಗೋ ಮತ್ತೊಬ್ಬ ಸಂತನ ಮನೆಗೋ ಬೆಟ್ಟಿಗೆ ಹೋಗಿ ಅಲ್ಲಿ ಎಲ್ಲರೂ ಕೂಡಿ ಭಜನೆಗಾರಂಭಿಸಿದರು. ನಾಮದೇವನ ಪಾತ್ರವನ್ನು ವಹಿಸಿದ ನಟನು ತಲೆಯ ಮೇಲೆ ಚಂಡಿಕೆಗೆ ಒಂದು ಅರಿವೆಯ ಚಂಡನ್ನು ತೂಗುಬಿಟ್ಟದ್ದನು. ಅವನು "ಜೈ ಜೈ ವಿಠ್ಠಲ ಜೈ ಜೈ ವಿಠ್ಠಲ" ಎಂದು ಭಜನೆ ಮಾಡುವಾಗ ಆ ಚಂಡು ಅವನ ಹಣೆಗೊಮ್ಮೆ ತಲೆಯ ಹಿಂಬದಿಗೊಮ್ಮೆ ಬಡಿಯುತ್ತಿತ್ತು. ಅದನ್ನು

ನೋಡಿ ಜನರು ನಗುತ್ತಿದ್ದರು . ಅವನು ಹೆಚ್ಚೆಚ್ಚಾಗಿ ಆ ಚಂಡನ್ನು ಕುಣಿಸಿದನು. ಸಂತ ನಾಮದೇವನ ಭಕ್ತಿಯೆತ್ತ? ಈ ನಟನ ಅಭಿನಯವೆತ್ತ? ಇದನ್ನು ನೋಡುವದು ಅಸಹ್ಯವಲ್ಲವೆ?

ಇಂಥ ಅಸಂಬದ್ಧ ಉದಾರಣೆಗಳನ್ನು ಇನ್ನೂ ಬಹಳವಾಗಿ ಕೊಡಬಹುದು. ಆಗಿನ ನಟರಿಗೆ ತಾವು ಯಾವ ಪಾತ್ರವನ್ನು ವಹಿಸಿರುವೆವು, ಆ ಪಾತ್ರಕ್ಕೆ ತಕ್ಕ ವೇಷಭೂಷಣಗಳಾವವು, ತಾವು ಯಾವ ರೀತಿಯಿಂದ ಮಾತನಾಡತಕ್ಕದ್ದು ಎಂಬ ಅರಿವೇ ಇಲ್ಲದಂತೆ ತೋರುತ್ತಿತ್ತು.

ಇದಲ್ಲದೆ ಒಂದು ನಾಟಕಮಂಡಲದಲ್ಲಿ ಮೊದಲು ಪ್ರವೇಶವಾದಾಗಿನಿಂದ ನಾಟಕವು ಮುಗಿಯುವವರೆಗೆ ಪದಗಳನ್ನೇ ಹೇಳುವುದು. ಪದಗಳನ್ನು ನೆನಪಿನಲ್ಲಿಟ್ಟು ಹೇಳಬಹುದು, ಮಾತುಗಳನ್ನು ಹೇಗೆ ಪಾಠಮಾಡಿ ನೆನಪಿನಲ್ಲಿಡುವುದು? ಎಂದು ಉತ್ತರಕೊಡುತ್ತಿದ್ದರು. ಇರಲಿ, ನಾನು ಶಿರಹಟ್ಟಿ ವೆಂಕೋಬರಾಯರ ನಾಟಕ ಮಂಡಳಿ, ವಾಮನರಾವ ಮಾಸ್ತರ, ಕೊಣ್ಣೂರ ನಾಟಕಮಂಡಳಿ, ಗರುಡ ಸದಾಶಿವರಾಯರ ದತ್ತಾತ್ರೇಯ ನಾಟಕ ಮಂಡಳಿ ಮುಂತಾದ ಹೆಸರಾಂತ ನಾಟಕಗಳನ್ನು ನೋಡಿದೆನು. ಇವೆಲ್ಲವನ್ನು ನೋಡಿ ಕನ್ನಡ ನಾಟಕ ಸುಧಾರಣೆಯಾಗುವುದು ಅವಶ್ಯವೆಂದೆನಿಸಿ ಆ ಕಾರ್ಯಕ್ಕೆ ಕೈ ಹಾಕಬೇಕೆಂದು ಬಯಸಿದೆನು. 'ಯಂಗಮೆನ್ಸ ಫುಟ್‌ಬಾಲ್ ಕ್ಲಬ್ಬ ಅಮೇಚೂರ್ಸ'ಎಂಬ ಹೆಸರಿನಿಂದ ಕೆಲವೊಂದು ನಾಟಕಗಳನ್ನು ಆಡಿಸಿದೆನು. ಅವೆಲ್ಲವೂ ನನ್ನ ಮನಸ್ಸಿಗೆ ತಕ್ಕಂತೆ ಆದವೆಂದು ಹೇಳಲಾರೆ. ಆದಷ್ಟು ಮೇಲೆ ಹೇಳಿದ ದೋಷಗಳು ಬರದಂತೆ ಪ್ರಯತ್ನವನ್ನು ಮಾಡಿದೆನು.

ಸಂಗೀತ ನಾಟಕಗಳಲ್ಲಿ ಒಂದು ತರದ ಪ್ರವೃತ್ತಿಯು ಕನ್ನಡ ಮತ್ತು ಮರಾಠೀ ನಾಟಕ ಮಂಡಲಗಳಲ್ಲಿ ಕಂಡು ಬರುತ್ತಿತ್ತು. ಅದಾವುದೆಂದರೆ ಪದಗಳನ್ನು ಹೇಳುವ ರೀತಿ. ನಟನು ಸಂಗೀತ ಎಂದರೆ ಆಯಾ ರಾಗ ತಾಳಗಳ ಬಗ್ಗೆ ಹೆಚ್ಚು ಲಕ್ಷ್ಯಕೊಡುತ್ತಿದ್ದರೆ ಹೊರತು ಆ ಪದಗಳಲ್ಲಿ ಕವಿಯು ಯಾವ ಅರ್ಥವನ್ನು ಇಟ್ಟಿರುವನು, ಅದರ ಅರ್ಥದ ಮರ್ಮವೇನು ಎಂಬುದನ್ನು ಪ್ರೇಕ್ಷಕರಿಗೆ ತಿಳಿಯದಂತೆ ಹೇಳುತ್ತಿದ್ದರು. ಈಗಲಾದರೂ ಹೀಗೆಯೆ ಹೇಳುತ್ತಿದ್ದಾರೆಂದು ನನ್ನ ತಿಳುವಳಿಕೆ. ಈ ದೋಷವನ್ನು ಹೋಗಲಾಡಿಸಲಿಕ್ಕೆ ನಾನು ಪ್ರಯತ್ನಮಾಡಿದೆನು.

ಆದರೆ ಬಹಳೇ ನಾಟಕ ಮಂಡಲಗಳವರು ಪ್ರೇಕ್ಷಕರಲ್ಲಿ ನಾಟಕದ ಬಗ್ಗೆ ರಾಗ ತಾಳಗಳ ಅಭಿರುಚಿಯನ್ನು ಹುಟ್ಟಿಸಿಬಿಟ್ಟದರಿಂದ ನನಗೇನು ಅಷ್ಟೊಂದು ಯಶಸ್ಸು ದೊರೆಯಲಿಲ್ಲ. ಮತ್ತೊಂದು ವಿಶೇಷ ಸಂಗತಿಯೆಂದರೆ ನಮ್ಮ ಕನ್ನಡ ನಾಟಕಮಂಡಳಿಗಳು ಮರಾಠಿ ನಾಟಕಮಂಡಳಿಗಳ ಸಂಗೀತವನ್ನೂ

ವೇಷಭೂಷಣಗಳನ್ನೂ ಅಚ್ಚಳಿಯದೆ ಅನುಕರಣಮಾಡುತ್ತಿದ್ದರಿಂದ ನಮ್ಮ ನಾಟಕಗಳಲ್ಲಿ ಕರ್ನಾಟಕದ ವೈಶಿಷ್ಟ್ಯವೇ ಹೋಗಿಬಿಟ್ಟಿದೆಯೆಂದು ನನ್ನ ಎಣಿಕೆಯಿದೆ.

ಇನ್ನಾದರೂ ನಮ್ಮ ಕನ್ನಡ ನಾಟಕ ಮಂಡಳಿಗಳು ನಮ್ಮ ಕರ್ನಾಟಕದ ವೈಶಿಷ್ಟ್ಯವನ್ನು ಕಾಯ್ದುಕೊಳ್ಳಲಿಕ್ಕೆ ನಮ್ಮ ಕನ್ನಡ ಜನರ ನಡೆ ನುಡಿ, ಪೋಷಾಕು, ರೀತಿನೀತಿ, ಆಚಾರವಿಚಾರಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ನಾಟಕಗಳ ಪ್ರಯೋಗಗಳನ್ನಾರಂಭಿಸಿದರೆ,ನಮ್ಮ ಕರ್ನಾಟಕದ ನಾಟ್ಯಕಲೆಯು ಈಗಿದ್ದ ಕೀಳುಸ್ಥಿತಿಯಿಂದ ಮೇಲೇಳಬಹುದೆಂದು ನಾನು ವಿಶ್ವಾಸದಿಂದ ಹೇಳುತ್ತೇನೆ.

-ಹುಯಿಲುಗೋಳ ನಾರಾಯಣರಾಯರು.

("ಕಲೋಪಾಸಕ ಮಂಡಲದ ಸ್ಮರಣಿಕೆ "ಯಿಂದ.)

**I. ನಾಟಕದ ಹವ್ಯಾಸ :** ಚಿಕ್ಕವರಿದ್ದಾಗ ನಾರಾಯಣರಾಯರಿಗೆ ಬಯಲಾಟ, ದೊಡ್ಡಾಟ, ಕಿಳ್ಳಿಕೇತರ ಆಟ, ಗೊಂಬೆಯಾಟ, ಯಕ್ಷಗಾನ ಎಂದರೆ ಹುಚ್ಚು ಎನ್ನುವಷ್ಟು ಅಚ್ಚು-ಮೆಚ್ಚು, ಇವು ಎಲ್ಲಿ ನಡೆದರೂ ಅಲ್ಲಿ ತಪ್ಪದೆ ಹಾಜರಾಗಿ ಎಲ್ಲರಿಗಿಂತ ಮುಂದೆ ಕುಳಿತು ಅತ್ಯಂತ ಆಸಕ್ತಿಯಿಂದ ನೋಡುತ್ತಿದ್ದರು. ಆಗಿನ ಕಾಲಕ್ಕೆ ಈ ಆಟಗಳ ಪ್ರದರ್ಶನಕ್ಕೆ ಕಾಸು ಕೊಡುವ ಆವಶ್ಯಕತೆಯಿರಲಿಲ್ಲ. ಮನೆಯಲ್ಲಿ ಸುಸಂಸ್ಕೃತ ವಾತಾವರಣವಿದ್ದ ಕಾರಣ ಊರಿಗೆ ಬಂದ ನಾಟಕ ಕಂಪನಿಗಳ ನಾಟಕ ನೋಡವದು ಸಾಮಾನ್ಯವಾಗಿತ್ತು. ಆಗಿನ ಕಾಲಕ್ಕೆ ಹಾಗೆ ನೋಡಿದರೆ ನಾಟಕಗಳೇ ಮನೋರಂಜನೆಯ ಪ್ರಮುಖ ಮಾಧ್ಯಮಗಳಾಗಿದ್ದವು. ಅವರು ಬಾಲಕರಿದ್ದಾಗ ನೋಡಿದ ನಾಟಕಗಳೆಂದರೆ ಶಾಂತ ಕವಿಗಳು ರಚಿಸಿದ "ಕೀಚಕ ವಧೆ ", "ವತ್ಸಲಾ ಹರಣ".

ಆಗಿನ ಕಾಲದಲ್ಲಿ ರಂಗಭೂಮಿಯಲ್ಲಿ ಯಾವ ಸುಧಾರಣೆಗಳೂ ಇರಲಿಲ್ಲ, ಸಂಗೀತ ಪ್ರಧಾನ ನಾಟಕಗಳೇ ಹೆಚ್ಚು, ನಾಟಕಗಳನ್ನು ನೋಡಿ ಬಂದಾಗೆಲ್ಲಾ ಬಾಲಕ ನಾರಾಯಣನಿಗೆ ತಾನೂ ನಾಟಕ ಬರೆಯಬೇಕು, ತಾನೂ ನಾಟಕ ಮಾಡಿಸಬೇಕು ಎಂಬ ಅದಮ್ಯ ಆಶೆ. ಮಾಧ್ಯಮಿಕ ಶಾಲೆಯಲ್ಲಿಯೇ ತಾನು ನೋಡಿದ 'ಲಂಕಾ ದಹನ ' ಎಂಬ ಯಕ್ಷಗಾನದ ಮಾದರಿಯಲ್ಲಿಯೇ "ಇಂದ್ರಜಿತ ವಧೆ" ಎಂಬ ಯಕ್ಷಗಾನ ರೂಪಕವನ್ನೂ ಮತ್ತು "ಗರುಡ ಗರ್ವಭಂಗ" ಎಂಬ ಕಿರು ನಾಟಕವನ್ನೂ ಬರೆದು ಸೋದರ ಶ್ರೀನಿವಾಸ ಹಾಗೂ ಅನ್ಯ ಗೆಳೆಯರೊಂದಿಗೆ ಮನೆಯಲ್ಲೇ ಪ್ರಯೋಗಿಸಿಯೇ ಬಿಟ್ಟ. ಮನೆಯಂಗಳವೇ ರಂಗಭೂಮಿ, ಚಾದರುಗಳೇ ಪರದೆಗಳಾದವು. ಮುಂದೆ ಧಾರವಾಡಕ್ಕೆ ಶಿಕ್ಷಣಕ್ಕಾಗಿ ಹೋದಾಗ ಅವರಲ್ಲಿ ಹುದುಗಿದ್ದ ನಾಟಕದ ಪ್ರತಿಭೆಗೆ ಅಲ್ಲಿಯ ಸ್ಫೂರ್ತಿದಾಯಕ ಸಾರಸ್ವತ ವಾತಾವರಣ ಅನುಕೂಲವಾಗಿ ಪರಿಣಮಿಸಿದವು. ಪ್ರತಿಭೆಯ ಸಂವೇದನೆಗೆ ಸರಿಯಾದ ಗಾಳಿ ಸಿಕ್ಕಾಗ ಗರಿಗೆದರಿ ಹಾರಾಡಿತು.

ಮುಂದೆ ಉಚ್ಚ ಶಿಕ್ಷಣಕ್ಕಾಗಿ ಹೋದದ್ದು ನಾಟಕ ನಗರಿ ಪುಣೆಗೆ. ಬಾಲ್ಯದ ನಾಟಕದ ಗೀಳು ಪುಣೆಯಲ್ಲಿ ಸ್ಫುಟಗೊಂಡಿತು. ಅಲ್ಲಿ ಪ್ರತಿನಿತ್ಯ ಮರಾಠಿ ನಾಟಕಗಳು ನಡೆಯುತ್ತಿದ್ದವು. ಅದರಲ್ಲೂ ಕಿರ್ಲೋಸ್ಕರ ಕಂಪನಿಯ ನಾಟಕಗಳೆಂದರೆ ಜನರಿಗೆ ಎಲ್ಲಿಲ್ಲದ ಹುಚ್ಚು. ನಾಟಕದ ಗೀಳು ಹಿಡಿದ ನಾರಾಯಣರಾಯರನ್ನು ಈಗ ಕೇಳಲೇಬೇಕಿರಲಿಲ್ಲ, ಸಹಪಾಠಿಗಳೊಂದಿಗೆ ಹೋಗಿ ನಾಟಕಗಳನ್ನು ನೋಡುತ್ತಿದ್ದರು. ಮರಾಠಿ ಭಾಷೆಯೇನೂ ಅಷ್ಟೊಂದು ಅರ್ಥವಾಗುತ್ತಿರಲಿಲ್ಲ. ಆದರೆ 'ಭಾಷೆ ಯಾವದೇ ಇರಲಿ ಕಲಾತ್ಮಕವಾದ ಭಾವ ಮುಖ್ಯ' ಎಂಬುದು ಅವರ ನಿಲುವು. ನಾಟಕಗಳನ್ನು ನೋಡಿ ಬಂದ ಮೇಲೆ ಗೆಳೆಯರೆಲ್ಲ ಸೇರಿ ಕೋಣೆಯಲ್ಲಿ ಅವುಗಳ ವಿಮರ್ಶೆ ಮಾಡುತ್ತಿದ್ದರು. ನಾಟಕದ ಕಥಾವಸ್ತು, ಪಾತ್ರಗಳ ಸಮಂಜಸತೆ, ನಟನೆ ಮುಂತಾದ ವಿಷಯಗಳ ಬಗ್ಗೆ ಸ್ವಾರಸ್ಯಕರ ಚರ್ಚೆ ನಡೆಯುತ್ತಿತ್ತು. ಹೀಗೆ ಒಂದು ದಿನ ವಿಮರ್ಶೆ ನಡೆದಾಗ ಕೆಲವು ಸಹಪಾಠಿಗಳು ಮರಾಠಿ ನಾಟಕಗಳನ್ನು ಹೊಗಳಿ ಕನ್ನಡ ನಾಟಕಗಳನ್ನು ತೆಗಳಿ ಮಾತನಾಡಿದರು. ಕನ್ನಡದ ಕಟ್ಟಾ ಅಭಿಮಾನಿ ನಾರಾಯಣರಾಯರಿಗೆ ಇದನ್ನು ಕೇಳಿ ಕಸಿವಿಸಿಯಾಯಿತು. ಆಗಲೂ ಒಳ್ಳೆಯ ಕನ್ನಡ ನಾಟಕಗಳನ್ನು ಬರೆದು ಪ್ರಯೋಗಿಸಬೇಕು ಎಂಬ ಹಂಬಲ ಇಮ್ಮಡಿಯಾಯಿತು.

ಈ ಸಮಯದಲ್ಲಿ ಆದ ಒಂದು ಮೋಜಿನ ಸಂಗತಿಯನ್ನು ನಾನಾ ಯಾವಾಗಲೂ ಹೇಳುತ್ತಿದ್ದರು. ಪುಣೆಯಲ್ಲಿ ಕಾಲೇಜಿನ ವಸತಿ ಗೃಹದಲ್ಲಿದ್ದಾಗ ಹೊರಗೆ ಎಲ್ಲಿ ಹೋಗಬೇಕಾದರೂ ಮೇಲ್ವಿಚಾರಕರ ಪರವಾನಗಿ ಇಲ್ಲದೆ ಹೋಗುವಂತಿರಲಿಲ್ಲ. ಒಂದು ಸಲ ನಾರಾಯಣರು ತಮ್ಮ ಸಹಪಾಠಿಗಳಾದ ರೊದ್ದ ವ್ಯಾಸರಾವ್, ಕೊಪ್ಪಳ ಗುಂಡೇರಾವ್ ಹಾಗೂ ಮಗದಾಳ ಅವರೊಡನೆ "ಸಿಂಹಗಡ ನೋಡಲು ಹೋಗುತ್ತೇವೆ" ಎಂದು ಹೇಳಿ ಪರವಾನಗಿ ತೆಗೆದುಕೊಂಡು, ಬಾಲಗಂಧರ್ವರ "ಸೌಭದ್ರಾ" ನಾಟಕ ನೋಡಲು ಹೋದರಂತೆ. ದುರ್ದೈವಕ್ಕೆ ಅಂದೇ ಅದೇ ನಾಟಕ ನೋಡಲು ಕಾಲೇಜಿನ ಪ್ರಿನ್ಸಿಪಾಲರಾದ ಪರಾಂಜಪೆಯವರೂ ಬಂದಿದ್ದರು. ಅಲ್ಲಿ ಬಂದಿದ್ದ ತಮ್ಮ ವಿದ್ಯಾರ್ಥಿಗಳನ್ನು ಪರಾಂಜಪೆ ಗುರುತಿಸಿದರಂತೆ . ಮಾರನೇ ದಿನ ತಮ್ಮ ಕೋಣೆಗೆ ಕರೆಯಿಸಿ ಬಯ್ದರಂತೆ. ನಾನಾ ಆ ದಿನ ಶಾಲು ಹೊದ್ದುಕೊಂಡು ಹೋಗಿದ್ದರಂತೆ ಅವರ ಗುರುತು ಸಿಗದೆ ಪಾರಾದರಂತೆ. ಉಳಿದಿಬ್ಬರನ್ನೂ ಪ್ರಿನ್ಸಿಪಾಲರು ನಿಯಮ ಉಲ್ಲಂಘಿಸಿದ್ದಕ್ಕೆ ಛೀಮಾರಿ ಹಾಕಿದರಂತೆ. ಕೆಲವು ಮರಾಠಿ ಗೆಳೆಯರು "ನಮ್ಮ ಮರಾಠಿಯಲ್ಲಿಯೇ ಒಳ್ಳೆಯ ನಾಟಕಗಳಿರುವುದು. ನಿಮ್ಮ ಕನ್ನಡದಲ್ಲಿ ಇಂಥ ನಾಟಕಗಳಿವೆಯೆ ?" ಎಂದು ಹಿಯಾಳಿಸಿ ಮಾತನಾಡಿದಾಗ ನಾರಾಯಣರಾಯರಲ್ಲಿ ಇದ್ದ ಕನ್ನಡ ಅಭಿಮಾನವನ್ನು ಕೆರಳಿಸಿದಂತಾಯಿತು. ಆದರಲ್ಲಿ ಸ್ವಲ್ಪಮಟ್ಟಿಗೆ ತಥ್ಯವಿಲ್ಲದಿರಲಿಲ್ಲ. ಕನ್ನಡ ನಾಟಕಗಳು ಆಗ ಸುಧಾರಿಸಿರಲಿಲ್ಲ. ಈ

ಘಟನೆಯಿಂದ ಕನ್ನಡ ನಾಟಕಗಳ ಗುಣಮಟ್ಟ ಹೆಚ್ಚದಿದ್ದರೆ ಕನ್ನಡಕ್ಕೆ ಗೌರವ ಬಾರದೆಂದು ಮನಗಂಡಿದ್ದ ನಾರಾಯಣರಾಯರು ಅಂದೇ ನಿರ್ಧಾರ ತೆಗೆದುಕೊಂಡು ಕಾರ್ಯತತ್ಪರರಾದರು.

ಅವರು ಪದವೀ ಪರೀಕ್ಷೆಗೆ ಇಂಗ್ಲಿಷ ಮತ್ತು ಸಂಸ್ಕೃತ ವಿಷಯಗಳನ್ನು ತೆಗೆದುಕೊಂಡಿದ್ದರು. ಇಂಗ್ಲೀಷಿನಲ್ಲಿ ಶೇಕ್ಸಪಿಯರನ ನಾಟಕಗಳನ್ನೂ, ಸಂಸ್ಕೃತದಲ್ಲಿ, ಕಾಳಿದಾಸ ಮುಂತಾದವರ ನಾಟಕಗಳನ್ನೂ ಪರೀಕ್ಷೆಯ ದೃಷ್ಟಿಯಿಂದ ಮಾತ್ರ ಅಭ್ಯಸಿಸದೆ ಆ ನಾಟಕಗಳ ರೀತಿ, ನೀತಿ, ಸೂತ್ರಗಳನ್ನು ಭಾಷಾ ಸೌಂದರ್ಯವನ್ನೂ ಕೂಲಂಕಷವಾಗಿ ಅಭ್ಯಸಿಸಿದರು, ಅರಗಿಸಿಕೊಂಡರು. ಈ ಪರಿಪಕ್ವವಾದ ರಸಘಟ್ಟಿಯಿಂದ ನಾಟಕ ರಚನೆಗೆ ಬೇಕಾಗುವ ಪಾಂಡಿತ್ಯದ ಹಿನ್ನೆಲೆ ಹಾಗೂ ವಿಚಾರಧಾರೆಯ ವೇದಿಕೆ ಸಿದ್ಧವಾಯಿತು. ಒಂದು ರೀತಿಯಿಂದ ಪುಣೆಯ ವಾಸ್ತವ್ಯ ಅದಕ್ಕೆ ಕಾರಣೀಭೂತವೂ ಹೌದು. ಅವರ ಅಧ್ಯಯನದ ದೃಷ್ಟಿಕೋನ ಅವರಿಗೆ ನಾಟಕದ ತಂತ್ರ ಹಾಗೂ ಕೌಶಲಗಳನ್ನು ನೀಡಿ ಮುಂದೆ ಉತ್ತಮ ನಾಟಕಕಾರರಾಗಲು ಸಹಾಯಕವಾಯಿತು.

ಪುಣೆಯಿಂದ ಉಚ್ಚ ಶಿಕ್ಷಣ ಮುಗಿಸಿಕೊಂಡು ಮುಂದೆ ಗದುಗಿಗೆ ಬಂದು ವಕೀಲಿ ವೃತ್ತಿ ಪ್ರಾರಂಭಿಸಿದರು. ಗದುಗಿಗೆ ಆಗ ಬರುವ ನಾಟಕ ಕಂಪನಿಗಳೆಲ್ಲ ಮರಾಠಿ ಕಂಪನಿಗಳೇ. ಕನ್ನಡ ನಾಟಕ ಇಲ್ಲದ್ದಕ್ಕಾಗಿ ಜನರೂ ಮರಾಠಿ ನಾಟಕಗಳನ್ನೇ ಹೆಚ್ಚಾಗಿ ನೋಡುತ್ತಿದ್ದರು. ಇದನ್ನು ಗಮನಿಸಿದ ನಾರಾಯಣರಾಯರಿಗೆ ಕಳವಳವಾಯಿತು. ಪುಣೆ, ಮುಂಬಯಿಯಲ್ಲಿದ್ದಾಗ ತಯಾರಾಗಿದ್ದ ಅವರ ಮನೋವೃತ್ತಿ, ಮನಸ್ಸಿನಲ್ಲಿ ಆಳವಾಗಿ ಬೇರೂರಿದ ನಾಟಕಗಳ ದೃಶ್ಯಗಳ ತಂತ್ರ, ಅಭಿನಯ, ರಂಗಸಜ್ಜಿಕೆಗಳ ವಿಚಾರ ತರಂಗಗಳು ಅವರ ತಲೆ ತುಂಬಿದ್ದವು.

ಈ ಸಮಯದಲ್ಲಿ ಗದಗಿಗೆ ವಿರಳವಾಗಿ ಒಂದೆರಡು ಕನ್ನಡ ಕಂಪನಿಗಳು ಬರುತ್ತಿದ್ದವೇನೋ ನಿಜ. ಆದರೆ ಅವುಗಳ ಕಳಪೆ ಗುಣಮಟ್ಟ ಜನರನ್ನು ಆಕರ್ಷಿಸುತ್ತಿರಲಿಲ್ಲ. ನನಗಿನ್ನೂ ನೆನಪಿದೆ. ನಮ್ಮ ಮನೆಯ ಜನ ಮರಾಠಿ ನಾಟಕಗಳನ್ನು ನೋಡಲು ಗದಗಿನಿಂದ ಹುಬ್ಬಳ್ಳಿ, ಧಾರವಾಡ, ಬೆಳಗಾವಿ - ವರೆಗೆ ಹೋಗುತ್ತಿದ್ದರು. ಹಳ್ಳಿಯಲ್ಲಿ ತಯಾರಾಗಿ ಬಂದಿದ್ದ ಕನ್ನಡ ಕಂಪನಿಗಳಲ್ಲಿ ನಾಟಕದ ಸ್ತರ ತುಂಬಾ ಕಡಿಮೆಯದಾಗಿರುತ್ತಿತ್ತು. ಅವರು ಕೃತ್ರಿಮತೆಯಿಂದ ನಾಟಕದ ಸಂಭಾಷಣೆಗಳನ್ನು ಕಂಠಪಾಠದಿಂದ ಹೇಳಿಬಿಡುತ್ತಿದ್ದರೇ ಹೊರತು ಅದಕ್ಕೆ ಸರಿಯಾದ ಹಾವಭಾವ, ಮುಖಭಾವ, ನಟನೆ ಯಾವದೂ ಇರುತ್ತಿರಲಿಲ್ಲ. ರಂಗಸಜ್ಜಿಕೆಯಲ್ಲಿ ಯಾವ ಹೊಸತನವೂ ಶಿಸ್ತೂ ಇರುತ್ತಿರಲಿಲ್ಲ. ಅವರ ವೇಷಭೂಷೆಯೂ ಪಾತ್ರಕ್ಕೆ ಸರಿ ಹೋಗುವಂತೆ ಇರುತ್ತಿರಲಿಲ್ಲ. ನಾಟಕ ಪ್ರದರ್ಶನದಲ್ಲೂ ಯಾವ ಶಿಸ್ತೂ, ನಿಯಮಗಳು

ಇರುತ್ತಿರಲಿಲ್ಲ. ಎರಡು ಅಂಕಿನ ನಡುವೆ ತುಂಬಾ ಹೊತ್ತು ರಂಗಮಂಚ ಖಾಲಿ ಬೀಳುತ್ತಿತ್ತು. ಇದಕ್ಕೆ ಹೋಲಿಸಿದಾಗ ಮರಾಠಿ ನಾಟಕದಲ್ಲಿದ್ದ ಅಚ್ಚುಕಟ್ಟುತನ, ರಂಗಸಜ್ಜಿಕೆಯ ಆಕರ್ಷಣೆ, ಒಳ್ಳೇ ನಟನೆ ಜನರ ಮನ ಸೆಳೆದಿದ್ದಲ್ಲಿ ಆಶ್ಚರ್ಯವಿಲ್ಲ.

ಆಗ "ನಾಟಕಗಳಲ್ಲಿ ಅಭಿರುಚಿಯುಳ್ಳ ನಮ್ಮ ಜನಕ್ಕೆ ಒಳ್ಳೆಯ ಕನ್ನಡ ನಾಟಕಗಳನ್ನು ಕೊಟ್ಟರೆ ಈಗ ಮರಾಠಿ ನಾಟಗಳಿಗೆ ಹೋಗುತ್ತಿರುವ ಹಣ ಕನ್ನಡದವರಿಗೆ ಬಂದೀತು ಹಾಗೇ ಇವರ ಗುಣಮಟ್ಟ ಸುಧಾರಿಸಲು ಸಹಾಯವಾಗಬಹುದು" ಎಂದು ಯೋಚಿಸಿದ ನಾರಾಯಣರಾಯರು ಈ ವಿಷಯದಲ್ಲಿ ಗಂಭೀರವಾಗಿ ಯೋಚಿಸತೊಡಗಿದರು. ಕನ್ನಡ ನಾಟಕಗಳ ಆಮೂಲಾಗ್ರ ಬದಲಾವಣೆಗಾಗಿ ಪ್ರಯತ್ನಿಸತೊಡಗಿದರು.

**ನಾಟಕ ರಚನೆ** : ಕನ್ನಡ ನಾಟಕಗಳಲ್ಲಿ ಸಕಾರಾತ್ಮಕ ಕ್ರಾಂತಿಯನ್ನು ತರುವ ನಿರ್ಧಾರ ಕಾರ್ಯರೂಪದಲ್ಲಿ ತರಲು ನಾರಾಯಣರಾಯರಿಗೆ ಅಧಿಕ ಸಮಯವೇನೂ ಹಿಡಿಯಲಿಲ್ಲ. ೧೯೧೦ರಲ್ಲಿ "ವಜ್ರಮುಕುಟ" ವೆಂಬ ನಾಟಕವನ್ನು ಅವರು ಬರೆದರು. ಆದರೆ ಈ ನಾಟಕ ಕೂಡಲೆ ರಂಗಭೂಮಿಗೆ ಬರಲಿಲ್ಲ. ಅದಕ್ಕೆ ಕಾರಣರಾದವರು ಅವರ ಸೋದರಮಾವ ಉಮಚಗಿ ಶೀನಪ್ಪ ನಾಯಕರು. ಸಂಪ್ರದಾಯಸ್ಥರಾದ ಶೀನಪ್ಪನವರಿಗೆ ನಾಟಕ ಆಡುವದೆಂದರೆ ಗೌಣವಾದ ಹವ್ಯಾಸವೆಂದು ಅಭಿಪ್ರಾಯ. ನಾರಾಯಣರಾಯರಿಗೆ ಶೀನಪ್ಪನವರ ಬಗ್ಗೆ ಅತೀವ ಭಯಭಕ್ತಿ. ಹೀಗಾಗಿ ನಾರಾಯಣರಾಯರಿಗೆ ತಾವು ನಾಟಕ ಬರೆದಿರುವದನ್ನು ಬಹಿರಂಗಪಡಿಸಲು ಧೈರ್ಯ ಸಾಲಲಿಲ್ಲ. ಆದರೆ ಇದು ಬಹಿರಂಗವಾಗುವ ಸಮಯ ಒದಗಿ ಬಂತು. ಒಂದು ದಿನ ಮನೆಯಲ್ಲಿ ಕನ್ನಡ ನಾಟಕಗಳ ಬಗ್ಗೆ ಮಾತನಾಡುತ್ತ ಕುಳಿತಾಗ ಶೀನಪ್ಪನಾಯಕರು ಮಾತು ಮಾತಿನಲ್ಲಿ "ಕನ್ನಡದಲ್ಲಿ ನಾಟಕಗಳೇ ವಿರಳ. ಉತ್ತಮ ನಾಟಕಗಳೇ ಇಲ್ಲ. ಹೊಸ ಹೊಸ ನಾಟಕಗಳನ್ನು ಬರೆಯುವವರೂ ಇಲ್ಲ"ಎಂದು ಕಳಕಳಿಯಿಂದ ನುಡಿದರು. ಅಲ್ಲಿಯೇ ಇದ್ದ ನಾರಾಯಣರಾಯರು ಇದನ್ನು ಕೇಳಿ ಧೈರ್ಯ ತಂದುಕೊಂಡು "ನಾನೊಂದು ನಾಟಕವನ್ನು ಬರೆದಿದ್ದೇನೆ" ಎಂದು ಹೇಳಿದರು. ಅಷ್ಟು ಹೇಳುವಾಗ ಅವರ ಮೈಯೆಲ್ಲಾ ಬೆವರಿ ಹೋಗಿತ್ತು. ಆಗ ಶೀನಪ್ಪನವರು ಆಶ್ಚರ್ಯದಿಂದ "ಏನು, ನೀನು ಬರೆದಿರುವಿಯಾ ?" ಎಂದು ಕೇಳಿದರು. ಕೆಳಗೆ ಮುಖ ಮಾಡಿ ಕುಳಿತ ನಾರಾಯಣರಾಯರು ಅಳುಕುತ್ತ ಮುಖ ಮೇಲೆ ಮಾಡಿ ನೋಡಿದರು. ತಮ್ಮನ್ನೇ ತಾವು ನಂಬದಾದರು. ಶೀನಪ್ಪನವರು ಸಂತೋಷದಿಂದ ಮುಗುಳು ನಗುತ್ತಿದ್ದರು. ತಕ್ಷಣ ನಾರಾಯಣರಾರು ಹೋಗಿ "ವಜ್ರಮುಕುಟ" ದ ಹಸ್ತಪ್ರತಿಯನ್ನು ತಂದು ಅವರ ಕೈಗಿತ್ತರು. ಶೀನಪ್ಪನವರು ಈ

ನಾಟಕವನ್ನು ಓದಿ ಸಂತೋಷಪಟ್ಟರು. ನಾರಾಯಣರಾಯರಿಗೆ ಪ್ರೋತ್ಸಾಹ ಕೊಟ್ಟು ಅದನ್ನು ರಂಗಭೂಮಿಗೆ ತರಲು ಸೂಚಿಸಿದರು. ಅಷ್ಟೇ ಅಲ್ಲ ತಾವು ಬೇಕಾದ ಸಹಾಯ ಸಹಕಾರ ನೀಡುವ ಭರವಸೆ ಕೊಟ್ಟರು.

ಇದೇ ವೇಳೆಗೆ ೧೯೦೨ರಲ್ಲಿ ಗದಗಿನಲ್ಲಿ "ಯಂಗ್ ಮೆನ್ಸ ಫುಟಬಾಲ್ ಕ್ಲಬ್" ಎಂಬ ತರುಣ ಆಟಗಾರರ ಸಂಘವನ್ನು ಸ್ಥಾಪಿಸಿದ್ದರು. ನಾರಾಯಣರಾಯರೂ ಈ ಕ್ಲಬ್ಬಿನ ಸದಸ್ಯರು. ಪ್ರತಿವರ್ಷ ಈ ಕ್ಲಬ್ಬಿನ ವಾರ್ಷಿಕೋತ್ಸವವನ್ನು ಆಚರಿಸಲಾಗುತ್ತಿತ್ತು. ಈ ಕ್ಲಬ್ಬಿನ ಸದಸ್ಯರಲ್ಲಿ ನಾರಾಯಣರಾಯರ ತಮ್ಮನಾದ ಶ್ರೀನಿವಾಸರಾಯರು ಒಬ್ಬರು. ಅವರು ಫುಟ್‌ಬಾಲ್ ಆಟದಲ್ಲಿ ಪ್ರವೀಣರಿದ್ದಂತೆ ನಟನೆಯಲ್ಲಿಯೂ ಎತ್ತಿದ ಕೈ. ಕ್ಲಬ್ಬಿನ ಅನ್ಯ ಸದಸ್ಯರಾದ ಸಾಬ ನಾರಾಯಣರಾವ ಹುಯಿಲಗೋಳ, ಗುಡಿ ನಾರಾಯಣಾಚಾರ್ಯರು, ಕೃಷ್ಣಾಚಾರ ಪೂಜಾರ ಮುಂತಾದವರೂ ನಾಟಕ ಕಲೆಯಲ್ಲಿ ಪಾರಂಗತರಾಗಿದ್ದರು. ಹೀಗಾಗಿ ಕ್ಲಬ್ಬಿನ ವಾರ್ಷಿಕೋತ್ಸವದಲ್ಲಿ 'ವಜ್ರಮುಕುಟ' ನಾಟಕ ರಂಗಭೂಮಿಯ ಮೇಲೆ ಪ್ರಯೋಗಿಸಲ್ಪಟ್ಟಿತು. ತಮ್ಮ ಶ್ರೀನಿವಾಸರಾಯರ ಸಂಪೂರ್ಣ ಬೆಂಬಲ ನಾರಾಯಣರಾಯರಿಗೆ ಇತ್ತು. ಬರಬರುತ್ತ ಈ ಸಂಘಟನೆ ಒಂದು ಹವ್ಯಾಸಿ ಕಲಾವಿದರ ನಾಟ್ಯ ಸಂಘವಾಗಿ ಪರಿವರ್ತಿತವಾಯಿತು. ಪ್ರತಿ ವರ್ಷ ನಾರಾಯಣರಾಯರು ಒಂದು ಹೊಸ ನಾಟಕ ಬರೆಯುತ್ತಿದ್ದರು. ಈ ಹವ್ಯಾಸೀ ಕಲಾವಿದರು ಅದನ್ನು ಅಭಿನಯಿಸುತ್ತಿದ್ದರು. ಈ ಕಲಾವಿದರಲ್ಲಿ ಪ್ರಮುಖವಾಗಿದ್ದವರು - ಸರ್ವಶ್ರೀ ಯಲ್ಲಪ್ಪ ಕಂಬಾರ, ಚನ್ನಪ್ಪ ಹುರಕಡ್ಲಿ, ಅಲ್ಲಮ ಪ್ರಭು, ಬುಳ್ಳಾ, ಈರಯ್ಯ ಶಿರಹಟ್ಟಿಮಠ, ಶಿವಪ್ಪ ಮದ್ದಿ, ಕೃಷ್ಣಾಚಾರ ಪೂಜಾರ ಮುಂತಾದವರು. ಇವರಿಗೆ ಸಹಾಯಕರಾಗಿ ವಾಸುದೇವ ಉಮಚಗಿ, ಜಿ.ಜಿ. ವಾಗೆ ಇರುತ್ತಿದ್ದರು. ಈ ರೀತಿ ನಾರಾಯಣರಾಯರ ಮನೋಭಿಲಾಷೆ ನಾಟಕ ಸೇವೆಯ ಮುಖಾಂತರ ಕನ್ನಡ ನಾಡಿನ ಸೇವೆ ಪ್ರಾರಂಭವಾಯಿತು. ಗದುಗಿನ ಜನತೆಯಲ್ಲಿ ಶ್ರೇಷ್ಠ ನಾಟಕಗಳನ್ನು ನೋಡುವ ಪ್ರಜ್ಞೆಯನ್ನು ಬೆಳೆಸುವದರಲ್ಲಿ ನಾರಾಯಣರಾಯರು ಮುಖ್ಯ ಪಾತ್ರ ವಹಿಸಿದರೆಂದು ಹೇಳಬಹುದು.

ನಾರಾಯಣರಾಯರು ಬರೆದ ಒಟ್ಟು ೧೯ ನಾಟಕಗಳಲ್ಲಿ ಎರಡು ನಾಟಕಗಳನ್ನು ಅವರು ವಿದ್ಯಾರ್ಥಿ ಇರುವಾಗಲೇ ಬರೆದಿದ್ದಾರೆ.ಇವರ ಮೂರು ಸಾಮಾಜಿಕ ನಾಟಕಗಳು ಮುದ್ರಿತವಾಗಿವೆ. ಇನ್ನುಳಿದ ೧೩ ನಾಟಕಗಳನ್ನು ಈಗಲಾದರೂ ಮುದ್ರಿಸದೆ ಹೋದರೆ ಅವರ ಪರಿಶ್ರಮವೆಲ್ಲ ವ್ಯರ್ಥವಾಗಿ ಹೋಗಬಹುದು. ಅವರ ಮೂರು ಸಾಮಾಜಿಕ ನಾಟಕಗಳು - 'ಸ್ತ್ರೀಧರ್ಮ ರಹಸ್ಯ', 'ಶಿಕ್ಷಣ ಸಂಭ್ರಮ' ಹಾಗೂ 'ಪತೀತೋದ್ಧಾರ' - ಅವರಿಗೆ " ಆದ್ಯ ಸಾಮಾಜಿಕ ನಾಟಕ ಕರ್ತ" ಎಂಬ ಬಿರುದನ್ನು ತಂದಿವೆ.

## ನಾರಾಯಣರಾಯರು ಬರೆದ ನಾಟಕಗಳು

### ಚಿಕ್ಕ ನಾಟಕಗಳು

೧. ಇಂದ್ರಜಿತ ವಧೆ (ಪೌರಾಣಿಕ) - ಕ್ರಿ.ಶ. ೧೯೦೨ (ವಿದ್ಯಾರ್ಥಿ ಇದ್ದಾಗ)

೨. ಗರುಡ ಗರ್ವಭಂಗ (ಪೌರಾಣಿಕ) - ಕ್ರಿ.ಶ. ೧೯೦೭ (ವಿದ್ಯಾರ್ಥಿ ಇದ್ದಾಗ)

### ಧೀರ್ಘ ನಾಟಕಗಳು

೧. ವಜ್ರಮುಕುಟ (ಕಾಲ್ಪನಿಕ) ಕ್ರಿ.ಶ. ೧೯೧೦

೨. ಪ್ರೇಮಾರ್ಜನ (ಕಾಲ್ಪನಿಕ) - ಕ್ರಿ.ಶ. ೧೯೧೨

೩. ಕನಕ ವಿಲಾಸ (ಕಾಲ್ಪನಿಕ) - ಕ್ರಿ. ಶ. ೧೯೧೩

೪. ಮೋಹ ಲಹರಿ (ಐತಿಹಾಸಿಕ) - ಕ್ರಿ.ಶ. ೧೯೧೪

೫. ಅಜ್ಞಾತವಾಸ (ಐತಿಹಾಸಿಕ) - ಕ್ರಿ.ಶ. ೧೯೧೫

೬. ಪ್ರೇಮವಿಜಯ (ಐತಿಹಾಸಿಕ) - ಕ್ರಿ.ಶ. ೧೯೧೬

೭. ಕುಮಾರರಾಮ (ಐತಿಹಾಸಿಕ) - ಕ್ರಿ.ಶ. ೧೯೧೭

೮. ಭಾರತ ಸಂಧಾನ (ಪೌರಾಣಿಕ) - ಕ್ರಿ.ಶ. ೧೯೧೮

೯. ಸ್ತ್ರೀಧರ್ಮರಹಸ್ಯ (ಸಾಮಾಜಿಕ) - ಕ್ರಿ.ಶ. ೧೯೧೯

೧೦. ಶಿಕ್ಷಣ ಸಂಭ್ರಮ (ಸಾಮಾಜಿಕ) - ಕ್ರಿ.ಶ. ೧೯೨೦

೧೧. ವಿದ್ಯಾರಣ್ಯ (ಐತಿಹಾಸಿಕ) - ಕ್ರಿ.ಶ. ೧೯೨೧

೧೨. ಉತ್ತರ ಗೋಗ್ರಹಣ (ಪೌರಾಣಿಕ) - ಕ್ರಿ.ಶ. ೧೯೨೨

೧೩. ಪತಿತೋದ್ಧಾರ (ಸಾಮಾಜಿಕ) - ಕ್ರಿ.ಶ. ೧೯೨೩

೧೪. ಪುನರಾಗಮನ (ಸಾಮಾಜಿಕ) - ಕ್ರಿ.ಶ ೧೯೪೪

೧೯೨೩ ರಲ್ಲಿ 'ಪತಿತೋದ್ಧಾರ' ಬರೆಯುತ್ತಿದ್ದಾಗಲೇ ಅವರ ತಮ್ಮ ಶ್ರೀನಿವಾಸರಾಯರು ಹಾಗೂ ಸಂಘದ ಅನ್ಯ ಕೆಲ ಸದಸ್ಯರು ಕಾಲವಾದ್ದರಿಂದ ನೊಂದ ನಾರಾಯಣರಾಯರ ಲೇಖನಿ ಮುಂದೋಡದೆ ನಿಂತು ಹೋಯಿತು. ಮುಂದೆ ೧೯೫೨ರಲ್ಲಿ ಆ ನಾಟಕವನ್ನು ಪೂರ್ಣ ಮಾಡಿದರು.

**ನಾರಾಯಣರಾಯರ ನಾಟಕಗಳ ವಿವರ**

"ಇಂದ್ರಜಿತ ವಧೆ" - ತಾವು ನೋಡಿದ 'ಲಂಕಾದಹನ' ಯಕ್ಷಗಾನ ಮಾದರಿಯಲ್ಲಿಯೇ ಬರೆದ ಯಕ್ಷಗಾನ ರೂಪಕ. ಆಗ ಅವರಿನ್ನೂ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿ.

"ಗರುಡ ಗರ್ವಭಂಗ" - ಇದೂ ಕೂಡ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಯಾದಾಗ ಬರೆದ ಕಿರುನಾಟಕ.

ಮುಂದೆ ಅವರು ಬರೆದ ದೀರ್ಘ ನಾಟಕಗಳಲ್ಲಿ ೧೩ ಸಂಗೀತನಾಟಕಗಳು. ಒಂದೇ ಒಂದು ನಾಟಕ "ಭಾರತ ಸಂಧಾನ" ದಲ್ಲಿ ಸಂಗೀತವಿರಲಿಲ್ಲ.

**ದೀರ್ಘನಾಟಕಗಳ ವಿವರ**

೧. **"ವಜ್ರ ಮುಕುಟ" - (೧೯೧೦)** ಇದೊಂದು ಕಾಲ್ಪನಿಕ ನಾಟಕ. ಆರಂಭ ಕೃತಿ. ಈ ನಾಟಕ ವಿಜಯನಗರ ಕಾಲ ಹಾಗೂ ಸನ್ನಿವೇಶಗಳನ್ನು ಒಳಗೊಂಡಿದ್ದು, ಇದು ಕೇವಲ ಕಾಲ್ಪನಿಕವಲ್ಲದೆ ಐತಿಹಾಸಿಕ ಛಾಯೆಯಿದೆ. ರಾಜ್ಯದ ಮೇಲಿನ ಮೋಹವು ಒಬ್ಬ ವ್ಯಕ್ತಿಯನ್ನು ನೀಚತನದ ಎಂಥ ರಸಾತಳಕ್ಕೆ ತಳ್ಳಬಲ್ಲದು ಎಂಬ ಸತ್ಯದ ಚಿತ್ರಣ ಇಲ್ಲಿ ಕಂಡು ಬರುತ್ತದೆ.

೨. **"ಪ್ರೇಮಾರ್ಜನ" - (೧೯೧೨)** - ಕಥಾವಸ್ತುವಿನಲ್ಲಿ ಸಿಂಹರಾಜನು ತನ್ನ ಹಿಂದಿನ ವೈರತ್ವದ ಸೇಡು ತೀರಿಸಿಕೊಳ್ಳಲು ಸುಭೋಧರಾಜನ ರಾಜ್ಯದ ಮೇಲೆ ದಾಳಿ ಮಾಡಿ ಸೋಲಿಸಿ, ಸೆರೆ ಹಿಡಿದು, ಅವನನ್ನು ಮಗನಿಂದ ಅಗಲಿಸುತ್ತಾನೆ. ಸಿಂಹರಾಜನ ಮಂತ್ರಿ ಸುಮತಿಗೆ ರಾಜನ ಈ ನೀತಿ ಹಿಡಿಸದೆ ಅವನಿಗೆ ಪಾಠ ಕಲಿಸಲು ಸಿಂಹರಾಜನ ಮಗ ಮದನನನ್ನು ಬಚ್ಚಿಡಿಸಿ, ಮಗನ ಅಗಲಿಕೆಯಿಂದ ನೊಂದ ಸಿಂಹರಾಜನಿಗೆ ತನ್ನ ತಪ್ಪಿನ ಅರಿವಾಗಿ ಸುಭೋಧರಾಯನನ್ನು ಸೆರೆಯಿಂದ ಮುಕ್ತ ಮಾಡುತ್ತಾನೆ. ಹಾಗೂ ಅವರ ಮಗ ಮೋಹನನಿಗೆ ತನ್ನ ಮಗಳನ್ನು ಕೊಟ್ಟು, ವಿವಾಹ ಮಾಡಿದ್ದಲ್ಲದೆ ತನ್ನ ರಾಜ್ಯವನ್ನೂ ಅವನಿಗೇ ಕೊಟ್ಟು, ತಾನು ಕಾಡಿಗೆ ಹೋಗಲು ನಿರ್ಧರಿಸುತ್ತಾನೆ. ಆಗ ಸುಮತಿ ಬಚ್ಚಿಟ್ಟಿದ್ದ

ರಾಜನ ಮಗನನ್ನು ಕರೆತರಿಸುತ್ತಾನೆ. ಆಗ ರಾಜ ಸಂತೋಷಪಡುತ್ತಾನೆ. ತನಗೆ ಬುದ್ಧಿ ಕಲಿಸಿದ ಸುಮತಿಗೆ ಕೃತಜ್ಞನಾಗುತ್ತಾನೆ.

೩. "ಕನಕ ವಿಲಾಸ" - (೧೯೧೩) ಇದೂ ಕೂಡ ಒಂದು ಕಾಲ್ಪನಿಕ ನಾಟಕ. ಶೀರ್ಷಿಕೆಗೆ ಅನ್ವಯವಾಗಿ ಈ ನಾಟಕದಲ್ಲಿ ಧನ - ಕನಕದ ವಿಲಾಸ ಅಥವಾ ಮದದಿಂದ ಆಗುವ ದುಷ್ಪರಿಣಾಮಗಳನ್ನು ತೋರಿಸುವ ಕಥಾವಸ್ತುವಿದೆ. ಜಂಕಭಟ್ಟ ಹಾಗೂ ರಾಣಿ ಮೋನಿನಿಯರ ಧನದ, ದುರಾಸೆ ಹಾಗೂ ಅವರ ಕುತಂತ್ರಗಳಿಂದ ನಿರಪರಾಧಿಗಳನ್ನು ಅಪರಾಧದ ಜಾಲಕ್ಕೆ ಕೊಂಡೊಯ್ಯುವ, ಮುಗ್ಧರನ್ನು ಸಿರಿಯ ಆಮಿಷದ ಬಲೆಗೆ ಒಡ್ಡುವಂತೆ ಮಾಡುತ್ತವೆ. ಕೊನೆಗೆ ದಮನರಾಯನ ಚಾತುರ್ಯ ಹಾಗೂ ನ್ಯಾಯತತ್ಪರತೆಗಳು ಅವರನ್ನು ಈ ಕೂಪದಿಂದ ಪಾರುಗೊಳಿಸಿ ನಿಜವಾದ ಅಪರಾಧಿಗಳಿಗೆ ಶಿಕ್ಷೆಯಾಗುವಂತೆ ಮಾಡುತ್ತವೆ.

೪. "ಮೋಹ ಲಹರಿ" - (೧೯೧೪) - ಐತಿಹಾಸಿಕ ನಾಟಕ - ವಿಜಯನಗರದ ದೊರೆಯಾದ ದೇವರಾಯನು ಅಕ್ಕಸಾಲಿಗ ನಾಗಪ್ಪನ ಮಗಳಾದ ಪ್ರೀತಳೆಯ ಸೌಂದರ್ಯದ ಬಗ್ಗೆ ಕೇಳಿ ಅವಳಲ್ಲಿ ಮೋಹಿತನಾದನು. ಅನಂತರ ಅವಳನ್ನು ಬಲ್ಲಾಳರಾಯನು ಪ್ರೀತಿಸುತ್ತಿದ್ದ ಪೊನ್ನಲಾದೇವಿಯನ್ನು ಮುದುವೆಯಾದನು. ಇದು ನಾಟಕದ ಸ್ಥೂಲವಾದ ಕಥಾವಸ್ತು.

೫. "ಅಜ್ಞಾತವಾಸ" - (೧೯೧೫) ಐತಿಹಾಸಿಕ ನಾಟಕ - ವಿಜಯನಗರದ ಅರಸನಾದ ನರಸಿಂಗರಾಯನ, ತಿರುಮಲರಾಯನ ಮಾತಿಗೆ ಕಿವಿಗೊಟ್ಟು ತನ್ನ ಮಲಮಕ್ಕಳಾದ ಕೃಷ್ಣದೇವರಾಯ ಹಾಗೂ ಅಚ್ಯುತರಾಯರನ್ನು ಸೆರೆ ಹಿಡಿದು ಕಣ್ಣು ಕೀಳಿಸುವ ಆಜ್ಞೆ ಮಾಡುತ್ತಾನೆ. ನಿಷ್ಠಾವಂತನಾದ ಮಂತ್ರಿ ತಿಮ್ಮರಸನು ತಾನು ಮೊದಲ ರಾಜನಾದ ವೀರಸಂಗರಾಯನಿಗೆ ಕೊಟ್ಟ ವಚನವನ್ನು ಈಡೇರಿಸಲು ಇವರನ್ನು ವಾರಂಗಲ್ಲಿನಲ್ಲಿ ಮರೆಸಿಟ್ಟು, ತಿರುಮಲರಾಯನ ಆಟ ನಡೆಯದಂತೆ ಮಾಡುತ್ತಾನೆ. ನೆರೆಯ ರಾಜ್ಯಗಳ ರಾಜರ ಸಹಾಯವನ್ನು ಪಡೆದು ಕೃಷ್ಣದೇವರಾಯನು ವಿಜಯನಗರವನ್ನು ಮತ್ತೆ ವಶಪಡಿಸಿಕೊಳ್ಳುತ್ತಾನೆ. ಈ ನಡುವೆ ಕೃಷ್ಣದೇವರಾಯನು ತನ್ನ ಅಜ್ಞಾತ ವಾಸದಲ್ಲಿ ತೈಲಪರಾಯನ ಮಗಳಾದ ಚಿನ್ನಮ್ಮನಲ್ಲಿ ಅನುರಕ್ತನಾಗಿ ಅವಳೊಂದಿಗೆ ಪಾಣಿಗ್ರಹಣ ಮಾಡಿಕೊಳ್ಳುವ ಪ್ರಸಂಗವೂ ಬರುತ್ತದೆ.

೬. "ಪ್ರೇಮ ವಿಜಯ" - (೧೯೧೯) ವಿಜಯನಗರದ ರಾಜನಾದ ಕೃಷ್ಣರಾಯನು ಉದಯಗಿರಿ ರಾಜ್ಯದ ದೊರೆ ಪ್ರತಾಪರಾಯನನ್ನು ಸೋಲಿಸಿ ಸೆರೆ ಹಿಡಿಯುತ್ತಾನೆ. ಆಗ ಪ್ರತಾಪರಾಯನ ಮಗಳಾದ ಸಿಂಗಳೆ ಅವಮಾನದ ಸೇಡು ತೀರಿಸಿಕೊಳ್ಳಲು

ಕೃಷ್ಣದೇವರಾಯನನ್ನು ಕೊಲ್ಲುವ ಸಂಚಿನಿಂದ ಪುರುಷ ವೇಷದಲ್ಲಿ ಬಂದು ಸಿಕ್ಕಿಹಾಕಿಕೊಳ್ಳುತ್ತಾಳೆ. ಮುಂದೆ ಅವಳು ಸ್ತ್ರೀಯೆಂದು ಗೊತ್ತಾಗುತ್ತದೆ. ಕೃಷ್ಣದೇವರಾಯ ಹಾಗೂ ಸಿಂಗಳೆ ಪರಸ್ಪರರಲ್ಲಿ ಅನುರಕ್ತರಾಗುತ್ತಾರೆ. ಮುತ್ಸದ್ದಿಯಾದ ತಿಮ್ಮರಸನು ಪ್ರತಾಪರಾಯನನ್ನು ಒಪ್ಪಂದಕ್ಕೆ ಒಪ್ಪಿಸಿ ಕೃಷ್ಣರಾಯ ಹಾಗೂ ಸಿಂಗಳೆಯರ ವಿವಾಹ ಮಾಡುತ್ತಾನೆ. ಯುದ್ಧದಿಂದ ವಿಜಯ ಪಡೆಯದ್ದನ್ನು ಪ್ರೇಮದಿಂದ ಜಯಿಸಿದ್ದಕ್ಕಾಗಿ ಈ ನಾಟಕಕ್ಕೆ "ಪ್ರೇಮ ವಿಜಯ" ಎಂದು ಅನ್ವರ್ಥಕವಾಗಿ ಹೆಸರಿಸಲಾಗಿದೆ.

೭. "ಕುಮಾರ ರಾಮ" - (೧೯೧೭) - ಇದೊಂದು ಐತಿಹಾಸಿಕ ನಾಟಕ. ರಾಜ ಕಂಪಿಲರಾಯನ ಕಿರಿಯ ರಾಣಿ ರತ್ನಾಜಿ ತನ್ನ ಮಲಮಗನಾದ ಕುಮಾರ ರಾಮನಲ್ಲಿ ಅನುರಾಗ ಹೊಂದಿ ಅವನನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತಾಳೆ. ಆಗ ಸೇವಕಿ ಸಂಗಮ್ಮ ಅವಳನ್ನು ತಡೆದಾಗ ಅವಳನ್ನು ಕತ್ತಿಯಿಂದ ಇರಿಯುತ್ತಾಳೆ. ಕುಮಾರರಾಮ ಅವಳಿಗೆ ಪತಿವ್ರತಾ ಧರ್ಮ ತಿಳಿಹೇಳಿದರೂ ಅವಳು ತನ್ನ ಪಟ್ಟು ಬಿಡದಿದ್ದಾಗ ಅಲ್ಲಿಂದ ತಪ್ಪಿಸಿಕೊಂಡು ಬರುತ್ತಾನೆ. ಅವನ ಮಾವ ಬೈಚಪ್ಪ ಅವನಿಗೆ ಕಾಡಿನಲ್ಲಿ ಮರೆಯಾಗಿರಲು ಹೇಳುತ್ತಾನೆ. ರಾಮನ ಹೋಲಿಕೆಯ ರುಂಡವನ್ನು ತಂದು ಕಂಪಿಲನಿಗೆ ತೋರಿಸುತ್ತಾನೆ. ರತ್ನಾಜಿಗೆ ಸೇಡು ತೀರಿದ ಸಂತಸ. ರತ್ನಾಜಿ ಗಂಡನಿಗೆ ಕುಮಾರ ರಾಮನೇ ತನ್ನನ್ನು ಬಲಾತ್ಕರಿಸಲು ಬಂದನೆಂದೂ ಸಂಗಮ್ಮ ತಡೆಯಲು ಅವಳನ್ನು ಇರಿದು ಕೊಂದನೆಂದೂ ಹೇಳುತ್ತಾಳೆ.

ಮುಂದೆ ಮುಸಲ್ಮಾನರು ರಾಜ್ಯದ ಮೇಲೆ ದಂಡೆತ್ತಿ ಬಂದಾಗ ತನ್ನ ಮಗನಿದ್ದರೆ ರಾಜ್ಯವನ್ನು ರಕ್ಷಿಸುತ್ತಿದ್ದನೆಂದು ಕಂಪಿಲನಿಗೆ ಅನಿಸುತ್ತದೆ. ಕುಮಾರರಾಮನಿಗೆ ಕಾಡಿನಲ್ಲಿ ಮುತ್ತಿಗೆಯ ಸುದ್ದಿ ತಿಳಿದಾಗ ಬಂದು ರಾಜ್ಯವನ್ನು ರಕ್ಷಿಸುತ್ತಾನೆ. ಅದೇ ಸಮಯಕ್ಕೆ ಮರೆಯಾಗಿದ್ದ ಸಂಗಮ್ಮನೂ ಬರುತ್ತಾಳೆ. ಇಬ್ಬರಿಂದಲೂ ನಿಜ ಸಂಗತಿಯ ಅರಿವಾದಾಗ ಕಂಪಿಲರಾಯ ಕುಟಿಲ ರಾಣಿ ರತ್ನಾಜಿಯನ್ನು ಹೊರಗೆ ಹಾಕಲು ನಿರ್ಧರಿಸುತ್ತಾನೆ. ಆಗ ಕುಮಾರರಾಮನೇ ಅವನನ್ನು ತಡೆಯುತ್ತಾನೆ. ಕಂಪಿಲರಾಯ ಕುಮಾರರಾಮನಿಗೆ ರಾಜ್ಯವನ್ನು ಒಪ್ಪಿಸುತ್ತಾನೆ.

೮. "ಭಾರತ ಸಂಧಾನ" - (೧೯೧೮) ಮಹಾಭಾರತದ ಉದ್ಯೋಗ ಪರ್ವದ ಒಂದು ಪ್ರಸಂಗವೇ ಈ ನಾಟಕದ ಕಥಾನಕ. ಶ್ರೀ ಕೃಷ್ಣನು ಕೌರವ ಪಾಂಡವರ ನಡುವೆ ಸಂಧಾನಕ್ಕಾಗಿ ಮಾಡಿದ ಪ್ರಯತ್ನ ಹಾಗೂ ವಿಫಲತೆಗಳೇ ನಾಟಕವನ್ನು ನಾರಾಯಣರಾಯರು ಬರೆದಿರಬೇಕು. ಈ ನಾಟಕದಲ್ಲಿ ಅವರು ಬಳಸಿರುವ ವೈಶಿಷ್ಟ್ಯವೆಂದರೆ ನಾಟಕದಲ್ಲಿ ಸಂಗೀತವಿರದೇ ಇದ್ದದ್ದು.

**೯. "ಸ್ತ್ರೀಧರ್ಮ ರಹಸ್ಯ" - (೧೯೧೯)** - ನಾರಾಯಣರಾಯರು ಬರೆದ ಮೊದಲ ಸಾಮಾಜಿಕ ನಾಟಕ. ೧೯೨೧ರಲ್ಲಿ ಪ್ರಕಟವಾಗಿದೆ. ಪಾಶ್ಚಾತ್ಯ ಪ್ರಭಾವಕ್ಕೆ ಕ್ರಮಶಃ ಒಳಗಾಗುತ್ತಿರುವ ನಮ್ಮ ಸಮಾಜದಲ್ಲಿ ಆ ಕಾಲಕ್ಕೆ ನಡೆದ ತುಮುಲ, ಸುಧಾರಣೆಯ ಗಾಳಿ, ಅದರಿಂದ ಸಾಂಪ್ರದಾಯಿಕರಲ್ಲುಂಟಾದ ದ್ವಂದ್ವ, ಪಾಶ್ಚಾತ್ಯರ ಅನುಕರಣೆ ಎಷ್ಟು ಮಟ್ಟಿಗೆ ಹಿತಕರ ಈ ಎಲ್ಲ ಜ್ವಲಂತ ಸಮಸ್ಯೆಗಳ ವಿಶ್ಲೇಷಣೆ ಈ ನಾಟಕದಲ್ಲಿ ಬಿಂಬಿತವಾಗಿದೆ. ಸಮಾಜದಲ್ಲಿ ಸ್ತ್ರೀಯರ ಸ್ಥಾನ - ಮಾನಗಳು ಏನು ? ಇಂಥ ಸಂಕ್ರಾಂತ ಸಮಯದಲ್ಲಿ ಸ್ತ್ರೀಧರ್ಮದ ರಹಸ್ಯವೇನು ? ಎಂದು ಮುಂತಾಗಿ ಪರಿಶೀಲಿಸುತ್ತ ಸ್ತ್ರೀಯರ ಅಂದಿನ ಸ್ಥಿತಿಗತಿ, ಪುರುಷರಿಂದ ಅವರ ಶೋಷಣೆ, ಸ್ತ್ರೀಯರಿಗೆ ಶಿಕ್ಷಣ ಎಷ್ಟು ಅವಶ್ಯ ? ಅವರಿಗೆ ಸ್ವಾತಂತ್ರ್ಯ ಕೊಡಬೇಕೆ ? ಯೇಕೆಂದರೆ "ಸ್ತ್ರೀ ಸ್ವಾತಂತ್ರ್ಯಮನರ್ಹತಿ" ಎಂಬ ಕಾಲವದು. ಹಾಗೇ ಸ್ತ್ರೀ - ಪುರುಷರು ಸಮಾನರೆ ? ಎಂಬ ಅನೇಕ ಪ್ರಶ್ನಾರ್ಥಕಗಳ ಸುತ್ತ ಹೆಣೆದಿದೆ ಈ ನಾಟಕ. ಇಲ್ಲಿ ನಾರಾಯಣರಾಯರು ಸಾಂಪ್ರದಾಯಿಕರಾಗಿದ್ದರೂ ಸುಧಾರಣೆಗೆ, ಹೊಸತನಕ್ಕೆ ವಿರುದ್ಧವಾಗಿರಲಿಲ್ಲ ಎನ್ನುವದು ಸ್ಫುಟವಾಗಿದೆ. ಆದರೆ ಅನುಕರಣೆ ಅಂಧವಾಗಿರದೆ ಸತರ್ಕವಾಗಿ ಸುಧಾರಣೆಯ ಮಾರ್ಗದಲ್ಲಿ ಸಾಗಬೇಕೆಂಬ ಅವರ ಸೂಚನೆ ಬಹುಶಃ ಇಂದಿನ ಪರಿಸ್ಥಿತಿಗೂ ಉಚಿತವಾಗಿದೆ. ಈ ನಾಟಕ ಮುದ್ರಣಗೊಂಡಿದ್ದಲ್ಲದೆ ಅನೇಕ ಸಲ ರಂಗಭೂಮಿಯ ಮೇಲೆ ಇದನ್ನು ಪ್ರಯೋಗಿಸಲಾಗಿದೆ. ಆಗಿನ ಕಾಲಕ್ಕೆ ಅತ್ಯಂತ ಜನಪ್ರಿಯ ನಾಟಕಗಳಲ್ಲೊಂದಾಗಿತ್ತು ಎನ್ನುವದಕ್ಕೆ ತುಂಬಾ ಜನ ಆ ನಾಟಕದ ಹಾಡುಗಳನ್ನು ಹೇಳುತ್ತಿದ್ದುದೇ ಸಾಕ್ಷಿ.

*"ಬೇಕೈ ಸುಧಾರಣೆ ಕೇಳು । ಸ್ತ್ರೀಯರೊಳೆ ।*
*ಸಾಕೀ ಪೋಕರಿತನ ಲೋಕ ರೂಢಿಯ ಬಿಡದೆ ॥*
*ಹಿಂದಿನ ಕಾಲದ ಹಿಂದು ಸಮಾಜದ ।*
*ಬಂಧುರ ನಿಯಮವನೊಂದು ಬಿಡದೆ ಮತ್ತೆ ।*
*ಸಲ್ಲದ ಪಶ್ಚಿಮದಲ್ಲಿಯ ಪದ್ಧತಿ ಹೊಲ್ಲ ।*
*ಬಲ್ಲರು ನಮ್ಮಯ ಸ್ಥಿತಿ ಬರೆದಂತೆ ॥"*

"ಗಂಡಸರಂತೆ ಹೆಂಗಸರೂ ಆಗಲಿಕ್ಕೇ ಬೇಕು ಹೆಂಗಸರು ಮನುಷ್ಯರಲ್ಲವೇ ?" ಎಂಬ ತರ್ಕವೂ ತಲೆದೋರಿತು.

**೧೦. ಶಿಕ್ಷಣ ಸಂಭ್ರಮ - (೧೯೨೦)** - ಈ ನಾಟಕವೂ ಮುದ್ರಣಗೊಂಡಿದೆಯಲ್ಲದೆ ಸಾಕಷ್ಟು ಪ್ರಯೋಗಗಳನ್ನು ಕಂಡಿದೆ. ನಾಟಕ ಆಗಿನ ಕಾಲದ ಜನರ, ಸಮಾಜದ ಒಂದು ಕನ್ನಡಿಯಂತಿದೆ. ಪಾಶ್ಚಾತ್ಯ ಶಿಕ್ಷಣ ಹಾಗೂ ಸಂಸ್ಕೃತಿಯ ಪ್ರಭಾವದಿಂದ ಬದಲಾಗುತ್ತಿರುವ

ಸಂಕ್ರಾಂತ ಕಾಲವದು. ಶಿಕ್ಷಣ ಪಡೆದವರು ಪಾಶ್ಚಾತ್ಯ ವೇಷ ಭೂಷೆ, ಅವರ ಭೋಗಜೀವನ, ಅವರ ಆಹಾರ, ವಿಹಾರಗಳು, ಅವರ ಚಹ ಸೇವನೆ, ಸಿಗರೇಟ್ ಸೇವನೆ, ಮದ್ಯ ಸೇವನೆ ಮುಂತಾದವಕ್ಕೆ ಮನಸೋತು ತಮ್ಮತನವನ್ನು ಕಳೆದುಕೊಂಡು ಆಡಂಬರದ ಜೀವನ ನಡೆಸುತ್ತಿದ್ದುದನ್ನು ಟೀಕಿಸಲಾಗಿದೆ. "ಚಹವ ಕುಡಿಯದ ಬಾಯಿ, ಒಡಕು ಮೆಣಸಿನಕಾಯಿ" ಎಂಬ ಹಾಡುಗಳಿವೆ. ಹೀಗೆ ಅಂದಿನ ಸನ್ನಿವೇಶದಲ್ಲಿ ಆಧುನಿಕ ವಿದ್ಯಾಭ್ಯಾಸ ಉಂಟು ಮಾಡಿದ ದ್ವಂದ್ವಗಳ ಚಿತ್ರಣ ನಾಟಕದ ವಸ್ತುವಾಗಿದೆ.

ಸ್ವದೇಶದ ಆಚಾರ, ವಿಚಾರ, ಧರ್ಮನೀತಿ, ಉದ್ಯೋಗ, ವ್ಯವಸಾಯ ಮುಂತಾದವುಗಳ ಬಗ್ಗೆ ನಮ್ಮ ಜನರಿಗೆ ಶಿಕ್ಷಣ ದೊರೆಯಬೇಕು ಎಂಬದು ನಾಟಕದ ಸಾರಾಂಶ. ಹಾಗೆ ನಮ್ಮ ಸ್ತ್ರೀಯರಲ್ಲಿ ಶಿಕ್ಷಣವೂ ಬೇಕು ಸುಧಾರಣೆಯೂ ಬೇಕು ಎಂಬುದೇ ವಾದ. ಪಾಶ್ಚಾತ್ಯ ಶಿಕ್ಷಣ ಪಡೆದ 'ವರದಾಬಾಯಿ' - "ಶಿಕ್ಷಣವಿಲ್ಲದೇ ಮೂಢ ಭಕ್ತಿಗೊಳಗಾದ ನಮ್ಮ ಹಳೆಯ ಜನರಿಗೆ ಸ್ಯಾನಿಟರಿ ಪ್ರಿನ್ಸಿಪಲ್ಸ ಗೊತ್ತೇ ಇಲ್ಲ"



'ಶಿಕ್ಷಣ ಸಂಭ್ರಮ' ನಾಟಕದ ದೃಶ್ಯ


ಎನ್ನುತ್ತಾಳೆ. "ನಿಜವಾಗಿ ನಮ್ಮ ಹಿಂದುಳಿದ ಸಮಾಜದ ಹೀನಸ್ಥಿತಿಯನ್ನು ಅದರ ಭಾವುಕತನವನ್ನು ನೋಡಿ ನನಗೆ ಬಹಳ ವ್ಯಸನವಾಗುತ್ತದೆ. ಈ ಜನರು ಶಿಕ್ಷಣವನ್ನು ಹೊಂದಿ ಎಂದು ಸುಧಾರಿಸುವರೊ ಅಂದೇ ನಮ್ಮ ದೇಶದ ಏಳಿಗೆಯಾಗುವದು" ಎಂದು ಹೇಳುತ್ತಾಳೆ. ಹೆಂಗಸರ ಶೋಷಣೆ, ತಾವು ಪುರುಷರ ದಾಸಿಯರೆಂಬ ಕೀಳರಿಮೆ ಹೋಗಲು ಶಿಕ್ಷಣ ಒಂದೇ ಮಾರ್ಗ ಎಂದು ಪ್ರತಿಪಾದಿಸಲಾಗಿದೆ. "ಹೌದೌದು ಈ ವೆಸ್ಟರ್ನ ಎಜುಕೇಶನದಿಂದ ನಮ್ಮಲ್ಲಿ ಕಲ್ಪನೆಗಳೇ ಬೇರೆಯಾಗಿ ಹೋಗಿವೆ. ಮನೆಯಲ್ಲಿ ಅಡುಗೆ ಮಾಡುವದು ಸುಶಿಕ್ಷಿತರಿಗೆ ಸಲ್ಲದೆಂದು ನಾನು ತಿಳಿದದ್ದಕ್ಕೆ, ನನ್ನ ದಡ್ಡತನದ ಪರಿಣಾಮವನ್ನು ಈಗ ನಾನೇ ಅನುಭವಿಸುತ್ತಿದ್ದೇನೆ. ಇಂದು ನಾನೂ ಉಪವಾಸ ಅವರೂ ಉಪವಾಸ " - ಎನ್ನುವಾಗ ಪಾಶ್ಚಿಮಾತ್ಯ ಶಿಕ್ಷಣ ಹೊಂದಿದ ಮಹಿಳೆಯರು ನಮ್ಮ ಸಂಸ್ಕೃತಿಯನ್ನು ಮರೆತಿರುವದನ್ನು, ಪಶ್ಚಾತ್ತಾಪ ಪಡುವದನ್ನು ತೋರುತ್ತದೆ. ಈ ನಾಟಕದಲ್ಲಿ ಬೋಧರಾಯನನ್ನು ಆದರ್ಶ ವ್ಯಕ್ತಿಯಾಗಿ ಪ್ರಸ್ತುತಪಡಿಸಿದ್ದಾರೆ ನಾರಾಯಣರಾಯರು. ಅಮೇರಿಕೆಯಲ್ಲಿ ಉನ್ನತ ಶಿಕ್ಷಣ ಪಡೆದು ಬಂದರೂ ಸ್ವದೇಶ ಪ್ರೇಮವನ್ನು, ನಮ್ಮ ಸಂಸ್ಕೃತಿಯನ್ನು ಅವನು ಬಿಟ್ಟುಕೊಟ್ಟಿಲ್ಲ. ಅವನ ಪ್ರಕಾರ ವಿದೇಶೀಯರ ಅಂಧಾನುಕರಣ ತಪ್ಪು. ಪುರುಷರು ತಮ್ಮ ವಂಶ ಪರಂಪರೆಯ ಉದ್ಯೋಗವನ್ನು ಸಮರ್ಪಕವಾಗಿ ನಿರ್ವಹಿಸಲು ಅನುಗುಣವಾದ ಶಿಕ್ಷಣ ಪಡೆಯಬೇಕು. ತನ್ನ ದೇಶದ ದಾಸ್ಯತ್ವದ ಸ್ಥಿತಿ, ಬಡತನಗಳ ಬಗ್ಗೆ ಯೋಚಿಸಿ ಗಾಂಧೀಜಿಯವರ ನೂಲಿನ ರಾಟೆಯಲ್ಲಿ, ಸ್ವಂತ ಉದ್ಯೋಗದಲ್ಲಿ ವಿಶ್ವಾಸ ತೋರುತ್ತಾನೆ. ಅನ್ಯರ ಕಣ್ತೆರೆಯಲು ಯತ್ನಿಸುತ್ತಾನೆ.



ಸಕ್ರವ್ವ : ನೀವು ಅದೀರಲ್ಲ ಠೋಮೋರು 'ಶಿಕ್ಷಣ ಸಂಭ್ರಮ' ನಾಟಕದ ಒಂದು ದೃಶ್ಯ

ಪಾಶ್ಚಾತ್ಯ ಪ್ರಭಾವಕ್ಕೆ ಸಿಲುಕಿದ ಯುವ ಜನಾಂಗದ ಪ್ರತೀಕವಾಗಿ ಬರುವ ಪಾತ್ರಗಳು ಒಂದು ಅತಿರೇಕವಾದರೆ ಅದರ ಪ್ರಭಾವಕ್ಕೆ ಒಳಗಾಗಿಯೂ ತನ್ನತನವನ್ನು ಮರೆಯದೆ ಉಳಿಸಿಕೊಳ್ಳಲು ಯತ್ನಿಸುವ ಭಾರತೀಯ ಸಂಸ್ಕೃತಿಯಲ್ಲಿ ಬೇರು ಬಿಟ್ಟು ಬೆಳೆವ ಪ್ರತೀಕವಾಗಿ ಕಾಣುತ್ತಾನೆ ಬೋಧರಾಯ. ಅಂದಿನ ಸನ್ನಿವೇಶದಲ್ಲಿ ಆಧುನಿಕ ವಿದ್ಯಾಭ್ಯಾಸ ಉಂಟು ಮಾಡಿದ ದ್ವಂದ್ವಗಳ ಚಿತ್ರಣ ಮೂಡಿಸುವಲ್ಲಿ ಸಾಕಷ್ಟು ಯಶಸ್ವಿಯಾಗಿದ್ದಾರೆ ನಾರಾಯಣರಾಯರು. ಇಂಗ್ಲೀಷ ಶಿಕ್ಷಣದ ಪ್ರಭಾವದಿಂದ ಪಾಶ್ಚಾತ್ಯರ ನಡೆನುಡಿಗಳನ್ನು ಸುಧಾರಣೆಯ ನೆಪದಲ್ಲಿ ಅನುಕರಿಸುವದು ಒಂದು ದೃಷ್ಟಿಕೋನವಾದರೆ ಆಧುನಿಕ ಶಿಕ್ಷಣ ಪಡೆದರೂ ಭಾರತೀಯ ಸಂಸ್ಕೃತಿ, ಹಿಂದೂ ಧರ್ಮದ ರೀತಿ ನೀತಿಗಳನ್ನು ಬಿಡದ ದೃಷ್ಟಿಕೋನ ಇನ್ನೊಂದು.

ನಮ್ಮ ಸಂಸ್ಕೃತಿಯಲ್ಲಿದ್ದ ಅಂಧವಿಶ್ವಾಸಗಳನ್ನು ಸರಿಯಾದ ಶಿಕ್ಷಣದಿಂದಲೇ ತೊಲಗಿಸಬಹುದು. ಇದಕ್ಕಾಗಿ ಬರುವ ಸಂಭಾಷಣೆ - "ನಮ್ಮ ಸ್ತ್ರೀಯರಲ್ಲಿ, ಶಿಕ್ಷಣವೂ ಬೇಕು, ಸುಧಾರಣೆಯೂ ಬೇಕು.", "ವತ್ಸಲೆ ಗಂಡನ ಅಧೀನದಲ್ಲಿದ್ದು ದಾಸಾನು ದಾಸಿಯಾಗಿ ಪರತಂತ್ರದಲ್ಲಿಯೇ ತೊಳಲಬೇಕೆಂದು ಅವಳು ತಿಳಿದು ಕೊಂಡಿರಬಹುದು. ನಮ್ಮ ಹೆಣ್ಣುಮಕ್ಕಳಿಗೆ ಚೆನ್ನಾಗಿ ಶಿಕ್ಷಣ ದೊರೆತು ಇಂಥ ಅವಿಚಾರಗಳೆಲ್ಲವೂ ದೂರವಾಗುವ ತನಕ ನಮ್ಮ ಸಮಾಜವೇ ಸುಧಾರಿಸುವದಿಲ್ಲ." ಹೆಣ್ಣುಮಕ್ಕಳ ಜೀವನದಲ್ಲಿ ಸುಧಾರಣೆಗಳು ಅತ್ಯಗತ್ಯ ಎಂದು ಎತ್ತಿ ತೋರಿದ್ದಾರೆ.



ತಿರಕ : ನಿಲ್ಲು, ಒಂದು ಕೈ ನೋಡಿ ಬಿಡುತ್ತೇನೆ. 'ಶಿಕ್ಷಣ ಸಂಭ್ರಮ' ನಾಟಕದ ಮತ್ತೊಂದು ದೃಶ್ಯ.

*"ಬೇಕೌ ಪ್ರೌಢ ವಿವಾಹಕಿನ್ನು ವಿಧವಾಲಗ್ನಾದಿಗುತ್ತೇಜನಂ ।*
*ಬೇಕೌ ಬಾಲ ವಿವಾಹಕಂ ಮುದುಕರಾಲಗ್ನಕ್ಕೆ ನಿರ್ಬಂಧನಂ ।*
*ಬೇಕೌ ಸ್ತ್ರೀ ಜನಕುತ್ತಮರ್ಗೆ ದೊರೆವಾ ವಿದ್ಯಾನಿದಾನಂಕರಂ ।*
*ಬೇಕೌ ಸ್ತ್ರೀಗೆ ಸಮಾನಾಧಿಕಾರಮದಕಂ ಬೇಕೌ ಸದಾಸಮ್ಮತಂ ॥ "*

ಈ ಹಾಡಿನ ಮೂಲಕ ಮಹಿಳೆಯರಿಗೆ ಆಗಬೇಕಾದ ಸುಧಾರಣೆಗಳನ್ನು ವಿವೇಚಿಸಿದ್ದಾರೆ. ಒಟ್ಟಿಗೆ ಇಡೀ ನಾಟಕದಲ್ಲಿ ಶಿಕ್ಷಣದ ನಕಾರಾತ್ಮಕ ಪ್ರಭಾವಗಳಿಂದ ವಿವೇಚಿಸಿದ್ದಾರೆ.

ಒಟ್ಟಿಗೆ ಇಡೀ ನಾಟಕದಲ್ಲಿ ಶಿಕ್ಷಣದ ನಕಾರಾತ್ಮಕ ಪ್ರಭಾವಗಳಿಂದ ಹೊರಬಂದು ಅದರ ಸಕಾರಾತ್ಮಕ ಉಪಯೋಗವನ್ನು ಒತ್ತಿ ಹೇಳಲಾಗಿದೆ. ಶಿಕ್ಷಣದಿಂದ ನಮ್ಮ ಜೀವನವನ್ನು ಸತರ್ಕವಾಗಿ ಸಾಗಿಸಬೇಕೆಂಬುದೇ ನಾಟಕದ ಸಾರಾಂಶ.


೧೧. "ವಿದ್ಯಾರಣ್ಯ" - (೧೯೨೧) - ಐತಿಹಾಸಿಕ ನಾಟಕ. ನಾರಾಯಣರಾಯರಿಗೆ ಇತಿಹಾಸವೆಂದರೆ ಅಚ್ಚುಮೆಚ್ಚು. ಅದರಲ್ಲೂ ವಿಜಯನಗರದ ಇತಿಹಾಸದ ಮೇಲೆ ಹೆಚ್ಚು ಆಸಕ್ತಿ ಎಂಬುದು ಅವರು ಅದಕ್ಕೆ ಸಂಬಂಧಿಸಿದ ಸನ್ನಿವೇಶಗಳನ್ನು ಪದೇ ಪದೇ ಬಳಸುವದರಿಂದ ಸ್ಪಷ್ಟವಾಗುತ್ತದೆ. ಈ ನಾಟಕದಲ್ಲಿ ವಿದ್ಯಾರಣ್ಯರು (ಮಾಧವಾಚಾರ್ಯರು) ಮುಸಲ್ಮಾನರ ದಾಳಿಯಿಂದ ಹಾಳು ಬಿದ್ದ ವಿಜಯನಗರ ಸಾಮ್ರಾಜ್ಯವನ್ನು ಮತ್ತೆ ಕಟ್ಟುವ ಕಾರ್ಯದಲ್ಲಿ ಕುರುಬರಾದ ಹುಕ್ಕ, ಬುಕ್ಕರನ್ನು ಅಣಿ ಮಾಡಿದ ಕಥೆಯಿದೆ. ಒಳಜಗಳಗಳಿಂದ ರಾಜ್ಯ ಅನ್ಯರ ವಶವಾಗಿ ದುಸ್ಥಿತಿಗೆ ಬಂದ ನಾಡಿನ ಪುನರ್ನಿರ್ಮಾಣದಲ್ಲಿ ಈ ನಿಷ್ಠಾವಂತ ತಪಸ್ವಿ, ಮೇಧಾವಿ, ಹುಕ್ಕ, ಬುಕ್ಕರನ್ನು ಆ ಕಾರ್ಯಕ್ಕೆ ಸಿದ್ಧ ಮಾಡಿ ಅವರಿಗೆ ಬೆಂಬಲವಾಗಿ ನಿಂತು ರಾಜ್ಯವನ್ನು ಕಟ್ಟುತ್ತಾರೆ. ಇದರಲ್ಲಿ ವಿದ್ಯಾರಣ್ಯರ ಮೇರು ವ್ಯಕ್ತಿತ್ವವನ್ನು ಸ್ಫುಟವಾಗಿ ಬಿಂಬಿಸಲಾಗಿದೆ. ಅಂತೆಯೇ ನಾರಾಯಣರಾಯರು ಇದನ್ನು "ವಿದ್ಯಾರಣ್ಯ ಸ್ವಾಮಿಗಳ ಪುಣ್ಯ ಚರಿತೆ" ಎಂದಿದ್ದಾರೆ. ವಿದ್ಯಾರಣ್ಯರು ನಾಟಕದ ಹೆಸರೇ ಸೂಚಿಸುವಂತೆ ಇಡೀ ನಾಟಕದ ಕ್ರಿಯಾಶಕ್ತಿಯಾಗಿದ್ದಾರೆ.

೧೨. "ಉತ್ತರ ಗೋಗ್ರಹಣ" - (೧೯೨೨) ಇದೊಂದು ಪೌರಾಣಿಕ ನಾಟಕವಾಗಿದ್ದು ಮಹಾಭಾರತದ ವಿರಾಟಪರ್ವದ ಒಂದು ಪ್ರಸಂಗವನ್ನು ಬಿತ್ತರಿಸುತ್ತದೆ. ಇಲ್ಲಿಯೂ ನಾರಾಯಣರಾಯರ ಮೇಲೆ ಕುಮಾರವ್ಯಾಸನ ಅಪ್ಪಟ ಪ್ರಭಾವದ ಅರಿವು ಆಗದೆ ಇರದು. "ಮಾತಿನ ಶೂರ" ನೆನಿಸಿದ ಉತ್ತರಕುಮಾರನನ್ನು ಬೃಹನ್ನಳೆಯ ರೂಪದಲ್ಲಿದ್ದ ಅರ್ಜುನನನ್ನು ಪ್ರೇರೇಪಿಸಿ ಕೌರವರ ಜೊತೆಗೆ ಯುದ್ಧಕ್ಕೆ ತೊಡಗಿಸುವದೇ



ಎಮ್. ಕೆ : ನಾನೆಲ್ಲಿಯ ಮಗನು, ನೀನೆಲ್ಲಿಯ ಅಪ್ಪನು ?
'ಶಿಕ್ಷಣ ಸಂಭ್ರಮ' ನಾಟಕದ ಮಗದೊಂದು ದೃಶ್ಯ.

ನಾಟಕದ ಕಥಾವಸ್ತು. ಜೊತೆಗೆ ಸೈರಂಧ್ರಿ ಹಾಗೂ ಉತ್ತರೆಯರು ಉತ್ತರಕುಮಾರನ ಜಡತನವನ್ನು ಗೊಡ್ಡು ಹರಟೆಯೆಂದು ಹಂಗಿಸುವದರ ಮೂಲಕ ಅವನ ಅಭಿಮಾನವನ್ನು ಕೆಣಕುತ್ತಾರೆ. ಹಾಗೂ ಯುದ್ಧಕ್ಕೆ ಸನ್ನದ್ಧನಾಗಲು ಪ್ರೇರೇಪಿಸುತ್ತಾರೆ.



ಸಕ್ರವ್ವ : ಹಾಗ ಅಂದಕೊತ ನೀ ಇಲ್ಲೇ ಹೀಗ ಕುಂಡ್ರು ನಾ ಹೊಕ್ಕೀನಿ.
'ಶಿಕ್ಷಣ ಸಂಭ್ರಮ' ನಾಟಕದ ಇನ್ನೊಂದು ದೃಶ್ಯ.

೧೩. "ಪತಿತೋದ್ಧಾರ" - (೧೯೨೩) ನಾರಾಯಣರಾಯರ ಪ್ರಕಟಿತ ನಾಟಕಗಳಲ್ಲೊಂದಾದ ಈ ನಾಟಕ ಅಂದಿನ ಸಮಾಜದ ಅನೇಕ ಲೋಪದೋಷಗಳಿಗೆ ಕನ್ನಡಿಯಾಗಿದೆ. ಈ ನಾಟಕದಲ್ಲಿ ಹಿಂದೂ ಧರ್ಮ ಸಂಪ್ರದಾಯಕ್ಕೆ ಸಂಬಂಧಿಸಿದ ಪೂಜೆ, ಮಡಿ, ಅಸ್ಪೃಶ್ಯತೆ, ವಿವಾಹ ಸಮಸ್ಯೆ, ಮುದುಕರು ಯವತಿಯರನ್ನು ಮದುವೆಯಾಗುವ ಸಮಸ್ಯೆ, ಜಾತಿಮತಗಳ ಘರ್ಷಣೆ, ಕ್ರಿಶ್ಚಿಯನ್ ಧರ್ಮದ ಪ್ರಚಾರ, ಮತಾಂತರ, ಆಧುನಿಕ ಫ್ಯಾಶನ್ನಿನತ್ತ ಒಲವು, ನಿರುದ್ಯೋಗ ಸಮಸ್ಯೆ, ವೇಶ್ಯಾವೃತ್ತಿ, ಸಮಾಜದ ವಕ್ರದೃಷ್ಟಿ, ಆಂಗ್ಲ ಶಿಕ್ಷಣದ ಪ್ರಭಾವ, ಲಂಚಖೋರತನ, ವ್ಯಾಪಾರೀ ಬುದ್ಧಿ, ಬಾಲಕರನ್ನು ಕದ್ದು ಅಂಗವಿಕಲರನ್ನಾಗಿಸಿ ಭಿಕ್ಷೆ ಬೇಡಲು ಹಚ್ಚಿ ದುಡ್ಡು ಗಳಿಸುವ ಭೀಕರತೆ, ಪರಸ್ತ್ರೀ ವ್ಯಾಮೋಹ, ಮಾಟ - ಮಂತ್ರ, ಸ್ವಾತಂತ್ರ್ಯ ಆಂದೋಲನ, ಗಾಂಧೀ ತತ್ವ ಪ್ರಭಾವ ಮುಂತಾದ ವಿಷಯ - ಸಮಸ್ಯೆಗಳ ಖಂಡನೆ, ಮಂಡನೆ, ಪ್ರತಿಪಾದನೆ, ಪರಿಹಾರಗಳ ಸಮ್ಮಿಶ್ರ ವಿಚಾರಗಳ ಪ್ರಸ್ತುತಿಯೇ ಈ ನಾಟಕದ ವೈಶಿಷ್ಟ್ಯ. ಈ ಎಲ್ಲ ಸಮಸ್ಯೆಗಳನ್ನು ತರ್ಕಬದ್ಧವಾಗಿ ಚಿತ್ರಿಸುವದಲ್ಲದೆ ಸಾಧ್ಯವಿದ್ದಲ್ಲಿ ಸಮಸ್ಯೆಗಳ ಪರಿಹಾರ ಸೂಚಿಸಲು ಪ್ರಯತ್ನಿಸಿದ್ದಾರೆ ನಾಟಕಕಾರ ನಾರಾಯಣರಾಯರು. ಇಲ್ಲಿ ಬರುವ ಅನೇಕ ಸಮಸ್ಯೆಗಳು ಇಂದಿನ ಪರಿಸ್ಥಿತಿಯಲ್ಲೂ ಔಚಿತ್ಯ ಹೊಂದಿವೆ. ಆಗಿನ ಕಾಲದಲ್ಲಿ ಬ್ರಿಟೀಷರಿರುವಾಗಲೇ ಅವರ ಮತಾಂತರ ಧೋರಣೆಯನ್ನು ಖಂಡಿಸಿ ಬರೆದದ್ದು ನಾರಾಯಣರಾಯರ ಮನೋಧೈರ್ಯವನ್ನು ಸ್ಥೈರ್ಯವನ್ನು ಎತ್ತಿ ತೋರುತ್ತದೆ. ಸಮಾಜದಲ್ಲಿ ಅನೇಕ ರೀತಿಯಲ್ಲಿ ಪತಿತವಾದವರ ಉಲ್ಲೇಖವಿಲ್ಲದೆ -

*"ತನುವ ಮಾರಿ ಜೀವಿಪ ವನಿತೆಗೆ ಪತಿತಳೆನಲೆ ? "*
*ಮಾನವ ಮಾರಿದ ನರಗೆ ಪತಿತನೆನಲೆ ?*
*ಜನುಮದ ಹೀನಕುಲದಿ ತಳೆದಾಗ ಪತಿತನೆನಲೆ ?*
*ಮನೆಯವರ ಅಕ್ಕಿಪಗೆ ಪತಿತನೆನಲೆ ?*
*ಜನುಮದ ನಾಡ ನುಡಿ ಹೇವ ಬಿಡೆ ಪತಿತನೆನಲೆ ?*
*ತನ್ನ ಧರ್ಮವ ತೊರೆದವಗೆ ಪತಿತನೆನಲೆ "*

ಎಂದು ಕೇಳಿ ಸಮಾಜದಲ್ಲಿ ಎಷ್ಟು ರೀತಿಯಿಂದ ಮಾನವ ಪತಿತನಾಗುತ್ತಿದ್ದಾನೆ, ಅವನ ಉದ್ಧಾರವಾಗುವದು ಹೇಗೆ ಎಂಬ ಚಿಂತನ - ಮಂಥನಗಳ ನಾಟಕ "ಪತಿತೋದ್ಧಾರ". ತಮ್ಮ ಸಕಾರಾತ್ಮಕ ತರ್ಕದಿಂದ ಈ ಸಮಸ್ಯೆಗಳನ್ನು ಒರೆಗೆ ಹಚ್ಚಿ ಹಳೆಯದರಲ್ಲಿದ್ದ ತಪ್ಪು ಧೋರಣೆಗಳನ್ನು ಬಿಡಲು ಹಾಗೂ ಒಳ್ಳೆಯದನ್ನು ಮುಂದುವರಿಸಲು, ಹೊಸದರಲಿದ ನಿಷಿದ ನೀತಿಗಳನು ತೊರೆದು

ಅಂಧಾನುಕರಣೆಯನ್ನು ಬಿಟ್ಟು ಅದರಲ್ಲಿರುವ ಅನುಕರಣೀಯ ತತ್ವಗಳನ್ನು ಹಂಸಕ್ಷೀರ ನ್ಯಾಯದಿಂದ ಆಯ್ದುಕೊಳ್ಳಲು ಸೂಚಿಸುವ ಸಾಮರಸ್ಯದ ದೃಷ್ಟಿಕೋನದ "ಸುವರ್ಣ ಮಾಧ್ಯಮ" ವೇ ನಾರಾಯಣರಾಯರ ಅಭಿಮತದಂತೆ "ಪತಿತೋದ್ಧಾರದ" ಮಂತ್ರ, ಅಪೇಕ್ಷಿತ ಉಪಾಯ. ಪ್ರೇಕ್ಷಕರನ್ನು ರಂಜಿಸುವ ಜೊತೆಗೆ ಚೇತರಿಸುವ ಸಂದೇಶ ಹೊತ್ತ ಈ ನಾಟಕ ಅತ್ಯುತ್ತಮ ಕೃತಿ ಎಂಬಲ್ಲಿ ಸಂದೇಹವಿಲ್ಲ.

೧೪. "ಪುನರಾಗಮನ" - (೧೯೪೪) - ಇದು ಪ್ರಕಟವಾಗದ ಸಾಮಾಜಿಕ ನಾಟಕ. ಇಲ್ಲಿಯೂ ಸ್ತ್ರೀ ಸ್ವಾತಂತ್ರ್ಯ, ಸಮಾನತೆ, ಸಮಾಜದಲ್ಲಿ ಸ್ತ್ರೀಯರ ಅವಹೇಳನ ಮುಂತಾದ ವಿಷಯಗಳ ಪರಿಶೀಲನೆ ಇದೆ. ಶಿಕ್ಷಣ ಪಡೆದ ಮಹಿಳೆ - ಪ್ರಮೀಳಾ, ಸ್ತ್ರೀ ಸಮಾನತೆಯ ಮೇಲೆ ಭಾಷಣ ಮಾಡುತ್ತಾಳೆ. ಅದರ ಪರಿಣಾಮ ಮೂರು ಕುಟುಂಬಗಳ ಮೇಲೆ ಆದ ಪರಿಯನ್ನು ಕುರಿತು ಕಥಾನಕ ಹೆಣೆದುಕೊಂಡಿದೆ. ಆಂಗ್ಲ ಶಿಕ್ಷಣದ ಮತ್ತಿನಲ್ಲಿ ತಮ್ಮ ಸಂಸ್ಕೃತಿಯನ್ನು ಮರೆತಾಗ ಅದು ಕುಟುಂಬಗಳನ್ನು ಒಡೆಯಲು, ಕಾರಣವಾಗುವದು, ಕುಟುಂಬದಲ್ಲಿ ಸಂಘರ್ಷ ಉತ್ಪನ್ನವಾಗುವದನ್ನು ತೋರಿಸಿ ಹಳೆಯದರಲ್ಲಿಯ ಸಾತ್ವಿಕತೆಯನ್ನು ಉಳಿಸಿಕೊಂಡು ಹೊಸ ಸುಧಾರಣೆಗಳನ್ನೂ ಅಳವಡಿಸಿಕೊಂಡು ಜೀವನದಲ್ಲಿ ಸಾಮರಸ್ಯ, ಹೊಂದಾಣಿಕೆ ತರಬೇಕಾದದ್ದೇ ನಾಟಕದ ಸಂದೇಶ. ಹಳೆಯದರ ಕಟ್ಟುಪಾಡುಗಳಿಗೆ ತರ್ಕಹೀನರಾಗಿ ಕಟ್ಟಿ ಬೀಳದೆ, ಹೊಸತನದ ಮೆರುಗಿಗೆ ವಿಚಾರಹೀನರಾಗಿ ಮರುಳಾಗದೆ, ಪ್ರಾಚೀನತೆ ಹಾಗೂ ಆಧುನಿಕತೆಯ ವಿವೇಕಪೂರ್ಣ ಸಮನ್ವಯವೇ ಸರಿಯಾದ ಉಪಾಯವೆಂದು ಸೂಚಿಸುವಾಗ ನಾರಾಯಣರಾಯರ ವೈಚಾರಿಕತೆ, ವಿವೇಚನೆ, ಸಕಾರಾತ್ಮಕತೆ, ಸತರ್ಕಗಳ ಪರಿಪಕ್ವತೆಯ ಪರಿಕಲ್ಪನೆ ಬರದೆ ಇರದು.

"ಆದ್ಯ ಸಾಮಾಜಿಕ ನಾಟಕಕಾರ" - ನಾನಾ ಸಾಂಪ್ರದಾಯಿಕ ಮನೋಭಾವದವರಾಗಿದ್ದರೂ ಹೊಸ ಸುಧಾರಣೆಗಳಿಗೆ ಆಧುನಿಕತೆಗೆ ಮುಖ ತಿರುಗಿಸುವ ಪ್ರವೃತ್ತಿ ಅವರದಲ್ಲ. ಆದರೆ ಅಂಧಾನುಕರಣೆ ಬೇಡವೆನ್ನುವದು ಅವರ ಮತ. ಅವರ 'ಸ್ತ್ರೀಧರ್ಮ ರಹಸ್ಯ'ದಲ್ಲಿ ಸುಧಾರಣೆಯ ಹುಚ್ಚು ಹೊಳೆಯಲ್ಲಿ ಹರಿದು ಹೋಗುತ್ತಿದ್ದ ಭಾರತೀಯ ಮಹಿಳೆಯನ್ನು ಅವರು ಚೇತರಿಸುತ್ತಾರೆ, ಜಾಗರಿಸುತ್ತಾರೆ. ಹೊಸ ವಿಚಾರಗಳನ್ನು ಸ್ವೀಕರಿಸುವಾಗಲೂ ಇಲ್ಲಿನ ಪರಂಪರೆಯನ್ನು ಮರೆಯಲಾಗದು ಎನ್ನುತ್ತಾರೆ. ಸಂಸಾರದ ಉಸಿರಾದ ಮಹಿಳೆ ತನ್ನ ಕರ್ತವ್ಯಗಳನ್ನು ಮರೆಯಬಾರದು. ಆದರೆ ಅವಳಿಗೆ ಸಮಾಜದಲ್ಲಿ ಸಮಾನತೆ, ಗೌರವ ಬೇಕು ಎಂಬುದು ಅವರ ಅಭಿಮತ. 'ಶಿಕ್ಷಣ ಸಂಭ್ರಮ' ದಲ್ಲಿ ಆಧುನಿಕ - ಶಿಕ್ಷಣ ಪದ್ಧತಿ ಗ್ರಾಮಜೀವನವನ್ನು ಅವಸ್ಥೆಗೀಡು

ಮಾಡಿದೆ. ಹಳ್ಳಿಯ ಜನ ಪಟ್ಟಣಕ್ಕೆ ಬಂದು ನಿರುದ್ಯೋಗಕ್ಕೆ ತುತ್ತಾಗುತ್ತಿದ್ದಾರೆ. ನಮ್ಮ ಶಿಕ್ಷಣ ಉದ್ಯೋಗಕ್ಕೆ ಅನುಕೂಲವಾಗಬೇಕೆನ್ನುತ್ತಾರೆ. "ಪತಿತೋದ್ಧಾರ"ದಲ್ಲಿ ಅಸ್ಪೃಶತೆ ನಿವಾರಣೆಗೆ ಕರೆ ಕೊಡುತ್ತ ಆಷಾಢಭೂತಿ ಧಾರ್ಮಿಕತೆಯನ್ನು ವಿಡಂಬಿಸುತ್ತಾರೆ. ಸಮಾಜದಲ್ಲಿ ಒಂದಿಲ್ಲೊಂದು ರೀತಿಯಿಂದ ಎಲ್ಲರೂ ಪತಿತರು. ಅವರ ಉದ್ಧಾರ ಅಗತ್ಯವೆನ್ನುತ್ತಾರೆ.

## ೪. ರಂಗಭೂಮಿಗೆ ಕೊಡುಗೆ

ನಾರಾಯಣರಾಯರು ಗದುಗಿನಲ್ಲಿ ತಮ್ಮ ಸಂಗಡಿಗರೊಂದಿಗೆ ಸ್ಥಾಪಿಸಿದ "ಯಂಗ್ ಮೆನ್ಸ ಪುಟ್‌ಬಾಲ್ ಕ್ಲಬ್"ನ ವಾರ್ಷಿಕೋತ್ಸವಕ್ಕಾಗಿ ನಾಟಕಗಳನ್ನು ಬರೆಯತೊಡಗಿದರು. ಈ ಕ್ರಮ ೧೯೧೨ರಿಂದ ಮೊದಲ ನಾಟಕ - "ವಜ್ರಮುಕುಟ" ದ ಪ್ರಸ್ತುತಿಯಿಂದ ಆರಂಭವಾಯಿತು. ಮುಂದೆ ಬಿಟ್ಟು ಬಿಡದೆ ೧೯೨೨ರ ವರೆಗೆ ೧೨ ವರ್ಷ ೧೨ ನಾಟಕಗಳನ್ನು ಅವರು ಪ್ರದರ್ಶಿಸಿದರು.

ಈ ನಾಟಕ ಪ್ರದರ್ಶನ ಕೇವಲ ಮನರಂಜನೆಗಾಗಿ ಆಗಿರದೆ ಕನ್ನಡ ರಂಗಭೂಮಿಯಲ್ಲಿ ಒಂದು ಹೊಸ ಅಲೆಯನ್ನು ತರುವ, ಒಂದು ಹೊಸ ಕ್ರಾಂತಿಯನ್ನು ತರುವ ಉದ್ದೇಶ ಗಾಢವಾಗಿತ್ತು ಅವರ ಮನದಲ್ಲಿ. ಅದಕ್ಕೆ ಕಾರಣಗಳಿಲ್ಲದಿಲ್ಲ. ಆಗಿನ ಕಾಲದ ಕನ್ನಡ ರಂಗಭೂಮಿಯ ಸ್ಥಿತಿ ಹಾಗೂ ಮರಾಠಿ ನಾಟಕಗಳ ಪ್ರಭುತ್ವ ಹೆಚ್ಚಾಗಿರುವದೇ ಕಾರಣವೆಂದು ತಿಳಿದು ಬರುತ್ತದೆ. "ಆಗಿನ ಕಾಲದಲ್ಲಿ ಗದಗಿಗೆ ಮರಾಠಿ ನಾಟಕ ಕಂಪನಿಗಳೇ ಹೆಚ್ಚಾಗಿ ಬರುತ್ತಿದ್ದವು. ಕನ್ನಡ ನಾಟಕಗಳ ಸ್ಥಿತಿ ಚೆನ್ನಾಗಿರಲಿಲ್ಲ. ಮನೋರಂಜನೆಯ ಪ್ರಮುಖ ಸಾಧನವಾಗಿದ್ದ ನಾಟಕವನ್ನು ನೋಡಲು ಜನರು ಹಾತೊರೆಯುತ್ತಿದ್ದರು. ಅಂದಿನ ಹೆಸರಾದ ಕನ್ನಡ ನಾಟಕ ಕಂಪನಿಗಳೂ ಅಷ್ಟು ಸುವ್ಯವಸ್ಥಿತವಾಗಿರಲಿಲ್ಲ. ನವರಸಗಳ ಅರಿವಿಲ್ಲದೆ ನಟರು ಸಂಭಾಷಣೆಗಳನ್ನು ಕಂಠಪಾಠ ಒಪ್ಪಿಸುತ್ತಿದ್ದರಷ್ಟೆ. ಅದರಿಂದ ಕನ್ನಡ ನಾಟಕಗಳು ಸ್ವಾರಸ್ಯರಹಿತವಾಗಿ ನಿರ್ಜೀವವಾಗಿದ್ದವು. ಮರಾಠಿ ನಾಟಕಗಳಲ್ಲಿದ್ದ ಅಚ್ಚುಕಟ್ಟಿನ ಸುವ್ಯವಸ್ಥೆ, ಉತ್ತಮ ಅಭಿನಯ, ಆಕರ್ಷಕ ರಂಗಸಜ್ಜಿಕೆ, ಆಕರ್ಷಕ ವೇಷ ಭೂಷೆ, ಸಂಗೀತ ಎಲ್ಲವೂ ಪ್ರೇಕ್ಷಕರನ್ನು ಮೋಡಿ ಮಾಡಿದ್ದವು.

ಇಂತಹ ಸಮಯದಲ್ಲಿ ನಾರಾಯಣರಾಯರು ಕನ್ನಡ ರಂಗಭೂಮಿಗೆ ನೀಡಿದ "ಸ್ತ್ರೀಧರ್ಮ ರಹಸ್ಯ", "ಶಿಕ್ಷಣ ಸಂಭ್ರಮ", "ಪತಿತೋದ್ಧಾರ" ನಾಟಕಗಳು ಮುಖ್ಯ ತಿರುವುಗಳಾಗಿ ಪರಿಣಮಿಸಿದವು.

ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಯಾಗಿದ್ದಾಗಲೇ ಚಾದರಗಳನ್ನು ಪರದೆಗಳಂತೆ ಕಟ್ಟಿ "ಗರುಡ ಗರ್ವಭಂಗ", "ಇಂದ್ರಜಿತ ವಧೆ" ನಾಟಕಗಳನ್ನು ಮನೆಯಲ್ಲಿಯೇ ಪ್ರಯೋಗಿಸಿದ ನಾರಾಯಣರಾಯರಿಗೆ ನಾಟಕ ಪ್ರಯೋಗ ಮೈಗುಣವಾಗಿರಬೇಕು. ಮುಂದೆ ಅವರು ತಮ್ಮ ಬಿ.ಎ. ಪರೀಕ್ಷೆಗೂ ಸಂಸ್ಕೃತ, ಇಂಗ್ಲಿಷ ವಿಷಯಗಳನ್ನಾಯ್ದುಕೊಂಡು ಕಾಳಿದಾಸ, ಶೇಕ್ಸಪಿಯರರನ್ನು ಆಳವಾಗಿ ಅಭ್ಯಸಿಸಿದ್ದು ಅವರ ನಾಟಕದಲ್ಲಿಯ ಅಭಿರುಚಿಯನ್ನು ತೋರುತ್ತದೆ. ಆ ನಾಟಕಗಳ ಭಾಷಾ ಶೈಲಿ, ಪಾತ್ರ ಪೋಷಣೆ, ತಂತ್ರ ಕೌಶಲಗಳನ್ನು ನಿಷ್ಠೆಯಿಂದ ಅಧ್ಯಯನ ಮಾಡಿದರು. ಅದಕ್ಕೆ ಪೂರಕವಾಗಿ ಪುಣೆಯಲ್ಲಿದ್ದಾಗ ಮರಾಠಿ ನಾಟಕಗಳನ್ನು ನೋಡುವದು ಪ್ರಾಯೋಗಿಕ ತರಬೇತಿಯಂತಾಯಿತು. ಕಿರ್ಲೋಸ್ಕರ, ಗಡಗರಿ, ಕೋಲ್ಹಟಕರ, ಖಾಡಿಲಕರ ಮುಂತಾದವರ ನಾಟಕಗಳನ್ನು ನೋಡಿದಾಗೆಲ್ಲ ಕನ್ನಡ ರಂಗಭೂಮಿಯಲ್ಲಿ ಸುಧಾರಣೆ ತರಬೇಕೆಂದು ಹವಣಿಸತೊಡಗಿದರು.

"ನಾರಾಯಣರಾಯರೇ, ಕನ್ನಡ ರಂಗಭೂಮಿಯನ್ನು ಸುಧಾರಿಸಬೇಕು ಅಂತ ನಿಮ್ಮಲ್ಲಿ ತೀವ್ರವಾದ ಹಂಬಲ ಮೂಡಲಿಕ್ಕೆ ಇನ್ನೇನು ಕಾರಣ" ಎಂದು 'ಎನ್ಕೆ'ಯವರು ತಮ್ಮ ರೇಡಿಯೊ ಸಂದರ್ಶನದಲ್ಲಿ ಕೇಳಿದಾಗ, ಅವರೊಂದು ಮೋಜಿನ ಸಂಗತಿ ಹೇಳಿದರು. ಚುರಮರಿ ಶೇಷಗಿರಿರಾಯರು ಕನ್ನಡದಲ್ಲಿ ಸಂಗೀತ ನಾಟಕ "ಶಾಕುಂತಲ" ವನ್ನು ಬರೆದಿದ್ದರಂತೆ. ಅದನ್ನು ಓದಿ ಮೆಚ್ಚಿಕೊಂಡ ಅವರ ಸ್ನೇಹಿತರಾದ ಗುರ್ಲ ಹೊಸೂರಿನ ಅಣ್ಣಾ ಕಿರ್ಲೋಸ್ಕರ ಅದೇ ಹಾಡಿನ ಮಟ್ಟುಗಳನ್ನು ಎತ್ತಿಕೊಂಡು ಕರ್ನಾಟಕೀ ಧಾಟಿಗಳ ಗೀತೆಗಳನ್ನು ಮರಾಠಿ ಸಂಗೀತ ನಾಟಕದ ರೀತಿಯಲ್ಲಿ "ಶಕುಂತಲ" ಬರೆದು ಪ್ರದರ್ಶಿಸಿದರಂತೆ. ಅದು ತುಂಬಾ ಜನಪ್ರಿಯವಾಯಿತಂತೆ. ಚುರುಮರಿಯವರ 'ಶಾಕುಂತಲ' ರಂಗಭೂಮಿ ಕಾಣದೆ, ಅಚ್ಚೂ ಕಾಣದೆ ಮೂಲೆಗೆ ಕೂತಿತ್ತಂತೆ. ಮುಂದೆ 'ಭಾರತ ಕಲೋತ್ತೇಜಕ ಸಂಘ' ದಿಂದ ಮುದವೀಡು ಕೃಷ್ಣರಾಯರು ಅದನ್ನು ರಂಗಭೂಮಿಗೆ ತಂದರಂತೆ.

ಇದಲ್ಲದೆ ನಾರಾಯಣರಾಯರು ಕನ್ನಡ ರಂಗಭೂಮಿಯ ಕೆಲವು ವಿಸಂಗತಿಗಳ ಬಗ್ಗೆಯೂ ಜಿಗುಪ್ಸೆ ತಾಳಿದ್ದರು. ಚುರಮರಿಯವರ ಶಾಕುಂತಲ ನಾಟಕದಲ್ಲಿ ಶಕುಂತಲೆಯನ್ನು ರೇಶ್ಮೆ ಸೀರೆ, ಬಂಗಾರದ ಒಡವೆಗಳಿಂದ ಅಲಂಕರಿಸಿರುತ್ತಿದ್ದರಂತೆ. ಕಣ್ವ ಮುನಿಯ ಆಶ್ರಮ ಕನ್ಯೆ ಶಾಕುಂತಲೆಗೆ ಈ ವೇಷಭೂಷೆ ವಿಸಂಗತವಲ್ಲವೆ ? ಅವರ ಸ್ವಂತ ಲೇಖನ "ನನ್ನ ನೆನಪುಗಳು" ದಲ್ಲಿ ಹೇಳಿದಂತೆ ಸಂತ ನಾಮದೇವ ನಾಟಕದಲ್ಲಿ ನಾಮದೇವನ ಪಾತ್ರ ಮಾಡಿದವನು ತಲೆಯ ಮೇಲಿನ ಚಂಡಿಕೆಗೆ ಅರಿವೆ ಚೆಂಡು

ಕಟ್ಟಿಕೊಂಡು "ಜೈ ಜೈ ವಿಠಲ" ಅನ್ನುವಾಗ ಅದನ್ನು ಹಿಂದೊಮ್ಮೆ ಮುಂದೊಮ್ಮೆ ಹಾರಿಸಿ ಜನರನ್ನು ನಗಿಸುತ್ತಿದ್ದನಂತೆ. ಇದು ಸಂತ ನಾಮದೇವನ ಪಾತ್ರದ ಘನಗಾಂಭೀರ್ಯಕ್ಕೆ ಚ್ಯುತಿಯಲ್ಲವೆ ? ಹಾಗೆಯೇ ನಾನಾ ನಮಗೆ ಆಗಿನ ಕಾಲದ ಸಂಗೀತದ ಬಳಕೆಯ ಅಸಂಬದ್ಧತೆಯ ಬಗ್ಗೆ ನಗಿಸುತ್ತ ಹೇಳುತ್ತಿದ್ದರು. ಜೀವನದಲ್ಲಿ ಸಂತೋಷವಾದಾಗ, ದುಃಖದ ಸಮಯದಲ್ಲಿ ಬೇಕಾದರೆ ಆಯಾ ಸನ್ನಿವೇಶಕ್ಕೆ ಸರಿಯಾಗಿ ಹಾಡು ಹೇಳಬಹುದು. ಆದರೆ ಕೋಪ ಬಂದಾಗ ಯಾರಾದರೂ ಹಾಡಬಹುದೆ ? ನಾಟಕದಲ್ಲಿ ಕೋಪದಲ್ಲೂ ಹಾಡುಗಳಿರುತ್ತಿದ್ದವಂತೆ. ಅದಷ್ಟೇ ಅಲ್ಲ ಕೆಲವು ನಾಟಕಗಳಲ್ಲಿ ಪಾತ್ರಗಳು ಹಾಡು ಹೇಳಿ ಸಾಯುವ ದೃಶ್ಯವಿದ್ದಾಗ ಪ್ರೇಕ್ಷಕರು "ಒನ್ಸ್‌ಮೋರ್" ಅಂದು ಬಿಟ್ಟರೆ, ಆ ಪಾತ್ರದ ವ್ಯಕ್ತಿ ಸತ್ತವನು ಮತ್ತೆ ಎದ್ದು ಹಾಡಿ ಮತ್ತೊಮ್ಮೆ ಸಾಯುತ್ತಿದ್ದನಂತೆ.

ಕನ್ನಡ ರಂಗಭೂಮಿಯ ಈ ಸ್ಥಿತಿಗೆ ಕಾರಣ ಆಗಿನ ಕಾಲದ ಜನರ ಧೋರಣೆ, ದೃಷ್ಟಿಕೋನ ಎನ್ನುತ್ತಾರೆ ನಾನಾ. ನಾಟ್ಯಕಲೆಯು ಹೀನ ಜನರ ಸಲುವಾಗಿಯೇ ಇರುವದೆಂಬ ಭಾವನೆ, ನಟರಿಗೆ ಗೌರವ, ಮಾನ, ಮರ್ಯಾದೆ ಕೊಡದೆ ಅವರನ್ನು ಕೀಳರಿಮೆಯಿಂದ ನೋಡುವದು, ಶಿಕ್ಷಿತ ಜನ ಅದು ತಮ್ಮ ಕ್ಷೇತ್ರವಲ್ಲ ಎಂದು ತಪ್ಪಾಗಿ ತಿಳಿದಿರುವದು ಇವೆಲ್ಲಾ ಮೂಲ ಕಾರಣಗಳು.

ಇಂಥ ಸಮಯದಲ್ಲಿ ಪ್ರಾರಂಭವಾದ ವಿಲಾಸಿ ರಂಗಭೂಮಿಯು ಸಾಮಾಜಿಕ ನಾಟಕಗಳ ಯುಗವನ್ನೇ ಪ್ರಾರಂಭಿಸಿತೆನ್ನಬಹುದಾಗಿದೆ. ಕೆರೂರ ವಾಸುದೇವಾಚಾರ್ಯ, ಹುಯಿಲಗೋಳ ನಾರಾಯಣರಾಯರು, ಬಿ.ಎಂ. ಶ್ರೀಕಂಠಯ್ಯ, ಮಾಸ್ತಿ, ಕೈಲಾಸಂ ಮತ್ತು ಶ್ರೀರಂಗ ಇವರು ಈ ಪ್ರಯತ್ನದಲ್ಲಿ ಸಂಸ್ಮರಣೀಯರು. ಉತ್ತರ ಕರ್ನಾಟಕದಲ್ಲಿ ನಾಟಕ ಕಂಪನಿಯ ಮೂಲಕ ಸುಧಾರಣೆ ತಂದವರಲ್ಲಿ ಗರೂಡ ಸದಾಶಿವರಾಯರು, ಶಿರಹಟ್ಟಿ ನಾಟಕ ಕಂಪನಿಯ ವಾಮನ ಮಾಸ್ತರು ಹಾಗೂ ಧಾರವಾಡದ ಶಾಂತಕವಿಗಳು. ರಂಗಭೂಮಿ ಜನತೆಯಲ್ಲಿ ಜಾಗೃತಿ ತರಲು ಬಹಳ ಪ್ರಭಾವಶಾಲಿ ಮಾಧ್ಯಮವೆಂದು ಅರಿತವರಿವರು.

"ಈ ದೃಷ್ಟಿಯಿಂದ ಹುಯಿಲಗೋಳ ನಾರಾಯಣರಾಯರ ನಾಟಕಗಳಿಗೆ ಕನ್ನಡ ರಂಗಭೂಮಿಯ ಇತಿಹಾಸದಲ್ಲಿ ವಿಶಿಷ್ಟ ಸ್ಥಾನವಿದೆ. ಅದೆಂದರೆ ಅವು ನವೋದಯ ಪೂರ್ವ ನಾಟಕಗಳ ಸಾಲಿಗೆ ಸೇರಿದ ವೃತ್ತಿ ರಂಗಭೂಮಿಯಿಂದ ಆಧುನಿಕ ರಂಗಭೂಮಿಗೆ ಹೊರಳಿಕೊಳ್ಳುವ ಹಂತದಲ್ಲಿಯ ಸಂಧಿಕಾಲದ ನಾಟಕಗಳೆಂದು ಖಚಿತವಾಗಿ ಹೇಳಬಹುದು. ಅಂತೆಯೇ ಇವುಗಳಿಗೆ ಐತಿಹಾಸಿಕ ಮಹತ್ವವಿದೆ. ಉದಯಕಾಲದ

ಬೀಜಗಳನ್ನು ಗರ್ಭೀಕರಿಸಿಕೊಂಡು, ನವೋದಯದ ಆಶೋತ್ತರಗಳಿಗೆ ತನ್ನನ್ನು ತೆರೆದುಕೊಂಡ ಮಹತ್ವ ಈ ನಾಟಕಗಳಿಗಿದೆ" ಎಂದು ಅಭಿಪ್ರಾಯಪಟ್ಟಿದ್ದಾರೆ ಡಾ. ಜಿ.ಡಿ. ಜೋಷಿಯವರು.

ನಾರಾಯಣರಾಯರ ನಾಟಕಗಳಲ್ಲಿ ವೃತ್ತಿ ರಂಗಭೂಮಿಯ ಛಾಯೆ ಕಂಡುಬರುತ್ತದೆ. ಸಂಗೀತ, ಸೂತ್ರಧಾರ, ವಿದೂಷಕ, ನಟಿ, ನಾಂದಿ ಹಾಡುಗಳು, ಕಂದ, ವೃತ್ತ ಮತ್ತು ಸೀಸ ಪದ್ಯಗಳು ಅಲ್ಲದೆ ಧಾರವಾಡದ ದಿನಬಳಕೆಯ ಭಾಷೆ ಇವೆಲ್ಲ ಈ ನಾಟಕಗಳನ್ನು ವಿಶಿಷ್ಟವಾಗಿಸುತ್ತವೆ.

ನಾರಾಯಣರಾಯರ ಈ ನಾಟಕಗಳು ಮೊದಲು "ಯಂಗ್ ಮೆನ್ಸ್ ಫುಟ್‌ಬಾಲ್ ಕ್ಲಬ್ಬಿನ ವಾರ್ಷಿಕೋತ್ಸವಕ್ಕಾಗಿ ರಚಿತವಾಗಿ ಪ್ರಯೋಗವಾದರೂ ಅವುಗಳ ಜನಪ್ರಿಯತೆ ಮುಂದೆ ಅನೇಕ ಪ್ರಯೋಗಗಳಿಗೆ ಕಾರಣೀಭೂತವಾಯಿತು. ಮುಂದೆ ಈ ನಾಟಕಗಳನ್ನು ಈ ವಿಲಾಸೀ ತಂಡದವರು ಗದಗಿನಲ್ಲಲ್ಲದೆ ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಬಾಗಲಕೋಟೆ, ಕೊಪ್ಪಳ, ವಿಜಾಪುರ ಮುಂತಾದ ಕಡೆಯಲ್ಲಿ ಪ್ರಯೋಗಿಸಿದರು. ಅಲ್ಲದೇ ಈ ನಾಟಕಗಳನ್ನು ಮದಿಹಾಳ (ಧಾರವಾಡ) ಪ್ರಾಜ್ಞ ಕ್ರೀಡಾ ಸಂವರ್ಧನ ಮಂಡಳಿಯ "ಭಾರತ ಕಲೋತ್ತೇಜಕ ಸಂಗೀತ ಸಮಾಜ" ಎಂಬ ವಿಲಾಸೀ ತಂಡ ಮುದವೀಡು ಕೃಷ್ಣರಾಯರ ನೇತೃತ್ವದಲ್ಲಿ ಪ್ರಯೋಗಿಸಿತು. ಮುಂದೆ ಧಾರವಾಡದ ಕಲೋಪಾಸಕ ಮಂಡಲವು ೧೯೪೩ರಲ್ಲಿ ದ.ರಾ. ಬೇಂದ್ರೆಯವರ "ಭಾಗ್ಯಶ್ರೀ", "ಪರಿವರ್ತನ" ಮತ್ತು ನಾರಾಯಣರಾಯರ 'ಪತಿತೋದ್ಧಾರ', 'ಭಾರತ ಸಂಧಾನ' ನಾಟಕಗಳನ್ನು ಉತ್ತಮ ರೀತಿಯಲ್ಲಿ ಉತ್ತರ ಕರ್ನಾಟಕ, ಪುಣೆ, ಮುಂಬಯಿಗಳಲ್ಲಿ ಪ್ರದರ್ಶಿಸಿ ಹೆಸರು ಗಳಿಸಿದರು. "ಪತಿತೋದ್ಧಾರ" ನಾಟಕದಲ್ಲಿ ಪ್ರಮುಖ ಪಾತ್ರದಲ್ಲಿ ಸುಪ್ರಸಿದ್ಧ ಗಾಯಕರಾದ ಪಂಡಿತ ಭೀಮಸೇನ ಜೋಷಿ, ಧಾರವಾಡದ ಪ್ರಭಾ ಬೆಂಡಿಗೇರಿ, ನೆಗಳೂರ ರಂಗನಾಥ, ಗದಗಿನ ಗುರಾಚಾರ ಜೋಷಿ, ರಾಮಾಚಾರ ಜೋಷಿ ಹಾಗೂ ಕೃಷ್ಣಾಚಾರ ಪೂಜಾರವರು ಅಭಿನಯಿಸುತ್ತಿದ್ದರು. ನಾನಾ ಅವರ ಈ ನಾಟಕವನ್ನು ಮಾತ್ರ ನಾನು ಅನೇಕ ಸಲ ನೋಡಿದ್ದೇನೆ. ನಾನಾ ಅವರನ್ನು ಪರಂಪರಾಪ್ರಿಯ ನಾಟಕಕಾರರಲ್ಲಿ ಪ್ರಥಮ ಪ್ರಗತಿಶೀಲರೆಂದು ಗಣಿಸಲಾಗುತ್ತದೆ. ಯಾಕಂದರೆ ಅವರ ಸಾಮಾಜಿಕ ನಾಟಕಗಳು ಅಂದಿನ ಸಮಕಾಲೀನ ಜೀವನವನ್ನು ಗಾಢವಾಗಿ ತಟ್ಟಿದ ಪಾಶ್ಚಾತ್ತೀಕರಣ, ಸಮಾಜ ಸುಧಾರಣೆ, ಗಾಂಧೀವಾದಗಳ ಸ್ಫುಟವಾದ ಚಿತ್ರಣವನ್ನು ಬಿಂಬಿಸುತ್ತವೆ.

ನಾರಾಯಣರಾಯರ ನಾಟಕಗಳನ್ನು ವಿಲಾಸೀ ತಂಡಗಳಷ್ಟೇ ಅಲ್ಲದೆ ಮುಂದೆ ಗರೂಡ ಸದಾಶಿವರಾಯರ ನಾಟಕ ಕಂಪನಿಯವರು ಕೂಡ ಪ್ರಯೋಗಿಸಿದ್ದಾರೆ.

"ಶಿಕ್ಷಣಸಂಭ್ರಮ", "ಸ್ತ್ರೀಧರ್ಮ ರಹಸ್ಯ"ಗಳನ್ನು ಪುಣೆ, ಮುಂಬೈಯಲ್ಲೂ ಮಾಡಿದ್ದಾರೆ. ಮುಂಬೈಯ ಬಿರ್ಲಾ ಹಾಲಿನಲ್ಲಿ ಈ ನಾಟಕ ಮಾಡಿದಾಗ ಜನ ಕಿಕ್ಕಿರಿದು ತುಂಬಿ ನಾಟಕವನ್ನು ಬಹಳ ಮೆಚ್ಚಿಕೊಂಡರೆಂದು ಶ್ರೀಪಾದರಾವ್ ಗರೂಡರು ನೆನೆದರು. ಉತ್ತರ ಕರ್ನಾಟಕದಲ್ಲೂ ಈ ನಾಟಕಗಳು ಜನಪ್ರಿಯವಾಗಿದ್ದವು. ಎನ್ಕೆಯವರು ತಾವು ವಿದ್ಯಾರ್ಥಿಯಾಗಿದ್ದಾಗ "ಸ್ತ್ರೀಧರ್ಮ ರಹಸ್ಯ" ನಾಟಕದೊಳಗಿನ "ಸುಧಾರಿಸೋಣ ನಾವು ಸುಧಾರಿಸೋಣ ! ತಲಿ ಮ್ಯಾಲೆ ಹ್ಯಾಟು ಕಾಲಾಗ ಬೂಟು ತಿನಲಾಕ ಅಂಡಿ ಕುಡಿಲಾಕ ಬ್ರ್ಯಾಂಡಿ" ಎಂಬ ಹಾಡನ್ನು ಧಾಟಿ ಹಿಡಿದು ಹಾಡುತ್ತಿದ್ದರಂತೆ. ಅಷ್ಟೇ ಏಕೆ ಅವರ ಮನೆಗೆ ಕ್ಷೌರಕ್ಕೆ ಬರುತ್ತಿದ್ದ ಸಿದ್ದಪ್ಪ ಅವರ ಮಗುವಿನ ಕ್ರಾಪ್ ಕಟ್ ಮಾಡುತ್ತ ಈ ಹಾಡನ್ನು ಅಭಿನಯಿಸುತ್ತ ಗುಣಗುಣಿಸುತ್ತಿದ್ದನಂತೆ ಎಂದರೆ ಈ ನಾಟಕಗಳ ಜನಪ್ರಿಯತೆಯ ಊಹೆ ಮಾಡಬಹುದು. ಎನ್ಕೆಯವರೂ ನಾರಾಯಣರಾಯರನ್ನು ಉತ್ತರ ಕರ್ನಾಟಕದ ಸ್ವತಂತ್ರ ಸಾಮಾಜಿಕ ನಾಟಕ ಪುರಸ್ಕರ್ತರೆಂದು ಅನಧಿಕೃತವಾಗಿ ಘೋಷಿಸಬಹುದು ಎನ್ನುತ್ತಾರೆ.

ನಾರಾಯಣರಾಯರ ನಾಟಕಗಳಲ್ಲಿ ಪಾತ್ರ ವಹಿಸುತ್ತಿದ್ದ ಮುಖ್ಯ ನಟರೆಂದರೆ ನಾರಾಯಣಾಚಾರ್ಯ ಗುಡಿ, ಸಾಬ ನಾರಾಯಣರಾವ್, ವಾಸುದೇವರಾವ್, ಶ್ರೀನಿವಾಸರಾವ್ ಹುಯಿಲಗೋಳ, ಕೃಷ್ಣಾಚಾರ ಪೂಜಾರ, ಶ್ಯಾಮಾಚಾರ ಗುಡಿ, ಶಿವಪ್ಪ ಮದ್ಲಿ, ಮಹಾರುದ್ರಪ್ಪ ಬಡಿಗೇರ, ಕಂಬಾರ ಮಲ್ಲಪ್ಪ, ಹುರಕಡ್ಲಿ ಚೆನ್ನಪ್ಪಾ, ಬುಳ್ಳಾ, ಬಿಂದಾಚಾರ ಬೈಚವಾಳ, ಗುರಪ್ಪ ಕುಲಕರ್ಣಿ ಮುಂತಾದವರು ಪ್ರಮುಖರು.

ಒಂದು ಕನ್ನಡ ನಾಟಕವನ್ನು ನಾಟ್ಯವಿಲಾಸಿಗಳು ರಂಗಭೂಮಿಗೆ ತರುವದೆಂದರೆ ಆ ಕಾಲದಲ್ಲಿ ಅದೊಂದು ಹರಸಾಹಸವೆ. ಆಗ ಸ್ತ್ರೀ ಪಾತ್ರವನ್ನು ಪುರುಷರೇ ಮಾಡುತ್ತಿದ್ದ ಕಾಲ. ಅಭಿನಯ, ಮಾತುಗಾರಿಕೆ, ನಯ, ನೀತಿ ರೀತಿಗಳನ್ನು ಆಯಾ ಪಾತ್ರಗಳಿಗನುಗುಣವಾಗಿ ಸನ್ನಿವೇಶಕ್ಕನುಗುಣವಾಗಿ ಕಲಿಸಬೇಕಾಗುತ್ತಿತ್ತು. ಇದನ್ನೆಲ್ಲ ನಾರಾಯಣರಾಯರು ಮಾಡುತ್ತಿದ್ದರು. ಅವರು ಸ್ವತಃ ಬಣ್ಣ ಹಚ್ಚಿಕೊಂಡು ರಂಗದ ಮೇಲೆ ಎಂದೂ ಬರಲಿಲ್ಲ. ಆದರೆ ನಟವರ್ಗಕ್ಕೆ ತಕ್ಕ ಸಲಹೆ, ಸೂಚನೆ, ತಯಾರಿ ತರಬೇತಿ ಇವುಗಳನ್ನು ಕೊಡುತ್ತಿದ್ದರು. ತಿಂಗಳುಗಟ್ಟಲೆ ನಾಟಕದ ತಾಲೀಮು ಮಾಡಿ ಮಾಡಿ ಅದು ಚೆನ್ನಾಗಿದೆಯೆಂದು ಕಂಡು ಬಂದ ಮೇಲೆಯೇ ರಂಗಭೂಮಿಗೆ ತರುತ್ತಿದ್ದರು. ಒಂದೊಂದು ನಾಟಕ ತಯಾರಿಸಲು ಆರಾರು ತಿಂಗಳ ತಾಲೀಮು ಕೊಡುತ್ತಿದ್ದರು. ಇಂಥ ಸಮಯದಲ್ಲಿ ಅವರ ದೊಡ್ಡ ಶಕ್ತಿಯಾಗಿ ಅವರ ಬೆಂಬಲಕ್ಕೆ ಬಂದವರು ಸುಪ್ರಸಿದ್ಧ ಶಾಂತಕವಿಗಳು (ಸಕ್ಕರಿ ಬಾಳಾಚಾರ್ಯರು). ಅವರ ನಾಟಕದಲ್ಲಿ ಇರುವ ನಿಷ್ಠೆಯ ಕಲೆಯನ್ನು ನಾನಾ ಅವರ ಬಾಯಿಂದಲೇ ಕೇಳಬೇಕು. ಸಕ್ಕರಿ ಬಾಳಾಚಾರ್ಯರು ಆಗ ಗದುಗಿನಲ್ಲಿ

ಮಾಸ್ತರಾಗಿದ್ದರಂತೆ. ಸಂಜೆಯ ತನಕ ಶಾಲೆಯ ಕೆಲಸ ಮಾಡಿ ಸಂಜೆಯಾದ ಮೇಲೆ ರಸಿಕರನ್ನೂ ಕರೆದುಕೊಂಡು ನಾಟಕದ ರಂಗ ತಾಲೀಮು ಮಾಡುತ್ತಿದ್ದರು. ಈ ರೀತಿ ಇವರು ಕನ್ನಡಕ್ಕಾಗಿ ದುಡಿಯುವದು, ಕನ್ನಡದ ಜನರಲ್ಲಿ ಜಾಗೃತಿ ಹುಟ್ಟಿಸುವದು ಮೇಲಾಧಿಕಾರಿಗಳಾದ ಮರಾಠಿಗರಿಗೆ ಒಗ್ಗದಾಯಿತು. ಇವರ ಕಾರ್ಯಕ್ರಮದ ಕೀಲು ತಪ್ಪಿಸಲು ಬಾಳಾಚಾರ್ಯರನ್ನು ಹೊಂಬಳದ ಶಾಲೆಗೆ ವರ್ಗ ಮಾಡಿದರು. ಕನ್ನಡಕ್ಕಾಗಿ ಕಳವಳಿಸುತ್ತಿದ್ದ ಬಾಳಾಚಾರ್ಯರಿಗೆ ಇದೇನೂ ಅಡ್ಡ ಬರಲಿಲ್ಲ, ಅವರೊಂದು ಎಮ್ಮೆ ಕೊಂಡರು. ಸಂಜೆಯವರೆಗೆ ಹೊಂಬಳದಲ್ಲಿ ಶಾಲೆ ಮಾಸ್ತರಿಕೆ ಮಾಡಿ ರಾತ್ರಿಯಲ್ಲಿ ಎಮ್ಮೆ ಸವಾರಿ ಮಾಡಿ ೯ ಮೈಲುಗಳನ್ನೂ ಕ್ರಮಿಸಿ ಗದುಗಿಗೆ ಬಂದು ಅಲ್ಲಿ ನಾಟಕದ ತಾಲೀಮು ಮುಗಿಸಿ ಮರುದಿನ ಶಾಲೆಯ ಹೊತ್ತಿಗೆ ಮತ್ತೆ ಎಮ್ಮೆ ಸವಾರಿ ಮಾಡಿಕೊಂಡು ಹೊಂಬಳಕ್ಕೆ ಮರಳುತ್ತಿದ್ದರು. ಅವರ ಉತ್ಸಾಹ, ಉತ್ಕಟತೆ ಸಾಮಾನ್ಯರಿಗೆ ಅಸಾಧ್ಯವಾದದ್ದು. ನಾರಾಯಣರಾಯರೂ ಅಭಿನಯ ಕಲಿಸುವಲ್ಲಿ ಇಮ್ಮಡಿ ಆಸಕ್ತಿ ತೋರುತ್ತಿದ್ದರು. ತಾಲೀಮಿನಲ್ಲಿ ಅವರು ತೀರ ಕಟ್ಟುನಿಟ್ಟಾಗಿರುತ್ತಿದ್ದರು. ತಿಂಗಳುಗಟ್ಟಲೆ ಶ್ರಮ ವಹಿಸಿ ಅಭಿನಯದಲ್ಲಿ ನೈಜತೆ ತರಲು ಯತ್ನಿಸುತ್ತಿದ್ದರು. ಇನ್ನೊಂದು ವಿಶೇಷವೆಂದರೆ ಅವರು ಬರೆದ ಎಲ್ಲ ನಾಟಕಗಳಲ್ಲಿಯೂ ಅವರು ರಂಗ ಪ್ರಯೋಗಕ್ಕೆ ತಕ್ಕ ಸೂಚನೆಗಳನ್ನೂ ಕೊಟ್ಟಿದ್ದಾರೆ. ನಾನಾ ಅವರಲ್ಲಿ ನೋಡಿದ ಇನ್ನೊಂದು ಗಮನಾರ್ಹ ಗುಣವೆಂದರೆ ಅವರ ಸಮಯಪ್ರಜ್ಞೆ, ಯಾವ ನಾಟಕವಾದರೂ ಹೇಳಿದ ಸಮಯಕ್ಕೆ ಪರದೆ ತೆರೆಯಬೇಕೆಂಬ ಕಟ್ಟು ಅವರದು, ಇನ್ನೊಂದೆಂದರೆ ರಂಗಭೂಮಿಯ ಮೇಲೆ ಮೃತದೇಹವನ್ನು ತರಬಾರದೆಂಬುದು ಅವರ ಮತ. ಈ ನಾಟಕಗಳ ತಾಲೀಮು ನಡೆಯುತ್ತಿದ್ದುದು ಶೀನಪ್ಪ ಉಮಚಗಿ ಅವರ ಮನೆಯ ಒಂದು ಕೋಣೆಯಲ್ಲಿ. ಅದಕ್ಕೆ "ತಾಲೀಮು ಮನೆ" ಎಂದೇ ಹೆಸರು ಬಿದ್ದಿತ್ತು.

## ೫. ಶಿಕ್ಷಣ ಕ್ಷೇತ್ರಕ್ಕೆ ಕೊಡುಗೆ

### ವಿದ್ಯಾದಾನ ಸಮಿತಿಯ ಸ್ಥಾಪನೆ

ಹುಯಿಲಗೋಳ ನಾರಾಯಣರಾಯರ ನಾಟಕಗಳು ಗದಗಿನಲ್ಲಷ್ಟೇ ಅಲ್ಲದೆ ಉತ್ತರ ಕರ್ನಾಟಕದ ಉಳಿದ ಭಾಗಗಳಲ್ಲಿ ಹಾಗೂ ಪುಣೆ, ಮುಂಬೈಗಳಲ್ಲಿ ಯಶಸ್ವೀ ಪ್ರಯೋಗಗಳಾಗಿ ಪರಿಣಮಿಸಿ ಜನಪ್ರಿಯತೆಯನ್ನು ಗಳಿಸಿದವು. "ಯಂಗ್ ಮೆನ್ಸ್ ಫುಟಬಾಲ್ ಕ್ಲಬ್ಬಿ"ನ ವಾರ್ಷಿಕೋತ್ಸವಕ್ಕಾಗಿ ಇವನ್ನೂ ಬರೆದಿರುವದರಿಂದ ಆ ದಿನ ಈ ನಾಟಕಗಳನ್ನೂ ಜನರಿಗೆ ನಿಶುಲ್ಕವಾಗಿ ತೋರಿಸಲ್ಪಡುತ್ತಿತ್ತು. ಆದರೆ ನಂತರ ಆಗುವ

ಪ್ರಯೋಗಗಳಿಗೆ ಟಿಕೆಟ್ ಇಡಲಾಗುತ್ತಿತ್ತು. ಹೀಗಾಗಿ ಜನಪ್ರಿಯತೆಯ ಜೊತೆ ಜೊತೆಗೆ ಸಾಕಷ್ಟು ಹಣ ಶೇಖರಿಸಲ್ಪಟ್ಟಿತು. ನಾರಾಯಣರಾಯರು ಈ ನಾಟಕಗಳನ್ನು ಮನರಂಜನೆಗಾಗಿಯೇನು ಬರೆಯಲಿಲ್ಲ, ಸ್ವಂತ ಬೊಕ್ಕಸವನ್ನು ತುಂಬಿಕೊಳ್ಳಲಿಕ್ಕೂ ಬರೆಯಲಿಲ್ಲ. ಸಮಾಜದ ಶಿಕ್ಷಣಕ್ಕಾಗಿ ನಾಟಕಗಳನ್ನು ಬರೆದುದರಿಂದ ಬಂದ ಹಣವಾದರೂ ಸಮಾಜದ ಶಿಕ್ಷಣಕ್ಕಾಗಿಯೆ ಮೀಸಲಾಗಿರಲಿ ಎಂಬ ಅವರ ಉದ್ದೇಶ, ಅವರ ಧ್ಯೇಯವಾದಿತ್ವವನ್ನು ಉದಾರ ಹೃದಯವನ್ನು, ನಿಷ್ಕಾಮ ಕರ್ಮಯೋಗವನ್ನು ದರ್ಶಿಸುತ್ತದೆ.

ಬಂದ ಹಣದ ಒಂದು ಕಾಸನ್ನೂ ಸ್ವಂತ ಖರ್ಚಿಗಾಗಿ ಬಳಸಲಿಲ್ಲ. ಸಮಾಜದ ಏಳಿಗೆಗೆ, ಜನತೆಯಲ್ಲಿ ಕನ್ನಡಾಭಿಮಾನವನ್ನು ಜಾಗ್ರತಗೊಳಿಸುವದರ ಸಲುವಾಗಿ ಮತ್ತು ಸಮಾಜ ಶಿಕ್ಷಣಕ್ಕಾಗಿಯೇ ನಾಟಕಗಳನ್ನೂ ರಚಿಸಿ, ರಂಗಭೂಮಿಯ ಮೇಲೆ ತಂದು ಅವುಗಳ ಮುಖಾಂತರ ಸಂಗ್ರಹಿಸಿದ್ದ ಹಣವನ್ನು ಅದೇ ಸಮಾಜದಲ್ಲಿಯ ಮಕ್ಕಳ ಉನ್ನತಿಗೆ ದಾರಿ ಮಾಡಿಕೊಡಬೇಕೆಂದು ಅವರ ಶಿಕ್ಷಣಕ್ಕಾಗಿ ಅದನ್ನು ವಿನಿಯೋಗಿಸಿ, ಅವರ ಸರ್ವಾಂಗೀಣ ವಿಕಾಸವನ್ನು ಸಾಧಿಸಬೇಕೆಂಬ ಧೀಮಂತ ಸಾತ್ವಿಕ ಬಯಕೆ ಅವರದು. ಈ ವಿಚಾರವನ್ನು ತಮ್ಮ ಆತ್ಮೀಯರ ಮುಂದೆ ಇಟ್ಟರು. ಅವರೆಲ್ಲರ ಸಹಾಯ, ಸಹಕಾರದಿಂದ ಮತ್ತು ಕ್ಲಬ್ಬಿನ ಸದಸ್ಯರ ತಪಸ್ಸಿನ ಫಲವಾಗಿ "ವಿದ್ಯಾದಾನ ಸಮಿತಿ" ಎಂಬ ಆದರ್ಶ ಶಿಕ್ಷಣ ಸಂಸ್ಥೆ ೧೯೨೦ನೇ ಇಸ್ವಿಯಲ್ಲಿ ಗದುಗಿನಲ್ಲಿ ಸ್ಥಾಪಿತವಾಯಿತು. ಈ ರೀತಿ ನಾರಾಯಣರಾಯರ ಸಾಹಿತ್ಯ ಪ್ರತಿಭೆಯ ಫಲಸ್ವರೂಪವಾಗಿ ವಿದ್ಯಾದಾನ ಸಮಿತಿ ರೂಪಗೊಂಡಿತು. ಈ ರೀತಿ ನಾರಾಯಣರಾಯರ ಸಾಹಿತ್ಯಸೇವೆ ವಿದ್ಯಾದಾನಕ್ಕೆ ಮೀಸಲಾದ ಇಡುಗಂಟಾಯಿತು. ಮನೆಯಲ್ಲಿ ತಂದೆ ಶಿಕ್ಷಕರು, ತಾವೂ ಶಿಕ್ಷಕರಾಗಿ ಕೆಲಸ ಮಾಡಿದ್ದರು. ಆ ಶಿಕ್ಷಣ ಪ್ರೇಮ, ಅವರ ಸಮಾಜ ಸೇವೆಯ ಉದಾತ್ತ ಆದರ್ಶಗಳು ವಿದ್ಯಾದಾನ ಸಮಿತಿಗೆ ಜನ್ಮ ಕೊಟ್ಟವು.

ಅವರ ಹಿತಚಿಂತಕರಾದ ಸಾಬ ನಾರಾಯಣರಾಯರು, ಗುಡಿ ನಾರಾಯಣಾಚಾರ್ಯರು, ಡಾ. ಜಿ.ಜಿ. ಪಾಗೆಯವರು, ತಮ್ಮ ಶ್ರೀನಿವಾಸರಾಯರು ಈ ಪವಿತ್ರ ಪರಿಯೋಜನೆಗೆ ಬೆಂಬಲವಾಗಿ ನಿಂತು ತಮ್ಮ ಸಂಪೂರ್ಣ ಸಹಾಯ, ಸಹಕಾರ, ಪ್ರೋತ್ಸಾಹ ನೀಡಿದರು. ವಿದ್ಯಾದಾನ ಸಮಿತಿಯ ಮೂಲ ಪ್ರೇರಕರಾದರೂ ಅವರೆಂದೂ ಸಮಿತಿಯ ಅಧ್ಯಕ್ಷಪದ ಸ್ವೀಕರಿಸದೆ ಯಾವಾಗಲೂ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ್ದು ಅವರ ನಿರ್ಮಮತೆಯ ದೃಷ್ಟಾಂತವಾಗಿದೆ. ಇದನ್ನು ನೋಡಿದಾಗ ನನಗೆ ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿ, ಸೆಣಸಿದ ಗಾಂಧೀಜೀ ಸ್ವಾತಂತ್ರ್ಯ ಸಿಕ್ಕಾಗ

ಸಾಬರಮತಿ ನದಿಯ ದಂಡೆಯಲ್ಲಿ ರಾಟಿ ನೂಲುತ್ತ ಕುಳಿತ ಪ್ರಸಂಗ ಜ್ಞಾಪಕಕ್ಕೆ ಬರುತ್ತದೆ. ಗಾಂಧೀಜಿಯೂ ಯಾವ ಹುದ್ದೆ ಅಥವಾ ಪದವಿಗಳಿಗಾಗಿ ಪರದಾಡಲಿಲ್ಲ. ಈ ಅರ್ಥದಲ್ಲಿ ನಮ್ಮ ನಾನಾ ಶತ ಪ್ರತಿ ಶತ ಗಾಂಧೀವಾದಿಗಳು, ಎನಿಸುತ್ತದೆ.

ಪ್ರಾರಂಭದಲ್ಲಿ ಕೇವಲ ಮೂವತ್ತು ವಿದ್ಯಾರ್ಥಿಗಳಿಂದ ಪ್ರಾರಂಭವಾದ ವಿದ್ಯಾದಾನ ಸಮಿತಿಯ ಬಾಲಕರ ಮಾಧ್ಯಮಿಕ ಶಾಲೆ, ಇಂದು ಬೆಳೆದು ನಿಂತು ಸಹಸ್ರ ಸಹಸ್ರ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡುತ್ತಿದೆ. ಕೇವಲ ಇಪ್ಪತ್ತು ರೂಪಾಯಿ ಮಾಸಿಕ ವೇತನ ಪಡೆದ ಶಿಕ್ಷಕರಿಂದ ಆರಂಭವಾದ ಶಾಲೆ ಇಂದು ನೂರಾರು ಶಿಕ್ಷಕ - ಶಿಕ್ಷಕಿಯರಿಗೆ ಜೀವನೋಪಾಯಕ್ಕೆ ಮಾರ್ಗ ಮಾಡಿ ಕೊಟ್ಟಿದೆ. ಬಾಡಿಗೆಯ ಒಂದೇ ಕೋಣೆಯಲ್ಲಿ ನಡೆಯುತ್ತಿದ್ದ ಶಾಲೆ ಇಂದು ಸ್ವಂತ ಬೃಹದ್ ಕಟ್ಟಡಗಳನ್ನೂ, ವಿಶಾಲ ಮೈದಾನಗಳನ್ನೂ, ಸುಂದರವಾದ ವೇದಿಕೆಗಳನ್ನೂ ಹೊಂದಿದ ಸುಸಜ್ಜಿತ ವಿದ್ಯಾಮಂದಿರವಾಗಿ ಮಾರ್ಪಟ್ಟಿದೆ. ಶಿಶುವಿಹಾರದಿಂದ ಹಿಡಿದು ಕಿರಿಯ ಮಹಾವಿದ್ಯಾಲಯದವರೆಗೆ ಎಲ್ಲ ಸ್ತರಗಳಲ್ಲಿ ವಿದ್ಯೆ ದೊರೆಯುವ ವಿಶಾಲ ವಿದ್ಯಾದಾನದ ಮಹಾಕೇಂದ್ರವಾಗಿದೆ. ಮೊದಲು ಒಂದೇ ಕಟ್ಟಡದಲ್ಲಿ ಬೆಳಿಗ್ಗೆ ಹೆಣ್ಣುಮಕ್ಕಳಿಗೂ ,ಮಧ್ಯಾಹ್ನ ಗುಂಡುಮಕ್ಕಳಿಗೂ ವರ್ಗಗಳು ನಡೆಯುತ್ತಿದ್ದವು. ಆಗ ಹೆಣ್ಣುಮಕ್ಕಳಿಗೆ ಪ್ರತ್ಯೇಕ ಶಾಲೆಯ ಕಟ್ಟಡ ಕಟ್ಟಿಸುವ ಯೋಜನೆಯಿಂದ ನಮ್ಮ ತಾಯಿ, ಚಿಕ್ಕಮ್ಮಂದಿರು, ಅಕ್ಕಂದಿರು ಹಾಗೂ ಅನ್ಯ ಮಹಿಳೆಯರೂ ಸೇರಿ ನಾಟಕ ಪ್ರದರ್ಶನ ಮಾಡಿ ಹಣ ಸಂಗ್ರಹಿಸಿದರು. ಈ ಎಲ್ಲ ನಾಟಕಗಳಲ್ಲಿ ನಾನೂ ಚಿಕ್ಕ ಪುಟ್ಟ ಪಾತ್ರ ವಹಿಸಿದ್ದೇನೆ. ಆಶ್ಚರ್ಯವೆಂದರೆ ನಾಟಕ ಪ್ರದರ್ಶನದಿಂದ ಹುಟ್ಟಿದ ಶಾಲೆ ಬೆಳೆದದ್ದೂ ನಾಟಕ ಪ್ರದರ್ಶನದಿಂದಲೇ. ನಮ್ಮ ನಾನಾನಂತೆ ನಮ್ಮ ತಾಯಿಯೂ ಸ್ವತಃ ಬಣ್ಣ ಹಚ್ಚಿಕೊಂಡು ರಂಗದ ಮೇಲೆ ಬರದಿದ್ದರೂ ಹಿಂದಿನಿಂದ ಎಲ್ಲ ಜವಾಬ್ದಾರಿಯನ್ನು ಹೊರುತ್ತಿದ್ದಳು. ನಾಟಕದ ತಾಲೀಮು ನಡೆಯುತ್ತಿದ್ದುದು ನಮ್ಮ ಮನೆಯಲ್ಲೇ. ಗರೂಡ ಶ್ರೀಪಾದರಾಯರು ನಾಟಕ ನಿರ್ದೇಶನ ಮಾಡುತ್ತಿದ್ದರು. ಶ್ರೀಪಾದರಾಯರ ತಂಗಿ ವತ್ಸಲಾಬಾಯಿ ನಮ್ಮ ಚಿಕ್ಕಮ್ಮ, ಅಭಿನಯದಲ್ಲಿ ಎತ್ತಿದ ಕೈ. ತಮಾಷೆ ಎಂದರೆ ನಾನಾ ಅವರ ನಾಟಕದಲ್ಲಿ ಪುರುಷರೇ ಸ್ತ್ರೀಪಾತ್ರಗಳನ್ನು ಮಾಡುತ್ತಿದ್ದರು. ಇಲ್ಲಿ ಎಲ್ಲರೂ ಮಹಿಳೆಯರಿದ್ದದ್ದರಿಂದ ಮಹಿಳೆಯರೇ ಪುರುಷ ಪಾತ್ರಗಳನ್ನು ಮಾಡುತ್ತಿದ್ದರು. ಶ್ರೀಪಾದರಾಯರ ಅಕ್ಕ ಶಕುಂತಲಾಬಾಯಿಯವರೂ ಅಭಿನಯದಲ್ಲಿ ತುಂಬಾ ಪ್ರವೀಣರು. ತಾಲೀಮಿನ ನಡು ನಡುವೆ ನಮ್ಮ ಅಮ್ಮ ಎಲ್ಲರಿಗೂ ಚಹ, ಅವಲಕ್ಕಿ ಮಾಡಿ ಕೊಡುತ್ತಿದ್ದಳು. ಅವರಿಗೆಲ್ಲಾ ಮೇಕಪ್ ಮಾಡುವದು, ವೇಷ ತೊಡಿಸುವದು ಎಲ್ಲದರಲ್ಲೂ ಅಮ್ಮನ

ಸಹಕಾರವಿರುತ್ತಿತ್ತು. ಅಲ್ಲದೆ ಸಾಯಂಕಾಲ ಅಂಗಡಿ ಅಂಗಡಿಗಳಿಗೆ, ಮನೆ ಮನೆಗಳಿಗೆ ಹೋಗಿ ಟಿಕೆಟ್ ಹಾಕಿ ಬರುವ ಕೆಲಸವನ್ನು ಇವರೆಲ್ಲ ಮಾಡುತ್ತಿದ್ದರು. ಮುಂದೆ ಅಮ್ಮ ಶಾಲೆಯ ಗೌರವ ಸದಸ್ಯೆಯಾಗಿ ತುಂಬಾ ವರ್ಷ ಕೆಲಸ ಮಾಡಿದ್ದಾಳೆ.

ವಿದ್ಯಾದಾನ ಸಮಿತಿ ಶಾಲೆಯ ಇನ್ನೊಂದು ಅತೀ ವೈಶಿಷ್ಟ್ಯ, ಅತೀ ಗೌರವವೆಂದರೆ ಇದರ ಮೊಟ್ಟ ಮೊದಲ ಹೆಡ್‌ಮಾಸ್ತರು - ಜ್ಞಾನಪೀಠ ಪ್ರಶಸ್ತಿ ವಿಜೇತ ವರಕವಿ, ಕನ್ನಡದ ಹೆಮ್ಮೆಯ ಕವಿ ಡಾ. ದ.ರಾ. ಬೇಂದ್ರೆಯವರು. ಇಲ್ಲಿ ಕನ್ನಡ ಸಾಹಿತ್ಯ ಅಕೆಡೆಮಿ ಪ್ರಶಸ್ತಿ ಪಡೆದ ಇನ್ನೊಬ್ಬ ದೊಡ್ಡ ಸಾಹಿತಿ ಡಾ. ಎನ್. ಕೆ. ಕುಲಕರ್ಣಿಯವರು ಶಿಕ್ಷಕರಾಗಿ ಕೆಲಸ ಮಾಡಿದ್ದಾರೆ. ಅಂತೆಯೇ ಎನ್. ಕೆ. ಅವರಿಗೆ ನಾನಾ ಎಂದರೆ ಅತೀವ ಗೌರವ. ನಾವು ಅವರ ಮನೆಗೆ ಹೋದಾಗ, "ನನಗೆ ಮೊಟ್ಟ ಮೊದಲ ಅನ್ನಾ ಕೊಟ್ಟ ಮಹಾನುಭಾವರು ನಿಮ್ಮಜ್ಜ" ಎಂದರು. ಈ ಸಂಸ್ಥೆಯಲ್ಲಿ ಮುಂದೆ ರಾಷ್ಟ್ರಪತಿ ಪ್ರಶಸ್ತಿ ಪಡೆದ ಕೆ.ಎಸ್.ಎನ್. ಅಯ್ಯಂಗಾರರೂ, ನನ್ನ ತಂದೆಯವರಾದ ಜಿ.ಜಿ. ಪಾಗೆಯವರೂ, ಸಾಹಿತ್ಯ ಅಕೆಡೆಮಿ ಪ್ರಶಸ್ತಿ ಪಡೆದ ಪ್ರಸಿದ್ಧ ಸಾಹಿತಿ ಕೀರ್ತಿನಾಥ ಕುರ್ತಕೋಟಿಯವರೂ ಸೋದರ ಮಾವಂದಿರಾದ ಎಚ್.ಎಸ್. ಹುಯಿಲಗೋಳ (ಬಾಲಕಿಯರ ಶಾಲೆಯ ಪ್ರಾಂಶಪಾಲರು), ವ್ಹಿ.ಎನ್. ಹುಯಿಲಗೋಳ, ಬಿ.ಕೆ. ಹುಯಿಲಗೋಳ, ಎಸ್.ಎನ್. ಸಾವಕಾರ ಇವರೆಲ್ಲಾ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದಾರೆ. ಅದೇ ಶಾಲೆಯಲ್ಲಿ ನಾವೆಲ್ಲಾ ಶಿಕ್ಷಣ ಪಡೆದು ಮುಂದೇ ಅಲ್ಲಿಯೇ ಅಣ್ಣಾ (ಮೋಹನ ಪಾಗೆ), ಅಕ್ಕ (ಕಮಲ ಪಾಗೆ) ಹಾಗೂ ನಾನು ಶಿಕ್ಷಕರಾಗಿ ಕೆಲಸ ಮಾಡಿದ್ದೇವೆ. ಅಜ್ಜ ಕಟ್ಟಿದ ಅಂಥ ಆದರ್ಶ ಶಾಲೆಯಲ್ಲಿ ಸೇವೆ ಸಲ್ಲಿಸಿದ್ದು ನಮಗೆ ತುಂಬಾ ಅಭಿಮಾನದ ವಿಷಯ.

೧೯೮೪ರಲ್ಲಿ ತನ್ನ ವಜ್ರ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿದ ವಿದ್ಯಾದಾನ ಸಮಿತಿ ತನ್ನ ಹುಟ್ಟಿಗೆ ಕಾರಣೀಭೂತರಾದ, ತನ್ನ ಬೆಳವಣಿಗೆಗೆ ತನು, ಮನ, ಧನದಿಂದ ಸಹಾಯ ಮಾಡಿದ ಪುಣ್ಯಾತ್ಮರಾದ ಹುಯಿಲಗೋಳ ನಾರಾಯಣರಾಯರನ್ನೂ ಹಾಗೂ ಸಾಬ ನಾರಾಯಣರಾಯರನ್ನೂ ಸ್ಮರಿಸಿತಲ್ಲದೆ ಗೌರವ ಕಾರ್ಯದರ್ಶಿಗಳಾಗಿ ತತ್ಪರ ಸೇವೆ ಸಲ್ಲಿಸಿದ ಶ್ರೀನಿವಾಸರಾವ್ ಹುಯಿಲಗೋಳ ಹಾಗೂ ಡಾ. ಜಿ.ಜಿ. ಪಾಗೆ ಅವರನ್ನೂ ಸ್ಮರಿಸಿತು. ನಾರಾಯಣರಾಯರ ಜನ್ಮ ಶತಾಬ್ದಿ ವರ್ಷ ೧೯೮೪ರಂದು ಅವರ ಕುರಿತು ಒಂದು ಸ್ಮರಣಿಕೆಯನ್ನು ಪ್ರಕಟಿಸಿ, ಅದರಲ್ಲಿ ಅವರ ಜೀವನ ಚರಿತ್ರೆ ಹಾಗೂ ಭಕ್ತಿಗೀತೆಗಳ ಸಂಗ್ರಹವನ್ನು ಹೊರತಂದಿದ್ದಾರೆ. ಇದು ಆ ಮಹಾಮಹಿಮನ ಪರ ಸಂಸ್ಥೆಯು ನೀಡಿದ ಕೃತಜ್ಞತೆಯ ಕುರುಹು.

## VIDYA DAN SAMITI GADAG. ESTD. 1920
## GOLDEN JUBILEE CELEBRATION 1973

### ಸುವರ್ಣ ಮಹೋತ್ಸವ ಸಮಾರಂಭ
### ವಿದ್ಯಾದಾನ ಸಮಿತಿಯ ಮೂಲ ಸಂಸ್ಥಾಪಕರು



**ದಿ || ಶ್ರೀ ನಾರಾಯಣರಾವ ಕೃಷ್ಣರಾವ ಹುಯಿಲಗೋಳ**

ಮೂಲ ಸಂಸ್ಥಾಪಕರು ಹಾಗೂ ಗೌರವ ಕಾರ್ಯದರ್ಶಿಗಳು (೧೯೨೦ ರಿಂದ ೧೯೪೯) ರವರಗೆ ಕರ್ನಾಟಕ ನಾಡಗೀತೆ "ಉದಯವಾಗಲಿ ನಮ್ಮ ಚಲುವ ಕನ್ನಡನಾಡು" ೧೯೨೪ ರಲ್ಲಿ ರಚಿಸಿ ನಾಡ ಜಾಗ್ರತಿಯನ್ನು ಮಾಡಿದರು. ಕವಿ ಹಾಗೂ ನಾಟಕಕಾರರಾಗಿ ಕನ್ನಡ ಸಾಹಿತ್ಯ ಸೇವೆ ಮಾಡಿದರು. ಮೈಸೂರ ರಾಜ್ಯ ಪ್ರಶಸ್ತಿ ವಿಜೇತರು.



**ದಿ || ಶ್ರೀ ನಾರಾಯಣರಾವ ವಾಸುದೇವರಾವ ಹುಯಿಲಗೋಳ**

ಮೂಲ ಸಂಸ್ಥಾಪಕರು ಹಾಗೂ ಅಧ್ಯಕ್ಷರು. ೧೯೨೦ ರಿಂದ ೧೯೫೭ರ ವರೆಗೆ ಸಮಿತಿಯ ಅಧ್ಯಕ್ಷರಾಗಿ ಸಮಿತಿಯ ಗಂಡುಮಕ್ಕಳ ಹಾಗೂ ಹೆಣ್ಣುಮಕ್ಕಳ ಹೈಸ್ಕೂಲುಗಳ ಪ್ರಗತಿಗಾಗಿ ಶ್ರಮಿಸಿ ಅಖಂಡ ನಿಸ್ವಾರ್ಥ ಸೇವೆ ಸಲ್ಲಿಸಿದರು.



ದಿ || ಶ್ರೀ ಶ್ರೀನಿವಾಸರಾವ ಕೃಷ್ಣರಾವ ಹುಯಿಲಗೋಳ

ಮೂಲಸಂಸ್ಥಾಪಕರು ಹಾಗೂ ಯೆಂಗ್ ಮೆನ್ಸ್ ಫುಟ್‌ಬಾಲ್ ಕ್ಲಬ್ ಗದಗ ಇದರ ಕಾರ್ಯದರ್ಶಿಗಳು ನಾಟಕಗಳನ್ನು ದಿಗ್ದರ್ಶಿಸಿ ಹಾಗೂ ಪ್ರದರ್ಶಿಸಿ ಶಾಲೆಯ ಸ್ಥಾಪನೆಗೆ ಕಾರಣೀಭೂತರು.

**VIDYA DAN SAMITI GADAG ESTD. 1920**
**GOLDEN JUBLEE CELEBRATION 1973**
**ಸುವರ್ಣ ಮಹೋತ್ಸವ ಸಮಾರಂಭ**
**ವಿದ್ಯಾದಾನ ಸಮಿತಿಯ ಮೂಲ ಸಂಸ್ಥಾಪಕರು**



ದಿ || ಡಾ || ಜಿ.ಜಿ. ಪಾಗೆ

ಮೂಲಸಂಸ್ಥಾಪಕರು ಹಾಗೂ ಉಪಾಧ್ಯಕ್ಷರು (೧೯೨೦ ರಿಂದ ೧೯೬೧) ಶಾಲೆಗಳ ಏಳ್ಗೆಗಾಗಿ ನಿಸ್ವಾರ್ಥ ಸೇವೆ ಸಲ್ಲಿಸಿದರು.



ದಿ || ಎಮ್.ಬಿ. ಕುಲಕರ್ಣಿ


ನಿವೃತ್ತ ಪ್ರಾಥಮಿಕ ಶಾಲಾ ಹೆಡ್‌ಮಾಸ್ತರು ಗದಗ ಮೂಲ ಸಂಸ್ಥಾಪಕರು ಶಾಲೆಗಳ ಏಳ್ಗೆಗಾಗಿ ನಿಸ್ವಾರ್ಥ ಸೇವೆ ಸಲ್ಲಿಸಿದರು.



ದಿ || ನಾರಾಯಣಾಚಾರ್ಯ ಗುಡಿ

ಮೂಲ ಸಂಸ್ಥಾಪಕರು

ವಿದ್ಯಾದಾನ ಸಮಿತಿ ಶಾಲೆಯಲ್ಲಿ ಶಿಕ್ಷಕರು ಯಂಗ್ ಮೆನ್ಸ್ ಫುಟ್‌ಬಾಲ್ ಕ್ಲಬ್ ಸದಸ್ಯರು ಮತ್ತು ಶ್ರೇಷ್ಠ ನಟರಾಗಿ ನಾಟಕಗಳಲ್ಲಿ ಸೇವೆ ಸಲ್ಲಿಸಿ ಶಾಲೆಗಳ ಏಳ್ಗೆಗಾಗಿ ಶ್ರಮಿಸಿದರು.



ವಿದ್ಯಾದಾನ ಸಮಿತಿಯ ಶಾಲೆ, ಗದಗ

## ೬. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಹಕಾರ, ಸೇವೆ

ನಾರಾಯಣರಾಯರು ಪುಣೆಯಲ್ಲಿ ಉಚ್ಚ ಶಿಕ್ಷಣ ಪಡೆಯುತ್ತಿದ್ದ ಕಾಲ ಭಾರತದ ಇತಿಹಾಸದಲ್ಲಿ ಕ್ರಾಂತಿಯ ಕಾಲ. ದೇಶದಾದ್ಯಂತ ಸ್ವಾತಂತ್ರ್ಯ ಸಂಗ್ರಾಮದ ಕಹಳೆ ಮೊಳಗುತ್ತಿತ್ತು. ಪುಣೆಯಂತೂ ರಾಷ್ಟ್ರೀಯ ಜಾಗೃತಿಯ ಕುಲುಮೆಯೆ ಆಗಿತ್ತು. ಲೋಕಮಾನ್ಯ ತಿಲಕ, ವೀರ ಸಾವರಕರ, ಗೋಪಾಲಕೃಷ್ಣ ಗೋಖಲೆ, ರಾನಡೆ ಮುಂತಾದ ಸ್ವಾತಂತ್ರ್ಯ ವೀರರು ಜನಸಾಮಾನ್ಯರಲ್ಲಿ ರಾಷ್ಟ್ರೀಯ ಪ್ರೇಮದ ಕಿಚ್ಚು ಹಚ್ಚಿ ಜಾಗರಿಸುತ್ತಿದ್ದ ಉದ್ರಿಕ್ತ ಕಾಲ. ೧೯೦೫ರಲ್ಲಿ ಬಂಗಾಲದ ವಿಭಜನೆಯಾಯಿತು. ಸಾಮ್ರಾಜ್ಯವಾದಿಗಳ "Divide and rule" ಧೋರಣೆಯಿಂದ ಅವರ ಭೇದೋಪಾಯ ತಿಳಿದ ಭಾರತೀಯರು ಕೆರಳಿದ್ದರು. ವಂಗಭಂಗ ಚಳವಳಿಯ ಚಂಡಮಾರುತ ಭಾರತದ ಮೂಲೆಮೂಲೆಗೂ ಹರಡಿ ಎಲ್ಲ ಭಾರತೀಯರನ್ನೂ ಅಲುಗಿಸಿತ್ತು. ಅದರಲ್ಲೂ ಭಾರತದ ತರುಣರು ಕೆರಳಿ ಕೆಂಡವಾಗಿದ್ದರು. ನಾರಾಯಣರಾಯರಂಥ ದೇಶಪ್ರೇಮಿ, ಸಂವೇದನಾಶೀಲ, ರಾಷ್ಟ್ರಾಭಿಮಾನಿ ತರುಣರಿಗೆ ಇದರ ಶಾಪ ತಟ್ಟದಿರಲಿಲ್ಲ.

ನಾರಾಯಣರಾಯರಿಗೆ ಪುಣೆಯಲ್ಲಿ ಫರ್ಗ್ಯುಸನ್ ಕಾಲೇಜಿನಲ್ಲಿದ್ದಾಗ ಅದೇ ಕಾಲೇಜಿನಲ್ಲಿ ಓದುತ್ತಿದ್ದ ವೀರಸಾವರಕಾರ ಹಾಗೂ ರಾನಡೆಯವರ ಸಂಪರ್ಕ ಬಂದಿತು. ಗೋಪಾಲಕೃಷ್ಣ ಗೋಖಲೆಯವರ ಭಾಷಣ ಕೇಳುವ ಸುಯೋಗ ದೊರಕಿತಲ್ಲದೆ

ಅವರನ್ನೂ ಭೇಟಿಯಾಗುವ ಸಂದರ್ಭ ಒದಗಿತು. ಮುಂದೆ ೧೯೧೫ ರಲ್ಲಿ ಕಾಯಿದೆ ಅಭ್ಯಾಸ ಮಾಡಲು ಮುಂಬೈಗೆ ಹೋದಾಗ ಲೋಕಮಾನ್ಯ ಬಾಲ ಗಂಗಾಧರ ತಿಲಕರ ಸಂಪರ್ಕದ ಸಹವಾಸವೂ ಅವರಿಗೆ ದೊರೆಯಿತು. ಇನ್ನುಳಿದ ಅನೇಕ ರಾಷ್ಟ್ರನಾಯಕರನ್ನು ಕಾಣುವದರ ಮೂಲಕ ಅವರು ತಮ್ಮಲ್ಲಿಯ ರಾಷ್ಟ್ರಾಭಿಮಾನವನ್ನು ಉಜ್ವಲವಾಗಿ ಬೆಳೆಯಿಸಿಕೊಂಡರು. ಅಪ್ಪಟ ನಿರಾಡಂಬರ ದೇಶಭಕ್ತರಾಗಿರಲು ಸಂಕಲ್ಪ ಮಾಡಿದರು.

ನಾರಾಯಣರಾಯರು ಕಾಂಗ್ರೆಸ್ಸಿನ ಸಾಮಾನ್ಯ ಸದಸ್ಯರಾಗಿ ನಿಷ್ಠೆಯ ಅನುಯಾಯಿಗಳಾಗಿ ಅನೇಕ ಕಾಂಗ್ರೆಸ್ಸು ಅಧಿವೇಶನ ಕಂಡಿದ್ದಾರೆ. ತನ್ಮೂಲಕ ಭಾರತದಲ್ಲೆಲ್ಲ ಸುತ್ತಿದ್ದಾರೆ. ಲಖನೌ, ಕಲಕತ್ತಾ, ಕಾಕಿನಾಡಾ, ಬೆಳಗಾವಿ ಮುಂತಾದ ಕಾಂಗ್ರೆಸ್ಸು ಅಧಿವೇಶನಗಳಿಗೆ ಹೋಗಿ ಬಂದಿದ್ದಾರೆ. ಅವರು ಲಖನೌ ಕಾಂಗ್ರೆಸ್ ಅಧಿವೇಶನಕ್ಕೆ ಹೋದಾಗ ಗಾಂಧೀಜೀ ಮಾಡಿದ ಭಾಷಣ ಕುರಿತು ತಮ್ಮ ಅನುಭವವನ್ನು ಸ್ವಾರಸ್ಯವಾಗಿ ಹೇಳುತ್ತಿದ್ದುದು ಹೀಗೆ -

"ಲಖನೌ ಕಾಂಗ್ರೆಸ್ಸಿಗೆ ಹೋದೆ. ಅಲ್ಲಿ ದೊಡ್ಡ ದೊಡ್ಡ ಜನರು ಬಂದಿದ್ದರು. ಅದೇ ಆಗ ಗಾಂಧೀ ಆಫ್ರಿಕಾದಿಂದ ಭಾರತಕ್ಕೆ ಬಂದಿದ್ದರು. ಸ್ಟೇಜ್ ಮೇಲೆ ಅವರೂ ಇದ್ದರು. ಎಲ್ಲಾರೂ ಇಂಗ್ಲೀಷದಾಗ ಮಾತಾಡಿದರ, ಅವರು ಒಮ್ಮೆಲೆ ಹಿಂದಿಯಲ್ಲಿ ಭಾಷಣ ಆರಂಭ ಮಾಡಿದರು - 'ಹಿಂದಿ ನಮ್ಮ ಭಾಷೆ' ಅಂದರು. ಅವರ ಭಾಷಣ ನನ್ನ ಮೇಲೆ ಬಹಳ ಪರಿಣಾಮ ಮಾಡಿತು. ಅವರು ಆಗ ಖಾದಿ ಬಗ್ಗೆಯೂ ಹೇಳಿದರು. ...ಅದರಿಂದ ನಾನೂ ಅಂದಿನಿಂದಲೇ ಖಾದಿ ಉಡಲಿಕ್ಕೆ ಆರಂಭ ಮಾಡಿದೆ. ನನ್ನ ಧೋತರ ಒಂದೇ ಖಾದಿ ಅಲ್ಲಾ ... ಉಳಿದದ್ದು ಎಲ್ಲಾ ಖಾದಿ..." ಎಂದು. ಮುಂದೆ ಅವರ ಧೋತರವೂ ಖಾದಿ ಇರುತ್ತಿತ್ತು. ಲಖನೌ ಕಾಂಗ್ರೆಸ್ ನಾರಾಯಣರಾಯರಿಗೆ ರಾಷ್ಟ್ರಾಭಿಮಾನದ ದೀಕ್ಷೆ ಕೊಟ್ಟಿತೆಂದೇ ಹೇಳಬಹುದು.

ಶ್ರೀ ವಿವೇಕಾನಂದರ ಸ್ಫೂರ್ತಿಯ ಗಾಳಿಯಿಂದ ದೇಶಾಭಿಮಾನದ ಬಿರುಗಾಳಿ ಭಾರತದ ಮೂಲೆ ಮೂಲೆಯಲ್ಲಿ ತಲುಪಿದಾಗ ಭಾರತದ ಮುಖ್ಯ ಮುಖ್ಯ ನಗರಗಳಲ್ಲಿ ಪ್ರಾರಂಭವಾದ ಫುಟ್‌ಬಾಲ್ ಕ್ಲಬ್ಬುಗಳು, ಬ್ರಿಟಿಷರನ್ನೂ ಅವರ ಆಟದಲ್ಲಿಯೇ ಸೋಲಿಸಬೇಕೆಂಬ ದೇಶಾಭಿಮಾನದಿಂದಲೇ ಹುಟ್ಟಿಕೊಂಡವು. ಅದೇ ಗಾಳಿಯು ಇವರಿಗೂ ಸೋಂಕಿ ಗದುಗಿನಲ್ಲಿ 'ಯಂಗ್ ಮೆನ್ಸ ಫುಟಬಾಲ್ ಕ್ಲಬ್'ನ ಸ್ಥಾಪನೆ ಮಾಡಿದರು.

ನಾರಾಯಣರಾಯರು ಬಹುಶಃ 'ನರಮ್' ದಳದ ಸೇನಾನಿ. ಸ್ವಾತಂತ್ರ್ಯ ಚಳುವಳಿಯಲ್ಲಿ ಮುನ್ನುಗ್ಗಿ ಚಟುವಟಿಕೆ ಮಾಡದಿದ್ದರೂ ಚಳುವಳಿಯಲ್ಲಿ ಜೇಲಿಗೆ

ಹೋದವರ ಬೆಂಗಾವಲಾಗಿದ್ದರು. ಇವರ ಸಂಸ್ಕಾರ ಮನೆಯಲ್ಲಿಯ ಚಿಕ್ಕವರಿಗೆ ಆಗದಿರಲಿಲ್ಲ. ನಮ್ಮ ತಾಯಿ, ಚಿಕ್ಕಮ್ಮ, ಸೋದರಮಾವ ಇವರೆಲ್ಲ ಚಳುವಳಿಯಲ್ಲಿ ಸಕ್ರಿಯ ಭಾಗವಹಿಸಿದ್ದಾರೆ. ನಮ್ಮ ತಾಯಿ ಆ ದಿನಗಳನ್ನು ನೆನೆದಾಗೆಲ್ಲ ಆ ಅನುಭವಗಳನ್ನು ರೋಮಾಂಚನವಾಗುವಂತೆ ಹೇಳುತ್ತಿದ್ದರು. ಸರಾಯಿ ಅಂಗಡಿಗಳ ಎದುರಿಗೆ ಪಿಕೆಟಿಂಗ್ ಮಾಡಲು ಅಮ್ಮ ಹಾಗೂ ಚಿಕ್ಕಮ್ಮ ಇವರೆಲ್ಲ ಹೋಗುತ್ತಿದ್ದರಂತೆ. ರಸ್ತೆಯ ಮೇಲೆ ಮಲಗಿ ಸತ್ಯಾಗ್ರಹ ಮಾಡುತ್ತಿದ್ದರಂತೆ. ನಮ್ಮ ಚಿಕ್ಕಮ್ಮ (ಕುಸುಮಾ ಹುಯಿಲಗೋಳ) ಹಾಗೂ ಕಕ್ಕಿ (ವತ್ಸಲಾ ಪಾಗೆ) ಇಬ್ಬರೂ ಒಂದು ಚಳುವಳಿ ಕ್ಯಾಂಪಿನ ಪತ್ರಗಳನ್ನು ಇನ್ನೊಂದು ಕ್ಯಾಂಪಿಗೆ ರಹಸ್ಯವಾಗಿ ಮುಟ್ಟಿಸಲು ಚಪಾತಿ, ರೊಟ್ಟಿಗಳ ನಡುವೆ ಪತ್ರಗಳನ್ನು ಬಚ್ಚಿಟ್ಟುಕೊಂಡು ಮುಚ್ಚಿಟ್ಟುಕೊಂಡು ಮುಟ್ಟಿಸುತ್ತಿದ್ದರಂತೆ. ನಾವು ಚಿಕ್ಕವರಿದ್ದಾಗ ನೋಡಿದ್ದೇವೆ, ನಮ್ಮ ಅಮ್ಮ ಮದುವೆಯಾದರೂ ಈ ಚಟುವಟಿಕೆಗಳನ್ನು ತೊರೆದಿರಲಿಲ್ಲ. ನಮ್ಮ ಮನೆಯಲ್ಲೇ ಔಟ್ ಹೌಸಿನಲ್ಲಿ ಕಾಂಗ್ರೆಸ್ ಶಿಬಿರದವರು ಮದ್ದು, ಗುಂಡುಗಳನ್ನು ಶೇಖರಿಸಿ ಇಟ್ಟಿದ್ದರು. ನಮ್ಮ ಮನೆಯ ಅರ್ಧ ಭಾಗ ಹಾಗೂ ಪಕ್ಕದ ಗರೂಡ (ಕಕ್ಕಿಯ ತವರುಮನೆ) ಅವರ ಮನೆಯಲ್ಲೂ ಕಾಂಗ್ರೆಸ್ಸಿನ ಎರಡು ನೂರು ಜನ ಭೂಗತರಾಗಿ ಕೆಲಸ ಮಾಡುವವರಿಗೆ ಬಾಡಿಗೆ ಕೊಟ್ಟಿದ್ದರು. ಗಾಂಧಿ ಭಜನೆ, ರಾಟಿಯಿಂದ ನೂಲು ತೆಗೆಯುವದು ಇವೆಲ್ಲ ಪ್ರತಿದಿನ ನಮ್ಮ ಮನೆ ಜನ ಮಾಡುತ್ತಿದ್ದರು. ಚಳುವಳಿಯಲ್ಲಿ ಗಾಯಾಳುಗಳಾಗಿ ಬಂದವರಿಗೆ ಈ ಮಹಿಳೆಯರೆಲ್ಲ ಔಷಧಿ, ಪಟ್ಟಿ ಎಲ್ಲಾ ಮಾಡುತ್ತಿದ್ದರು. ನಮ್ಮ ತಾಯಿ ಅವರೆಲ್ಲ ನಾರಾಯಣ ದೇವರ ದೇವಸ್ಥಾನದಲ್ಲಿ ರಾಟಿಯಿಂದ ನೂಲು ಹೆಣೆಯಲು ಕಲಿಸುವ ಕ್ಲಾಸು ನಡೆಸುತ್ತಿದ್ದರಂತೆ. ಒಳ್ಳೇ ನೂಲು ತಗೆದವರಿಗೆ ಬಳೆ, ರಿಬ್ಬನ್ನು ಬಹುಮಾನ ಕೊಡುತ್ತಿದ್ದರಂತೆ. ನಾನಾ ಇದನ್ನೆಲ್ಲಾ ನೋಡಲು ಬರುತ್ತಿದ್ದರಂತೆ. ಮುಂದೆ ನಮ್ಮ ಚಿಕ್ಕಮ್ಮ ಹಾಗೂ ಕಕ್ಕಿಗೆ ಸ್ವಾತಂತ್ರ್ಯ ಹೋರಾಟಗಾರರೆಂದು ಸರ್ಟಿಫಿಕೇಟು ಹಾಗು ತಿಂಗಳಿಗೆ ರಕಮು ಕೊಡುತ್ತಿದ್ದರು. ನಮ್ಮ ತಾಯಿಗೆ ಬಂದದ್ದನ್ನು ನಮ್ಮ ಅಣ್ಣ (ಮೋಹನ - ಹೆಸರಿಗೆ ತಕ್ಕಂತೆ ಗಾಂಧೀಜಿ) ನಿರಾಕರಿಸಿದನಂತೆ. 'ರಾಷ್ಟ್ರಸೇವೆಗೆ ಬೆಲೆ ಕಟ್ಟುವದು ಬೇಡ' ಎನ್ನುವದೇ ಅವನ ಮತ.

**ನಾಟಕಗಳಲ್ಲಿ ರಾಷ್ಟ್ರಪ್ರೇಮ** - ನಾರಾಯಣರಾಯರು ೧೯೧೦ರಲ್ಲಿ ಬರೆದ "ವಜ್ರಮುಕುಟ" ನಾಟಕದಲ್ಲಿ ಸೂಚ್ಯವಾಗಿ ಬ್ರಿಟಿಷ ಬಾದಶಾಹಿ ಆಡಳಿತದ ಬಗ್ಗೆ ಧ್ವನ್ಯರ್ಥವೂ ಅಡಕವಾಗಿತ್ತು. ಮುಂದೆ ೧೯೧೯ರಲ್ಲಿ ಬರೆದ "ಶಿಕ್ಷಣ ಸಂಭ್ರಮ " ನಾಟಕದಲ್ಲಿ ವ್ಯಕ್ತಿ ಶಿಕ್ಷಣಕ್ಕೆ ಆದ್ಯತೆ ಕೊಟ್ಟಂತೆ ಕೈನೂಲು, ಖಾದಿ ಬಟ್ಟೆಯ ಬಳಕೆ ಮುಂತಾದವನ್ನು ಪ್ರೋತ್ಸಾಹಿಸಿ ಸ್ವದೇಶೀ ಚಳುವಳಿಯ ಪೋಷಣೆ, ಪ್ರಚಾರ ಮಾಡಿದ್ದಾರೆ.

"ಸ್ತ್ರೀ ಧರ್ಮ ರಹಸ್ಯ", "ಶಿಕ್ಷಣ ಸಂಭ್ರಮ" ಹಾಗೂ "ಪತಿತೋದ್ಧಾರ"ದಲ್ಲಿ ಬ್ರಿಟಿಷರನ್ನು, ಅವರ ಆಳಿಕೆಯನ್ನು ಖಂಡಿಸಿ ಅನೇಕ ಸಂಭಾಷಣೆಗಳಿವೆ. ಇವನ್ನು ನೋಡಿದಾಗ ನಾಟಕಗಳ ಮೂಲಕ ನಾರಾಯಣರಾಯರು ಜನರಲ್ಲಿ ರಾಷ್ಟ್ರೀಯ ಜಾಗೃತಿ ತರುವ, ಸ್ವಾತಂತ್ರ್ಯ ಸಂಗ್ರಾಮಕ್ಕೆ ಜನರನ್ನು ಆಕರ್ಷಿಸುವ ಕೆಲಸವನ್ನು ಪ್ರಭಾವಯುತವಾಗಿ ಮಾಡಿದ್ದಾರೆ ಎನ್ನಬಹುದು. ಅಂಥ ಸಂದಿಗ್ಧ ವಾತಾವರಣದಲ್ಲೂ ಬ್ರಿಟಿಷರ ವಿರುದ್ಧದ ಅವರ ಹೇಳಿಕೆಗಳು ಅವರ ಸ್ಥೈಯವನ್ನೂ, ರಾಷ್ಟ್ರಾಭಿಮಾನವನ್ನು ಒತ್ತಿ ಹೇಳುತ್ತವೆ.

ಕನಾರ್ಟಕದ ಅನೇಕ ಸ್ವಾತಂತ್ರ್ಯ ಹೋರಾಟಗಾರರ ಜೊತೆಗೂ ಅವರ ಸಂಪರ್ಕವಿತ್ತು. ಕರಮಕರ, ದಿವಾಕರ, ಹರ್ಡಿಕರ, ಗರೂಡ ಸದಾಶಿವರಾಯರು, ಕೃಷ್ಣಾಚಾರ ಪೂಜಾರ, ಅನಂತರಾವ್ ಜಾಲಿಹಾಳ, ವಾಸುದೇವರಾವ್ ಉಮಚಗಿ, ಆನಂದರಾವ ಉಮಚಗಿ ಮುತಾದವರು ನಾರಾಯಣರಾಯರ ನಿಕಟ ಸಂಭಂಧದಲ್ಲಿದ್ದವರು.

**ಕಾವ್ಯಗಳಲ್ಲಿ ಸ್ವದೇಶಾಭಿಮಾನ** - ನಾರಾಯಣರಾಯರ ರಾಷ್ಟ್ರಾಭಿಮಾನ, ಕಾಂಗ್ರೆಸ್ ತತ್ವಗಳಲ್ಲಿ ವಿಶ್ವಾಸ, ಗಾಂಧೀವಾದದಲ್ಲಿ ಅಚಲ ನಂಬಿಕೆ ಇವು ಅವರ ಕಾವ್ಯಗಳಲ್ಲಿ ಅಭಿವ್ಯಕ್ತವಾಗಿವೆ. ಇವುಗಳ ಕೆಲ ಉದಾಹರಣೆಗಳು ಈ ಕೆಳಗಿನಂತಿವೆ -

**೧. "ಭಾರತ ಭೂವನ" (ನಾಡತೋಟ)** - ದಲ್ಲಿ ಬ್ರಿಟಿಷರು ವ್ಯಾಪಾರಕ್ಕೆಂದು ಬಂದು ಭಾರತ ಮಾತೆಯ ಸಂಪತ್ತನ್ನು ಸೂರೆಗೈಯ್ದ ಕಥೆ ಇದೆ. ಹಿತಚಿಂತಕರ ಸೋಗು ಹಾಕಿದ್ದ ಬ್ರಿಟಿಷರು ಭಾರತೀಯರ ಜಾಗೃತಿ ಕಂಡು ಬೆರಗಾಗುತ್ತಾರೆ.

*"ಶ್ರೀವರನ ಕೃಪೆಯಿಂದ ಭಾರತ*
*ಭೂವನವು ತಾಂ ಬೆಳೆದು ಬಂದಿರೆ*
*ತೀವಿದಾ ಸುಗ್ಗಿಗಳ ಫಲಗಳ ಭರದ ಬಲದಿಂದ*
*ಅವು ಕಾಳ್ಗಳು ಚಿನ್ನ ರನ್ನವ*
*ಸೇವಿಸುತೆ ಘನ ಹಿಂದು ರಾಷ್ಟ್ರದ*
*ದೇವಿ ಮುದದೊಳು ಮೆರೆಯುತ್ತಿದ್ದಳು ಬಹಳ ಸೊಬಗಿನಲಿ ॥ "*

ಬಟ್ಟೆಯ ವ್ಯಾಪಾರಕ್ಕೆಂದು ಬಂದ ಪರದೇಶಿಯು ಭಾರತದ ಸಂಪತ್ತನ್ನು ಕಂಡನು. ಅವನ ಬಾಯಲ್ಲಿ ನೀರೂರಿತು. ಭಾರತ ಮಾತೆಯನ್ನು - "ಸವಿ ಸವಿ ಮಾತಿನಿಂ ಠಕ್ಕಿಸಲಲ್ಲಿ ನುಡಿದನು ಬಹಳ ಕರುಣೆಯನಾಂತವನ ತೆರದಿ", "ನೀನೇಕೆ ಕಷ್ಟಪಟ್ಟು ಕೆಲಸ ಮಾಡುವೆ ನಾನು ನಿನ್ನ ಕುಳನಾಗಿ ಕಷ್ಟಪಟ್ಟು ದುಡಿದು ನೀನು ಕೊಟ್ಟಷ್ಟನ್ನು ತೆಗೆದುಕೊಂಡು ಎಲ್ಲಾ

ಸಂಪತ್ತನ್ನು ತಂದು ನಿನಗೊಪ್ಪಿಸುವೆನೆಂದ ಮಾತಿಗೆ ಅವಳು ಮರುಳಾದಳು. ಅಲ್ಲದೆ ತಂದ ಥಳಥಳಿಸುವ ವಸ್ತುಗಳ ಆಸೆಯನ್ನೂ ತೋರಿಸುವನು. ಅವನ ಮೋಸಕ್ಕೆ ಬಲಿಯಾಗಿ ಬಳಲಿ ಅನಂತರ ಜಾಗೃತಳಾಗಿ (ದೇಶದ ಜನರೆಲ್ಲ ಒಂದಾಗಿ) ಪರದೇಶಿಯನ್ನು ಹೊರಗೆ ತಳ್ಳುವಳು ಹಾಗೂ ಸ್ವಾತಂತ್ರ್ಯ ಪಡೆಯುವಳು".

೨. **"ಆಗುಂಬೆಯ ಸೂರ್ಯಾಸ್ತ"** - ಇಲ್ಲಿ ಕಾಂಗ್ರೆಸ್ ತತ್ವಗಳಲ್ಲಿ ನಿಷ್ಠೆಯಿದ್ದ ಕವಿಯು ನಿಸರ್ಗದ ದೃಶ್ಯಗಳ ಹೋಲಿಕೆಗಾಗಿ ಬಳಸಿದ ವಸ್ತುಗಳು ರಾಟಿ, ಹಿಂಜಿದರಳೆಯ ರಾಶಿ, ಗಂಜಿ ಹಾಕಿದ ಬಿಳಿ ಖಾದಿ ಬಟ್ಟೆ. ಇಲ್ಲಿ ವ್ಯಕ್ತವಾದ ಗಾಂಧೀ ತತ್ವಗಳ ಪ್ರಭಾವ, ರಾಷ್ಟ್ರಾಭಿಮಾನ ಕವಿಯ ಮನೋವೃತ್ತಿಯನ್ನು ನಿಚ್ಚಳವಾಗಿ ತೋರುತ್ತವೆ. ಸೂರ್ಯಾಸ್ತದ ನಿಸರ್ಗದ ದೃಶ್ಯದಲ್ಲಿ ರಾಷ್ಟ್ರೀಯ ಧ್ವಜವನ್ನು ಕಾಣುವದು ಅವನ ಮನದಾಳದ ಮನೋವಿಜ್ಞಾನದ ಪರಿಚಯವೇ ಸರಿ.

*"ಸಂಜೆವೆಣ್ತಗೆದಿಟ್ಟ ತೇಜಃ*
*ಪುಂಜ ಚೆನ್ನದ ರಾಟೆಯದೆ ಎನೆ*
*ಪಂಜುಗದಿರನು ಪಶ್ಚಿಮಾಂಗಣದಲ್ಲಿ ಶೋಭಿಸಿದ ।*
*ಹಂಜಿದರಳೆಯ ರಾಶಿಯೋ ಬಿಳಿ*
*ಗಂಜಿ ಹಿಡಿಸಿದ ಕದ್ದರೋ (ಖಾದಿ) ಎನೆ*
*ರಂಜಿಸಿದನಾಗಂತು ಎಂದಿನ ಕಡಲದೊರೆ ಕಣ್ಗೆ ॥"*

*"ದೆಸೆಯೊಳಗೆ ಕೇಸರಿ ಬಣ್ಣದ*
*ವಿಸರ ರತ್ನಾಕರನ ಹಬ್ಬಿದ*
*ವಸನ ಭೂಮಿಯ ಹಸುರು ತೊಡಗೆಯು ಮತ್ತೆ ಮಧ್ಯದೊಳು*
*ಮಿಸುಪ ಸೂರ್ಯನ ಚರಕದಂದದೊ*
*ಳೆಸೆಯೆ ಸೋಜಿಗವೆನಲು ಜಗದೊಳು*
*ಹೆಸರು ಪಡೆದಿಹ ಭಾರತ ರಾಷ್ಟ್ರಧ್ವಜದ ನೆನಪಾಯ್ತು ॥"*

೩. ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನ ಸುವರ್ಣ ಮಹೋತ್ಸವದ ಅಧಿವೇಶನದ ಸಂದರ್ಭದಲ್ಲಿ ಬರೆದ ಸ್ವಾಗತ ಗೀತೆಯಲ್ಲಿ ಅವರು ಭಾರತದಲ್ಲಿ ಎಂಬತ್ತು ಪ್ರತಿಶತ ಹಳ್ಳಿಗಳಿವೆ. ಆದುದರಿಂದ ಹಳ್ಳಿಗಳೇ ತಾಯ್ಬೇರು, ಅವುಗಳ ಬೆಳವಣಿಗೆಗೆ ಶ್ರಮಿಸಬೇಕೆನ್ನುತ್ತ -

*"ಹಳ್ಳಿಗರು ತಾಯ್ಬೇರು ಕೆಲಸಗೇಡೆಂತೆಂಬ ।*
*ಕಳ್ಳಹುಳುವನು ತಳ್ಳಿ ನೀರುಣಿಸಿ ।*
*ತಿಳಿವೆಂಬ ಒಳ್ಳೆ ಪರಿಯಲಿ ಫಲವನೀವಂತೆ ನಾಡೆಂಬ ।*
*ಬಳ್ಳಿಯನು ಬೆಳೆಸಬೇಕು ಆದರೆ ಭಾರತದ ಬಡತನ ನೀಗಲು"*

"ಕೈಗೆಲಸ, ವ್ಯಾಪಾರ, ಬೇಸಾಯ ಉದ್ಯೋಗ । ನೀಗೆ ನಾಡೊಳು ಬಂದ ಬಡತನಗಳನುಭೋಗ " ಹೋಗಿ ಸುಸ್ಥಿತಿ ಪುನಃ ಬರಲಿ ಎಂಬ ಆಶಯ ಇಲ್ಲಿದೆ.

"ಸಿರಿ ಸೌಖ್ಯ ಸ್ವಾತಂತ್ರ್ಯ ಒಕ್ಕಟ್ಟು ಒಪ್ಪಂದ ಭಾರತ ದೇಶದಿ ಬಿಡದೆ ತರಲು ಜನುಮಕೆ ಬಂದ". ಇಂಡಿಯನ್ ನ್ಯಾಶನಲ್ ಕಾಂಗ್ರೆಸ್ಸಿನ ಸುವರ್ಣ ಮಹೋತ್ಸವದ ಅಧಿವೇಶನವು ಅವುಗಳನ್ನು ಸಾಧಿಸಲಿ ಎಂದು ನಾರಾಯಣರಾಯರು ಹಾರೈಸುತ್ತಾರೆ.

೪. "ಭಾರತ ಮಾತೆ ಜಯ ಜಯ ಸನ್ನುತೆ" -
"ಭಾರತ ಮಾತೆ ಜಯ ಜಯ ಸನ್ನುತೆ ।
ಚಾರು ಪದಕೆ ನಮಿಸುವೆ ತಲೆಬಾಗುತೆ"

ಎಂಬ ಈ ಹಾಡಿನಲ್ಲಿ "ವಂದೇ ಮಾತರಂ" ಗೀತೆಯ ಛಾಯೆ ಕಂಡು ಬರುತ್ತದೆ.

ಭಾರತ ಮಾತೆಯು ಶ್ರುತಿ, ಶಾಸ್ತ್ರ, ಸ್ಮೃತಿ, ಶಾಸ್ತ್ರ ಪುರಾಣ ಇವುಗಳಿಂದ ಸುಸಂಸ್ಕೃತಳಾದವಳು. ತುಂಬಿದ ನದಿಗಳ ನೀರಿನಿಂದ ಸ್ನಾನ ಮಾಡಿದವಳು. ಕನಕ, ರತ್ನ, ಮಣಿ, ವಜ್ರಗಳಿಂದ ಸುಶೋಭಿತಳು. ಫಲ, ಧಾನ್ಯ, ಹಾಲು - ಹಣ್ಣುಗಳಿಂದ ನೈವೇದ್ಯ ಪಡೆದವಳು. ಇವೆಲ್ಲವುಗಳಿಂದ ಅವಳು ವೈಭವಯುತಳಾಗಿದ್ದಾಳೆ.

ಭಾರತ ಮಾತೆಯು ಧೀರರಿಂದ, ಜ್ಞಾನಿಗಳಿಂದ, ಮುನಿಗಳಿಂದ ಪೂಜಿತಳು. ರಾಮ ; ಕೃಷ್ಣ, ಅರ್ಜುನರಿಂದ ವಂದಿತಳು. ಸೀತೆ, ದ್ರೌಪದಿಯರಿಂದ ಹೊಗಳಲ್ಪಟ್ಟವಳು. ಮಾರುತಿ, ಗರುಡ ಮೊದಲಾದವರಿಂದ ಸೇವೆ ಪಡೆದವಳು, ಇವಳು ಮೂವತ್ತು ಕೋಟಿ ಭಾರತೀಯರಿಗೆ ಅಧಿದೇವತೆ.

೫. "ಬನ್ನಿರೊ ನೋಡ ಬನ್ನಿರೊ" - ಭಾರತಕ್ಕೆ ಸ್ವಾತಂತ್ರ್ಯ ದೊರಕಿದ ಸಂದರ್ಭದಲ್ಲಿ ಈ ಕವಿತೆ ರಚಿತವಾಗಿರಬಹುದು. ಈ ಕವಿತೆ 'ದುಮ್ಮಿ ದುಮ್ಮಿ' ಧಾಟಿಯಲ್ಲಿ ಬರೆದುದಾಗಿದೆ. ಸ್ವಾತಂತ್ರ್ಯ ಹಬ್ಬ ನೋಡಲು ಕವಿ ಜನತೆಗೆ ಕರೆ ಕೊಡುತ್ತಾನೆ. ವಿದೇಶೀ ಬಂಧನದಿಂದ ಮುಕ್ತಿ ದೊರೆತದ್ದರಿಂದ "ಜಯ ಹಿಂದ"ಎಂದು ಸಾರುತ್ತ ಬನ್ನಿರಿ ಎನ್ನುತ್ತಾರೆ ನಾರಾಯಣರಾಯರು.

ನಮ್ಮ ತ್ರಿವರ್ಣ ಧ್ವಜವನ್ನು ತಯಾರಿಸಿಕೊಂಡು ಕೈಯ್ಯಲ್ಲಿ ಹಿಡಿದು ಬರಲು ಹೇಳುತ್ತಾರೆ. ಮೇಳ ವಾದ್ಯಗಳ ಜೊತೆ ಬರಲು ಆಹ್ವಾನಿಸುತ್ತಾರೆ. ಜನರು ತಮ್ಮ ಮನೆಯ ಮುಂದೆ ರಂಗೋಲಿಗಳಿಂದ ಅಲಂಕರಿಸಿ ತಳಿರು ತೋರಣಗಳಿಂದ ಶೃಂಗರಿಸಲು ಕೋರುತ್ತಾರೆ. ಧೀರ ಗಂಭೀರ ವೀರ ಕುಮಾರರಾದ ಭಾರತೀಯರು "ನಾವು ಸ್ವತಂತ್ರರಾಗಿದ್ದೇವೆ" ಎಂದು ಸಾರಿ ಹೇಳಲು ಹೇಳುತ್ತಾರೆ. ನಾರಿಯರನ್ನು ಅವರಿಗೆಲ್ಲ ಆರತಿ ಎತ್ತಲು ಹೇಳುತ್ತಾರೆ. ಗದುಗಿನ ವೀರನಾರಾಯಣನ ದಯೆಯಿಂದ ಸ್ವಾತಂತ್ರ್ಯ ದೊರಕಿತು ಎನ್ನುತ್ತಾರೆ.

೬. "ಸಹಜೀವನ" - ಶಾಂತಿಯುತವಾದ ಶ್ರೇಷ್ಠ ಸಹಜೀವನವೇ ಜಾಗತಿಕ ಶಾಂತಿಗೆ ಮುಖ್ಯವಾಗಿ ಬೇಕು ಎಂಬ ವಿಚಾರ ಇಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. ಪರಸ್ಪರ ಸಹಕಾರ, ಸಹವಾಸ, ಸಹನಶೀಲತೆ, ಪ್ರೇಮ ವಿಶ್ವಾಸಗಳೇ ಶಾಂತಿಯುತ ಶ್ರೇಷ್ಠ ಸಹಜೀವನದ ಮಾರ್ಗದಲ್ಲಿ ನಮ್ಮನ್ನು ಸುಗಮವಾಗಿ ಸಾಗಿಸಬಲ್ಲವು. ಇದರಲ್ಲಿ "ಜೀವಿಸು, ಜೀವಿಸಗೊಡು" ಎಂಬ ತತ್ವವನ್ನು ತಿಳಿಸಲಾಗಿದೆ. ಈ ತತ್ವದಂತೆಯೇ ಸ್ವೀಕೃತವಾದ 'ಪಂಚಶೀಲ ತತ್ವಗಳು' ಜಾಗತಿಕ ಸತ್ಯವಾಗಿ ಪರಿಣಮಿಸಿವೆ. ಆದುದರಿಂದ ಅಂಥ ಸತ್ಯಕ್ಕೆ ವಂಚನೆ ಮಾಡದಂತೆ ನಡೆದುಕೊಳ್ಳೋಣ. ಆಂದರೆ ಶಾಂತಿಯುತ ಘನ ಸಹಜೀವನ ನಮಗೆ ದೊರೆಯುವದು. ಎಲ್ಲೆಡೆ ಸುಖ, ಶಾಂತಿ, ತಿಳಿವಳಿಕೆ, ಪ್ರೀತಿ, ವಿಶ್ವಾಸ ಹರಡಲಿ ಎಂಬುದು ಕವಿಯ ಆಶಯ.

ಈ ರೀತಿ ನಾರಾಯಣರಾಯರು ತಾವು ರಚಿಸಿದ ಈ ಕಾವ್ಯಗಳಲ್ಲಿ ಹಾಗೂ ನಾಟಕಗಳಲ್ಲಿ ತಮ್ಮ ರಾಷ್ಟ್ರೀಯ ಮನೋವೃತ್ತಿಯನ್ನು ಓತಪ್ರೋತವಾಗಿ ತುಂಬಿದ್ದಾರೆ. ಇವುಗಳುದ್ದಕ್ಕೂ ಅವರ ಸಕಾರಾತ್ಮಕ ಸಾತ್ವಿಕ ಆಶಯ, ದೇಶದ ವಿಷಯಕ್ಕೆ ಅವರಿಗಿರುವ ಅಮೋಘ ಪ್ರೀತಿ, ಕಳಕಳಿ, ಸ್ವಾಭಿಮಾನ ಹಾಸುಹೊಕ್ಕಾಗಿ ಹರಿದು ಬಂದದ್ದು ನಿಚ್ಚಳವಾಗಿ ತೋರುತ್ತದೆ.

## ೭. ಕನ್ನಡ ನಾಡು ಹಾಗೂ ನುಡಿಗೆ ಕೊಡುಗೆ

### ಕನ್ನಡ ನಾಡ ಸೇವೆ

ಕನ್ನಡ ಕುಲಕೋಟಿಯನ್ನು "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಎಂಬ ಕಾವ್ಯ ಕಹಳೆಯಿಂದ ಕೂಗಿ ಜಾಗೃತ ಮಾಡಿದ ಕವಿಪುಂಗವ ಹುಯಿಲಗೋಳ ನಾರಾಯಣರಾಯರು. ಈ ಹಾಡನ್ನು ಕೇಳಿದಾಗ ಇಂದಿಗೂ ತುಂಬಾ ಜನ

ರೋಮಾಂಚನಗೊಳ್ಳುತ್ತಾರೆ. ಹರಿದು ಹಂಚಿ ಹೋಗಿದ್ದ ಕರ್ನಾಟಕ ರಾಜ್ಯವನ್ನು ಒಂದುಗೂಡಿಸುವಾಗ ಈ ಹಾಡು ಅತ್ಯಂತ ಮಹತ್ವದ ಭೂಮಿಕೆ ವಹಿಸಿತು. ಕನ್ನಡ ನಾಡಿನ ಭವ್ಯ ಪರಂಪರೆ, ಸಂಸ್ಕೃತಿ ಸ್ವರೂಪವನ್ನು ಅಪ್ಪಟವಾಗಿ ತೋರಿಸುವ ಈ ಹಾಡನ್ನು ಹಾಡದೇ ಉತ್ತರ ಕರ್ನಾಟಕದಲ್ಲಿ ಯಾವ ಸಾರ್ವಜನಿಕ ಸಮಾರಂಭಗಳು ಆರಂಭವಾಗುತ್ತಿರಲಿಲ್ಲ. ಏಕೀಕರಣಕ್ಕೆ ಹೋರಾಟ ನಡೆದಾಗ ಕನ್ನಡಿಗರಲ್ಲಿ ಸದಭಿಮಾನದ ಕಾವು ತುಂಬಿದ ಈ ಹಾಡು ಅಂದಿನ ತಾರಕಮಂತ್ರವಾಗಿತ್ತು. "ಬಂಕಿಮಚಂದ್ರ ಚಟರ್ಜಿಯವರ ವಂದೇ ಮಾತರಂ ಗೀತೆಯಷ್ಟೇ ಪರಿಣಾಮವನ್ನು ಈ ಗೀತೆ ಕನ್ನಡಿಗರ ಮೇಲೆ ಮಾಡಿತೆಂದರೆ ಅತಿಶಯೋಕ್ತಿಯಲ್ಲ" - ಎನ್ನುತ್ತಾರೆ ಪ್ರಸಿದ್ಧ ಲೇಖಕ, ಇತಿಹಾಸಕಾರರಾದ ಗೋವಿಂದಮೂರ್ತಿ ದೇಸಾಯಿ. "ಕನ್ನಡಿಗರನ್ನು ಬಡಿದೆಬ್ಬಿಸಿದ ಪ್ರಭಾವೀ ವೀರಗೀತೆ " ಎನ್ನುತ್ತಾರೆ ಪ್ರೊ. ವಸಂತ ಕುಷ್ಟಗಿ. "ಹರಿದು ಹಂಚಿ ಹೋದ ಕರ್ನಾಟಕವನ್ನು ಒಂದೆಡೆ ತರಲು ಅಸಂಖ್ಯಾತ ಕನ್ನಡಿಗರಿಗೆ ಪ್ರೇರಣೆ ಕೊಟ್ಟ ಹಾಡಿದು" ಎನ್ನುತ್ತಾರೆ ಪ್ರಸಿದ್ಧ ಲೇಖಕ ವರದರಾಜ ಹುಯಿಲಗೋಳ.

ಕನ್ನಡ ನಾಡು ನುಡಿಯ ಧೀಮಂತ ಸೇವೆಯ ಪ್ರವೃತ್ತಿ ನಾರಾಯಣರಾಯರಲ್ಲಿ ಬೆಳೆದುಬರಲು ಅವರಲ್ಲಿಯ ಆನುವಂಶಿಕ ಗುಣವೇ ಕಾರಣವಿರಬೇಕು. ಇವರ ಪೂರ್ವಜರಾದ ಹುಯಿಲಗೋಳ ಭುಜಂಗರಾಯರು (೧೮೩೧ - ೧೮೮೫) ೧೮೬೭ರಲ್ಲಿ ಬೆಳಗಾಂವಿ ಟ್ರೈನಿಂಗ್ ಕಾಲೇಜಿನ ಪ್ರಿನ್ಸಿಪಾಲರಾಗಿ ನೇಮಕರಾಗಿ, ಟ್ರೇನಿಂಗ್ ಕಾಲೇಜು ಕನ್ನಡ ವಾಙ್ಮಯದ ಮಾತೃಸ್ಥಾನ ಎಂಬುದನ್ನು ಕಂಡು ಹಿಡಿದು, ಅದನ್ನು ಕಾರ್ಯರೂಪಕ್ಕೆ ತಂದ ಮೊದಲಿಗರೆಂಬುದನ್ನು ಇಲ್ಲಿ ನೆನೆಸಿಕೊಂಡರೆ ಮೇಲಿನ ಮಾತಿಗೆ ಪುಷ್ಟಿ ದೊರೆಯುತ್ತದೆ. ಇದೇ ಪರಂಪರೆಯಲ್ಲಿ ಇವರಿಗಿಂತ ಸ್ವಲ್ಪ ಕಿರಿಯವರಾದ ಅಚ್ಯುತರಾವ ಹುಯಿಲಗೋಳ ಅವರೂ ಕೂಡ ಕನ್ನಡ ನಾಡ ನುಡಿಯ ಸೇವೆ ಪರಂಪರೆಯನ್ನು ಮುಂದುವರಿಸುತ್ತ "ನರಗುಂದ ಬಂಡಾಯ" ಎಂಬ ಐತಿಹಾಸಿಕ ನಾಟಕ ಬರೆದು ಪ್ರಸಿದ್ಧಿ ಪಡೆದರು. ಹೀಗೆ ನಾರಾಯಣರಾಯರು ಬೆಳೆದು ಬಂದ ಪರಂಪರೆ, ಬೆಳೆಸಿ ಉಳಿಸಿದ ಪರಂಪರೆ ಕನ್ನಡದ ಅಪಾರ ಸೊತ್ತು ಎನ್ನುವಲ್ಲಿ ಸಂದೇಹವಿಲ್ಲ.

ನಾರಾಯಣರಾಯರು ತಮ್ಮ ಉಚ್ಚ ಶಿಕ್ಷಣಕ್ಕಾಗಿ ಪುಣೆಯಲ್ಲಿರುವಾಗ ಮರಾಠಿ ನಾಟಕಗಳನ್ನು ನೋಡಿ ಬಂದಾಗ ಮಿತ್ರರಲ್ಲಿ ವಿಮರ್ಶೆ, ಚರ್ಚೆ ನಡೆಯುತ್ತಿತ್ತು ಮತ್ತು ಮಾತಿನಲ್ಲಿ ಕೆಲವರು ಮರಾಠಿಯನ್ನು ಹೊಗಳುವ ಆವೇಶದಲ್ಲಿ ಕನ್ನಡವನ್ನು ತೆಗಳಿ ಮಾತನಾಡಿ ಬಿಟ್ಟರು. ಇದನ್ನು ಕೇಳಿದ ನಾರಾಯಣರಾಯರಿಗೆ ತುಂಬಾ ಸಂಕಟವಾಯಿತು. ಭಾಷಾ ವ್ಯಾಮೋಹಕ್ಕೆರವಾಗದೇ ವಿಶಾಲಹೃದಯದಿಂದ 'ಭಾಷೆ ಯಾವದಾದರೇನು ಭಾವ

ಮುಖ್ಯ' ಎಂಬ ನಿಲುವನ್ನಿಟ್ಟುಕೊಂಡ ಅವರಿಗೆ ಕಸಿವಿಸಿಯಾಯಿತು. ಅಂದೇ ಅವರ ಮನದಲ್ಲಿ ಕನ್ನಡಕ್ಕಾಗಿ ದುಡಿಯಬೇಕು ಎಂಬ ಭಾಷಾಭಿಮಾನ ಅಂಕುರಿಸಿತು. ಅದಕ್ಕಾಗಿ ಅವರ ಹೃದಯ ಮಂದಿರದಲ್ಲಿ ವೇದಿಕೆ ಸಿದ್ಧವಾಗತೊಡಗಿತು. "ಕನ್ನಡ ಭಾಷಾಭಿವೃದ್ಧಿಗಾಗಿ ನಾನೂ ಏನಾದರೂ ಸೇವೆ ಮಾಡಲೇಬೇಕು. ಕನ್ನಡಮ್ಮನ ಕೀರ್ತಿ ದಿಗ್‌ದಿಗಂತದಲ್ಲಿ ಹಬ್ಬಬೇಕು" ಎಂದು ಯೋಚಿಸುತ್ತ ಯೋಜನೆಗಳನ್ನು ರೂಪಿಸತೊಡಗಿದ್ದರು. ಒಂದು ಸಲ ಕಾಲೇಜು ವಿದ್ಯಾರ್ಥಿನಿಲಯದಿಂದ ಪರವಾನಗಿ ಇಲ್ಲದೆ ಮರಾಠಿ ನಾಟಕ ನೋಡಲು ಮಿತ್ರರೊಂದಿಗೆ ಹೋದಾಗ ಅಲ್ಲಿಯೇ ಬಂದಿದ್ದ ಪ್ರಿನ್ಸಿಪಾಲರು ಇವರನ್ನು ನೋಡಿದರು. ಮಾರನೆಯ ದಿನ ಪ್ರಿನ್ಸಿಪಾಲರು ಇವರ ಮಿತ್ರರನ್ನು ತರಾಟೆಗೆ ತೆಗೆದುಕೊಂಡರಲ್ಲದೇ ಹೀಯಾಳಿಸಿ ಮಾತನಾಡಿದರು - "ನಿಮ್ಮ ಕನ್ನಡ ನಾಟಕ ಹೀಗಿರುತ್ತವೆಯೇ ? ಏನು ನಿಮ್ಮ ಕನ್ನಡ ? " ಎಂದಾಗ ಮೊದಲೇ ಹತ್ತಿದ ಉರಿಗೆ ತುಪ್ಪ ಸುರಿದಂತಾಯಿತು. ಕೂಡಲೇ ಅವರು ಕಾರ್ಯೋನ್ಮುಖರಾದರು. ಆ ಕಾಲೇಜಿನಲ್ಲಿ, ಕಲಿಯುತ್ತಿದ್ದ ಕನ್ನಡ ವಿದ್ಯಾರ್ಥಿಗಳನ್ನು ಒಟ್ಟುಗೂಡಿಸಿದರು. ಯಾರಿಗೂ ನೋವಾಗದಂತೆ ಕನ್ನಡ ಭಾಷಾಭಿಮಾನದ ಬಗ್ಗೆ ಯಾವಾಗಲೂ ಜಾಗೃತರಾಗಿರಲು ಕರೆ ನೀಡಿದರು.

ಆಗ ಆ ಕಾಲೇಜಿನ ವಾಚನಾಲಯದಲ್ಲಿ ಕನ್ನಡ ಭಾಷಾ ಪುಸ್ತಕಗಳು ಇರಲಿಲ್ಲ. ಪ್ರಿನ್ಸಿಪಾಲರಿಗೆ ಈ ಸಂಗತಿಯನ್ನು ಮನವರಿಕೆ ಮಾಡಿಕೊಟ್ಟು ಗ್ರಂಥಾಲಯದಲ್ಲಿ ಕನ್ನಡ ಪುಸ್ತಕಗಳು ಬರುವಂತೆ ಮಾಡಿದರು. ಈ ರೀತಿ ಕಾರ್ಯಾರಂಭವಾಯಿತು. ಕನ್ನಡ ಪುಸ್ತಕಗಳೇನೊ ಬಂದವು. ಆದರೆ ಕನ್ನಡ ವಿದ್ಯಾರ್ಥಿಗಳು ಅವನ್ನು ಆಸಕ್ತಿಯಿಂದ ಓದದಿದ್ದಾಗ ನಾರಾಯಣರಾಯರು ತಾವೇ ತಮ್ಮ ಸಹಪಾಠಿಗಳ ಹೆಸರಿನಲ್ಲಿ ಕನ್ನಡ ಪುಸ್ತಕಗಳನ್ನು ವಾಚನಾಲಯದಿಂದ ತಂದು ಅವರವರ ಕೋಣೆಗೆ ತಲುಪಿಸಿ ಬರಹತ್ತಿದ್ದರು. ಅವಧಿ ಮುಗಿದ ಮೇಲೆ ತಾವೇ ಅವುಗಳನ್ನು ಪುನಃ ವಾಚನಾಲಯಕ್ಕೆ ತಿರುಗಿಸಿಯೂ ಬರುತ್ತಿದ್ದರು. ಕನ್ನಡ ಭಾಷೆಗೆ ಕನ್ನಡ ಪುಸ್ತಕಗಳಿಗೆ ಯಾರೂ ಯಾವದೇ ಅಪಶಬ್ದ ಆಡಬಾರದೆಂಬುದು ನಾರಾಯಣರಾಯರ ಅಂತಃಕರಣದ ಅನಿಸಿಕೆಯಾಗಿತ್ತು. ಅದಕ್ಕಾಗಿ ಅವರು ಏನು ಮಾಡಲೂ ಸಿದ್ಧರಾದರು. ಇವರ ಪ್ರಯತ್ನಕ್ಕೆ ಮಿತ್ರರು ಪ್ರತಿಕ್ರಿಯಿಸದಿರಲಿಲ್ಲ. ಮುಂದೆ ಬಹಳಷ್ಟು ಸಹಪಾಠಿಗಳು ಕನ್ನಡ ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಂಡರು.

ಕರ್ನಾಟಕದ ಇತಿಹಾಸವೆಂದರೆ ನಾರಾಯಣರಾಯರಿಗೆ ಎಲ್ಲಿಲ್ಲದ ಆಸ್ಥೆ, ಅಚ್ಚುಮೆಚ್ಚು, ಕರ್ನಾಟಕದ ಗತ ವೈಭವವನ್ನು ಎಷ್ಟು ಕೊಂಡಾಡಿ ಹಾಡಿದರೂ ಅವರಿಗೆ ತೃಪ್ತಿ ತೋರದು. ಅಂತೆಯೇ ಅವರ ಅನೇಕ ಕಾವ್ಯಗಳಲ್ಲಿ ಕನ್ನಡದ ವೈಭವದ ವರ್ಣನೆ

ಕಾಣಸಿಗುತ್ತದೆ. ಹಾಗೆಯೇ ಹರಿದು ಹೋದ ಕನ್ನಡಕ್ಕಾಗಿ, ಕನ್ನಡದ ಹೀನ ಸ್ಥಿತಿಗಾಗಿ ಅವರ ಮನ ಮಿಡುಕುತ್ತದೆ ; ಸಂವೇದನೆ ತಳಮಳಗೊಳ್ಳುತ್ತದೆ. ಅವರು ಬರೆದ ಅನೇಕ ಹೃದಯ ಮಿಡಿಯುವ ಹಾಡುಗಳು ಕನ್ನಡದ ಜನರಲ್ಲಿ ಅಭಿಮಾನದ ಕಿಡಿಯೆಬ್ಬಿಸಿ ಕನ್ನಡದ ಏಕೀಕರಣಕ್ಕೆ ಹೋರಾಡುವ ಮನೋಸ್ಥೈರ್ಯವನ್ನು, ಛಲವನ್ನು ನೀಡಿರಬೇಕು. ಅವರು ಧಾರವಾಡದಲ್ಲಿರುವಾಗ ಮುದವೀಡು ಕೃಷ್ಣರಾಯರ ಧ್ಯೇಯ ಧೋರಣೆಗಳಿಂದ ವಿಶೇಷವಾಗಿ ಪ್ರಭಾವಿತರಾದರು. ಕನ್ನಡ ನಾಡು, ನುಡಿಯ ಜಾಗೃತಿಗೆ ಪ್ರಯತ್ನಿಸಲು ಹಾಗೂ ಕರ್ನಾಟಕ ಏಕೀಕರಣಕ್ಕಾಗಿ ಸೆಣಸಲು ಶಕ್ತಿ ಹಾಗೂ ಚೈತನ್ಯಗಳು ದೊರೆತವು.

೧೯೬೬ರಲ್ಲಿ ನಾರಾಯಣರಾಯರು ರಾಯಚೂರಿನಲ್ಲಿ ತಮ್ಮ ಕಿರಿಯ ಮಗನ ಮನೆಯಲ್ಲಿದ್ದಾಗ ಸಂಯುಕ್ತ ಕರ್ನಾಟಕ ಪತ್ರಿಕೆಗೆ ರಾಜ್ಯೋತ್ಸವಕ್ಕಾಗಿ ಸಂದೇಶ ಪಡೆಯಲೆಂದು ಶ್ರೀ ರಾ.ಗು. ಜೋಷಿ (ಪತ್ರಿಕಾ-ಪ್ರತಿನಿಧಿ) ಬಂದರಂತೆ ಆಗ ನಾರಾಯಣರಾಯರು ಕೊಟ್ಟ ಸಂದೇಶ ಅವರ ಕನ್ನಡತನದ ಪ್ರೇಮಕ್ಕೆ ದ್ಯೋತಕವಾಗಿದೆ. - "ಕನ್ನಡ ನಾಡೇನೊ ಆಯಿತು, ಆದರೆ ಕನ್ನಡ ನಾಡಿನಲ್ಲಿ ಕನ್ನಡದ ಅಂಕಿ ಸಂಖ್ಯೆಗಳು ಮರೆತು ಹೋಗುತ್ತಿವೆ. ಯಾರೂ ಇದರ ಕಡೆಗೆ ಲಕ್ಷ್ಯ ಹಾಕಿಲ್ಲ. ಇದನ್ನು ನೋಡಿ ನನ್ನ ಮನಸ್ಸಿಗೆ ಬಹಳ ವ್ಯಥೆಯಾಗಿದೆ. ಇನ್ನು ಮುಂದಾದರೂ ಸಂಬಂಧಪಟ್ಟವರು ಕನ್ನಡ ಅಂಕಿಗಳನ್ನು ಬಳಕೆಯಲ್ಲಿ ತರಲು ಪ್ರಯತ್ನಿಸಬೇಕು."

**ಕೃತಿಗಳ ಮೂಲಕ ಕನ್ನಡದ ಪ್ರೇಮ**

೧. "ಕನ್ನಡಮ್ಮನ ಸ್ಥಿತಿ" (ಕನ್ನಡಿಗರ ಸಾಹಿತ್ಯ ಸಮ್ಮೇಳನ) ಈ ಕವನದಲ್ಲಿ ಬೆಂಗಳೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಲನದ ವಿವರದೊಂದಿಗೆ ಹಿಂದೊಮ್ಮೆ ವೈಭವ ಶಿಖರಕ್ಕೇರಿದ ಕನ್ನಡದ ವೈಭವಹೀನ ಸ್ಥಿತಿಗೆ ಬಂದುದನ್ನು ಕಂಡು ಮರಗುತ್ತಾನೆ. ಸಂಸ್ಕೃತ, ಇಂಗ್ಲೀಷ, ತೆಲುಗು, ಮರಾಠಿ ಪ್ರಭಾವದಿಂದ ಕನ್ನಡದ ಅಲಕ್ಷ್ಯವಾಗುತ್ತದೆ, ಅವನತಿಯಾಗುತ್ತಿದೆ. ಇದನ್ನು ವಿಡಂಬಿಸಿ ಬರೆದ ಸಾಲುಗಳಿಂತಿವೆ - "ಸಭೆಯೊಳು ಮುದ್ದು ನುಡಿಯೊಳು ತಿದ್ದಿ ಪೇಳಿದರಿದ್ದ ನುಡಿ ಕೆಟ್ಟಿದ್ದ ಸ್ಥಿತಿಯನ್ನಾಂಗ್ಲ ಭಾಷೆಯಿಂ." ಕನ್ನಡ ನುಡಿಯನ್ನು ಮೇಲ್ತರುವ ಉದ್ದೇಶದಿಂದ ಸಂಸ್ಥೆಯೊಂದನ್ನು ಅವರು ರಚಿಸಿದರು. ಅದೇ ಮುಂದೆ "ಕನ್ನಡ ಸಾಹಿತ್ಯ ಪರಿಷತ್ತು" ಆಗಿ ಕನ್ನಡದ ಏಳ್ಗೆಯನ್ನು ಸಾಧಿಸುತ್ತದೆ. ಅದು ಅವರ ಹಿರಿಯ ಸಾಧನೆ.

೨. **"ಕನಸು"** - ಕವನದಲ್ಲಿಯೂ ಕನ್ನಡಾಂಬೆಯ ಹೀನ ಸ್ಥಿತಿಯ ವರ್ಣನೆಯಿದೆ.

*"ಆಗರುಗಾಣುವ ಮುರುಕು ಮನೆಯೊಳು*
*ಪೊಗರುವಿಲ್ಲದ ಪೊಗೆಯು ತುಂಬಿದೆ*
*ಜಿಗುಡು ಹರಡಿಹ ಕರಡು ನೆಲದೊಳು ಬರದು ಕಾಲಿಡಲು*
*ಮಗನೆ ಕರ್ನಾಟಕದ ದೊರೆಗಳ*
*ಜಗುಲಿಯದು ಜಗುಳಿದುದು ಪೊಳಗಣ*
*ಬಗೆಯ ಪೇಳಲು ಬಗೆಯ ಕಾಣೆನು ಮಾಡಲಿನ್ನೇನು ॥*

ಹೀಗೆ ಹಾಳಾಗುತ್ತಿರುವ ಮಂದಿರವನ್ನು ಬೀಳದಂತೆ ಒಂದು ಕಡೆಯಿಂದ ಎತ್ತಿ ಹಿಡಿದ ಮಹನೀಯರು ಇವರು.

*ಜನ್ನ ಪಂಪನು ರುದ್ರಭಟ್ಟನು ।*
*ರನ್ನ ಕವಿ ಲಕ್ಷ್ಮೀಶ ಸಂ ।*
*ಪನ್ನತರ ವರಕವಿ ಕುಮಾರವ್ಯಾಸ ಸರ್ವಜ್ಞ ॥*
*ಹೊನ್ನ ನುಡಿಯ ಕೇಶಿರಾಜನು । ಪುನ್ನ ಮಹಿಮನು ನಾಗವರ್ಮನು*
*ಸನ್ನಿಯಿಂ ಚಪ್ಪರದ ತುದಿಗಳನೆರಡು ಪಿಡಿದಿಹರು.*

ಈ ಮಂದಿರವು ಕುಸಿದು ಬೀಳದಂತೆ ಎಲ್ಲರೂ ಸೇರಿ ಕನ್ನಡದ ವೈಭವ ಕಾಪಾಡಬೇಕೆಂದು ಕನ್ನಡ ಮಾತೆಯ ಕೋರಿಕೆ.

3. **"ಕರ್ನಾಟಕದ ಮಿಡುಕು"** - ಇಲ್ಲಿ ನಾರಾಯಣರಾಯರ ಕನ್ನಡದ ಕುರಿತಾದ ಕಳಕಳಿ ಸ್ಪಷ್ಟವಾಗಿ ಮೂಡಿದೆ. ಕರ್ನಾಟಕಕ್ಕೆ ಒದಗಿದ ಸ್ಥಿತಿಯನ್ನು ನೋಡಲಾಗದೆ ಕವಿ ಕಣ್ಣು ಮುಚ್ಚಿ ಕುಳಿತಿದ್ದಾನೆ. ಕನ್ನಡದ ಸ್ಥಿತಿಯನ್ನು ಹೀಗೆ ಬಣ್ಣಿಸಿದ್ದಾರೆ-

*"ಅಣ್ಣಗಳಿರಾ ನನ್ನ ವಿಭವವ । ಬಣ್ಣಿಸಲಾ ಪಲವು ನಾಲಗೆ*
*ಯಣ್ಣನಿಗೆ ಸಹ ಬಾರದ್ಯೆ ಗತ ಆದೊಡೀ ದಿನಕೆ*
*ಕರ್ಣದಿರ್ಪಾ ಸಕಲ ಭಾಗ್ಯವು । ಮಣ್ಣುಗೂಡಿದುದನು ನೋಡಲು ।*
*ಕಣ್ಣು ತೆರೆಯುವುದೆಂತು ಪೇಳಿರಿ ಮಂದ ಭಾಗ್ಯನು ನಾಂ ॥"*

*"ಒಬ್ಬೊಬ್ಬರ ನಂಬದಲೆ ಕಾರ್ಯ ಮಾಡುವಿರಿ*
*ಲಕ್ಷಗಟ್ಟಲೆ ಕಬ್ಬ, ಬರೆಯುವರೆಂಬ ಪುರುಳಿರದ ಅಬ್ಬರಂ*

*ಒಬ್ಬನು ಯಾವುದಾದರೊಂದು ಕಾರ್ಯ ಮಾಡಿದರೆ ಇ -*
*ನ್ನೊಬ್ಬನು ಅದನು ಸಹಿಸದೆ ದಬ್ಬಿ ತೊಂದರೆ ಕೊಡುವನು"*

*"ಹುರುಳಿಲ್ಲದ ಕಾವ್ಯ ಬರೆದು ನಿಮ್ಮನ್ನು ಹೊಗಳಿದರೆ ಅವನನ್ನು ಗೌರವಿಸುವಿರಿ*
*ಶುದ್ಧ ನನ್ನಯ ಮುದ್ದು ನುಡಿಯಭಿಮಾನವಿಲ್ಲೇನ್ನೆ*
*ತಿದ್ದಿರೆಲ್ಲರ ಬಿದ್ದ ಕಾರ್ಯದ ಸಿದ್ಧಿ ಗೈಯಲು । ಕಂಕಣ*
*ಬದ್ಧರಿದ್ದ ಮಾನವರೆದ್ದು ಬಂದೊಡೆ ಗೆದ್ದೆ ನಾನೆಂದೆ ॥*

**4.** "ರಥೋತ್ಸವ" - ಪಂಪ, ರನ್ನ, ಪೊನ್ನ ಮೊದಲಾದವರಿಂದ ರಚಿತವಾದ ರಥವನ್ನು ಈಗ ಕನ್ನಡಿಗರು ಒಂದಾಗಿ ಎಳೆಯದೆ ಹೋದರೆ ರಥ ತಗ್ಗಿನಿಂದ ಮೇಲೆ ಬರಲಾರದು. ಅವಳ ಕೊರಗನ್ನು ತೋರುವ ಸಾಲುಗಳಿವು -

*"ನೋಡಿ ತಾಯ್ ಮಿಡುಕಿದಳು ಮಕ್ಕಳೆ*
*ಕೂಡಿ ನಡೆಯದೆ ಕೆಲಸವಪ್ಪುದೆ*
*ಬೇಡ ಬಿಡಿರೀ ಬಾಹ್ಯಾಡಂಭವ ಮನದೊಳೊಂದಾಗೀ ।*
*ಹೂಡಿ ಕಾರ್ಯವನಿರದೆ ನಿಮ್ಮೊಡ*
*ನಾಡಿಗಳನೊಡಗೂಡಿಗೆಯ್ಯಲೊ*
*ದಾಡುತಾಡುತೆ ಸಾಧ್ಯವಪ್ಪುದು ನಿಮ್ಮ ಹೊರಗಿಲ್ಲ ॥"*

**5.** "ಒಂದಾದ ಕನ್ನಡ ನಾಡು" - ೧೯೫೬ ರಾಜ್ಯೋತ್ಸವದ ಸಂದರ್ಭದಲ್ಲಿ ಈ ಆಶಯ ಗೀತೆ ಬರೆದಿದ್ದಾರೆ. ಹಂಚಿ ಹೋಗಿದ್ದ ಕನ್ನಡ ನಾಡಿನ ಒಂದೇ ತಾಯಿ ಮಕ್ಕಳನ್ನು ದೇವರು ರಕ್ಷಿಸಲಿ, ಅವರು ಪ್ರೀತಿ ವಿಶ್ವಾಸದಿಂದ ಸಹಕರಿಸಿ ಕನ್ನಡ ನಾಡಿನ ಏಳ್ಗೆಯನ್ನು ಸಾಧಿಸಲಿ ಎಂದು ನಾರಾಯಣರಾಯರು ಆಶಿಸುತ್ತಾರೆ.

*"ಒಳಜಗಳದೊಡಲುರಿಯ ನಂದಿಸಿ*
*ಬೆಳಸುತೊಳಗಿನ ನಲುಮೆ ನಂಬಿಗೆ*
*ಗಳಲಿ ನಡೆವುದು ಮತ್ತೆ ತನುಮನದಿಂದ ದುಡಿಯುವದು ।*
*ಗಳಿಸುವುದು ಬೇಸಾಯದುದ್ದಿಮೆ*
*ಬೆಳೆಸಿ ನಾಡಿನ ಮೇಲ್ಮೆಯೇಳ್ಗೆಯ*
*ಬೆಳಸಿ ಭಾರತಕಿಂಬು ಕೊಡುವದು ನಿಷ್ಠೆ ನಡತೆಯಲಿ ॥"*

ಮುಂದೆ ಕವಿ ನಮ್ಮ ಕನ್ನಡ ನಾಡು ಭಾರತಕ್ಕೆ ಭೂಷಣವಾಗಲಿ ಎಂದು ಹಾರೈಸುತ್ತಾರೆ -

*"ಉದಿಸಿ ಬಂದೀ ನಾಡು ವಿಭವದ*
*ತುದಿಯನೇರಲಿ ಮತ್ತೆಯಲ್ಲಿಂ*
*ದುದರದಿರಲದು ಭಾರತಕ್ಕೆ ಘನ ಭೂಷಣವಾಗುತಲಿ ॥"*

ಒಂದಾದ ಕನ್ನಡ ನಾಡನ್ನು ನೋಡಿ ಕನ್ನಡಮ್ಮ ಹೀಗೆ ಹಿಗ್ಗುತ್ತಾಳೆಂದು ಕವಿ ಕಲ್ಪನೆ -

*"ಹಲವು ದಿನಗಳಲಿ ಕೂಡಿದ*
*ನಲಿವ ಮಕ್ಕಳ ಕಂಡು ಕನ್ನಡ*
*ಲಲನೆ ಸಂತಸಪಟ್ಟು ಹರುಷದೊಳುಬ್ಬಿ ಕಂಗಳಲಿ ॥*
*ಜಲವ ಸುರಿಸುವ ಭಾಗ್ಯ ನೋಡುವ*
*ಚೆಲುವ ಕಾಲವು ಬಂದಿತಿಂದಿಗೆ*
*ಬಲಿತ ಸಂಭ್ರಮದಿಂದ ಪಿಡಿವುದು ದೇಶದಭಿಮಾನ ॥"*

೬. **"ಬೆಳಗಲೆಂದಿಗು ನಮ್ಮ ಚೆಲುವ ಕನ್ನಡ ನಾಡು"** - ರಾಜ್ಯದ ಏಕೀಕರಣದ ಸಂತಸದಲ್ಲಿ ಕನ್ನಡಾಭಿಮಾನಿ ಕವಿಯ ಹೃದಯ ಹಿರಿಯ ಚೇತನ ನಾಡಿನ ಒಳಿತನ್ನು ಬಯಸುವದಿಂತು -

*"ಬೆಳಗಲೆಂದಿಗೂ ನಮ್ಮ ಚೆಲುವ ಕನ್ನಡ ನಾಡು*
*ಇಳೆಯೊಳಗೆ ಗೆಲು ಪಡೆದ ಭಾರತದ ಒಳ ನಾಡು"*

ಕನ್ನಡದ ಜನರಲ್ಲಿ ಒಕ್ಕಟ್ಟು, ವಿಶ್ವಾಸ ಬರಲಿ, ಒಳಜಗಳಗಳು ಅಳಿಯಲಿ, ಚಿಕ್ಕತನ ಬಿಟ್ಟು ಐಕ್ಯ ಶಾಂತಿಗಳನ್ನು ಸಾಧಿಸಲಿ, "ಸಕ್ಕರೆಯು ಬೆರೆತ ಸವಿ ಹಾಲಿನೊಳು ಸಮರಸದಿ । ಕಕ್ಕುಲತೆ ಸ್ಮರಣೆಗಳೊಳೆಲ್ಲರಿರಲೊಮ್ಮತದಿ" ಗದುಗಿನ ವೀರನಾರಾಯಣ ದಯೆ ತೋರಲಿ" ಎಂದು ಆಶಿಸಿದ್ದಾರೆ.

೭. **"ಮೂಡಿದುದು ಮೂಡಿದುದು ಕನ್ನಡದ ರವಿಬಿಂಬ"** - ಈ ಹಾಡನ್ನು ಅವರು ಬರೆದದ್ದು ಕರ್ನಾಟಕದ ಏಕೀಕರಣದ ನಂತರವೇ.

*"ನಾಡಿಡಿದ ನಿಶೆ ಹರಿದು ಬೆಳಕಾಯ್ತು ಜಗದುಂಬ"*

*"ಹೊತ್ತಿ ನೊಳಗೆಚ್ಚರಿಸಿ ಕವಿಕೋಳಿ ಕರೆಯುತಿರೆ ।*
*ಮುತ್ತಿರುವ ಪರವಶತೆ ಮಂಜು ತಾ ಕರಗುತಿರೆ ॥*
*ಬಿತ್ತರಿಪ ಜಾತಿಭೇದಗಳ ಚುಕ್ಕೆ ಸರಿಯುತಿರೆ ।*
*ಮತ್ತೆ ನಾವೊಂದೆಂಬ ತಿಳಿಗಾಳಿ ತೀಡುತಿರೆ ॥"*

*"ಬಯಕೆ ಕೈಗೂಡಿತೆಂದೊರೆದು ಜನಗಳು ಸಾರೆ ।*
*ನಯ ಪ್ರೇಮ ಕನ್ನಡಿಗರೊಬ್ಬೊಬ್ಬರೊಳು ತೋರೆ ॥*
*ಜಯ ಜಯ ಕರ್ನಾಟಕೆಂಬ ಧ್ವನಿ ನಭಕೇರೆ*
*ದಯವ ಗದುಗಿನ ವೀರನಾರಾಯಣನು ಬೀರೆ ॥"*

## ೮. ಸನ್ಮಾನ, ಪ್ರಶಸ್ತಿಗಳು

### ನಾರಾಯಣರಾಯರಿಗೆ ಸಂದ ಸನ್ಮಾನಗಳು

ಜೀವನದುದ್ದಕ್ಕೂ ಧೀಮಂತ ವ್ಯಕ್ತಿತ್ವದ ಮಹಾಪುರುಷರಾಗಿ ಕನ್ನಡ ನಾಡಿನ ಸಾರಸ್ವತ ಲೋಕಕ್ಕೆ ಕೊಡುಗೆಯಿತ್ತು ತಮ್ಮ ಸಾಹಿತ್ಯದ ಮೇರು ಕೃತಿಗಳ ಮೂಲಕ ಸಾಮಾಜಿಕ ಓರೆಕೋರೆಗಳನ್ನು ಸ್ಫುಟವಾಗಿ ತೋರಿಸಿ ಅವುಗಳ ಸುಧಾರಣೆಗಾಗಿ ಕಳಕಳಿಯಿಂದ ಕರೆಗೊಟ್ಟು, ಕನ್ನಡ ನಾಡಿನ ಏಕೀಕರಣಕ್ಕಾಗಿ, ಸರ್ವತೋಮುಖ ಪ್ರಗತಿಗಾಗಿ ಹಂಬಲಿಸಿ, ಹಾರೈಸಿ ಜನರನ್ನು ಜಾಗರಿಸಿ, ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ನಿಷ್ಕಾಮ ಸೇವೆ ಸಲ್ಲಿಸಿ, ತಮ್ಮ ವೃತ್ತಿ ಗೌರವದ ಪರಾಕಾಷ್ಠೆಯನ್ನು ಪ್ರದರ್ಶಿಸಿದ ನಿಷ್ಕಳಂಕ, ನಿರ್ಮಲ, ನಿರಹಂಕಾರೀ, ನಿರ್ಮಮ ವ್ಯಕ್ತಿ - ಹುಯಿಲಗೋಳ ನಾರಾಯಣರಾಯರು. ಎಲೆಯ ಮರೆಯ ಹೂವಿನಂತೆ ನಿರಾಡಂಬರವಾಗಿ ತಮ್ಮ ಕಾರ್ಯಕಲಾಪಗಳನ್ನು ನಿರ್ವಹಿಸಿದ ಅವರು ಪ್ರತಿಷ್ಠಾಪರಾಙ್ಮುಖರು. ಅವರೆಂದೂ ಕೀರ್ತಿಗಾಗಿ ಕಾತರಿಸಲಿಲ್ಲ, ಸ್ಥಾನಮಾನಕ್ಕಾಗಿ ಕಚ್ಚಾಡಲಿಲ್ಲ, ಪ್ರತಿಷ್ಠೆ, ಪ್ರಶಸ್ತಿಗಳಿಗಾಗಿ ಪರಿತಪಿಸಲಿಲ್ಲ. ಸ್ಥಿತಪ್ರಜ್ಞರಾದ ಅವರನ್ನು ಕೀರ್ತಿ ಸನ್ಮಾನಗಳು ತಾವೇ ತಾವಾಗಿ ಹುಡುಕಿಕೊಂಡು ಬಂದವು. ಅವುಗಳಲ್ಲಿ ಪ್ರಮುಖವಾದವನ್ನು ಇಲ್ಲಿ ಉಲ್ಲೇಖಿಸಲಾಗಿದೆ -

೧. ೧೯೧೨ - ನಾರಾಯಣರಾಯರ ಮೊದಲ ದೀರ್ಘ ನಾಟಕ "ವಜ್ರಮುಕುಟ" ದ ಪ್ರಯೋಗ ಆಯಿತು. ಗದುಗಿನ ಕುರುಪಗಿ ಥಿಯೇಟರಿನಲ್ಲಾಯಿತು. ಎರಡನೇ

ಪ್ರಯೋಗ ಧಾರವಾಡದಲ್ಲಿ ಆಯಿತು. ಆಗಿನ ಧಾರವಾಡ ಜಿಲ್ಲಾ ಕಲೆಕ್ಟರು ಈ ನಾಟಕವನ್ನು ಮೆಚ್ಚಿ ಹದಿಮೂರು ನೂರು ರೂಪಾಯಿಗಳ ಇನಾಮು ಕೊಟ್ಟರು.

೧೯೧೩ (?) - ಗದಗ ಬೆಟಗೇರಿ ಮುನಿಸಿಪಲ್ ಕಾರ್ಪೊರೇಷನ್ ಕಾಯಿದೆ ಸಲಹಾಗಾರರಾಗಿ ಕೆಲವು ವರ್ಷ ಸೇವೆ ಸಲ್ಲಿಸಿದ್ದಾರೆ.

೧೯೨೪ - ಅವರು ಬರೆದ "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಗೀತೆ ಬೆಳಗಾವಿಯ ಕಾಂಗ್ರೆಸ್ ಅಧಿವೇಶನದ ಸ್ವಾಗತಗೀತೆಯಾಗಿ ಆಯ್ಕೆಯಾಯಿತು. ಗಾಂಧೀಜಿಯವರ ಮೆಚ್ಚಿಗೆ ಪಡೆಯಿತು. ಮುಂದೆ "ನಾಡಗೀತೆ" ಎಂದು ಮನ್ನಣೆ ಪಡೆದುದ್ದರಿಂದ ಎಲ್ಲ ಸಭೆ, ಸಮಾರಂಭಗಳು, ಶಾಲೆಯ ಪ್ರಾರ್ಥನೆಗಳು ಇದೇ ಹಾಡಿನೊಂದಿಗೆ ಪ್ರಾರಂಭವಾದವು. ಈ ನಾಡಗೀತೆಯಿಂದ ಹುಯಿಲಗೋಳ ನಾರಾಯಣರಾಯರ ಹೆಸರು ಅಜರಾಮರವಾಯಿತು.

೧೯೨೯ - ಬಾಗಲ ಕೋಟೆಯ ವಾಸುದೇವ ವಿನೋದಿನಿ ನಾಟ್ಯ ಸಂಘದ ಪ್ರಥಮವಾರ್ಷಿಕೊತ್ಸವದ ಮುಖ್ಯ ಅತಿಥಿ.

"೧೯೩೬" - ವಿಜಯನಗರ ಷಟ್‌ಶತಮಾನೋತ್ಸವ ಸಮಾರಂಭವು ಹಂಪಿಯಲ್ಲಿ ವಿಜೃಂಭಣೆಯಿಂದ ನಡೆಯಿತು. ಆಗ ನಾರಾಯಣರಾಯರು ವಿಶೇಷ ಅತಿಥಿಗಳಾಗಿ "ವಿಜಯನಗರದ ವಿದ್ಯಾರಣ್ಯ" ರ ಬಗ್ಗೆ ಮನನೀಯವಾಗಿ ಮಾತನಾಡಿದರು" ಎಂದು ಹೇಳುತ್ತಾರೆ. ಡಾ. ವಿ. ಶಿವಾನಂದ.

೧೯೩೮ - ಗದುಗಿನಲ್ಲಿ ನಡೆದ ನಾಡಹಬ್ಬದ ಕವಿಗೋಷ್ಠಿಗೆ ಜಿ.ಪಿ. ರಾಜರತ್ನಂ ಮುಖ್ಯ ಅತಿಥಿ - ಕವಿಗೋಷ್ಠಿಗೆ ನಾರಾಯಣರಾಯರೇ ಅಧ್ಯಕ್ಷರು.

೧೯೩೮ - ಧಾರವಾಡದಲ್ಲಿ ಜರುಗಿದ ವಸಂತ ಸಾಹಿತ್ಯೋತ್ಸವದಲ್ಲಿ ವಿ.ಸೀ, ಬಿ.ಎಂ. ಶ್ರೀಕಂಠಯ್ಯ, ಶ್ರೀನಿವಾಸ ಮೂರ್ತಿ ಮುಂತಾದ ಸಾಹಿತಿಗಳೊಡನೆ ನಾರಾಯಣರಾಯರು ಪಾಲ್ಗೊಂಡಿದ್ದರು. ಅಲ್ಲದೆ ಧಾರವಾಡ ಜಿಲ್ಲೆಯ ಕವಿ ಸಮ್ಮೇಳನದ ಅಧ್ಯಕ್ಷರಾಗಿದ್ದರು.

೮. (೧೯೪೩) ? - ಕನ್ನಡ ಸಾಹಿತ್ಯ ಪರಿಷತ್ತಿನ ರಜತ ಮಹೋತ್ಸವ ಸಮಾರಂಭದಲ್ಲಿ ಕೃಷ್ಣರಾಜ ಒಡೆಯರ್ ಅವರಿಂದ ಒಂಬತ್ತು ಸಾಹಿತಿಗಳಿಗೆ ಸನ್ಮಾನ ಮಾಡಲಾಯಿತು. ಶ್ರೀ ಡಿ.ವಿ.ಜಿ. ಮೊದಲಾದವರೊಡನೆ ನಾರಾಯಣರಾಯರಿಗೂ ಆಗ ಸನ್ಮಾನ ದೊರೆಯಿತು.

೯. ೧೯೫೨ - ಜನವರಿ ೧೨ ಮತ್ತು ೧೩ರಂದು ಧಾರವಾಡದ ಕಲೋಪಾಸಕ ಮಂಡಲದವರು ಗದುಗಿನ ಸರಸ್ವತಿ ನಾಟ್ಯಮಂದಿರದಲ್ಲಿ ನಾರಾಯಣರಾಯರ ಸನ್ಮಾನ ಸಮಾರಂಭವನ್ನು ಅಭೂತಪೂರ್ವ ಗೌರವಾದರಗಳೊಂದಿಗೆ ವಿಜೃಂಭಣೆಯಿಂದ ನೆರವೇರಿಸಿದರು. ಇದೇ ಸಂದರ್ಭದಲ್ಲಿ "ಕರ್ನಾಟಕ ಆದ್ಯ ಸಾಮಾಜಿಕ ನಾಟಕಕಾರರಾದ ಶ್ರೀ ಹುಯಿಲಗೋಳ ನಾರಾಯಣರಾಯರು" ಎಂಬ ಕಿರು ಹೊತ್ತಿಗೆಯನ್ನು ಪ್ರಕಟಿಸಿ ಬಿಡುಗಡೆ ಮಾಡಲಾಯಿತು. ಮತ್ತು ಈ ಸಂದರ್ಭದಲ್ಲಿ ಅವರ ಸಾಮಾಜಿಕ ನಾಟಕ "ಪತಿತೋದ್ಧಾರ" ನಾಟಕವನ್ನು ಕಲೋಪಾಸಕ ಮಂಡಲದ ಕಲಾವಿದರು ಯಶಸ್ವಿಯಾಗಿ ಪ್ರದರ್ಶಿಸಿದರು. ಇದರಲ್ಲಿ ಪ್ರಸಿದ್ಧ ಗಾಯಕ ಪಂಡಿತ ಭೀಮಸೇನ ಜೋಷಿ, ನೆಗಳೂರ ರಂಗನಾಥ, ಕೃಷ್ಣಾಚಾರ ಪೂಜಾರ, ರಾಮಾಚಾರ ಜೋಷಿ, ಗುರಾಚಾರ ಜೋಷಿ, ಪ್ರಭಾ ಬೆಂಡಿಗೇರಿ ಮುಂತಾದವರಿದ್ದರು.

೧೦. ೧೯೫೪ - ರಲ್ಲಿ ಆಗಿನ ಮುಂಬಯಿ ಸರಕಾರವು ನಾರಾಯಣರಾಯರು ಬರೆದ "ಪತಿತೋದ್ಧಾರ" ನಾಟಕವನ್ನು ಪರಾಂಬರಿಸಿ ಮೆಚ್ಚಿ ಅವರು ಆಯೋಜಿಸಿದ ನಾಟಕ ಸ್ಪರ್ಧೆಯಲ್ಲಿ ಉತ್ತಮ ನಾಟಕವೆಂದು ಆಯ್ಕೆ ಮಾಡಿ ನಾರಾಣರಾಯರಿಗೆ ಒಂದು ಸಾವಿರ ಬಹುಮಾನ ಕೊಟ್ಟು ಗೌರವಿಸಿತು. ಈ ಸಮಯದಲ್ಲೇ ಕಲೋಪಾಸಕ ಮಂಡಲದವರು ನೂರು ತೊಲೆ ಬೆಳ್ಳಿಯಿಂದ ವೀರನಾರಾಯಣನ ವಿಗ್ರಹವನ್ನು ಮಾಡಿಸಿ ಅದನ್ನು ನಾರಾಯಣರಾಯರಿಗೆ ಅರ್ಪಿಸುವದರ ಮೂಲಕ ಪುನಃ ಅವರನ್ನು ಸಾರ್ವಜನಿಕವಾಗಿ ಸನ್ಮಾನಿಸಿದ್ದರು. ಆ ಸಂದರ್ಭದಲ್ಲಿ "ಹುಯಿಲಗೋಳ ನಾರಾಯಣರಾಯರು" ಎಂಬ ಚಿಕ್ಕ ಹೊತ್ತಿಗೆಯನ್ನು ಪ್ರಕಟಿಸಲಾಯಿತು.



ನಾರಾಯಣರಾಯರಿಗೆ ಅರ್ಪಿಸಿದ ವೀರ ನಾರಾಯಣನ ಬೆಳ್ಳಿ ಪ್ರತಿಮೆ

ಸನ್ಮಾನ ಸಮಾರಂಭವು ಶ್ರೀ ಶಾಂತಪ್ಪಣ್ಣ ಯಳಮಲಿ ಅವರ ಅಧ್ಯಕ್ಷತೆಯಲ್ಲಿ ೧೨.೧.೧೯೫೨ ರಂದು ಆಯಿತು. ಸಭೆ ಪಂಡಿತ ಭೀಮಸೇನ ಜೋಷಿಯವರಿಂದ "ಉದಯವಾಗಲಿ" ನಾಡಗೀತೆಯಿಂದ ಪ್ರಾರಂಭವಾಯಿತು. "ಉದಯವಾಗಲಿ" ಹಾಡಿನಿಂದ ನಾಡನ್ನು ಎಚ್ಚರಿಸಿ ಮುನ್ನಡೆಯ ಮಾರ್ಗದಲ್ಲಿ ಸಾಗಿಸಿದ ನಾರಾಯಣರಾಯರು ಕವಿಗಳು ಹಾಗೂ ಹಳೆಯ ಕಾಲದ ದ್ರಷ್ಟಾರರಂತಹ ಋಷಿಗಳು. "ಅವರು ಶಾಂತಮೂರ್ತಿಗಳಂತೆ ಕಂಡರೂ ಕ್ರಾಂತಿಮೂರ್ತಿಗಳಾಗಿದ್ದರೆಂಬದನ್ನು ಮರೆಯಲಾಗದು" ಎಂದು ಸಂಯುಕ್ತ ಕರ್ನಾಟಕ ಪತ್ರಿಕೆಯ ಸಹಸಂಪಾದಕ ಶ್ರೀ ನಾಯಕ ವೆಂಕಟರಾಯರು ತಮ್ಮ ಭಾಷಣದಲ್ಲಿ ಹೇಳಿದರು.

ಗದಗಿನ ಹಿರಿಯರೂ ನಾರಾಯಣರಾಯರ ಸಮಕಾಲೀನರಾಗಿ ಅವರ ಕಾರ್ಯವನ್ನು ಅದರ ಪರಿಣಾಮಕಾರಿ ಫಲವನ್ನು ಕಂಡವರಾಗಿದ್ದ ಶ್ರೀಕೋಟಿಯವರು, ಶ್ರೀ ಹುಂಡೇಕಾರರೂ ಹಾಗೂ ನಾಟಕ ಕಲೆಯ ಸೇವಯಲ್ಲಿಯೇ ಜೀವನ ವ್ಯಯಿಸಿದ್ದ ಶ್ರೀ ಸದಾಶಿವರಾವ್ ಗರೂಡರೂ ನಾರಾಯಣರಾಯರ ಬಗ್ಗೆ, ಅವರ ಸ್ವಭಾವದ ಬಗ್ಗೆ, ಅವರ ನಾಟಕಗಳ ಬಗ್ಗೆ ಅನೇಕ ಸಂಗತಿಗಳನ್ನು ವಿವರಿಸಿದರು. ಸಮಕಾಲೀನರ ಸಾಕ್ಷ್ಯ ಸಂಗತಿಗಳು ಸ್ವಾರಸ್ಯವಾಗಿದ್ದವು.

ಸಂಸ್ಕೃತ ಪಂಡಿತರಾದ ಶ್ರೀ ಗುರಾಚಾರ್ಯ ಜೋಷಿಯವರು ನಾರಾಯಣರಾಯರನ್ನು ಹೊಗಳುತ್ತ ಒಬ್ಬ ನಾಟಕಕಾರನಾಗಿ ನಾಟಕಗಳ ಮೂಲಕ ಸಮಾಜ ಸುಧಾರಣೆಯನ್ನು ಕೈಕೊಂಡ ಅವರ ಕಾರ್ಯವನ್ನು ಶ್ಲಾಘಿಸಿದರು. ಅನಂತರ ಶ್ರೇಷ್ಠ ಸಾಹಿತಿ ಎನ್.ಕೆ. ಕುಲಕರ್ಣಿಯವರು ಮಾತನಾಡುತ್ತ "ತರುಣ ಸಾಹಿತಿಯೆಂದು ಹೇಳಿದರೆ ನಾನು ಅವರ ಪಾಲುಗಾರನೆಂದು ತಪ್ಪು ತಿಳಿದುಕೊಳ್ಳುವ ಕಾರಣವಿಲ್ಲ. ಹಾಗೆ ನೋಡಿದರೆ ಅವರಿಂದ ಸಾಹಿತ್ಯ ಕಾರ್ಯದ ಸ್ಫೂರ್ತಿಯ ಬಂಡವಾಳಿನಿಂದ ನಾಳಿನ ವೇಳೆಗೆ ನಾನು ನಾರಾಯಣರಾಯರ ಹೆಜ್ಜೆಯಲ್ಲಿ ಹೆಜ್ಜೆಯಿಟ್ಟು ಸೇವೆ ಮಾಡುವ ಭರವಸೆ ಕೊಡುವದರಿಂದ ನಾರಾಯಣರಾಯರಿಗೆ ಶಾಂತಿ ಸಮಾಧಾನಗಳು ದೊರಕಿಯಾವು ಎಂದು ಭಾವಿಸಿ ಜನಾಂಗದ ಉತ್ಕರ್ಷಕ್ಕಾಗಿ ನಮ್ಮನ್ನು ಹರಸಲು ಅವರು ಧೀರ್ಘಾಯುಗಳಾಗಲಿ" ಎಂದು ನುಡಿದರು.

ಈ ಸಂದರ್ಭದಲ್ಲಿ ಕರ್ನಾಟಕದಲ್ಲಿಯ ಹಲವಾರು ಸಂಘ ಸಂಸ್ಥೆಗಳು ನಾರಾಯಣರಾಯರಿಗೆ ಹೂಮಾಲೆ ಅರ್ಪಿಸಿ ಗೌರವ ತೋರಿದವು.

ನಾರಾಯಣರಾಯರು ಸನ್ಮಾನಕ್ಕೆ ಕೊಟ್ಟ ಉತ್ತರವು ಅವರ ವಿನಯದ ಸಜ್ಜನಿಕೆಯ ಪರಿಚಯ ಮಾಡಿಕೊಡುತ್ತದೆ. "ನೀವು ನನ್ನನ್ನು ಗೌರವಿಸಿರುವಿರಿ ನಾನು ಸಾಹಿತ್ಯ ಸೇವೆಯನ್ನು ಮಾಡಿರುವೆನೆಂದಿರುವಿರಿ. ನಾಡಿಗೆ ನವಚೈತನ್ಯ ನೀಡಿರುವೆನೆಂದಿರುವಿರಿ. ಅದೆಲ್ಲ ನಿಮಗೇ ಗೊತ್ತು" ಎಂದರು ವಿನಮ್ರ ನಾರಾಯಣರಾಯರು.

೧೧. ೧೯೫೬ - ಆಗಿನ ಮುಖ್ಯ ಮಂತ್ರಿಗಳಾಗಿದ್ದ ಕೆಂಗಲ್ ಹನುಮಂತಯ್ಯ ನವರು ಬ್ಯಾಡಗಿಯಲ್ಲಿ ನಡೆದ ಒಂದು ಸಮಾರಂಭದಲ್ಲಿ "ಉದಯವಾಗಲಿ...." ಗೀತೆಯನ್ನು ಕೇಳಿ ಮೆಚ್ಚಿಗೆ ವ್ಯಕ್ತಪಡಿಸಿದರಲ್ಲದೆ "ಈ ನಾಡಗೀತೆಯನ್ನು ಬರೆದ ಕವಿಶ್ರೇಷ್ಠ ಶ್ರೀ ಹುಯಿಲಗೋಳ ನಾರಾಯಣರಾಯರನ್ನು ರಾಜಧಾನಿ ಬೆಂಗಳೂರಿಗೆ ಕರೆಯಿಸಿಕೊಂಡು



ಗದಗ-ಬೆಟಗೇರಿ ನಗರ ಪಾಲಿಕೆ ಸಭಾಗೃಹದಲ್ಲಿದ್ದ
ನಾರಾಯಣರಾಯರ ದೊಡ್ಡ ತೈಲಚಿತ್ರ

ಸನ್ಮಾನಿಸಿ ಅವರಿಗೆ ಒಂದು ಸಾವಿರ ರೂಪಾಯಿ ಮತ್ತು ಒಂದು ತೊಲೆ ಚಿನ್ನದ ಪದಕವಿತ್ತು ಗೌರವಿಸಲಾಗುವದು" ಎಂದು ಘೋಷಿಸಿದರು.

ಮುಂದೆ ಭಾಷಾವಾರು ಪ್ರಾಂತ ರಚನೆಯಾದಾಗ ನವ್ಹೆಂಬರ ೧, ೧೯೫೬ ರಂದು ರಾಜ್ಯೋತ್ಸವದ ಸಮಾರಂಭದಲ್ಲಿ ರಾಷ್ಟ್ರಾಧ್ಯಕ್ಷ ಬಾಬು ರಾಜೇಂದ್ರ ಪ್ರಸಾದರಿಂದ ನಾರಾಯಣರಾಯರಿಗೆ ವಿಶೇಷ ಸನ್ಮಾನ ಮಾಡಿಸಿ ಅವರ ಅಮೃತ ಹಸ್ತದಿಂದ ರಾಜ್ಯದ ಪರವಾಗಿ ಶಾಲು, ಒಂದು ಸಾವಿರ ರೂಪಾಯಿ ಹಾಗೂ ಬಂಗಾರದ ಪದಕ ನೀಡಿಸಿ ಗೌರವಿಸಲಾಯಿತು.

"ಜಗಜ್ಯೋತಿ ಬಸವೇಶ್ವರ" ನಾಟಕ ಪ್ರಯೋಗದ ಕೊನೆಯ ಪ್ರವೇಶದ ಮೊದಲು ಸತ್ಕರಿಸಿದರು. ನಾರಾಯಣರಾಯರ ಬಗ್ಗೆ ಆತ್ಮೀಯವಾಗಿ ಮಾತನಾಡುತ್ತ, "ಕನ್ನಡ ನಾಡು ಅಜಾಗೃತ ಸ್ಥಿತಿಯಲ್ಲಿದ್ದಾಗ್ಗೆ ನಾರಾಯಣರಾಯರು ಕರ್ನಾಟಕ 'ದರ್ಶನ'ಪಡಕೊಂಡು ನಾಡಿಗೆ 'ಉದಯವಾಗಲಿ' ಗೀತೆ ಕೊಟ್ಟು ಮಹಾವ್ಯಕ್ತಿಗಳಾಗಿದ್ದಾರೆ. ಅವರು ಸ್ವತಃ ದೊಡ್ಡವರೇ ಇದ್ದಾರೆ. ನಮ್ಮ ಸ್ವತಂತ್ರ ರಾಜ್ಯ ಸರಕಾರವು ಇಂಥ ಸನ್ಮಾನ್ಯರನ್ನೂ ಗೌರವಿಸಿ ಧನ್ಯವಾಗಿದೆ. ಪ್ರಬುದ್ಧ ನಾಟಕಕಾರರೂ ವರಕವಿಗಳೂ, ಜ್ಞಾನ ಹಾಗೂ ವಯೋವೃದ್ಧರೂ ಆದ ಶ್ರೀ ನಾರಾಯಣರು ಇಂದು ನಮ್ಮ ಅಲ್ಪ ಅನುಭವದ ನಾಟಕ ನೋಡಲು ಬಂದಿರುವದೇ ನಮಗೆ ಮಹದಾನಂದವಾಗಿದೆ. ಅವರು ನಮ್ಮನ್ನು ಆಶೀರ್ವದಿಸಬೇಕು" ಎಂದು ಹೇಳಿದರು.

೧೩. ೧೯೫೮ - ರಲ್ಲಿ ಧಾರವಾಡದಲ್ಲಿ ನಡೆದ ಜಿಲ್ಲಾ ಕವಿ ಸಮ್ಮೇಲನದ ಅಧ್ಯಕ್ಷರಾಗಿ ನಾರಾಯಣರಾರು ಮಾರ್ಗದರ್ಶನ ಮಾಡಿದರು. ಆ ಸಂದರ್ಭದಲ್ಲಿ ಅವರನ್ನು ಗೌರವಿಸಿ ಸತ್ಕರಿಸಲಾಯಿತು.


೧೪. ೧೯೫೯ - ರಲ್ಲಿ ವಿಜಾಪುರದಲ್ಲಿ ಜರುಗಿದ ಜಿಲ್ಲಾ ಸಾಹಿತ್ಯ ಸಮ್ಮೇಳನದ ನಾಟಕ ಗೋಷ್ಠಿಯ ಅಧ್ಯಕ್ಷರಾಗಿದ್ದಾಗ ಅವರನ್ನು ಗೌರವಿಸಿ ಸತ್ಕರಿಸಲಾಯಿತು.

೧೫. ೧೯೬೧ - ರಲ್ಲಿ ಗದಗಿನಲ್ಲಿ ನಡೆದ ೪೩ನೆಯ ಕನ್ನಡ ಸಾಹಿತ್ಯ ಸಮ್ಮೇಲನ ಜರುಗಿತು. ಶ್ರೀ ಕುಂದಣಗಾರರ ಅಧ್ಯಕ್ಷತೆಯಲ್ಲಿ ಅವರನ್ನೂ ಶಾಲು ಹೊದಿಸಿ ಸನ್ಮಾನಿಸಿದರು. ೧೯೧೫ರಲ್ಲಿ ಬೆಂಗಳೂರಿನಲ್ಲಿ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಲನ ನಡೆದುದು ಹಾಗೂ ಕರ್ನಾಟಕ ಸಾಹಿತ್ಯ ಪರಿಷತ್ತಿನ ಸ್ಥಾಪನೆಗೆ ಶ್ರೀ ಹುಯಿಲಗೋಳ ನಾರಾಯಣರಾಯರು ಹೇಗೆ ಕಾರಣೀಭೂತರೆಂಬುದನ್ನು ಈ ಸಂದರ್ಭದಲ್ಲಿ ನೆನೆಯಲಾಯಿತು. ಪರಿಷತ್ತಿನ ಅಧ್ಯಕ್ಷ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ನಾರಾಯಣರಾರಿಗೆ ಮಾನಪತ್ರ ಅರ್ಪಿಸಿ ಗೌರವಿಸಿದರು.

೧೬. ೧೯೬೪ - ಗದಗ - ಬೆಟಗೇರಿ ಮುನಿಸಿಪಲ್ ಕೌನ್ಸಿಲ್‌ನಲ್ಲಿ ಹುಯಿಲಗೋಳ ನಾರಾಯಣರಾಯರ ದೊಡ್ಡ ಭಾವಚಿತ್ರ ಅನಾವರಣ ಮಾಡಿದ್ದಾರೆ. ಇದು ದಿವ್ಯ ವ್ಯಕ್ತಿಗೆ ತೋರಿದ ಗೌರವದ ಪ್ರತೀಕ.

೧೭. ೧೯೬೪ - ರಲ್ಲಿ ಗದಗ ವಕೀಲ ಸಂಘದವರು ತುಂಬು ಹೃದಯದಿಂದ ಅವರನ್ನು ಸತ್ಕರಿಸಿದರು. ಹಾಗೂ ತಮ್ಮ ಕಾರ್ಯಾಲಯದಲ್ಲಿ ಅವರ ಭಾವಚಿತ್ರವನ್ನು ಇರಿಸಿದಾರೆ.

೧೮. ೧೯೭೪ - ರಲ್ಲಿ ಗದಗ ಶಹರದಲ್ಲಿಯ ಒಂದು ವೃತ್ತಕ್ಕೆ "ಶ್ರೀ ಹುಯಿಲಗೋಳ ನಾರಾಯಣರಾಯರಾವ್ ವೃತ್ತ" ಎಂದು ನಾಮಕರಣ ಮಾಡಲಾಯಿತು. ಗದುಗನ್ನು ಅಜರಾಮರವಾಗಿಸಿದ ಶ್ರೀ ಹುಯಿಲಗೋಳ ನಾರಾಯಣರಾಯರಿಗೆ ತಮ್ಮ ಗೌರವ ಪುಷ್ಪ ಅರ್ಪಿಸಿದ್ದಾರೆ.



ಗದಗ-ಬೆಟಗೇರಿ ನಗರಪಾಲಿಕೆಯಿಂದ ಸನ್ಮಾನ, ೧೯೬೪

೧೯. ೧೯೮೪ - ೧ - ೧೧ - ೧೯೮೪ ರಂದು ಕನ್ನಡ ಸಾಹಿತ್ಯ ಕುಟೀರ ಬೆಂಗಳೂರಿನ ಶ್ರೀ ಎಂ. ವಿ. ಸುಬ್ಬರಾವ್ ಅವರ ನೇತೃತ್ವದಲ್ಲಿ ನಾರಾಯಣರಾಯರ ಜನ್ಮ ನೆಲೆಯಾದ ಗದಗು ಹಾಗೂ ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ ೧೧ - ೧೧ - ೮೪ ರಂದು "ಸುಮಾರು ಅರ್ಧ ಶತಮಾನಗಳಿಗೂ ಹೆಚ್ಚು ಕಾಲ ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ನಾಡಗೀತೆಯ ಮೂಲಕ ಅಖಂಡ ಜನಪದವನ್ನು ಜಾಗೃತಗೊಳಿಸಿ, ಆ ಮೂಲಕ ಅಖಂಡ ಕರ್ನಾಟಕದ ತುಂಬು ವೈಭವವನ್ನು ಕಂಡ ಹಾಗೂ ಕಾಣಿಸಿದ ಕವಿ ಹುಯಿಲಗೋಳ ನಾರಾಯಣರಾಯರ ಜನ್ಮ ಶತಮಾನೋತ್ಸವವನ್ನು ಅತೀ ವೈಭವದಿಂದ ಮಾಡಲಾಯಿತು."

ಇದೇ ಸಂದರ್ಭದಲ್ಲಿ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿಗಳಿಗೆ ಅವರು ಸಲ್ಲಿಸಿದ ಅನುಪಮ ಸೇವೆಯನ್ನು ಕುರಿತ ವಿವರಗಳನ್ನೊಳಗೊಂಡ ಸ್ಮರಣ ಸಂಚಿಕೆ "ಅರ್ಪಣ" ವನ್ನು ಹೊರತರಲಾಯಿತು.

೨೦. ೧೯೯೪ - ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರಾದ ಪ್ರೊ. ಜಿ.ಡಿ. ಜೋಷಿಯವರು ಡಾ. ಎಂ.ಎಸ್. ಸುಂಕಾಪುರ ಅವರ ಮಾರ್ಗದರ್ಶನದಲ್ಲಿ "ಹುಯಿಲಗೋಳ ನಾರಾಯಣರಾಯರು - ಜೀವನ ಹಾಗೂ ಸಾಹಿತ್ಯ" ಎಂಬ ವಿಷಯದ ಕುರಿತು ಸಂಪ್ರಬಂಧವನ್ನು ಬರೆದು ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಮಾಡಿ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ೧೯೯೬ರಲ್ಲಿ ಈ ಪ್ರಬಂಧವನ್ನು ಪ್ರಕಟಿಸಿದ್ದಾರೆ.

೨೧. ( ) ? - ಡಾ. ವಿ.ಕೃ. ಗೋಕಾಕರು "who is who" ಎಂಬ ಗ್ರಂಥದಲ್ಲಿ ನಾರಾಯಣರಾಯರನ್ನು ಪ್ರಪ್ರಥಮ ಕನ್ನಡ ಸಾಮಾಜಿಕ ನಾಟಕ ಕರ್ತೃ ಎಂದು ಕರೆದಿದ್ದಾರೆ.

## ಉದಯವಾಗಲಿ ಹುಯಿಲಗೋಳರ ನೆನಪು

### ಸನ್ಮಾನಕ್ಕೆ ಒಪ್ಪಿಸಿದ ಸಾಹಸ

೧೯೫೬ರಲ್ಲಿ ಕರ್ನಾಟಕ ಏಕೀಕರಣವಾಗಿ ವಿಶಾಲ ಮೈಸೂರು ಎಂಬ ಹೆಸರಿನಲ್ಲಿ ಕನ್ನಡಿಗರ ಅಖಂಡ ಕರ್ನಾಟಕದ ಕನಸು ಭಾಗಶಃ ನನಸಾದಾಗ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಕೆ. ಹನುಮಂತಯ್ಯನವರು ೧೯೫೬ರ ನವೆಂಬರ್ ೧ ರಂದು ಹುಯಿಲಗೋಳ ನಾರಾಯಣರಾಯರನ್ನು ಮತ್ತು ಪಿ. ಕಾಳಿಂಗರಾಯರನ್ನು ಸಾರ್ವಜನಿಕವಾಗಿ ಅಂದಿನ ರಾಜ್ಯಪಾಲ ರಾಜರ್ಷಿ ಜಯಚಾಮರಾಜ ಒಡೆಯರ ಅಧ್ಯಕ್ಷತೆಯಲ್ಲಿ ಸನ್ಮಾನಿಸಿ ಗೌರವಿಸಿದುದು ಮರೆಯಲಾಗದ ನೆನಪು.

ಅದೊಂದು ದಿನ ಬೆಳಿಗ್ಗೆ ಎಂದಿನಂತೆ, ಕನ್ನಡದ ಹಿರಿಯ ಚೇತನಗಳಲ್ಲಿ ಒಬ್ಬರಾದ ಅ.ನ. ಕೃಷ್ಣರಾಯರ ಮನೆಗೆ ಹೋದೆ. ಆ ಸಮಯದಲ್ಲಿ ಕನ್ನಡದ ಪತ್ರಿಕಾರಂಗದ ಭೀಷ್ಮ ತಿರುಮಲೆ ತಾತಾಚಾರ್ಯ ಶರ್ಮರು ಅಲ್ಲಿದ್ದರು. ಅ.ನ.ಕೃ. ಅವರು ನನ್ನನ್ನುಕಂಡ ಕೂಡಲೆ, ನಾನು ಅಂದು ಸುಮಾರು ೧೧ ಗಂಟೆಯ ಸುಮಾರಿಗೆ ಹನುಮಂತಯ್ಯ ಅವರನ್ನು ತಪ್ಪದೆ ಕಾಣಬೇಕೆಂದೂ, ಸಾಧ್ಯವಾದರೆ ನಾನು ಅಂದೇ ಗದುಗಿಗೆ ಹೋಗಬೇಕಾಗಬಹುದೆಂದೂ ತಿಳಿಸಿದರು. ಅ.ನ.ಕೃ. ಅವರ ಸೂಚನೆಯಂತೆ ಹನುಮಂತಯ್ಯ ಅವರನ್ನು ಅವರ ಕಚೇರಿಯಲ್ಲಿ ಭೇಟಿಯಾದೆ. ಅವರು ಹುಯಿಲಗೋಳ ನಾರಾಯಣರಾಯರಿಗೆ ಪತ್ರ ಒಂದನ್ನು ಕೊಡುವುದಾಗಿಯೂ, ಆ ಪತ್ರಕ್ಕೆ ಹುಯಿಲಗೋಳ ನಾರಾಯಣರಾಯರಿಂದ ಒಪ್ಪಿಗೆಯನ್ನು ತರಬೇಕೆಂದೂ ತಿಳಿಸಿ, ನಾನು ಗದುಗಿಗೆ ಹೋಗಿ ಬರಲು ಪ್ರಯಾಣದ ವೆಚ್ಚ ಹಾಗೂ ಉಳಿದ ಖರ್ಚು ವೆಚ್ಚಗಳಿಗಾಗಿ ೨೦೦ /- ರೂ. ಗಳನ್ನು ಕೊಟ್ಟರು. ನಾನು ಅದೇ ದಿನ ರಾತ್ರಿ ಹೊರಟು ಮಾರನೆಯ ದಿನ ಬೆಳಿಗ್ಗೆ ಸುಮಾರು ೯ಗಂಟೆಗೆ ಗದುಗು ತಲುಪಿದೆ.



ಗದುಗಿನ ವಕೀಲ ಸಂಘದಿಂದ ನಾರಾಯಣರಾಯರಿಗೆ ಸನ್ಮಾನ, ೨೩-೪-೧೯೫೫

ಅನುಪಮ ಸೇವೆಯನ್ನು ಕುರಿತ ವಿವರಗಳನ್ನೊಳಗೊಂಡ ಸ್ಮರಣ ಸಂಚಿಕೆ "ಅರ್ಪಣ" ವನ್ನು ಹೊರತರಲಾಯಿತು.

೨೦. ೧೯೯೪ - ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರಾದ ಪ್ರೊ. ಜಿ.ಡಿ. ಜೋಷಿಯವರು ಡಾ. ಎಂ.ಎಸ್. ಸುಂಕಾಪುರ ಅವರ ಮಾರ್ಗದರ್ಶನಲ್ಲಿ "ಹುಯಿಲಗೋಳ ನಾರಾಯಣರಾಯರು - ಜೀವನ ಹಾಗೂ ಸಾಹಿತ್ಯ" ಎಂಬ ವಿಷಯದ ಕುರಿತು ಸಂಪ್ರಬಂಧವನ್ನು ಬರೆದು ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಮಾಡಿ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ೧೯೯೬ರಲ್ಲಿ ಈ ಪ್ರಬಂಧವನ್ನು ಪ್ರಕಟಿಸಿದ್ದಾರೆ.

೨೧. ( ) ? - ಡಾ. ವಿ.ಕೃ. ಗೋಕಾಕರು "who is who" ಎಂಬ ಗ್ರಂಥದಲ್ಲಿ ನಾರಾಯಣರಾಯರನ್ನು ಪ್ರಪ್ರಥಮ ಕನ್ನಡ ಸಾಮಾಜಿಕ ನಾಟಕ ಕರ್ತೃ ಎಂದು ಕರೆದಿದ್ದಾರೆ.

## ಉದಯವಾಗಲಿ ಹುಯಿಲಗೋಳರ ನೆನಪು

### ಸನ್ಮಾನಕ್ಕೆ ಒಪ್ಪಿಸಿದ ಸಾಹಸ

೧೯೫೬ರಲ್ಲಿ ಕರ್ನಾಟಕ ಏಕೀಕರಣವಾಗಿ ವಿಶಾಲ ಮೈಸೂರು ಎಂಬ ಹೆಸರಿನಲ್ಲಿ ಕನ್ನಡಿಗರ ಅಖಂಡ ಕರ್ನಾಟಕದ ಕನಸು ಭಾಗಶಃ ನನಸಾದಾಗ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಕೆ. ಹನುಮಂತಯ್ಯನವರು ೧೯೫೬ರ ನವಂಬರ್ ೧ ರಂದು

ಹುಯಿಲಗೋಳ ನಾರಾಯಣರಾಯರನ್ನು ಮತ್ತು ಪಿ. ಕಾಳಿಂಗರಾಯರನ್ನು ಸಾರ್ವಜನಿಕವಾಗಿ ಅಂದಿನ ರಾಜ್ಯಪಾಲ ರಾಜರ್ಷಿ ಜಯಚಾಮರಾಜ ಒಡೆಯರ ಅಧ್ಯಕ್ಷತೆಯಲ್ಲಿ ಸನ್ಮಾನಿಸಿ ಗೌರವಿಸಿದುದು ಮರೆಯಲಾಗದ ನೆನಪು.

ಅದೊಂದು ದಿನ ಬೆಳಿಗ್ಗೆ ಎಂದಿನಂತೆ, ಕನ್ನಡದ ಹಿರಿಯ ಚೇತನಗಳಲ್ಲಿ ಒಬ್ಬರಾದ ಅ.ನ. ಕೃಷ್ಣರಾಯರ ಮನೆಗೆ ಹೋದೆ. ಆ ಸಮಯದಲ್ಲಿ ಕನ್ನಡದ ಪತ್ರಿಕಾರಂಗದ ಭೀಷ್ಮ ತಿರುಮಲೆ ತಾತಾಚಾರ್ಯ ಶರ್ಮರು ಅಲ್ಲಿದ್ದರು. ಅ.ನ.ಕೃ. ಅವರು ನನ್ನನ್ನುಕಂಡ ಕೂಡಲೆ, ನಾನು ಅಂದು ಸುಮಾರು ೧೧ ಗಂಟೆಯ ಸುಮಾರಿಗೆ ಹನುಮಂತಯ್ಯ ಅವರನ್ನು ತಪ್ಪದೆ ಕಾಣಬೇಕೆಂದೂ, ಸಾಧ್ಯವಾದರೆ ನಾನು ಅಂದೇ ಗದುಗಿಗೆ ಹೋಗಬೇಕಾಗಬಹುದೆಂದೂ ತಿಳಿಸಿದರು. ಅ.ನ.ಕೃ. ಅವರ ಸೂಚನೆಯಂತೆ ಹನುಮಂತಯ್ಯ ಅವರನ್ನು ಅವರ ಕಚೇರಿಯಲ್ಲಿ ಭೇಟಿಯಾದೆ. ಅವರು ಹುಯಿಲಗೋಳ ನಾರಾಯಣರಾಯರಿಗೆ ಪತ್ರ ಒಂದನ್ನು ಕೊಡುವುದಾಗಿಯೂ, ಆ ಪತ್ರಕ್ಕೆ ಹುಯಿಲಗೋಳ ನಾರಾಯಣರಾಯರಿಂದ ಒಪ್ಪಿಗೆಯನ್ನು ತರಬೇಕೆಂದೂ ತಿಳಿಸಿ, ನಾನು ಗದುಗಿಗೆ ಹೋಗಿ ಬರಲು ಪ್ರಯಾಣದ ವೆಚ್ಚ ಹಾಗೂ ಉಳಿದ ಖರ್ಚು ವೆಚ್ಚಗಳಿಗಾಗಿ ೨೦೦ /- ರೂ. ಗಳನ್ನು ಕೊಟ್ಟರು. ನಾನು ಅದೇ ದಿನ ರಾತ್ರಿ ಹೊರಟು ಮಾರನೆಯ ದಿನ ಬೆಳಿಗ್ಗೆ ಸುಮಾರು ೯ಗಂಟೆಗೆ ಗದುಗು ತಲುಪಿದೆ.

ಅಲ್ಲಿನ ಮುನಿಸಿಪಿಲ್ ಕಚೇರಿಯ ಬಳಿ ಹೊಗುತ್ತಿದ್ದಾಗ, ಸುಮಾರು ೪೫-೫೦ ವಯಸ್ಸಿನ ಹಿರಿಯ ವ್ಯಕ್ತಿಯೊಬ್ಬರು ಅಕಸ್ಮಾತ್ ಎದುರಾದರು, ಅವರೇ ಅಲ್ಲಿಯ ಜನಪ್ರಿಯ ವೈದ್ಯರಾದ ಡಾ. ಆನಂದ ಉಮಚಗಿ, ಹುಯಿಲಗೋಳ ನಾರಾಯಣರಾಯರ ಮನೆ ಎಲ್ಲಿದೆ ಎಂದು ಕೇಳಿದೆ. ಅವರು ಅವರ ದವಾಖಾನೆ ಸಮೀಪಕ್ಕೆ ಕರೆದೊಯ್ದು ಅಲ್ಲಿ ಕಾಣುವ 'ಗದುಗಿನ ಶ್ರೀ ವೀರನಾರಾಯಣಸ್ವಾಮಿ' ದೇವಸ್ಥಾನದ ಪಕ್ಕದ ಮನೆಯೇ

ಲೇಖಕ - *ಶ್ರೀ ಎಂ. ವಿ. ಸುಬ್ಬರಾವ್*
ಮಾಜಿ ಅಧ್ಯಕ್ಷರು, ಸಾಹಿತ್ಯ ಕುಟೀರ
ಬೆಂಗಳೂರು

## ೯. ಅತಿ ವಿಶೇಷ ವ್ಯಕ್ತಿಗಳ ಅಭಿವ್ಯಕ್ತಿಗಳು

### ಅನುರಾಗ, ಅನುಭೂತಿ, ಅಭಿವ್ಯಕ್ತಿ ....

ನಾರಾಯಣರಾಯರಿಗೆ ಎಲ್ಲರ ಬಗ್ಗೆ ಅಪಾರ ಅನುಕಂಪ, ಅಂತಃಕರುಣೆ. ಅಂತೆಯೇ ಅವರ ಅನುರಾಗ ಪಡೆದ ಅನೇಕರು ಅವರವರ ಅನುಭವಗಳನ್ನು, ಅನುಭೂತಿಗಳನ್ನೂ ಅರುಹಿದ್ದಾರೆ. ಅವರ ಬಗೆಗಿನ ತಮ್ಮ ಅಭಿಮಾನವನ್ನು ತಮ್ಮ ಅನಿಸಿಕೆಗಳ ಮೂಲಕ ಅನಾವರಣಗೊಳಿಸಿದ್ದಾರೆ. ಅಂಥ ಅಭಿಮಾನಿಗಳ ಅದಮ್ಯ ಅನುಭೂತಿಗಳ, ಅನಿಸಿಕೆಗಳ ಅಭಿವ್ಯಕ್ತಿಯೇ ಈ ಅಧ್ಯಾಯ.

೧. **ಗಾಂಧೀಜಿ** - ೧೯೨೪ರಲ್ಲಿ ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಸ್ವಾಗತಗೀತೆಯೆಂದು ಸ್ವೀಕರಿಸಲಾದ "ಉದಯವಾಗಲಿ" ಗೀತೆಯ ಭಾವಾರ್ಥ ಕೇಳಿ ತಿಳಿದು ನಾರಾಯಣರಾಯರನ್ನು ಮೆಚ್ಚಿಕೊಂಡು ಹೂವಿನ ಹಾರ ಹಾಕಿ ಗೌರವಿಸಿದರಂತೆ. ಮತ್ತೆ ಗಾಂಧೀಜಿಯವರನ್ನು ನೋಡಿದ್ದು ಲಖನೌ ಅಧಿವೇಶನದಲ್ಲಿ ಹಾಗೂ ಮುಂದೆ ಗಾಂಧೀಜಿ ಗದುಗಿಗೆ ಬಂದಾಗ.

೨. **ಲೋಕಮಾನ್ಯ ಬಾಲಗಂಗಾಧರ ತಿಲಕ** - ಕ್ರಿ.ಶ. ೧೯೧೦ರಲ್ಲಿ ಮುಂಬೈಗೆ ಎಲ್.ಎಲ್.ಬಿ ಅಭ್ಯಾಸಕ್ಕೆ ಹೋದಾಗ ತಿಲಕರನ್ನು ಭೇಟಿಯಾಗುವ ಸುಯೋಗ ಬಂತು. ಅವರೊಡನೆ ಬಹಳ ಹೊತ್ತಿನವರೆಗೆ ರಾಷ್ಟ್ರದ ಹಿತಚಿಂತನೆಯ ಬಗ್ಗೆ ಚರ್ಚಿಸಿದರು. ರಾಷ್ಟ್ರ, ರಾಷ್ಟ್ರಾಭಿಮಾನ, ಆತ್ಮಾರ್ಪಣ ಮತ್ತು ಸ್ವರಾಜ್ಯಸಿದ್ಧಿ ಮುಂತಾದ ರಾಷ್ಟ್ರೀಯ ವಿಚಾರಗಳನ್ನು ಕುರಿತು ಪರಸ್ಪರ ಮಾತನಾಡಿದರು. ಮುಂದೆ ೧೯೧೬ರಲ್ಲಿ ತಿಲಕರು ಗದುಗಿಗೆ ಬರಲು ಈ ಭೇಟಿಯೂ ಕಾರಣವಾಯಿತೆಂದು ಹೇಳಬಹುದು. ಪುಣೆಯಲ್ಲಿ ಇದ್ದಾಗಲೂ ಅವರ ಮನೆಗೆ ಹೋಗಿದ್ದರಂತೆ. ತಿಲಕರು ಕೇಸು ಗೆದ್ದಾಗ ಅವರಿಗೆ ಅಭಿನಂದಿಸಲು ಗೆಳೆಯರೊಂದಿಗೆ ಹೋದಾಗ, "ಚೆನ್ನಾಗಿ ಅಭ್ಯಾಸ ಮಾಡಿರಿ, ನಿಮ್ಮ ಆರೋಗ್ಯವನ್ನು ಚೆನ್ನಾಗಿ ಕಾಯ್ದುಕೊಳ್ಳಿರಿ" ಎಂದು ಹೇಳಿದ್ದರಂತೆ ತಿಲಕರು.

೩. **ಗೋಪಾಲಕೃಷ್ಣ ಗೋಖಲೆ** - ಕ್ರಿ.ಶ. ೧೯೧೨ರಲ್ಲಿ ಮುಂಬೈಯಲ್ಲಿ ಎಲ್.ಎಲ್.ಬಿ ಮಾಡುತ್ತಿದ್ದಾಗ ಶ್ರೇಷ್ಠ ಶಿಕ್ಷಣತಜ್ಞ ಹಾಗೂ ಉಚ್ಚ ರಾಷ್ಟ್ರೀಯವಾದಿ ಗೋಪಾಲ ಕೃಷ್ಣ ಗೋಖಲೆಯವರನ್ನು ಭೇಟಿಯಾಗುವ ಸುಸಂಧಿ ದೊರಕಿತಂತೆ. ಅವರ ಜೊತೆಗೆ ರಾಷ್ಟ್ರೀಯ ಶಿಕ್ಷಣ ಹಾಗೂ ವಿದ್ಯಾಪ್ರಸಾರ ಇವುಗಳ ವಿಷಯವಾಗಿ

ಚರ್ಚಿಸಿದರಂತೆ. ಆಗ ಗೋಖಲೆಯವರು ಮಾತನಾಡುತ್ತ - "ವ್ಯಕ್ತಿ, ಸಮಾಜ ಮತ್ತು ರಾಷ್ಟ್ರ ಇವು ಪ್ರಗತಿ ಸಾಧಿಸಬೇಕಾದರೆ ವಿದ್ಯೆಯೊಂದೇ ಸರ್ವಶ್ರೇಷ್ಠ ಸಾಧನ. ಆದ್ದರಿಂದ ಸಾಧ್ಯವಾದಷ್ಟು ಮಟ್ಟಿಗೆ ಶಿಕ್ಷಣ ಪ್ರಸಾರ ಮಹಾಕಾರ್ಯವೆಂದು ತಿಳಿದು ತನು, ಮನ, ಧನಗಳ ತ್ಯಾಗದಿಂದ ಅದನ್ನು ಕೈಕೊಳ್ಳಬೇಕು" ಎಂದು ಮುಂತಾಗಿ ಹೇಳಿದರಂತೆ. ಪ್ರಾಯಶಃ ಗೋಖಲೆಯವರ ಈ ಉಪದೇಶದ ಫಲಸ್ವರೂಪವಾಗಿ ನಾರಾಯಣರಾಯರು ಮುಂದೆ ಗದುಗಿನಲ್ಲಿ "ವಿದ್ಯಾದಾನ ಸಮಿತಿ" ಎಂಬ ವಿದ್ಯಾಪ್ರಸಾರದ ಮಹಾಕೇಂದ್ರವನ್ನು ಪ್ರಾರಂಭಿಸಿರಬೇಕು.

೪. **ವೀರ ಸಾವರಕರ** - ನಾರಾಯಣರಾಯರು ಪುಣೆಗೆ ಹೋದ ಹೊಸತರಲ್ಲಿ ಮರಾಠಿ ಭಾಷೆ ಮಾತನಾಡಲು ಬರುತ್ತಿರಲಿಲ್ಲ. ಒಂದು ಸಲ ಅವರ ಮಿತ್ರ ವಿ.ಎನ್. ಕುಲಕರ್ಣಿಯವರೊಂದಿಗೆ ಬಟ್ಟೆ ಅಂಗಡಿಗೆ ಹೋದಾಗ ಭಾಷೆ ಬಾರದೆ ತೊಂದರೆಗೀಡಾದಾಗ ಅವರು ಕಲಿಯುತ್ತಿದ್ದ ಫರ್ಗ್ಯುಸನ್ ಕಾಲೇಜಿನಲ್ಲಿಯೆ ಬಿ.ಎ. ಫೈನಲ್‌ನಲ್ಲಿ ಓದುತ್ತಿದ್ದ ವೀರ ಸಾವರಕರ ಅಲ್ಲಿ ಬಂದಿದ್ದರಂತೆ. ಇವರ ಸಮಸ್ಯೆಯೇನೆಂದು ಇಂಗ್ಲೀಷಿನಲ್ಲಿ ಕೇಳಿ ತಿಳಿದು ಅವರನ್ನು ಒಂದು ಸ್ವದೇಶೀ ಅಂಗಡಿಗೆ ಕರೆದೊಯ್ದು ದೇಶೀ ಬಟ್ಟೆಗಳನ್ನು ಕೊಳ್ಳಲು ಹಚ್ಚಿದರಂತೆ. ಅಲ್ಲದೆ ಸ್ವದೇಶಿ ಬಟ್ಟೆಗಳನ್ನು ಸ್ವದೇಶೀ ವಸ್ತುಗಳನ್ನು ಬಳಸಿ ಸ್ವದೇಶಿ ಚಳವಳಿಗೆ ಬೆಂಬಲ ನೀಡಲು ತಿಳಿಸಿದರಂತೆ. ಹೀಗೆ ಸ್ವದೇಶಾಭಿಮಾನದ ಪ್ರಥಮ ಪಾಠ ಹೇಳಿದ ವೀರ ಸಾವರಕರ ತಮ್ಮ ರಾಷ್ಟ್ರಸೇವೆಯ ಪ್ರಥಮ ಗುರುವೆಂದು ತುಂಬಾ ಅಭಿಮಾನದಿಂದ ಹೇಳುತ್ತಿದ್ದರು ನಾರಾಯಣರಾಯರು. ಅಂದಿನಿಂದ ಖಾದೀ ಬಟ್ಟೆಗಳನ್ನೇ ಧರಿಸಿದರು.

೫. **ಬಿ.ಡಿ. ಜತ್ತಿ (ಮಾಜಿ ರಾಷ್ಟ್ರಪತಿ)** - "ದಿ || ಹುಯಿಲಗೋಳ ನಾರಾಯಣರಾಯರು ಕವಿಗಳಾಗಿ, ಶಿಕ್ಷಣ ತಜ್ಞರಾಗಿ, ಹೆಸರಾಂತ ನಾಟಕಕಾರರಾಗಿ ಕನ್ನಡ ನಾಡಿಗೆ ಅವರು ಅನುಪಮ ಸೇವೆ ಸಲ್ಲಿಸಿದ್ದಾರೆ. ಅವರ ಅಮರ ಕೃತಿ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು'. ಈ ನಾಡ ಗೀತೆ ಸುಮಾರು ಅರ್ಧ ಶತಮಾನಗಳ ಕಾಲ ಕನ್ನಡ ಜನಪದವನ್ನೇ ಜಾಗ್ರತಗೊಳಿಸಿತು. ಈ ಗೀತೆ ಅವರನ್ನು ಅಮರರನ್ನಾಗಿಸಿದೆ... ಆ ಪವಿತ್ರಾತ್ಮನ ಪಾದ ಪದ್ಮಗಳಿಗೆ, ಇದೋ ನನ್ನ ಅನಂತ ಪ್ರಣಾಮಗಳು." (ಅರ್ಪಣ)

೬. **ಎಸ್. ನಿಜಲಿಂಗಪ್ಪ** (ಮಾಜಿ ಮುಖ್ಯ ಮಂತ್ರಿ) - "ಕನ್ನಡ ನಾಡನ್ನೇ ಹೊಡೆದೆಬ್ಬಿಸಿದ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಗೀತೆ ಕರ್ತೃ - ನಾರಾಯಣರಾಯರು. ವೀರನಾರಾಯಣನ ಊರಿನಲ್ಲಿ ಪುತ್ರ ಸಿದ್ಧ ನಾರಾಯಣರೇ ಜನ್ಮ ತಾಳಬೇಕಷ್ಟೇ ! ಅವರ ಹಾಡನ್ನು ಕನ್ನಡಿಗರೆಲ್ಲರೂ ಉತ್ಸಾಹದಿಂದ, ನಂಬಿಕೆ ವಿಶ್ವಾಸಗಳಿಂದ ಹಾಡುತ್ತಲೇ ಬಂದಿದ್ದಾರೆ. ಎಷ್ಟು ಹಾಡಿದರೂ ದಣಿಯದಂತೆ ಹಾಡಿದ್ದಾರೆ. ಇನ್ನೂ ಹಾಡಬೇಕು. ಕನ್ನಡಿಗನ ಜೀವನ ಅರ್ಥಪೂಣವಾಗಬೇಕು... ಹುಯಿಲಗೋಳ ನಾರಾಯಣರಾಯರಿಗೆ ನಮನಗಳನ್ನು ಸಲ್ಲಿಸೋಣ." (ಅರ್ಪಣ)

೭. **ಶ್ರೀ ಶ್ರೀ ಶ್ರೀಮನ್ನಿರಂಜನ ಜಗದ್ಗುರು ತೋಂಟದಾರ್ಯ ಸಿದ್ಧಲಿಂಗ ಮಹಸ್ವಾಮಿಗಳವರು** - "ಹಾಡಿನಿಂದ ನಾಡನೆಚ್ಚರಿಸಿದ ಗದಗಿನ ಕವಿಚೇತನ ಹುಯಿಲಗೋಳ ನಾರಾಯಣರಾಯರಿಗೆ ಸಲ್ಲಿಸುವ ಗೌರವ ಕನ್ನಡ ಸಂಸ್ಕೃತಿಗೆ ಸಲ್ಲಿಸುವ ಗೌರವವಾಗಿದೆ." (ಅರ್ಪಣ)

೮. **ನಿಟ್ಟೂರ ಶ್ರೀನಿವಾಸರಾಯರು** - 'ಕನ್ನಡ ಸಾಹಿತ್ಯ ಕುಟೀರ ' ಹಾಗೂ 'ಕರುಣಾ ಕಾವ್ಯಸಂಚಿಕೆ'ಯ ಪರವಾಗಿ ನಿಟ್ಟೂರ ಶ್ರೀನಿವಾಸರಾಯರನ್ನು ಸನ್ಮಾನಿಸಲು ಅವರ ಮನೆಗೆ ಹೋದ ಸಾಹಿತ್ಯಪ್ರೇಮಿ ತಂಡದಲ್ಲಿ ನಾನೂ ಇದ್ದೆ. ಕನ್ನಡ ಸಾಹಿತ್ಯ ಕುಟೀರದ ಎಂ.ವಿ. ಸುಬ್ಬರಾಯರು ನನ್ನನ್ನು ನಿಟ್ಟೂರವರಿಗೆ ಪರಿಚಯಿಸುತ್ತ "ಇವರು ಹುಯಿಲಗೋಳ ನಾರಾಯಣರಾಯರ ಮೊಮ್ಮಗಳು" ಎಂದರು. ನಿಟ್ಟೂರವರು ತುಂಬಾ ಆತ್ಮೀಯತೆಯಿಂದ ನನ್ನನ್ನು ಹತ್ತಿರ ಕೂಡಿಸಿಕೊಂಡು "ನಿಮ್ಮ ಅಜ್ಜ ತುಂಬಾ ದೊಡ್ಡ ವ್ಯಕ್ತಿ. ಗದುಗಿನಲ್ಲಿ ನಿಮ್ಮ ಅಜ್ಜನ ಮನೆಗೆ ಕೆಲವು ಸಲ ಹೋಗಿ ಬಂದಿದ್ದೇವೆ. ಅವರ ಮನೆಯಲ್ಲಿ ಭಕ್ರಿ ಊಟವನ್ನು ಮಾಡಿದ್ದೇನೆ. ಅವರು ಬರೆದ 'ಉದಯವಾಗಲಿ' ಹಾಡನ್ನು ಕಾಳಿಂಗರಾವ ತುಂಬಾ ಚೆನ್ನಾಗಿ ಹಾಡಿದ್ದಾರೆ. ನಾರಾಯಣರಾಯರು 'ಉದಯವಾಗಿದೆ'ಎನ್ನದೆ 'ಉದಯವಾಗಲಿ'ಎಂದೇ ಇರಬೇಕೆನ್ನುವದಕ್ಕೆ ಎಷ್ಟು ಸಮಂಜಸ ಕಾರಣ ಹೇಳುತ್ತಿದ್ದರು. ನಿಜ, ಅದೊಂದು ಹಾರೈಕೆ, ಆದ್ದರಿಂದ 'ಆಗಲಿ' ಎಂದೇ ಇರಬೇಕಾದದ್ದು ಸೂಕ್ತ." (ಅವರ ಈ ಮಾತನ್ನು "ಕರುಣಾ" ಸಂಪಾದಕರು ಧ್ವನಿಮುದ್ರಿಸಿಕೊಂಡಿದ್ದಾರೆ.")

೯. **ಕೆ. ಹನುಮಂತಯ್ಯ** (ಮಾಜಿ ಮುಖ್ಯ ಮಂತ್ರಿ) - ಗದುಗಿನ ವಕೀಲ ಸಂಘದವರು ಅವರನ್ನು ಸನ್ಮಾನಿಸಿದ ಸಂದರ್ಭದಲ್ಲಿ ಹೇಳಿದ ಮಾತುಗಳು - "ನನ್ನ ಗದಗಿಗೆ

ಬರುವ ಉದ್ದೇಶಗಳು ಎರಡು, ಒಂದು ವೀರನಾರಾಯಣನ ದರ್ಶನ, ಇನ್ನೊಂದು ಹುಯಿಲಗೋಳ ನಾರಾಯಣರಾಯರನ್ನು ಕಾಣುವದು." ಬ್ಯಾಡಗಿಯ ಒಂದು ಸಭೆಯಲ್ಲಿ "ಉದಯವಾಗಲಿ" ಹಾಡನ್ನು ಕೇಳಿ ಮೆಚ್ಚಿಕೊಂಡು ಹನುಮಂತಯ್ಯನವರೇ ಕರ್ನಾಟಕ ಸರಕಾರದಿಂದ ನಾರಾಯಣರಾಯರನ್ನು ಸನ್ಮಾನಿಸಲು ಘೋಷಣೆ ಮಾಡಿದರು.

೧೦. **ಆಲೂರ ವೆಂಕಟರಾಯರು** - ಗದಗಿನಲ್ಲಿ ನಡೆಯುತ್ತಿದ್ದ ವಸಂತ ನಾಟ್ಯೋತ್ಸವ, ನಾಡಹಬ್ಬ, ಪುಸ್ತಕ ಬಿಡುಗಡೆ, ಸಾಹಿತ್ಯ ಸಮ್ಮೇಳನ ಇತ್ಯಾದಿ ಸಾಹಿತ್ಯಿಕ, ಸಾಂಸ್ಕೃತಿಕ ಸಮಾರಂಭಗಳಿಗೆ ಬಂದಾಗ ಆಲೂರ ವೆಂಕಟರಾಯರು ನಾರಾಯಣರಾಯರ ಮನೆಗೆ ಹೋಗದೆ ಇರುತ್ತಿರಲಿಲ್ಲ. ಗದುಗಿಗೆ ಬರುವ ಎಲ್ಲ ಸಾಹಿತಿಗಳಿಗೆ ನಾರಾಯಣರಾಯರ ಮನೆಯ ಅತಿಥ್ಯ ಇದ್ದದ್ದೇ.

೧೧. **ಶ್ರೀ ಶ್ರೀ ವಿಶ್ವೇಶ್ವರತೀರ್ಥ ಶ್ರೀಪಾದಂಗಳವರು** - (ಪರ್ಯಾಯ ಪೇಜಾವರಮಠ ಉಡುಪಿ) - "ನಮ್ಮ ಪರಮ ಪ್ರೀತಿಪಾತ್ರರಾದ ಹುಯಿಲಗೋಳ ನಾರಾಯಣರಾಯರು ನಾಡಿಗೆ ಸಲ್ಲಿಸಿದ ಸೇವೆಯ ವಿವರಗಳನ್ನೊಳಗೊಂಡ 'ಅರ್ಪಣ' ಎಂಬ ಸ್ಮರಣ ಸಂಚಿಕೆಯನ್ನು ಪ್ರಕಟಿಸುವುದನ್ನು ತಿಳಿದು ಬಹಳ ಸಂತೋಷವಾಗಿದೆ. ನಾರಾಣರಾಯರು ನಮಗೆ ಅತ್ಯಂತ ಪರಿಚಿತರೂ ಆತ್ಮೀಯರೂ ಆಗಿದ್ದರು. ಗದಗಿಗೆ ನಾವು ಪ್ರಪ್ರಥಮವಾಗಿ ಆಗಮಿಸಿದ ಸಂದರ್ಭದಲ್ಲಿ ಅವರು ಲಲಿತ ಮಧುರ ಹಾಡುಗಳಿಂದ ನಮ್ಮನ್ನು ಸ್ವಾಗತಿಸಿದ್ದು ಈಗಲೂ ನಮ್ಮ ಕಿವಿಯಲ್ಲಿ ಪ್ರತಿಧ್ವನಿಸುತ್ತಿದೆ. ನಾಡಗೀತೆಯಿಂದ ಸಮಗ್ರ ಕನ್ನಡ ಜನತೆಯಲ್ಲಿಯೇ ಸ್ಫೂರ್ತಿ ಜಾಗೃತಿಯನ್ನು ನಿರ್ಮಿಸಿದ ಶ್ರೇಷ್ಠ ಪುರುಷರು ದಿವಂಗತ ನಾರಾಯಣರಾವ್ ಹುಯಿಲಗೋಳರು... " (ಅರ್ಪಣ)

೧೨. **ರಾಮಕೃಷ್ಣ ಹೆಗಡೆ** - (ಮಾಜಿ ಮುಖ್ಯಮಂತ್ರಿ) - ಕನ್ನಡದ ನಾಡು ನುಡಿಯನ್ನು ಜಾಗೃತಗೊಳಿಸಿದ ದಿ|| ಹುಯಿಲಗೋಳ ನಾರಾಯಣರಾಯರ ಜನ್ಮಶತಮಾನೋತ್ಸವವನ್ನು ನವಂಬರ ೧ ರಂದು (೧೯೮೪) ಅವರ ಸ್ಥಳವಾದ ಗದುಗಿನಲ್ಲೇ ಆಚರಿಸುವ ವಿಷಯ ತಿಳಿದು ಸಂತಸವಾಗಿದೆ... ಈ ಸಂದರ್ಭದಲ್ಲಿ ಹೊರತರಲಾಗುವ 'ಅರ್ಪಣ' ಸ್ಮರಣ ಸಂಚಿಕೆಯಲ್ಲಿ ದಿ|| ಹುಯಿಲಗೋಳ ನಾರಾಯಣರಾಯರ ಕನ್ನಡ ಸೇವೆಯ ಬಗ್ಗೆ ಸವಿವರವಾದ ಬರಹಗಳಿವೆಯೆಂದು ಭಾವಿಸುತ್ತೇನೆ. 'ಅರ್ಪಣ' ಸಂಗ್ರಹಯೋಗ್ಯ ಸಂಚಿಕೆಯಾಗಲಿ. "

"ರಾಜ್ಯೋತ್ಸವದ ಸಂದರ್ಭದಲ್ಲಿ ನಡೆಯಲಿರುವ ಈ ಸಮಾರಂಭ ಅರ್ಥಪೂರ್ಣವಾಗಿದೆ. ಸಮಾರಂಭ ಯಶಸ್ವಿಯಾಗಲಿ". (ಅರ್ಪಣ)

೧೩. **ವಿ.ಕೃ. ಗೋಕಾಕ** (ಸಾಹಿತ್ಯ ಅಕೆಡೆಮಿ ಅಧ್ಯಕ್ಷರು) - Shri Narayan Huilgol, who stirred the entire kannada land, wrote his "Udayavagali" Song, was asked by some friends after 1956. Whether this song was relevent since Karnataka had been unified into one administration since then. But Shri Huilgol replied, "Has Karnataka really risen after 1956 ? giving a political frame work to a state does not mean its rise or down. The song is therefore still relevent today.

Shri Huilagol was also a capable dramatist. His "Stree Dharma Rahasya" has still a message for contemporary society." (ಅರ್ಪಣ)

೧೪. **ಎನ್. ಕೆ. ಕುಲಕರ್ಣಿ** - 1952 ರಲ್ಲಿ ಕಲೋಪಾಸಕ ಮಂಡಲದವರು ನಾರಾಯಣರಾಯರನ್ನು ಸತ್ಕರಿಸಿದಾಗ ಅವರ ಕುರಿತು ಎನ್.ಕೆ. ಕುಲಕರ್ಣಿ ಹೇಳಿದ್ದು ಹೀಗೆ - "ನಾನೂ ಹುಟ್ಟಿದ್ದು ಗದಗಿನಲ್ಲಿ. ನಾರಾಯಣರಾಯರು ಹುಟ್ಟಿದ್ದೂ ಗದಗಿನಲ್ಲಿ, ಅವರೂ ಕುಮಾರವ್ಯಾಸನ ಭಕ್ತರು. ನಾನೂ ಕುಮಾರವ್ಯಾನಸ ಭಕ್ತ. ಅವರೂ ಎನ್ಕೆ, ನಾನೂ ಎನ್ಕೆ, ಅಂತರ ಇಷ್ಟೆ - ಅವರು ವಿದ್ಯಾದಾನ ಸಮಿತಿಯನ್ನು ಕಟ್ಟಿದರು, ನಾನು ಅಲ್ಲಿ ಮಾಸ್ತರನಾಗಿ ಕೆಲಸ ಮಾಡಿದೆ. ಅವರು ಹಾಡು ಕಟ್ಟಿ ನಾಡು ಕಟ್ಟಿದರು, ನಾನು ಅಂಥಾದ್ದೇನೂ ಮಾಡಿಲ್ಲ ನಿಜ. ಇಂದಿನ ಕನ್ನಡ ನಾಡು, ಇಂದಿನ ಕನ್ನಡ ನುಡಿ, ಇಂದಿನ ರಂಗಭೂಮಿಯ ಪ್ರಗತಿಗೆ ಆಧಾರವಾಗಿದ್ದವರು ಹುಯಿಲಗೋಳ ನಾರಾಯಣರಾಯರಂಥ ಶ್ರದ್ಧಾವಂತ ಕನ್ನಡಿಗರು."

೧೫. **ಕೀರ್ತಿನಾಥ ಕುರ್ತಕೋಟಿ** - "ನಾರಾಯಣರಾಯರು ನನಗಿಂತ ಎರಡು ತಲೆಮಾರು ಹಿಂದಿನವರು. ಆದರೆ ನಮ್ಮಂತಹ ಚಿಕ್ಕವರಿಗೆ ಇರೋ ಎಡ್ವಾಂಟೇಜ್ ಎಂದರೆ ಹಳಬರ ಹೆಗಲಮೇಲೆ ಕೂತುಕೊಂಡು ಅವರಿಗಿಂತ ಎತ್ತರವಾಗಿ ಕಾಣಿಸಿಕೊಳ್ತೀವಿ. ಅಂತೆಯೇ ಅವರಿಗಿಂತ ದೀರ್ಘ ನೋಟ ಬೀರ್ತೀವಿ."

೧೬. **ದ.ರಾ. ಬೇಂದ್ರೆ** - "ಸಂಪ್ರದಾಯಕ್ಕೆ ಅನುಗುಣವಾಗಿ ರಚನೆ ಮಾಡುತ್ತಿದ್ದ ನನ್ನ ಗುರುಗಳು ದಿ : ಹುಯಿಲಗೋಳ ನಾರಾಯಣರಾಯರು 'ಬೇಂದ್ರೆ ಹೊಸ ರೀತಿ ಕವಿತಾ ಬರೀತಾನ' ಎನ್ನುತ್ತಿದ್ದರು." ಬೇಂದ್ರೆಯವರ ಎಪ್ಪತ್ತನೆಯ

ಹುಟ್ಟುಹಬ್ಬವನ್ನು ಶಿರಹಟ್ಟಿಯಲ್ಲಿ ಭವ್ಯವಾಗಿ ಆಚರಿಸಲಾಯಿತು. ಆ ಸಂದರ್ಭದಲ್ಲಿ ಬೇಂದ್ರೆಯವರ ವಿದ್ಯಾಗುರುಗಳಾಗಿದ್ದ ನಾರಾಯಣರಾಯರು "ಎಪ್ಪತ್ತರ ವಯಸ್ಸಿನಲ್ಲಿಯೂ ಹುರುಪಿನ ಹುಡುಗ ಅಂದಿನಂತೆಯೇ ಮುನ್ನುಗ್ಗುತ್ತಿದ್ದಾನೆ, ಸಂತೋಷ" ಎಂದು ಮೆಚ್ಚಿಗೆ ತೋರಿದರಂತೆ. ಎನ್ಕೆಯವರು ನಾರಾಯಣರಾಯರ ಸಂದರ್ಶನ ತೆಗೆದುಕೊಳ್ಳುವಾಗ ಒಮ್ಮೆ ಬೇಂದ್ರೆ ಅವರ ವಿಷಯ ಕೇಳಿದಾಗ "ಬೇಂದ್ರೆ ಭಾಳ ಶಾಣ್ಯಾ ವಿದ್ಯಾರ್ಥಿ ಇದ್ದಾ. ಕ್ಲಾಸಿನ್ಯಾಗ ಎಲ್ಲಾ ಪ್ರಶ್ನೆಗೂ ಚಟ್ಟನ ಉತ್ತರಾ ಹೇಳ್ತಿದ್ದಾ" ಎಂದು ಅಭಿಮಾನದಿಂದ ಹೇಳಿದರಂತೆ.

೧೭. **ಡಾ.ಡಿ.ವಿ. ಗುಂಡಪ್ಪ** - ಇವರು ನಾರಾಯಣರಾಯರ ಬಗ್ಗೆ ಬರೆಯುತ್ತ "ಪ್ರಾಚೀನ ಕಾವ್ಯಗಳನ್ನು ಚೆನ್ನಾಗಿ ನೋಡಿದ್ದವರು. ಕುಮಾರವ್ಯಾಸ ಪಾರಾಯಣದಲ್ಲಿ ನಿಷ್ಠರು. ನಾರಾಯಣರಾಯರದು ದೊಡ್ಡ ಕುಟುಂಬ, ಆಸ್ತಿವಂತರೂ ಹೌದು. ಸಂಸಾರದಲ್ಲಿ ಸುಖದುಃಖಗಳನ್ನು ಕಂಡಿದ್ದವರು. ಒಂದು ಕಡೆ ಸಂಸಾರದ ತಾಪದಿಂದಲೂ, ಇನ್ನೊಂದು ಕಡೆ ಭಗವದ್ಗೀತೆಯ ಅತಿಶಯದಿಂದಲೂ ಬಹೂ ನಮ್ರರಾಗಿದ್ದರು. ತುಂಬಾ ಉದಾರಿಗಳು, ಸರಳ ಜೀವಿ, ಮಿತಭಾಷಿಗಳು, ನನ್ನ ಮನಸ್ಸು ಅವರ ಒಳ್ಳೆಯತನವನ್ನು ಪದೇ ಪದೇ ನೆನೆಯುತ್ತದೆ" ಎಂದಿದ್ದಾರೆ.

೧೮. **ವ್ಹಿ. ಸೀತಾರಾಮಯ್ಯ** - ಇವರು ಗದುಗಿಗೆ ಸಾಂಸ್ಕೃತಕ ಕಾರ್ಯಕ್ರಮಗಳಿಗೆ ಆಮಂತ್ರಿತರಾಗಿ ಬಂದಾಗ ನಾರಾಯಣರಾಯರ ಮನೆಯಲ್ಲಿ ಇರುತ್ತಿದ್ದರಂತೆ. ಇವರು ನಾರಾಯಣರಾಯರ ಬಗ್ಗೆ ಹೇಳುತ್ತ "ಹಿಂದಿನ ತಲೆಮಾರಿನ ಕನ್ನಡ ಧುರೀಣರಲ್ಲಿ ಒಟ್ಟು ಧಾರವಾಡ ಪ್ರಾಂತದಲ್ಲೇ ಪ್ರಖ್ಯಾತರಾದ ಶ್ರೀ ನಾರಾಯಣರಾಯರು ಉದಯವಾಗಲಿ ನಾಡಗೀತೆಯನ್ನು ಬರೆದವರು ನಾಡು ಉದಯವಾಗಿದೆ ಎಂದಾಗಲೂ 'ಉದಯ'ಕ್ಕೆ ವಿಶೇಷ ಅರ್ಥವನ್ನು ಕೊಟ್ಟು ಅದನ್ನು ಬಳಸಬಹುದೆಂದು ತೋರಿದರು" ಎಂದಿದ್ದಾರೆ.

೧೯. **ಡಾ. ರಂ. ಶ್ರೀ ಮುಗಳಿ** - "ಕರ್ನಾಟಕಕ್ಕೆ ಮೊದಲ ನಾಡಗೀತೆಯನ್ನು ರಚಿಸಿದ ಉಜ್ವಲ ಕನ್ನಡ ಅಭಿಮಾನಿ" - ಎಂದು ಸಾರಿದ್ದಾರೆ.

೨೦. **ಕೆ. ಎಂ. ದಾಸಕೊಪ್ಪ** - "ನಾರಾಯಣರಾಯರು ಕರ್ನಾಟಕದ ಕಾಂಗ್ರೆಸ್ಸಿನ ಹಿರಿಯ ಧುರೀಣರು. ಕನ್ನಡ ಜನತೆಗೆ 'ಉದಯವಾಗಲಿ' ಎಂಬ ಮನೋವೇಧಕ ಗೀತೆಯನ್ನು ರಚಿಸಿ ಕನ್ನಡ ಜನತೆಯಲ್ಲಿ ಅಪಾರ ಸ್ಫೂರ್ತಿ ತುಂಬಿದರು" ಎಂದು ಅಭಿಪ್ರಾಯ ಪಟ್ಟಿದ್ದಾರೆ.

೨೧. **ಗೋವಿಂದಮೂರ್ತಿ ದೇಸಾಯಿ** - "ಉದಯವಾಗಲಿ" ಈ ಹಾಡು ಏಕೀಕರಣಕ್ಕೆ ಹೋರಾಟ ನಡೆದಾಗ ತಾರಕ ಮಂತ್ರವಾಗಿತ್ತು... ಬಂಕಿಮ ಚಂದ್ರರ 'ವಂದೇ ಮಾತರಂ'ದಷ್ಟೇ ಪರಿಣಾಮಕಾರಿ. ಈ ಹಾಡನ್ನು ತುಂಬಾ ಮೆಚ್ಚಿಕೊಂಡ ಮುದವೀಡು ಕೃಷ್ಣರಾಯರು ಪ್ರತಿ ಸಮಾರಂಭದಲ್ಲಿ ಹಾಡಿಸಲು ಪ್ರಾರಂಭಿಸಿದರು. "ಇವರು ಬರೆದ ಸಾಮಾಜಿಕ ನಾಟಕಗಳಲ್ಲಿ ಸ್ತ್ರೀ ಧರ್ಮದ ಬಗ್ಗೆ ಕಳಕಳಿ, ಪಾಶ್ಚಾತ್ಯ ಶಿಕ್ಷಣದ ದುಷ್ಪರಿಣಾಮಗಳು, ಸಮಾಜದಲ್ಲಿ ಪತಿತರು ಯಾರು ? ಅವರ ಉದ್ಧಾರ ಹೇಗೆ ಎಂಬ ವಿಚಾರಗಳು ಮೂಡಿ ಬಂದ ಜನರನ್ನು ಬಡಿದೆಬ್ಬಿಸಿದವು. ಮುದವೀಡು ಕೃಷ್ಣರಾಯರು ಇವರ ಎಲ್ಲ ನಾಟಕಗಳನ್ನೂ ನೋಡಿ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದ್ದರಂತೆ.

"ಖಾದೀ ರುಮಾಲು, ಖಾದೀ ಉದ್ದನೆಯ ಕೋಟು, ಧೋತರವನ್ನು ಉಟ್ಟುಕೊಂಡು ಕೈಯಲ್ಲಿ ಒಂದು ಬಡಗೆಯನ್ನು ಹಿಡಕೊಂಡು ಹೊರಡುವದು ನಾರಾಯಣರಾಯರ ರೂಢಿ. ಧ್ವನಿ ಸ್ವಲ್ಪ ಮೆತ್ತಗೆ, ಮುಖದ ಮೇಲೆ ಮುಗುಳು ನಗೆ."..... "ನಿಪ್ಪಾಣಿಗೆ ಬಂದಾಗಲೆಲ್ಲ ನನ್ನೊಡನೆ ತಮ್ಮ ಹಳೆಯ ನಾಟಕದ ಮಾತುಗಳನ್ನು ಆಡುತ್ತಿದ್ದರು. ಇಳಿ ವಯಸ್ಸಿನಲ್ಲಿಯೂ ನಾಟಕವೆಂದರೆ ಎಳೆ ವಯಸ್ಸಿನ ಉತ್ಸಾಹವನ್ನು ತೋರಿಸುತ್ತಿದ್ದರು."

೨೨. **ಡಾ. ಮಾಸ್ತಿ ವೆಂಕಟೇಶ್ ಅಯ್ಯಂಗಾರ** - ಮಾಸ್ತಿಯವರು ನಾರಾಯಣರಾಯರನ್ನು ಬಹಳ ಗೌರವದಿಂದ ಕಾಣುತ್ತಿದ್ದರು. ಅವರು ನಾರಾಯಣರಾಯರ ವ್ಯಕ್ತಿತ್ವನ್ನು ವರ್ಣಿಸುವದು ಹೀಗೆ - "ನಾರಾಯಣರಾಯರು ತುಂಬಾ ದೊಡ್ಡವರು, ಸಜ್ಜನರು, ನಾಡಗೀತೆ ಬರೆದವರು, ನಾಟಕಗಳನ್ನು ಬರೆದು ಆಡಿಸಿದವರು. ಗದಗಿನಲ್ಲಿ ವಿದ್ಯೆ ಮತ್ತು ಸಂಸ್ಕೃತಿಗಳಲ್ಲಿ ದೊಡ್ಡ ಸೇವೆ ಮಾಡಿದವರು. ನಾಡು, ನುಡಿಗಳ ಸೇವೆಯಲ್ಲಿ ಜೀವ ಸವೆಸಿದವರು."

೨೩. **ಪಂಜೆ ಮಂಗೇಶರಾಯರು** - ಪಂಜೆಯವರು ಒಮ್ಮೆ ನಾರಾಯಣರಾಯರ ಮನೆಗೆ ಬಂದರಂತೆ. ನಾರಾಯಣರಾಯರು ಕುಮಾರವ್ಯಾಸ ಭಾರತದ ಸಂಶೋಧನೆ ಪ್ರಾರಂಭಿಸಿದ್ದು ಅವರಿಗೆ ತಿಳಿದಿತ್ತಂತೆ. ಕೋಳಿವಾಡದ ತಾಡವಾಲೀ ಭಾರತ ಗ್ರಂಥ ಮತ್ತು ಮುದ್ರಿತ ಮೈಸೂರ ಗ್ರಂಥಗಳನ್ನು ನಾರಾಯಣರಾಯರು ಹೋಲಿಸಿ ಸಂಶೋಧನೆ ನಡೆಸಿದ್ದರಂತೆ.ಆದರೆ ಕೈ ನೋವಿನಿಂದಾಗಿ ಅದನ್ನು ಮುಂದುವರಿಸಲು ಆಗಲಿಲ್ಲವಂತೆ. ಪಂಜೆಯವರು ತಾಡವಾಲೀ ಗ್ರಂಥ ನೋಡಿದರಂತೆ. ಓದಿ ಸಂತೋಷದಿಂದ ಕುಣಿದಾಡಿದರಂತೆ.

೨೪. **ವರದರಾಜ ಹುಯಿಲಗೋಳ** - "ಆಮಂತ್ರಣ ಇರಲಿ, ಬಿಡಲಿ, ಪ್ರತಿಯೊಂದು ಕಾಂಗ್ರೆಸ್ ಅಧಿವೇಶನಕ್ಕೆ, ಹಾಗೆಯೇ ಪ್ರತಿಯೊಂದು ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ನಾನಾ ಹೋಗದೇ ಇದ್ದದ್ದು ಬಹಳ ಕಡಿಮೆ. ಆ ಅಧಿವೇಶನಗಳಲ್ಲಿ ಸಾಮಾನ್ಯ ಪ್ರತಿನಿಧಿಯಾಗಿ ಜನಸಾಮಾನ್ಯರಲ್ಲಿ ಕುಳಿತು ಅಸಾಮಾನ್ಯ ಕಾರ್ಯಕ್ರಮಗಳನ್ನು ಅತ್ಯಂತ ಸಂತೋಷದಿಂದ ಪರಿಶೀಲಿಸುವುದು ಅವರ ಪರಿಪಾಠವಾಗಿದ್ದಿತು." "೧೯೫೮ರಲ್ಲಿ ಬಳ್ಳಾರಿಯಲ್ಲಿ ಅಖಿಲಕರ್ನಾಟಕ ಸಮ್ಮೇಳನದಲ್ಲಿ ನಾನೊಂದು ಪ್ರಬಂಧ ಮಂಡಿಸಬೇಕಿತ್ತು. ಸಭೆ ಪ್ರಾರಂಭವಾಗುವ ಮುನ್ನ ಅಕಸ್ಮಾತ್ತಾಗಿ ನಾನು ನಾರಾಯಣರಾಯರು ವೇದಿಕೆಯಿಂದ ಬಹುದೂರ ಜನರಲ್ಲಿ ಚಾಪೆಯ ಮೇಲೆ ಕುಳಿತಿದ್ದನ್ನು ನೋಡಿದೆ. ಅಂಥ ಹಿರಿಯ ಸಾಹಿತಿ ಯಾರ ಕಣ್ಣಿಗೂ ಬೀಳದೇ ಇದ್ದುದು, ಎಲ್ಲಿಯೋ ಅಗೋಚರವಾಗಿ ಕುಳಿತುಕೊಂಡುದು ನನಗೆ ಹೇಗೆ ಹೇಗೊ ಅನಿಸಿತು. ವ್ಯವಸ್ಥಾಪಕರಿಗೆ ತಿಳಿಸುವೆ ಎಂದು ನಾನು ನುಡಿದಾಗ, ನನ್ನ ಕೈ ಹಿಡಿದು, ಬೇಡ, ಬೇಗ ಹೋಗು ನಿನ್ನ ಹೆಸರು ಕೂಗುತ್ತಿದ್ದಾರೆ" ಎಂದರು.

"ನನ್ನ ಕೈ ಹಿಡಿದು ಅವರು ಮಾತನಾಡಿದಾಗ, ಅವರು ನನಗೆ ಹತ್ತಿರದವರಾದವರು, ಆಗ ತೀರ ಹತ್ತಿರದವರಾದರು. ಈ ಹಿರಿಯ ಸಾಹಿತಿಗೆ ಯಾವ ಪ್ರತಿಷ್ಠೆಯೂ ಬೇಡ, ಯಾವ ಗೌರವವೂ ಬೇಡ. ನಾಲ್ಕು ಜನರಿಗೆ ತಮ್ಮ ಪರಿಚಯವಾಗಬೇಕೆಂಬ ಯಾವ ಸ್ವಾರ್ಥವೂ ಇಲ್ಲ. ಅವರಿಗೆ ಯಾವ ಪ್ರಚಾರವೂ ಬೇಕಿಲ್ಲ."

೨೫. **ಗಳಗನಾಥ** - ನಾರಾಯಣರಾಯರು ಸಭೆ ಸಮಾರಂಭಗಳಲ್ಲಿ ಭಾಗ ವಹಿಸುತ್ತಿದ್ದುದು ಅತೀ ವಿರಳ. ಜನರ ಆತ್ಮೀಯ ಒತ್ತಾಯಕ್ಕೂ ಅವರು ಬಾಗಿ ಸಭೆಗಳಲ್ಲಿ ಪಾಲ್ಗೊಳ್ಳುತ್ತಿರಲಿಲ್ಲ. ಆದರೆ ಗಳಗನಾಥರಂಥ ಅಧ್ವರ್ಯು ಸಾಹಿತಿಯ ಶತಾಬ್ದಿ ಸಮಾರಂಭದ ಅಧ್ಯಕ್ಷತೆ ವಹಿಸಲು ಒಪ್ಪಿದರು. ಆಗ "ಗಳಗನಾಥ ಎಂದರೆ "master of pen" ಅಂದರೆ ಲೆಕ್ಕಣಿಯ (ಗಲಗಿನ) ಪ್ರಭುತ್ವ ಅವರದು. ಅವರ ಲೆಕ್ಕಣಿಕೆ ಕನ್ನಡಕ್ಕೆ ಪ್ರಭುತ್ವ ತಂದು ಕೊಟ್ಟಿತು" ಎಂದು ಗಳಗನಾಥರಿಗೆ ಗೌರವ ಸಮರ್ಪಿಸಿದರು.

೨೬. **ಹಾ.ಮಾ. ನಾಯಕ** - "ಕೃತಿಗಳ ರಚನೆಯ ಸಂದರ್ಭ, ಕಾಲಗಳನ್ನು ಗಮನಿಸಿದರೆ ಹುಯಿಲಗೋಳ ನಾರಾಯಣರಾಯರು ತಮ್ಮ ಉದ್ದೇಶವನ್ನು ಈಡೇರಿಸಿಕೊಂಡರೆಂದೇ ಹೇಳಬಹುದು" ಎಂದಿದ್ದಾರೆ.

೧೭. **ವಾಸುದೇವಾಚಾರ್ಯ ಕೆರೂರ** - ಆಗಿನ ಕಾಲದಲ್ಲಿ ಕೆರೂರ ವಾಸುದೇವಾಚಾರ್ಯರು ಹುಬ್ಬಳ್ಳಿಯ "ಸಚಿತ್ರ ಭಾರತ" ಮಾಸಪತ್ರಿಕೆಯ ಸಂಪಾದಕರಾಗಿದ್ದರು. ಮನೆ ಇದ್ದದ್ದು ಬಾಗಲಕೋಟೆಯಲ್ಲಿ. ಹುಬ್ಬಳ್ಳಿಯಿಂದ ಬಾಗಲಕೋಟೆಗೆ ಹೋಗುವಾಗೆಲ್ಲಾ ಗದಗಿನಲ್ಲಿ ಗಾಡಿ ಬದಲಿಸಬೇಕಾಗುತ್ತಿತ್ತು. ಆಗ ರಾತ್ರಿ ಹತ್ತು ಗಂಟೆಗೆ ಗದಗಿಗೆ ಬಂದು ಟಾಂಗಾ (ಕುದುರೆ ಬಂಡಿ) ದಿಂದ ನಾರಾಯಣರಾಯರ ಮನೆಗೆ ಹೋಗಿ ಚಹ ಕುಡಿದು ಹರಟೆ ಹೊಡೆದು ರಾತ್ರಿ ೨ ಗಂಟೆಗೆ ಮತ್ತೆ ಬಾಗಲಕೋಟೆಯ ಗಾಡಿ ಹತ್ತುತ್ತಿದ್ದರು. ಅವರಿಂದ ರಂಗಭೂಮಿಯ ತಂತ್ರವನ್ನು ತಿಳಿಯುತ್ತಿದ್ದರಂತೆ. ಹೀಗೆ ಕೆರೂರವರು ಬರೆದ "ನಳ ದಮಯಂತಿ" ನಾಟಕದ ತಂತ್ರದ ಚ್ಯುತಿ ಹೇಳಿ ಕಾಳಜಿ ವಹಿಸಲು ಹೇಳಿದರಂತೆ, ಮುಂದೆ "ರುಕ್ಮಿಣಿ ಹರಣ" ದಲ್ಲಿ ಕೆರೂರವರು ಅವರು ಹೇಳಿದ ಮಾತುಗಳನ್ನು ಧ್ಯಾನದಲ್ಲಿಟ್ಟು ಬರೆದರಂತೆ.

೨೮. **ಬಿ.ಎಂ. ಶ್ರೀಕಂಠಯ್ಯ** - ಬಿ.ಎಂ. ಶ್ರೀಯವರು ನಾರಾಯಣರಾಯರನ್ನು ಕಾಣಲು ಬಹಳ ಆತ್ಮೀಯತೆಯಿಂದ ಗದಗಿಗೆ ಬರುತ್ತಿದ್ದರಂತೆ. ಅವರು ಮನೆಯಲ್ಲಿ ಪ್ರವೇಶ ಮಾಡುವಾಗೆಲ್ಲಾ "ಸತತ ಕಲ್ಯಾಣಮಚ್ಯುತನ ಭಕ್ತರಿಗೆ" ಎಂಬ ಹಾಡನ್ನು ಹಾಡುತ್ತಲೇ ಪ್ರವೇಶಿಸುತ್ತಿದ್ದರಂತೆ.

೨೯. **ಸಿದ್ಧನಾಥ ಬಳ್ಳಾರಿ** - (ಅಖಿಲ ಭಾರತ ಕನ್ನಡರಂಗ ಅಧ್ಯಕ್ಷ) - "ನಮ್ಮ ನಾಡು, ನುಡಿ, ಕನ್ನಡ ನೆಲ ಈ ಕುರಿತು ನರನಾಡಿಗಳಿಗೆ ಜೀವಕಳೆ ತುಂಬಿ ತಮ್ಮ ಅಮರ ಹಾಗೂ ಸಮರ - ಗೀತೆಯಾದ "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಎಂದು ಪ್ರತಿ ಕನ್ನಡಿಗನ ಹೃದಯದಲ್ಲಿ ಮಿಡಿಸಿದ ಪರಮಪೂಜ್ಯರು ದಿ ॥ ನಾರಾಯಣರಾವ್ ಹುಯಿಲಗೋಳವರು."

೩೦. **ವಸಂತ ಕುಷ್ಟಗಿ** - "ಹೃದಯವನ್ನೇ ಸ್ಪಂದಿಸಿ ಕನ್ನಡ ನಾಡ ಪರಂಪರೆಯ ಹಿರಿಮೆ, ಗರಿಮೆಗಳನ್ನು, ರೇಣುಕಾ, ಹನುಮಂತ, ಜಕ್ಕಣ ಮುಂತಾದ ಮಹಾಮಹಿಮರನ್ನು ನೆನೆದು ಈ ಕವಿತೆ ಕನ್ನಡದ ಇತಿಹಾಸದ ಪ್ರೇರಣಾ ಸ್ಪಂದನದ ಬತ್ತದ ತೊರೆಯಾಗಿದೆ. ಕರ್ನಾಟಕ ಏಕೀಕರಣವಾದರೂ, ಅದು ಇನ್ನು ಪೂರ್ತಿಯಾಗದೆ ಪ್ರಗತಿ ಪ್ರವೃತ್ತಿ ಸದಾ ಮುಂಗುಡಿಯಾಗಿ ಹಬ್ಬಲೇಬೇಕಾದುದರಿಂದ ಈ ಹಿಂದೆಯೂ ಇದು ಕೋಟಿ ಕೋಟಿ ಜನತೆಯ ಮಾನಸ ಗಂಗೋತ್ರಿಯಾಗಿ ಸ್ಫುರಿಸಿದೆ. ಬೆಳೆಯುತ್ತಿರುವ ಇಂದಿನ ಕೋಟಿ ಕೋಟಿಗಳಲ್ಲಿಯೂ ಇದೇ ನಮ್ಮ

ನಾಡಗೀತೆ. ಇದನ್ನು ಹಾಡುತ್ತಿರುವಂತೆ ಕರ್ನಾಟಕದ ಗತ ವೈಭವ, ಭವಿಷ್ಯದ ಮಿಂಚುಕಣ್ಣು ಭಾರತಾಂಬೆ ಕಂಗೊಳಿಸುತ್ತಾಳೆ" ಎಂದು ಬಣ್ಣಿಸಿದ್ದಾರೆ.

೩೧. **ಗು.ಹ. ಬಾಳಿಹಳ್ಳಿ** - "ಶ್ರೇಷ್ಠ ಕವಿಗಳಾಗಿ, ಆದ್ಯ ಸಾಮಾಜಿಕ ನಾಟಕಕಾರರಾಗಿ, ಸತ್ಯ ನಿಷ್ಠಪೂರ್ಣ ನಿಷ್ಕಳಂಕ ಪ್ರಾಮಾಣಿಕ ವಕೀಲರಾಗಿ, ನಾಡಗೀತೆಯ ಮಂತ್ರ ದ್ರಷ್ಟಾರರಾಗಿ, ಶಿಕ್ಷಣ ಸಂಸ್ಥೆಯ ಅಭಿವೃದ್ಧಿಯ ಪ್ರವರ್ತಕರಾಗಿ, ಸನಾತನ ಸಂಪ್ರದಾಯಗಳಲ್ಲಿ ಭಕ್ತಿ ವಿಶ್ವಾಸವಿಟ್ಟಿದ್ದರೂ ದೀನ ದಲಿತರ ಉದ್ಧಾರಕ್ಕೆ ಪಣ ತೊಟ್ಟವರಾಗಿ ಮತ್ತು ಇವೆಲ್ಲವುಗಳಿಗೆ ಕಳಸವಿಟ್ಟಂತೆ ಗದುಗಿನ ವೀರನಾರಾಯಣನ ಭಕ್ತಾಗ್ರೇಸರರಾಗಿ ಬಾಳು ಬೆಳಗಿದವರು ಹುಯಿಲಗೋಳ ನಾರಾಯಣರಾಯರು."

೩೨. **ಡಾ. ಆರ್.ಡಿ. ರಾನಡೆ** - ವಿಜಾಪುರದ ಬಳಿ ಇದ್ದ ನಿಂಬಾಳದಲ್ಲಿ ಡಾ. ರಾನಡೆಯವರ ಆಶ್ರಮ. ನಾರಾಯಣರಾಯರು ತಮ್ಮ ಮಗಳನ್ನು ಭೇಟಿಯಾಗಲು ವಿಜಾಪುರಕ್ಕೆ ಹೋದಾಗಲೆಲ್ಲ ರಾನಡೆಯವರ ಆಶ್ರಮಕ್ಕೆ ಹೋಗುತ್ತಿದ್ದರಂತೆ. ನಾರಾಯಣರಾಯರು ಆಶ್ರಮದಲ್ಲಿದ್ದ ಸಮಯದಲ್ಲಿ ಆಶ್ರಮದ ಎಲ್ಲ ಕಾರ್ಯಕ್ರಮಗಳನ್ನು "ಉದಯವಾಗಲಿ" ಹಾಡಿನಿಂದ ಪ್ರಾರಂಭಿಸಲು ರಾನಡೆ ಹೇಳುತ್ತಿದ್ದರಂತೆ. ಅದೂ ನಾರಾಯಣರಾಯರು ಸ್ವತಃ ಆ ಹಾಡು ಹೇಳುತ್ತಿದ್ದರಂತೆ.

೩೩. **ಆರ್.ಜಿ. ದೇಸಾಯಿ** - (ನಾರಾಯಣರಾಯರ ಅಳಿಯ) "ಅವರ ಭಕ್ತಿ ಗೀತೆಗಳಲ್ಲಿ ನನ್ನ ಹೃದಯಕ್ಕೆ ಆಳವಾಗಿ ಮುಟ್ಟಿದ್ದು ಎಂದರೆ 'ಯಾವಲ್ಲಿ ಅಡಗಿರುವಿ', ಎಂಬುದು. ಈ ಹಾಡಿಗೆ ಒಂದು ಇತಿಹಾಸವಿದೆ. ಅನೇಕ ವರುಷಗಳ ಹಿಂದೆ ಧಾರವಾಡದಲ್ಲಿ ಸಾಹಿತ್ಯ ಸಮ್ಮೇಲವಾಯಿತಷ್ಟೆ. ಆಗ ನಾನೂ ನನ್ನ ಪತ್ನಿಯೂ ಹೋಗಿದ್ದೆವು. ನಾರಾಯಣರಾಯರು ಬಂದಿದ್ದರು. ಒಂದು ದಿನ ಸಂಜೆ ಕಾವ್ಯಗಾಯನ ಕಾರ್ಯಕ್ರಮ ನಡೆದಿತ್ತು. ಮೈಸೂರಿನ ಕೆಲವು ಕವಿಗಳು ತಮ್ಮ ಕವನಗಳನ್ನು ಹಾಡಿ ತೋರಿಸುತ್ತಿದ್ದರು. ಸಭಾಭವನದ ತುಂಬ ಗುಜು ಗುಜು ಶಬ್ದ. ಹಾಡುಗಳು ಸ್ಪಷ್ಟವಾಗಿ ಕೇಳುತ್ತಿರಲಿಲ್ಲ. ಆಗ ಕುಮಾರಿ ಕಮಲಾ ಪಾಗೆ (ಈಗ ಶ್ರೀಮತಿ ಕಮಲ ಪುರಂದರೆ) 'ಯಾವಲ್ಲಿ ಅಡಗಿರುವಿ' ಹಾಡನ್ನು ಪ್ರಾರಂಭಿಸಿದಳು. ಜಾದೂ ಮಾಡಿದಂತಾಯಿತು. ಎಲ್ಲ ಸಭಿಕರೂ ಒಮ್ಮೆಲೆ ಸ್ತಬ್ಧರಾಗಿ ಏಕಚಿತ್ತದಿಂದ ಹಾಡನ್ನು ಕೇಳಹತ್ತಿದರು. ಹಾಡು ಮುಗಿದ ಕೂಡಲೆ ಚಪ್ಪಾಳೆಯ ಕಪಕಪಾಟ."

೩೪. **ದತ್ತಾತ್ರೇಯ ಪಾಟೀಲ** - "ಕನ್ನಡ ಹವ್ಯಾಸಿ ರಂಗಭೂಮಿಯ ಮುಂಗೋಳಿ ಎಂದರೆ ಸಕ್ರಿ ಬಾಳಾಚಾರ್ಯರು (ಶಾಂತಕವಿ). ಕನ್ನಡ ಹವ್ಯಾಸಿ ನಾಟಕ ಸಾಹಿತ್ಯ ಆದಿತ್ಯನೆಂದರೆ ಗದುಗಿನ ಹುಯಿಲಗೋಳ ನಾರಾಯಣರು."

೩೫. **ಗರೂಡ ಸದಾಶಿವರಾಯರು (ನಾಟ್ಯ ಕೇಸರಿ)** - ದತ್ತಾತ್ರಯ ನಾಟಕ ಕಂಪನಿಯ ಒಡೆಯರಾದ ಸದಾಶಿವರಾಯರು ಹಾಗೂ ನಾರಾಯಣರಾಯರೂ ತುಂಬಾ ಹತ್ತಿರದ ಮಿತ್ರರು. ಗರೂಡರ ಮಗ ಶ್ರೀಪಾದರಾಯರು ಇವರಿಬ್ಬರನ್ನೂ 'ನಿರ್ನಿಮಿತ್ತ ಬಂಧುಗಳು' ಎಂದು ಬಣ್ಣಿಸಿದರು. ಗರೂಡರಿಗೆ ನಾರಾಯಣರಾಯರೆಂದರೆ ಅತೀವ ಗೌರವ, ವಿಶ್ವಾಸ. ಗರೂಡರಿಗೆ ನಾರಾಯಣರಾಯರೆಂದರ ಒಬ್ಬ "Friend, Philosohpher and Guide" ಇದ್ದ ಹಾಗೆ. ಅವರು ತಮ್ಮ ಎಲ್ಲ ಕಾರ್ಯಗಳಲ್ಲೂ ನಾರಾಯಣರಾಯರ ಸಲಹೆ ಪಡೆಯುತ್ತಿದ್ದರು. ಅದು ಮನೆತನದ ವಿಷಯವಾಗಲಿ, ಕಂಪನಿಯ ವಿಷಯವಾಗಲಿ, ನಾಟಕ ಪ್ರಯೋಗದ ವಿಷಯವಿರಲಿ ನಾರಾಯಣರಾಯರ ಜೊತೆ ಚರ್ಚೆ ಮಾಡಿದ ಮೇಲೆ ಅವರು ನಿರ್ಧಾರ ತೆಗೆದುಕೊಳ್ಳುತ್ತಿದ್ದರು. ಹೊಸ ನಾಟಕ ಪ್ರಾರಂಭಿಸುವಾಗ ಅದರ ತಂತ್ರ, ಪಾತ್ರಗಳ ವೇಷ - ಭೂಷೆ ಎಲ್ಲವನ್ನೂ ಒಮ್ಮೆ ಅವರು ನಾರಾಯಣರಾಯರ ಜೊತೆ ಪರಾಮರ್ಶಿಸಲೇಬೇಕು. ಇಷ್ಟೇ ಏಕೆ ? ತಾವು ನಾಟಕ ಬರೆಯಲು ಯೋಚಿಸಿದಾಗಲೂ ಅವರ ಸಲಹೆ ಕೇಳುತ್ತಿದ್ದರಂತೆ. ಒಮ್ಮೆ 'ಕೃಷ್ಣ ಪರಂಧಾಮ' ನಾಟಕ ಬರೆಯಲೇ ? " ಎಂದೂ ಕೇಳಿದಾಗ ನಾರಾಯಣರಾಯರು ಬೇಡವೆಂದರಂತೆ. ಹಾಗೆ "ಬಾಜೀರಾವ್" ನಾಟಕ ಬರೆಯಲು ಅವರ ಮತ ಕೇಳಿದಾಗಲೂ "ಘರ್ಷಣೆ, ವಿವಾದಗಳ ವಿಷಯಗಳನ್ನು ಆದಷ್ಟು ಬರೆಯಬೇಡಿ" ಎಂದರಂತೆ. ಎಷ್ಟೋ ಸಲ ನಾಟಕಗಳ ನಿರ್ದೇಶನಕ್ಕೂ ನಾರಾಯಣರಾಯರ ಸಹಾಯ ತೆಗೆದುಕೊಳ್ಳುತ್ತಿದ್ದರಂತೆ. ಗರೂಡರು ಗುಲಬರ್ಗಾ, ಮಿರಜ, ಪುಣೆ, ಮುಂಬೈಗಳಿಗೆ ನಾಟಕ ಕಂಪನಿ ತೆಗೆದುಕೊಂಡು ಹೋದರೆ ನಾರಾಯಣರಾಯರನ್ನು ಕರೆದುಕೊಂಡು ಹೋಗುತ್ತಿದ್ದರಂತೆ. ಕಂಪನಿಯ ಹಣಕಾಸಿನ ವಿಷಯಗಳನ್ನೆಲ್ಲ ಇವರೇ ನೋಡಿಕೊಳ್ಳುತ್ತಿದ್ದರಂತೆ. ಮುಂದೆ ಒಂದು ಸಲ ಹಣದ ಅಭಾವದಿಂದ ನಾಟಕ ಕಂಪನಿಯನ್ನು ನಿಲ್ಲಿಸಿ ನೌಕರರಿಗೆ ಕೊಡಬೇಕಾದ ಸಂಬಳಕ್ಕೆ ಪ್ರಾಮಿಸರಿ ನೋಟ ಬರೆದುಕೊಟ್ಟರು. ಗರೂಡರಿಗೆ ಆಗದವನೊಬ್ಬ ಒಂದು ಪ್ರಾಮಿಸರಿ ನೋಟನ್ನು ಖರೀದಿ ಮಾಡಿ ಗರೂಡರ ಮನೆಗೆ ಜಪ್ತಿಗೆ ಬಂದಾಗ ಗರೂಡರು ಸಾಹಿತ್ಯ ಪರಿಷತ್ತಿನ ಅಧಿವೇಶನಕ್ಕಾಗಿ ಹರಪನಹಳ್ಳಿಗೆ ಹೋಗಿದ್ದರು. ಮನೆಯಲ್ಲಿ ಬರೀ ಹೆಣ್ಣುಮಕ್ಕಳು ಹಾಗೂ ಹಾಸಿಗೆ ಹಿಡಿದಿದ್ದ ಅವರ ತಮ್ಮ ಸಾಂಬನಾಯಕರು ಮಾತ್ರ ಇದ್ದರು. ಇಂಥ ಸಮಯದಲ್ಲಿ ನಾರಾಯಣರಾಯರಿಗೆ ಹೇಳಿ ಕಳಿಸಿದಾಗ ಬಂದು ಜಪ್ತಿಯನ್ನು ಹಿಂತೆಗೆಯಿಸಿ ತಾವೇ ಹಣ ಕೊಟ್ಟರಂತೆ.

ಗರೂಡರು ತಮ್ಮ ಕಂಪನಿಯಿಂದ ನಾರಾಯಣರಾಯರ ಸಾಮಾಜಿಕ ನಾಟಕಗಳಾದ "ಸ್ತ್ರೀಧರ್ಮ ರಹಸ್ಯ" ಹಾಗೂ "ಶಿಕ್ಷಣ ಸಂಭ್ರಮ" ಗಳ ಅನೇಕ ಪ್ರಯೋಗಗಳನ್ನು ಪುಣೆ, ಮುಂಬೈವರೆಗೂ ಮಾಡಿ ಬಂದಿದ್ದಾರೆ.

ನಮ್ಮ ತಾಯಿ ನಾರಾಯಣರಾಯರ ತಮ್ಮನ ಮಗಳು. ನಮ್ಮ ಚಿಕ್ಕಮ್ಮ (ಕಾಕು)ಗರೂಡರ ಮಗಳು. ಹಾಗಾಗಿ ಇಬ್ಬರೂ ಪಾಗೆ ಮನೆತನಕ್ಕೆ ಬೀಗರು. ಅದರಿಂದ ಸಂಬಂಧಿಕರೂ ಹೌದು.

೩೬. **ಕಲಾಕೇಸರಿ ಉದಯಕುಮಾರ** - "ಹುಯಿಲಗೋಳ ನಾರಾಯಣರಾಯರು - ಅವರು ಪ್ರಾತಃ ಸ್ಮರಣೀಯರಲ್ಲಿ ಒಬ್ಬರು. ೧೯೨೪ರಲ್ಲಿ ಅವರು ರಚಿಸಿದ ಕನ್ನಡ ಕವಿತ್ವದ ಕ್ರಮದಲ್ಲಿ ಮೈರೋಮಾಂಚನವಾಗಿ ಕನ್ನಡ ಹೃದಯ ಶ್ರೀಮಂತತನವನ್ನು ಹುಯಿಲು ಎಬ್ಬಿಸಿತು. ಎಷ್ಟು ಹಾಡಿದರೂ ಕರ್ಣ ಪಾನಕವದು - ಮಧುರ ಸ್ಮೃತಿಯದು - ಬಿದ್ದ ಕನ್ನಡಿಗರನ್ನು ಕೈಕೊಟ್ಟು ಎಬ್ಬಿಸಿ ವಿಚಾರಿಸಿದ ಪದಗುಚ್ಛವದು - ಪರಂಪರೆಯನ್ನು ಪರಿಚಯ ಮಾಡಿಸಿದ ಪಾವನ ಕೃತಿಯದು. ಚರಿತ್ರೆಯನ್ನು ಹಿಂದೆ ಒಮ್ಮೆ ತಿರುಗಿ ನೋಡಿ, ಮುಂದೆ ಹೇಗೆ ನಡೆಯಬೇಕೆಂಬ ಎಚ್ಚರಿಕೆಯ ಅರಿವಿನ ಸೂಚಿಯದು. ಕನ್ನಡಿಗರ ಮನೆಮನೆ ಉದಯವಾಗಬೇಕು, ಮನ ಮನದಲ್ಲಿ ಕನ್ನಡಿಗರೆಂಬ ಚಿಂತನ ಉದಯವಾಗಬೇಕು, ಸರ್ವತೋಮುಖವಾಗಿ ಬೆಳೆದು ಉದಯವಾದ ನಮ್ಮ ನಾಡು ಧಾರ್ಮಿಕ - ಸಾಂಸ್ಕೃತಿಕ - ಸಾಹಿತ್ಯಿಕ - ರಾಷ್ಟ್ರೀಯತೆಯಲ್ಲಿ ಅಸ್ತಂಗತವೇ ಆಗಬಾರದೆಂಬ ಹೆಬ್ಬಯಕೆಯ ಅದ್ಭುತ ಅಪೇಕ್ಷೆಯ ಗೀತೆ - ಅದೊಂದು ಚಿರಂಜೀವಿ ಸಂಜೀವಿನಿ ಸಾಹಿತ್ಯ !"

೩೭. **ಡಾ. ಸರೋಜನಿ ಮಹಿಷಿ.**

## ನಿವೇದನೆ

ಆರು ದಶಕದ ಹಿಂದೆ ಕಂಡೆನೀ ಕನಸನು
ಮೂರು ಕೋಟಿಯ ಜನರ ದಿವ್ಯ ಭವಿತವ್ಯವನು
ಆರು ಕಂಡರು ಕನಸು ! ಆರು ಕೇಳಿದರೆಂದು
ಇಂದೆಲ್ಲ ಆಗಿಹುದು ನನಸು.

ಕೃಷ್ಣ ಭೀಮೆಯರಿಹರು ಗೋದೆ ಕಾವೇರಿಯರು
ತೃಷ್ಣೆಯನು ತಣಿಸಿಹರು ಕರುನಾಡ ನೆಲದ
ಹರಿವ ಜಲ ಹಸಿರು ನೆಲ ಪಚ್ಚೆತೆನೆ ಮೆರೆವ ಫಲ
ತಿಂದುಂಡು ತೇಗಿದರು ಜನರು

ಲೆಕ್ಕಿಗಮಿತಾಕ್ಷರರು ಬೆಳೆದು ಮೆರೆದಿಹ ನಾಡು
ಎಂದೆಲ್ಲ ಹರಸಿದೆ, ಸ್ಫೂರ್ತಿಯ ಸೆಲೆಯಾದೆ
ದತ್ತರ ಕಾವ್ಯಝರಿ ವಿನಾಯಕರ ಹೊಸ ಹೊನಲು
ಪುಟ್ಟಪ್ಪ, ಗುಂಡಪ್ಪ ಕಾವ್ಯಸಿರಿಯು

ರಂಗಭೂಮಿಯ ತೆರೆಯು ಸರಿದು ಬಂದಿತು ಬೆಳಕು
ಕರುನಾಡು ಜನದಲ್ಲಿ ಮನೆ ಮನೆಗಳಲ್ಲಿ
ಅಂದು ಹಚ್ಚಿದ ಜ್ಯೋತಿ ಬೀರಿಹುದು ಬೆಳಕನ್ನು
ನಾಡಿನಂಗಳದಲ್ಲಿ ಎಲ್ಲೆಲ್ಲೂ.

*ಡಾ. ಸರೋಜಿನಿ ಮಹಿಷಿ*

ಇದು ನಾರಾಯಣರರಾಯರನ್ನು ಕುರಿತ ಕವನ.

ಹುಯಿಲಗೋಳ ನಾರಾಯಣರಾಯರ ಸಂಪರ್ಕದಲ್ಲಿ ಬಂದ ಮಹಾನುಭಾವರ ಸಂಖ್ಯೆ ಅಗಣಿತ. ನಾರಾಯಣರಾಯರನ್ನು ಗೌರವದಿಂದ ಕಾಣುತ್ತಿದ್ದ ಅನ್ಯ ಆತ್ಮೀಯರನ್ನು ಈ ಕೆಳಗೆ ಉಲ್ಲೇಖಿಸಲಾಗಿದೆ. ಇವರೆಲ್ಲರೂ ಗದುಗಿಗೆ ಬಂದದ್ದಲ್ಲದೆ ನಾರಾಯಣರಾಯರ ಮನೆಯ ಆತಿಥ್ಯವನ್ನು ಸ್ವೀಕರಿಸಿದ್ದಾರೆ.

೩೮. ಕುವೆಂಪು

೩೯. ಜಿ.ಪಿ. ರಾಜರತ್ನಂ

೪೦. ಅ.ನ. ಕೃಷ್ಣರಾಯರು

೪೧. ಗೋವಿಂದ ಪೈ

೪೨. ದಿವಾಕರ ರಂಗರಾಯರು

೪೩. ಬೆಟಗೇರಿ ಕೃಷ್ಣ ಶರ್ಮರು

೪೪. ಮುದವೀಡು ಕೃಷ್ಣರಾಯರು

೪೫. ಕರಮರಕರರು

೪೬. ಹರ್ಡೀಕರರು

೪೭. ಭಾರತ ಬಿಂದೂರಾಯರು

೪೮. ಹಂಪ ನಾಗರಾಜಯ್ಯ

೪೯. ಕಬ್ಬೂರ ಮಾಧವರಾಯರು

೫೦. ಡಾ.ಕಮಲ ಪುರಂದರೆ - (ಕವನ ರೂಪದಲ್ಲಿ ಅಭಿವ್ಯಕ್ತಿ ಮುಂದಿನ ಪುಟದಲ್ಲಿ)

## ಗೀತ ಸ್ವರ ನಮನ

**ಪೂಜ್ಯ ನಾನಾಗೆ - (ಹುಯಿಲಗೋಳ ನಾರಾಯಣರಾಯರಿಗೆ)**

**ರಾಗ ದರಬಾರಿ ಕಾನಡಾ, ತಾಳ-ಝುಪ್ತಾಲ**

ಗದುಗಿನ ವೀರ ನಾರಾಯಣನ ಅಂಕಿತದಿ
ಪದಗಳನು ರಚಿಸಿದಿರಿ ಭಕ್ತಿರಸದಿ
ಮುದದಿ ಹಾಡಿಸಿದಿರಿ ಬರೆದಾಗ ಭರದಿ
ಹದವರಿತು ನಾ ಹಾಡೆ ತಣಿದಿರಿ ಗಾನದಿ ॥ ೧ ॥

ಅದು ನನ್ನ ಸೌಭಾಗ್ಯ ನಾ ನಿಮ್ಮ ಮೊಮ್ಮಗಳು
ಎದೆ ತುಂಬಿ ಹಾಡೆ ನಿಮ್ಮಯಾ ಪದಗಳು
ಪದಕವಾದವು ಎನ್ನ ಕೊರಳಲಿ ಗೀತಗಳು
ಸದಮಲ ಭಕ್ತಿಗಾದವು ಸೋಪಾನಗಳು ॥ ೨ ॥

ಕಂಡಿಲ್ಲ ವ್ಯಾಸರನು ಕಂಡಿಲ್ಲ ದಾಸರನು
ಕಂಡಿಲ್ಲ ಕುಮಾರ ವ್ಯಾಸರನು ನಾನು

ಕಂಡೆ ನಿಮ್ಮಲ್ಲಿ ಅವರ ಕಂಡೆ ಆ ಭಕ್ತಿಯನು
ಕಂಡೆ ನಿಮ್ಮದೆ ಸ್ಫೂರ್ತಿ ಎನ್ನಲ್ಲಿ ನಾನು || ೩ ||

ಸಾಹಿತ್ಯ ಕೃಷಿ ನಿಮ್ಮದತಿ - ಮೌಲ್ಯವಾದುದು
ಬಹು ನಾಟಕಗಳ ಬರೆದು ವಿದ್ಯೆಗನುವಾದುದು
ನೇಹದಿಂದಲಿ ದೇಶ ಸೇವೆಗಣಿಯಾದುದು
ಸಹಜದಲಿ ನಾಡು ಹೆಮ್ಮೆ ಪಡುವಂಥದು || ೪ ||

ಹಣೆಯಲ್ಲಿ ಅಕ್ಷಂತಿ - ಗೋಪಿಚಂದನ ಸೊಗಸು
ಕಣ್ಣಲ್ಲಿ ತೇಜಸ್ಸು ನಿಮ್ಮದದು ವರ್ಚಸ್ಸು
ಪಣವದು ಖಾದಿಯ ಉಡುವುದಾ ಶ್ರೇಯಸ್ಸು
ಕಣ್ಮನದಿ ನಿಂತಿಹಿರಿ ತುಂಬಿ ಎಮ್ಮಯ ಮನಸು || ೫ ||

ಯಾವಲ್ಲಿ ಅಡಗಿರುವಿ ಎಂದ್ಧರಿಯ ಹುಡುಕಿದಿರಿ
ಆವದುವೆ ಆಷಾಢೇಕಾದಶಿಯನಾಯ್ದಿರಿ
ಕಾವ ಗದಗಿನ ವೀರ ನಾರಾಯಣೆಂದುಸುರಿದಿರಿ
ಅವನ ಬಳಿಗೇ ಸಾರಿ ಹರಿ ಪಾದ ಸೇರಿದಿರಿ || ೬ ||

ನಿಮ್ಮ ಜೊತೆಯೊಡನಾಟ ರಸದೂಟವೆಮಗೆ
ನಿಮ್ಮ ಜೀವನ ಬಗೆಯೆ ದಾರಿ ದೀಪವು ನಮಗೆ
ನಿಮ್ಮ ಆಶೀರ್ವಾದ ನಿರುತವೂ ಇರಲೆಮಗೆ
ಈ ಗೀತಸ್ವರನಮನ ಅರ್ಪಿಸುವೆ ನಿಮಗೆ || ೭ ||

*ಡಾ. ಕಮಲ ಪುರಂದರ*

**ರಾಧಾ ಕುಲಕರ್ಣಿ (ಕವನ ರೂಪದಲ್ಲಿ ಅಭಿವ್ಯಕ್ತಿ)**

## ನಾಡಗೀತೆಯ ನಾನಾ

ನಾರಾಯಣರಾವ ಹುಯಿಲಗೋಳರಿವರು
'ನಾನಾ' ಮನೆಯ ಜನಕೆಲ್ಲ ಇವರು.
ನಾರಾಯಣನ ಸನ್ನಿಧಿ ಗದಗಿನಲ್ಲಿ
ನಾಲ್ಕನೆ ದಿನ ನವರಾತ್ರಿಯಲ್ಲಿ

ನಾನಾ ಅವರ ಜನನವಾಯಿತು
ನಾಡಲಿ ನಂದಾದೀಪ ಬೆಳಗಿತು.
ನಾಡಿಗೆ ನೀಡಿದನಿವ ಉದಯದ ಹಾಡನು
ನಾಡನು ಕೂಡಿಸಿದ ಕನ್ನಡದ ಕವಿ ಭಾನು
ನಾಡೇ ಎಚ್ಚರವಾಯ್ತೀ ಉದಯರಾಗಕೆ
ನಾಂದಿಯಾಯ್ತಿದು ಕನ್ನಡದ ಮುನ್ನಡೆಗೆ
ನಾಲ್ಕು ದಿಕ್ಕಿನಲಿ ಹಾಡಿದು ಹರಡಿತು
ನಾಡಿನ ಜನರ ಮನವನು ಕದಡಿತು
ನಾಕು ಮೊಗದವನ ಮಡದಿ ಶಾರದೆ
ನಾಲಿಗೆ ಮೇಲೆ ನಲನಲಿಯುತಿರೆ
ನಾರಾಯಣನ ಗುಣಗಾನ ಕವನ ಬರೆದಿರಿ.
ನಾದ ಸಂಗೀತ ರಾಗ ತಾಳ ನೀಡ್ದಿರಿ.
ನಾರದನಂತೆ ನಾರಾಯಣನ ನಂಬಿದಿರಿ
ನಾಸ್ತಿಕರಲ್ಲಾಸ್ತಿಕತೆಯ ನೀವ್ ತಂದಿರಿ.
ನಾನಾ ವಿಧದ ನಾಟಕ ಬರೆದಿರಿ
ನಾಟಕ ರಂಗದಿ ನಾವೀನ್ಯ ತಂದಿರಿ.
ನಾಟಕದಿಂದಲೆ ಶಾಲೆ ಕಟ್ಟಿದಿರಿ
ನಾಟಕದಿಂದ ಪತಿತರನುದ್ಧರಿಸಿದಿರಿ
ನಾರಿಯರ ಗರಿಮೆ ಜಗಕೆ ತೋರಿದಿರಿ
ನಾಟಕ 'ಸ್ತ್ರೀಧರ್ಮ ರಹಸ್ಯ' ಬರೆದಿರಿ.
ನಾಡಿನ ಸೇವೆಗೆ ಸದಾ ಸೆಣಸಿದಿರಿ
ನಾಕದಿಂ ನರಕ ನೂಕಲೆತ್ನಿಸಿದಿರಿ
ನಾಜೂಕು ನಯ ನಿಮ್ಮಯ ಕುರುಹು
ನಾಗರಿಕತೆಯ ಹಿರಿಮೆ ನಿಮ್ಮ ಅರಿವು
ನಾಡು ನುಡಿಗೆ ಜೀವನವಿಡೀ ದುಡಿದಿರಿ

ನಾಡನೊಂದಾಗಿಸಲು ಎಡೆಬಿಡದೆ ತೊಡಗಿದಿರಿ
ನಾರೊಂದು ತಾ ಸೇರಿ ಹೂವಿನಾ ಜೊತೆ
ನಾರಾಯಣನ ಶಿರವ ಸೇರುವಂತೆ
ನಾನೂ ನಿಮ್ಮ ಹೆಸರ ಬಾವುಟದಿ
ನಾಲ್ಕಡಿಯೇರಿದೆ ಪ್ರಗತಿ ಪಥದಿ
ನಾಟಕ ಬರೆದೆ ನಿಮಗೆ ಅರ್ಪಿಸಿದೆ
ನಾನೂ ಬರೆಯುತಿಹೆ ಕವಿತೆ
ನಾನಾ ನಿಮ್ಮಾಶೀರ್ವಾದವು ನನಗೆ
ನಾಲ್ಕೂ ಹೊತ್ತೂ ಇರಲಿ ಬೆನ್ನಿಗೆ
ನಾರಾಯಣನಿಗೆ ಬೇಡುವೆನು ಇಂದು
'ನಾನಾ' ನ ಒಂದಂಶವನಾದರೂ ನೀಡೆಂದು !

*- ರಾಧಾ ಕುಲಕರ್ಣಿ*

## ೫೨. ಮುಕುಂದ ಅರುಣಾ ದೇಶಪಾಂಡೆ

### ನಾ ಕಂಡ ನಮ್ಮ ನಾನಾ

(ನಾನಾನ ಬಗ್ಗೆ ಮೊಮ್ಮಗಳ ಅನಿಸಿಕೆಗಳು)

ನನ್ನ ನಾನಾನ ಜನ್ಮ ಶತಮಾನೋತ್ಸವವನ್ನು ಆಚರಿಸಿ, ಅವನ ಸ್ಮೃತಿಗಾಗಿ ಪ್ರಕಟಮಾಡಿರುವ ಮೂರು ಪುಸ್ತಕಗಳನ್ನೂ, ಎರಡು ಲೇಖನಗಳನ್ನೂ ಓದುವ ಅವಕಾಶ ನಮ್ಮ ತಾಯಿ ಅವುಗಳನ್ನು ಇಲ್ಲಿಗೆ ತಂದರೆಂದು ಸಿಕ್ಕಿತು. ಅವುಗಳನ್ನು ಓದಿದ ನನಗೆ ನಮ್ಮೊಂದಿಗೆ ಸಣ್ಣವರಾಗಿ ನಮ್ಮಲ್ಲಿ ಸಮರಸವಾಗಿ ಬೆರೆತಿದ್ದ ನಾನಾನ ಬಗ್ಗೆ ಬರೆಯಬೇಕೆನಿಸಿತು.

ಗದುಗಿನಲ್ಲಿ ಅವನ ನೆರಳಿನಲ್ಲಿಯೇ ಹುಟ್ಟಿ ಅಳು, ನಗು, ಮಾತುಗಳನ್ನು ಕಲಿತ ಆರು ಜನ ಮೊಮ್ಮಕ್ಕಳಲ್ಲಿ ನಾನೂ ಒಬ್ಬಳು. ನಾವು ಸಿಟಗೊಂಡು ಕುಳಿತದ್ದೂ, ಹಟ ಮಾಡಿದ್ದೂ ನಮ್ಮ ತಾಯಿಯ ಮತ್ತು ನಾನಾನ ಮೇಲೆಯೇ. ನಮ್ಮ ಸಿಟ್ಟನ್ನು ಮರೆಯಿಸಿ, ರಮಿಸಿ ನಗಿಸಿದ ನಾನಾ ಈಗ ಇಲ್ಲದಿದ್ದರೂ ನನಗಂತೂ ಇನ್ನೂ ಇದ್ದಾನೆ. ಹಟ

ಮಾಡಿದಾಗ ಹಟಮಾರಿ ಮುದ್ದಿನ ಕಥೆ, ಮೊಂಡುತನ ಮಾಡಿದಾಗ ಚಂಡಿ ಕಥೆ, ಸ್ನಾನ ಮಾಡುವುದಕ್ಕೆ ಹಟ ಮಾಡಿದಾಗ ಹೇಸಿಗೆ ಹನುಮನ ಕಥೆ, ಬಹಳಷ್ಟು ತಿಂದಾಗ ಬಕಾಸುರನ ಕಥೆ, ತಾಟಿನಲ್ಲಿ ಅನ್ನ ಚೆಲ್ಲಿ ಎದ್ದಾಗ ಲಕ್ಷ್ಮಿ ಸಿಟ್ಟು ಮಾಡಿಕೊಂಡು ಹೋದ ಕಥೆ, ಪೂರ್ತಿ ಕೇಳದೆ ಗಡಿಬಿಡಿ ಮಾಡಿ ಹೊರಟಾಗ ಕವಲೂರಿಗೆ ಹೋದ ಸಿದ್ದನ ಕಥೆ, ಕಥೆಗಳಿಗಾಗಿ ಕಾಡಿದಾಗ ಕಾರಕೂನನ ಕಥೆ ಹೀಗೆ ಒಂದಲ್ಲ ನೂರಾರು ಕಥೆಗಳನ್ನು ಹೇಳಿ ನಮ್ಮನ್ನು ತಿದ್ದಿದ ನಾನಾ ಹೋಗಿ ಇದೇ ಆಶಾಢ ಏಕಾದಶಿಗೆ ೩೫ ವರ್ಷಗಳಾದವು.

ನಾನಾನಿಗೆ ಸನ್ಮಾನ ಮಾಡಿದಾಗ ಬರುತ್ತಿದ್ದ ಹೂವಿನ ಹಾರಕ್ಕಾಗಿ ನಿದ್ದೆಯನ್ನೂ ಬಿಟ್ಟು ಹಾದಿಕಾಯುತ್ತಿದ್ದೆ. ಹೆರಳಿಗೆ ತಡೆಯಲಾರದಷ್ಟು ಹೂ ಮುಡಿದುಕೊಂಡಾಗ "ಜ್ಯಾಕ್ಯವಾ, ಸಾಲಿಗೆ ಹೋಗೊ ಮುಂದ ಆಡು ಬೆನ್ನ ಹತ್ತ್ಯಾವು" ಎಂದು ಚೇಷ್ಟೆ ಮಾಡುತ್ತಿದ್ದ. ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರ ಕೈಯಿಂದ ನಡೆದ ಸತ್ಕಾರಕ್ಕಾಗಿ ನಾನಾ ಬೆಂಗಳೂರಿಗೆ ಹೋಗಿದ್ದ, ಅವನು ಬರುವ ದಿನ ಹಾದಿ ಕಾಯುತ್ತಿದ್ದೆ. ಬಂದಾಗ ಕೇಳಿದ್ದು : "ನಾನಾ, ನಿನಗೆ ಎಷ್ಟು ಹಾರ ಬಂದಾವ?" "ಒಳಗರ ಬಿಡತಿಯೋ ಇಲ್ಲೋ ಬಹಳಷ್ಟು ಬಂದಿದ್ದವು." "ಮತ್ತ ಅವು ಎಲ್ಲವ?" "ಎಲ್ಲಾ ಕೊಟ್ಟು ಬಂದಾನ" ಅಂತ ನಾನು ಸೆಟಗೊಂಡಿದ್ದೆ. ಮರುದಿನ ವರ್ತಮಾನ ಪತ್ರಿಕೆಯಲ್ಲಿಯ ಫೋಟೋವನ್ನು ತೋರಿಸಿದ್ದ "ವರಕವಿ ಶ್ರೀ ಹುಯಿಲಗೋಳ ನಾರಾಯಣರಾಯರು"ಎಂಬ ತಲೆ ಬರಹವನ್ನು ಓದಿದಾಗ ಕೇಳಿದ್ದೆ :"ವರಕವಿ ಅಂತ ಯಾಕ ಬರದಾರ?ಅದು ಏನು ನಿನ್ನ ಹೆಸರಲ್ಲಾ?" ನಾನಾ ಹೇಳಿದ್ದ. "ಎಲ್ಲಾ ಮಂದಿ ಕೂಡಿ ಕೊಟ್ಟಾರವಾss ಆ ಹೆಸರನss". "ನಾನಾ ನಿನ್ನss ಹಗಲೆಲ್ಲ ಯಾಕ ಕರೀತಾರ?" ಅಂದಾಗ "ನೀನ ಅವರನ್ನು ಕೇಳು. ಯಾಕ ಕರಿತೀರಿ? ಅಂತ" ಅಂತಿದ್ದ. ನಾನಾ ಎಷ್ಟೊಂದು ದೊಡ್ಡ ವ್ಯಕ್ತಿ.

ಬೇಸಿಗೆ ದಿನಗಳಲ್ಲಿ ಸಂಧ್ಯಾವಂದನೆಯಾದ ಮೇಲೆ ಗಾಳಿಗಾಗಿ ಅಂಗಳದಲ್ಲಿ ಕುಳಿತುಕೊಳ್ಳುತ್ತಿದ್ದ, ನಮಗೆ ಹಾಡುಗಳನ್ನು ಕಲಿಸುತ್ತಿದ್ದ. ಅವನ ಹತ್ತಿರ ಕೂಡುವುದಕ್ಕೆ, ಮಲಗುವದಕ್ಕೆ ನಮ್ಮಲ್ಲಿ ಜಗಳಗಳಾಗುತ್ತಿದ್ದವು. ಆಗಲೂ ನಮ್ಮನ್ನು ರಾಜಿ ಮಾಡಿ ಒಬ್ಬೊಬ್ಬರನ್ನು ಒಂದೊಂದು ದಿನ ಕೂಡಿಸಿಕೊಳ್ಳುತ್ತಿದ್ದ. ಮೊದಲು ಕಲಿಸಿದ ಹಾಡು ಈಗಲೂ ನೆನಪಿದೆ. "ರಾಮನಾಮ ಪಾಯಸಕ್ಕೆ ಕೃಷ್ಣನಾಮ ಸಕ್ಕರೆ, ವಿಠ್ಠಲನಾಮ ತುಪ್ಪಾ ಬೆರಸಿ ಬಾಯಿ ಚಪ್ಪರಿಸೊ" ಚಪ್ಪಾಳೆ ತಟ್ಟಿ, ರಾಗದೊಂದಿಗೆ ಕಲಿಸುತ್ತಿದ್ದ. ನಂತರದ ಹಾಡು "ಗಣಪತಿ ನಿಮ್ಮ ಸ್ತುತಿ ಸಭೆಯೊಳಗ ಮಾಡತೀವಿ ಮತಿssಕೊಡೊ ಎಮಗ ದಯ ಪೂರ್ಣ". ಆಮೇಲೆ "ಕಮಲ ಭವನ ಪ್ರಿಯ ರಾಣಿ". ನನಗೆ ಈಗಲೂ ಬರುವ ಹಾಡುಗಳೆಂದರೆ, ಅವನೇ ಕಲಿಸಿದ ವು. ಶಾಲೆಯಲ್ಲಿದಾಗ ಎಷ್ಟು ಕಡೆಗೂ ಬಹುಮಾನ

ಬಂದಿವೆ. ನನ್ನ ಹಾಡುಗಾರಿಕೆಯಲ್ಲಿ ತಾಳ, ರಾಗ ಮತ್ತು ಎಲ್ಲಿ ಗಂಟಲು ಹಿಡಿದು ಹಾಡುವೆನೋ ಎಂಬುದರ ಕಡೆಗೆ ಇರುತ್ತಿತ್ತು ಅವನ ಕಟಾಕ್ಷ "ನನ್ನ ಧ್ವನಿ ತುಂಬಾ ದೊಡ್ಡದು ಮೈಕ್‌ನಲ್ಲಿ ಚೆನ್ನಾಗಿ ಕೇಳುವದಿಲ್ಲ" ವೆಂದಾಗ ಮೈಕ್‌ನೆದರು ಹಾಡಲೇಬೇಡ ಎಂದಿದ್ದ. ಸ್ವತಂತ್ರ ವೃತ್ತಿಯ, ಸ್ವಾಭಿಮಾನದ ನಾನಾನಿಗೆ ಇದ್ದುದನ್ನು ಇದ್ದಂತೆಯೇ ಸ್ವೀಕರಿಸಬೇಕು ಎಂಬ ಮನೋಭೂಮಿಕೆ ಇತ್ತು.

ನೋಡಬಯಸುವ, ಓದಿ ತಿಳಿಯುವ, ಕೂಡಿಹಾಕುವ ಎಲ್ಲ ಆಸೆಗಳಿಗೂ ಪ್ರೋತ್ಸಾಹವನ್ನು ಕೊಡುತ್ತಿದ್ದ. ಶಾಂತಿಯಿಂದ ಹಂಪಿ ನೋಡುವದಕ್ಕೆ ಹೋಗಿದ್ದೆ. "ಅಲ್ಲಿಯ ವೈಶಿಷ್ಟ್ಯ ವಿಜಯ ವಿಠ್ಠಲ ದೇವರ ಗುಡಿ. ಅದರ ಕಂಬಗಳನ್ನು ಬಾರಿಸಿ ನೋಡು. ಸಾ. ರೆ. ಗ .... ಸ್ವರಗಳು ಕೇಳಿಸುತ್ತವೆ" ಎಂದು ಹೇಳಿದ್ದ. ವಿಜಾಪೂರಕ್ಕೆ ನಮ್ಮ ಅತ್ಯಾನ ಹತ್ತಿರ ಕರೆದುಕೊಂಡು ಹೋಗಿದ್ದ. ಗೋಳುಗುಮ್ಮಟದಲ್ಲಿ ಮೇಲೆ ಹತ್ತಿಹೋಗಿ ಒಂದು ಕಡೆಗೆ ನಾನು ಇನ್ನೊಂದು ಕಡೆಗೆ ತಾನು ನಿಂತುಕೊಂಡು "ಅರಣಮ್ಮಾ" ಎಂದು ಕರೆದಾಗ ನಾನೂ "ಓ "ಎಂದಿದ್ದೆ. ಆಗಿನ ನನ್ನ ಆನಂದ ಸಂಭ್ರಮಗಳಲ್ಲಿ ಅವನೂ ಪಾಲುಗೊಂಡಿದ್ದ. ಈಗಲೂ ನೆನಪಿದೆ: ನಾನು ಹಾಯಸ್ಕೂಲಿನಲ್ಲಿ ಓದುತ್ತಿದ್ದೆ, ಶ್ರೀಮತಿ (ದೊಡ್ಡ)ದೂದಿಹಳ್ಳಿ ಟೀಚರ ನನಗೆ ತುಂಬಾ ಸೇರುತ್ತಿದ್ದರು. ಅವರು ಕಲಿಸುತ್ತಿದ್ದ ವಿಷಯಗಳು ನನಗೆ ಚೆನ್ನಾಗಿ ತಿಳಿಯುತ್ತಿದ್ದವು. ಒಂದು ಸಲ 'ಶಿಲಾಲೇಖಗಳ' ಬಗ್ಗೆ ಹೇಳಿದ್ದರು. ಶಾಲೆಯಿಂದ ಬಂದ ನಾನು, ನಾನಾನಿಗೆ ವರದಿ ಒಪ್ಪಿಸಿದ್ದೆ. ನನ್ನ ಉತ್ಸಾಹ ಕಂಡ ನಾನಾ ಒಂದು ರವಿವಾರ ಬೆಳಗ್ಗೆ ನನ್ನನ್ನು ವೀರನಾರಾಯಣಪ್ಪನ ಗುಡಿಗೆ ತನ್ನ ಜೊತೆಗೆ ಕರೆದುಕೊಂಡು ಹೋದ. ಅಲ್ಲಿಯ ಆವರಣದಲ್ಲಿ ಬಿದ್ದ ಎರಡು ಶಿಲಾಲೇಖಗಳನ್ನು ಗರ್ಭಗುಡಿಯ ಹೊರ ಜಗುಲಿಯಲ್ಲಿ ಆಳು ಪುಂಡಲೀಕಪ್ಪ ಕುಳಿತಿರುತ್ತಿದ್ದ ಜಾಗದಲ್ಲಿ ನಿಂತು, ಜಂತಿಗೆ ಜೋಡಿಸಿದ ಶಿಲಾಲೇಖವನ್ನೂ ತೋರಿಸಿ ಮನೆಗೆ ಬಂದ ಮೇಲೆ ಕಾಗದದ ಮೇಲೆ ಅದರ ಪ್ರತಿಯನ್ನೂ ಮೂಡಿಸಿದ್ದ. ಅದೇ ಸಂಜೆ ತ್ರಿಕುಟೇಶ್ವರನ ಗುಡಿಗೆ ನನ್ನನ್ನು ಮತ್ತು ಷಣ್ಮುಖಪ್ಪನನ್ನು ಕರೆದುಕೊಂಡು ಹೋದ. ಷಣ್ಮುಖಪ್ಪನಿಗೆ ಚಿತ್ರಕಲೆಯಲ್ಲಿ ಆಸಕ್ತಿ. ಅದಕ್ಕಾಗಿ ಅವನಿಗೆ ಸರಸ್ವತಿ ಗುಡಿಯ ಚೌಕಟ್ಟು, ಅಲ್ಲಿಯ ಕಂಬಗಳ ಮೇಲಿರುವ ಕಲಾಕುಸುರುಗಳನ್ನೂ, ನನಗೆ ಅಂಗ್ಯೆಯಗಲದ ಗುಡಿಯ ಗೋಡೆಗೆ ಇರುವ ಶಿಲಾಲೇಖನವನ್ನೂ ತೋರಿಸಿದ್ದ. "ಇಷ್ಟೆಲ್ಲಾ ಆತು ಇನ್ನs ನಿನ್ನ ಅಕ್ಕಾ ಅವರನ್ನು (ಟೀಚರ್) ಭೆಟ್ಟಿ ಮಾಡಿಸು"ಎಂದಿದ್ದ. ಆದರೆ ನನಗೆ ಅವರ ಬಗೆಗೆ ಇದ್ದ ಆದರಯುಕ್ತ ಭಯದಿಂದಾಗಿ ಶಾಲೆ ಮುಗಿದರೂ ನಾನಾನ ಇಚ್ಛೆಯನ್ನು ತಿಳಿಸಲಿಲ್ಲ.

ಇನ್ನು ಗದುಗಿನ ನಮ್ಮ ಮನೆ. ಗೋಡೆಗೆ ಕೈ ಹಚ್ಚಿದರೆ ಸಾಕು ಉದುರುವ

ಮಣ್ಣು. ಏನಾದರೂ ಮನೆಯಲ್ಲಿ ಬದಲು ಮಾಡುವ ಎಂದರೆ ಸಾಲಾಗಿದ್ದ ಕಂಬಗಳು, ಗೋಡೆಯಲ್ಲಿಯ ಮಾಡಗಳು, ಸುಣ್ಣಹಚ್ಚಿ, ಮಣ್ಣುಮೆತ್ತಿ ಸ್ವಚ್ಛ ಮಾಡಿ ಬೇಸತ್ತ ನಾನು ನನ್ನ ತಂಗಿ ಜಗಳವಾಡುತ್ತಿದ್ದೆವು, "ಎಂಥಾಽ ಮನಿಯಪಾಽ ಎಂಥಾ ಛಂದ ಛಂದ ಮನಿ ಕಟ್ಟಸತಾರ. ಇದೆಂಥಾ ಜಾಗಾ ನೋಡಿಯೊ ಏನೊ" ಎಂದಾಗ "ನಿಮಗ ಏನ ಗೊತ್ತಾದ ಈ ಜಾಗದ ಮಹಿಮಾ. ಇದು ಜನಮೇಜಯರಾಜಾ ಯಜ್ಞ ಮಾಡಿದ ಪವಿತ್ರ ಜಾಗಾ. ಮ್ಯಾಲೆ ವೀರನಾರಾಣಪ್ಪ ಎಷ್ಟು ಹತ್ತಿರ ಇದ್ದಾನ. ಹುಡುಗರು ಬಾಗಲ ಹೊರಗ ಆಡಿದರೂ ಗಾಡಿಗಳ ಓಡಾಟದ ಹೆದರಿಕೆ ಇಲ್ಲಾ"ಎನ್ನುತ್ತಿದ್ದ. ನಾವು ಇನ್ನೂ ಕಿರಿಕಿರಿ ಮಾಡಿದಾಗ,"ನಮಗ ಇದಽಮನಿ ಛಲೊ ಅದನ. ನಾಳೆ ನಿಮ್ಮ ಕೊಟ್ಟ ಮನಿನ ಹೆಂಗಾರ ಸ್ವಚ್ಛ ಮಾಡಿಕೊಳ್ರಿ"ಎಂದುಬಿಡುತ್ತಿದ್ದ. ಒಮ್ಮೆ ಬಿ. ಎಮ್. ಶ್ರೀಯವರು ನಾನಾನ ಮನೆಗೆ ಬರುತ್ತಾರೆ ಎಂದು ತಿಳಿದ ಅವರ ಗೆಳೆಯ (ಮುನಸಿಪಾಲ್ಟಿಯಲ್ಲಿ ಮೆಂಬರ್ ಆಗಿದ್ದ)ಶ್ರೀ ಕೋಟಿ ಮನೆಗೆ ಬಂದರಂತೆ. ಆಗ ಅಲ್ಲಿಯ ಹಾಳು ಮಣ್ಣು, ಮನೆಯ ಸುತ್ತಲಿರುವ ಚುಟ್ಟಾ ಕಟ್ಟುವವರ ಮನೆ, ಅಲ್ಲಿಯ ವಾಸನೆ, ನೂಲು ತೆಗೆಯುವ ಮಗ್ಗದ ಮನೆಯಲ್ಲಿ ಗುಂಜು ಎಲ್ಲವನ್ನೂ ನೋಡಿ, "ನಾರಾಯಣರಾಯರ, ಇಲ್ಲೆ ಹೇಂಽಗ ಇರತೀರ್‍ರಿಪಾ? ಇಂಥಾ ಹೊಲಸನ್ಯಾಗ"? ಎಂದು ಕೇಳಿದರು. ನಾನಾ ಹೇಳಿದನಂತ :"ನಾಽವಽಽ ನಾವು ಕುಂಬಾರ ಹುಳಾನ್ಯಾಪಾ. ಶೆಗಣಿಯೊಳಗ ಇದ್ದರೂ ಶೆಗಣಿ ಮೈಗೆ ಹತ್ತುದಿಲ್ಲಾ." ಅದಾದ ಮೇಲೆ ದೊಡ್ಡ ದೊಡ್ಡ ಮಂದಿ ಬರತಾರ ಅಂತ ಸಂದಿಯೊಳಗೆ ಕಲ್ಲುಗಳನ್ನು ಜೋಡಿಸಿಕೊಟ್ಟರಂತೆ.

ನಾನಾನದು ಹಾಸ್ಯ ಸ್ವಭಾವ. ಗದುಗಿನಲ್ಲಿ ಹೊಸದಾಗಿ ಜೈನರ ಬಸ್ತಿಯನ್ನು ಕಟ್ಟಿಸಿದ್ದರು. ಅಲ್ಲಿ ದೇವರ ಸ್ಥಾಪನೆಯಾದ ದಿನ ಹೆಲಿಕಾಪ್ಟರನಿಂದ ಗುಡಿಯ ಮೇಲೆ ಹೂಗಳನ್ನು ಹಾಕಿಸುವವರಿದ್ದರು. ಆ ದಿನ ನಮ್ಮ ತಾಯಿ. ನಮ್ಮ ಬಲಮನೆಯಲ್ಲಿರುವ ಕಾಕು. ಸ್ಟೂಲುಗಳನ್ನು ಇಟ್ಟುಕೊಂಡು ಮಾಳಿಗೆಯ ಮೇಲೆ ಹತ್ತಿದ್ದರು. ಹೂವು ಬೀಳುವದಂತೂ ಕಾಣಲಿಲ್ಲ. ಆದರೆ ಹೆಲಿಕಾಪ್ಟರ ಕಾಣಿಸಿತು. ಇಬ್ಬರೂ ಇಳಿದು ಬಂದ ಮೇಲೆ ನಾನಾ, ಹಾಸ್ಯ ಮಾಡಿದ್ದ:"ನಾಳೆ 'ನಾಗರಿಕ'ನಲ್ಲಿ ಸುದ್ದಿ ಕೊಡಬೇಕು. ನನ್ನ ಇಬ್ಬರೂ ಸೊಸೆಯಂದಿರು ಮಾಳಿಗಿ ಹತ್ತಿದ್ದರು ಎಂದು" (ಇಬ್ಬರೂ ಸ್ಥೂಲವಾಗಿದ್ದರು). ನಮ್ಮ ಗೋವಿ ಕಾಕಾ ಅಗಲೆಲ್ಲಾ ನಾನಾನಿಗೆ ಅರಿವೆ ಹೊಲಿಸುತ್ತಿದ್ದ. "ನಮ್ಮ ಗೋವಣ್ಣನಿಗೆ ಹುಚ್ಚ ಹಿಡದದ. ಎಷ್ಟು ಕೋಟು, ಎಷ್ಟು ಜಾಕೀಟು, ನಾ ಏನು ಈಗ ಮದುವೆಯಾದ ಮದುವಣಗನ?" ನಮ್ಮ ಶ್ಯಾಮು ಕಾಕಾ ಯಾವ ಊರಿಗೆ ವರ್ಗವಾದರೂ ಮೇಲಿಂದ ಮೇಲೆ ಪತ್ರ ಬರೆಯುತ್ತಿರಲಿಲ್ಲ, ಶ್ಯಾಮಣ್ಣ ಯಾವ ಊರಿಗೆ ಹೋದರೂ ಅಲ್ಲಿಽಽಪೋಸ್ಟು ಆಫೀಸಿನವರು ಅವನಿಗೆ ಕಾರ್ಡು ಪಾಕೀಟು ಕೊಡೂದಿಲ್ಲಾ." ಮಾಧು ಕಾಕಾ ಪೋಲಿಸ

ಖಾತೆಯಲ್ಲಿದ್ದ. ನಾನಾ ಅಡ್ಡಾಡುವಕ್ಕೆ ಹೋದಾಗ ಒಮ್ಮೆ ಎಡವಿ ಬಿದ್ದಿದ್ದ. ಕಾಳಜಿಗೊಂಡ ಮಾಧುಕಾಕಾ, ಜೊತೆಯನ್ನು ಬಯಸದ ನಾನಾನಿಗೆ ಅವನಿಗೆ ತಿಳಿಯದಂತೆ ಹಿಂದೆ ಒಬ್ಬ ಮನುಷ್ಯನನ್ನು ಕಳುಹಿಸುತ್ತಿದ್ದನಂತೆ. ಅದು ನಾನಾನಿಗೆ ತಿಳಿದಿತ್ತು. "ಮಾಧಣ್ಣ ನನ್ನನ್ನs ನಜರ ಕೈದಿಯೊಳಗ ಇಟ್ಟಾನ".ನನ್ನ ಸಣ್ಣ ತಂಗಿ ಮನೆಯಲ್ಲಿ ಒಂದು ಘಳಿಗೆ ಕೂಡದೆ ಹತ್ತಾರು ಮನೆಗಳನ್ನು ಸುತ್ತುತ್ತಿದ್ದಳು. ಅವಳು "ತಿರುಗುವ ತಿಪ್ಪವ್ವಾ."

ಕಾಲೇಜಿನಲ್ಲಿರುವಾಗ ನಾನು ಮನೆಮಂದಿಯ ಫೋಟೋಗಳನ್ನು ಸಂಗ್ರಹಿಸುತ್ತಿದ್ದೆ. ಆಗಲೂ ನನಗಾಗಿ ಫೋಟೋಗಳನ್ನು ತಂದು ಕೊಟ್ಟಿದ್ದ, ನಾನು ಅಂಟಿಸಿದ್ದ ಫೋಟೋಗಳನ್ನು ಹುಬ್ಬಳ್ಳಿಯಿಂದ ಬಂದಾಗಲೊಮ್ಮೆ ನೋಡುತ್ತಿದ್ದ. "ಕರ್ಮವೀರ" ಕ್ಕಾಗಿ ತೆಗೆದ ಫೋಟೋಗಳಲ್ಲಿಯ ಒಂದು ಫೋಟೋ ತಂದುಕೊಟ್ಟಿದ್ದ.ನಾನು ಅದರ ಮೇಲೆ ಹಸ್ತಾಕ್ಷರವನ್ನು ಮಾಡುವದಕ್ಕಾಗಿ ಕೇಳಿದ್ದೆ. "ಇದೆಂಥಾದವಾ ಹೊಸಾ ಹುಚ್ಚು" ಎಂದು ಸಹಿಮಾಡಿ ಕೊಟ್ಟಿದ್ದ. ಅದು ಈಗಲೂ ನನ್ನ ಹತ್ತಿರ ಇದೆ.

ಒಮ್ಮೆ ಕುಮಾರವ್ಯಾಸ ಜಯಂತಿಯ ಸಮಾರಂಭಕ್ಕೆ ಶ್ರೀ ಬೆಟಗೇರಿ ಕೃಷ್ಣಶರ್ಮರವರನ್ನೂ ಮತ್ತು ನಾನಾನನ್ನೂ ಅತಿಥಿಗಳನ್ನಾಗಿ ಕರೆದಿದ್ದರು. ಕಾರ್ಯಕ್ರಮ ಮುಗಿದಾಗ 10 ಗಂಟೆಯಾಗಿತ್ತು. ತಿರುಗಿ ಹೋಗುವಾಗ ಕಾರಿನಲ್ಲಿದ್ದ ಶ್ರೀ ಬೇಟಗೇರಿ ಕೃಷ್ಣಶರ್ಮ ಅವರಿಂದ ನನಗೆ ಸಹಿ ಮಾಡಿಸಿಕೊಟ್ಟರು. ಆಗ ಅವರಿಗೆ ಹೇಳಿದ್ದೂ ನೆನಪಿದೆ. "ನಮ್ಮ ಅರುಣಮ್ಮ ಹಿಂಗs ಏನೆನರ ಹೊಸಾ ಹೊಸಾದು ಸುರುಮಾಡಿ ನನಗ ಹಚ್ಚಿಬಿಡತಾಳ".

ನನ್ನ ವಹಿಯಲ್ಲಿ ೮-೧೦ ಸಹಿಗಳಿರಬಹುದು. ಮೊದಲನೆಯದು ನಮ್ಮ ನಾನಾನದು. ಅವನು ಬರೆದ, ನನ್ನಿಂದ ಅಪೇಕ್ಷಿಸಿದ ವಾಕ್ಯಗಳ ಅರ್ಥ ನನಗಾದರೂ, ಅವನೇ ಹೇಳಿದಂತೆ, ನಾನು ಗಡಿಪಾರಾದವಳು, ಹೊತ್ತಿಗೆ ಆಗದವಳು, ಬಹಳ ದೂರ ದೇಶಕ್ಕೆ ಕೊಟ್ಟವಳು. ನನ್ನ ಮದುವೆ ಮಹಾರಾಷ್ಟ್ರದಲ್ಲಿಯ ವಿದರ್ಭದಲ್ಲಿಯ ಮರಾಠಿ ಭಾಷೆಯ ಕುಟುಂಬದಲ್ಲಿ ಗೊತ್ತಾಯಿತು. ಪುಣೆಯಲ್ಲಿ ನಡೆದ ಮದುವೆಗೆ ವಯಸ್ಸಾದ ಕಾರಣ ಅವನು ಬರಲಿಲ್ಲ. ಆಮೇಲೆ ನಾವಿಬ್ಬರೂ ಅವನ ಭೆಟ್ಟಿಗಾಗಿ ಹುಬ್ಬಳ್ಳಿಗೆ ಹೋಗಿದ್ದೆವು. ಆಗ ಬೆಳಗಾವಿಯ ಸಲುವಾಗಿ ದಂಗೆ, ಸತ್ಯಾಗ್ರಹಗಳು ನಡೆದಿದ್ದವು. ನನ್ನವರಿಗೆ ಕನ್ನಡದ ಗಂಧವಿಲ್ಲ. ನಾನಾ ಮಾತ್ರ ಇಂಗ್ಲೀಷ್‌ನಲ್ಲಿ ಮಾತನಾಡುವುದಕ್ಕೆ ಪ್ರಾರಂಭಿಸಿದ. ಇವರು ಹೇಳಿದರು. "ನಿಮ್ಮಷ್ಟು ಚೆನ್ನಾಗಿ ಇಂಗ್ಲೀಷನಲ್ಲಿ ನನಗೆ ಮಾತನಾಡುವುದಕ್ಕೆ ಬರುವುದಿಲ್ಲ. ನೀವು ಪುಣೆಯಲ್ಲಿ ಓದಿದ್ದೀರಿ. ನಿಮಗೆ ಮರಾಠಿ

ಬರುತ್ತದೆ" ಎಂದು. ಅವನು ಹೇಳಿದ : "ನಾನು ಕನ್ನಡ ಅಭಿಮಾನಿ. ಮರಾಠಿಯಲ್ಲಿ ಮಾತಾಡಲಾರೆ." ಇವರು ಮತ್ತೆ ಕೇಳಿಕೊಂಡಾಗ ನನ್ನ ಮೇಲಿನ ವ್ಯಾಮೋಹದಿಂದ "ಏನ ಮಾಡೋದು, ನೀವು ನಮ್ಮ ಅಳಿಯಂದಿರು" ಅಂತ ನಾಲ್ಕು ಮಾತಾಡಿದರು.

ಅವನು ಬರೆದ "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಎಂಬ ನಾಡಗೀತೆ ಬದಲು ಮಾಡಿದಾಗ ನಾನು ಕೇಳಿದ್ದೆ. "ನಾನಾ, ನಿನಗೆ ಏನ ಅನಸ್ತದ ? ನನಗಂತೂ ಭಾರಿ ಕೆಟ್ಟ ಅನಿಸ್ತು".

"ಹುಚ್ಚಮ್ಮಾ, ಆಗಿನ ಕಾಲದ ಮಂದಿಗೆ ಆ ಹಾಡು ಸೇರಿತು. ಅವರು ಹಾಡಿದರು. ಈಗಿನವರಿಗೆ ಸೇರಲಿಲ್ಲ ಅಂತ ಬಿಟ್ಟಾರೆ" ಅಂದ ನಾನಾ.

ನಮ್ಮನ್ನು ಭೆಟ್ಟಿಯಾಗಲು ೧೦-೧೫ದಿನಗಳಿಗೊಮ್ಮೆ ಬರುತ್ತಿದ್ದ. ನಾವು ಬಹಳಷ್ಟು ನೆನಸಿದಾಗ ಸಂಜೆಗೆ ಇಲ್ಲ, ಮರುದಿನ ಬೆಳಿಗ್ಗೆ ಬರುತ್ತಿದ್ದ ನಾನಾನನ್ನು ನಾವು ಆಶ್ಚರ್ಯದಿಂದ ಕೇಳುತ್ತಿದ್ದೆವು. "ನಾವು ನಿನ್ನs ಭಾಳ ನೆನಸೀವಿ ಅಂತ ನಿನಗೆ ಹೆಂಗ ಗೊತ್ತಾತು ?" "ಯಾಕೊ ಏನೋ ನಿನ್ನೆ ಮುಂಜಾನೆಯಿಂದ ಚಡಪಡಿಕೆ ಸುರು ಆತು. ನಿಮ್ಮನ್ನ ನೋಡದ ಸಮಾಧಾನ ಆಗೂದಿಲ್ಲ ಅಂತ ಬಂದೆ". ಎಷ್ಟು ಸಲ ನಮ್ಮನ್ನು ನೋಡಿದಾಗಲೂ "ಹುಡುಗರ‍್ನ ಎಷ್ಟು ಸೊರಗಿಸಿರವಾ" ಎನ್ನುವ ನಾನಾನಿಗೆ ನಮ್ಮ ಮೇಲೆ ನಮ್ಮ ತಂದೆ ತಾಯಿಗಿಂತ ಜಾಸ್ತಿ ಪ್ರೀತಿ ಇತ್ತು. "ಏಕಾದಶಿಗೆ ವೈಕುಂಠದ ಬಾಗಿಲನ್ನು ತಗೀತಾರ" ಅಂತ ಹೇಳತಿದ್ದ ನಾನಾ, ಆಷಾಢ ಏಕಾದಶಿಗೆ ನಮ್ಮನ್ನು ಬಿಟ್ಟು ಹೊರಟುಹೋಗಿದ್ದ. ಈಗಲೂ ನಾನಾ ಇಲ್ಲದ ಗದುಗಿಗೆ ಹೋಗುವ ಇಚ್ಛೆಯಾಗುವುದಿಲ್ಲ. ನಿಜ ಆದರೆ ಅವನಿಂದು ಇಲ್ಲದಿದ್ದರೂ ಸಾವಿರಾರು ನೆನಪುಗಳಿಂದ ನನ್ನ ಹತ್ತಿರವೇ ಇದ್ದಾನೆ ಎನಿಸುತ್ತದೆ.

ಅಂತೂ ಅವರ ಅಭಿಮಾನಿಗಳ ಅಂಕಿಸಂಖ್ಯೆ ಅನಂತ ... ಅಗಣಿತ ! ನಾರಾಯಣರಾಯರು ತಮ್ಮ ಅವಿರತ ಅಪ್ರತಿಮ ಸೇವೆಯಿಂದ ಅಸಂಖ್ಯರಿಗೆ ಅನುಕರಣೀಯರಾಗಿದ್ದಾರೆ.

ಅವರ ಅಪೂರ್ವ ಅಸ್ಖಲಿತ ಲೇಖನ, ಅಸೀಮ ನಾಡಭಕ್ತಿ, ಅಸಾಮಾನ್ಯ ರಾಷ್ಟ್ರಭಕ್ತಿ. ಅನನ್ಯ ದೇವಭಕ್ತಿ ಅವರನ್ನು ಅಸದೃಶರನ್ನಾಗಿಸಿದೆ ! ಅಜರಾಮರವಾಗಿಸಿದೆ!

ಅಂಥ ಅಜ್ಜನ ಅಕ್ಕರೆಯಲ್ಲಿ ಬೆಳೆದ ನಾವು ಅದೃಷ್ಟವಂತರು ! ಅಹೋಭಾಗ್ಯರು!

(ಸುಧಾ ಯುಗಾದಿ ವಿಶೇಷಾಂಕ, 1986)

- *ಅರುಣಾ ದೇಶಪಾಂಡೆ*

## ಅನುಬಂಧ ೧

### ಹುಯಿಲಗೋಳ ನಾರಾಯಣರಾಯರ ಜೀವನದ ವಿಶೇಷ ಘಟನೆಗಳು

೧೮೮೪ - ಗದಗಿನಲ್ಲಿ ಜನನ (ಅಕ್ಟೋಬರ ೪, ೧೮೮೪), ಜನ್ಮ ಕುಂಡಲಿ ಪ್ರಕಾರ (ಸೆಪ್ಟೆಂಬರ ೨೫ ೧೮೮೪)

೧೯೦೨ - ಮೆಟ್ರಿಕ್‌ನಲ್ಲಿ ತೇರ್ಗಡೆ (ಧಾರವಾಡ)

೧೯೦೨ - "ಯಂಗ್ ಮೆನ್ಸ ಕ್ಲಬ್ ಸ್ಥಾಪನೆ. (ಗದಗ)"

೧೯೦೭ - ಬಿ.ಎ. ಪದವಿ (ಪುಣೆ, ಫರ್ಗುಸನ್ ಕಾಲೇಜ)

೧೯೦೮ - ಶಿಕ್ಷಕರಾಗಿ ಸೇವೆ (ವ್ಹಿಕ್ಟೋರಿಯಾ ಹೈಸ್ಕೂಲ, ಧಾರವಾಡ) (ವರಕವಿ ದ.ರಾ. ಬೇಂದ್ರೆಯವರಿಗೆ ವರ್ಗ ಶಿಕ್ಷಕರು)

೧೯೦೯ - ಮದುವೆ, ಎಲ್.ಎಲ್.ಬಿ. ಪದವಿ (ಮುಂಬಯಿ)

೧೯೧೦ - "ವಜ್ರಮುಕುಟ" ಮೊದಲ ನಾಟಕ ರಚನೆ.

೧೯೧೧ - ಯಂಗ್ ಮೆನ್ಸ ಫುಟ್‌ಬಾಲ್ ಕ್ಲಬ್ಬಿನ ವಾರ್ಷಿಕೋತ್ಸವದಲ್ಲಿ "ವಜ್ರಮುಕುಟ" ಪ್ರದರ್ಶನ.

೧೯೧೫ - ಪ್ರಥಮ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಪಾಲ್ಗೊಂಡುದು. ಅದನ್ನು ಕುರಿತ ಮೊದಲ ಷಟ್ಪದಿ "ಕನ್ನಡಮ್ಮನ ಸ್ಥಿತಿ"ಯ ರಚನೆ, "ಕರ್ನಾಟಕ ವೃತ್ತ" ದಲ್ಲಿ ಪ್ರಕಟನೆ.

೧೯೨೧ - "ಸ್ತ್ರೀ ಧರ್ಮ ರಹಸ್ಯ" ನಾಟಕದ ರಚನೆ, ಪ್ರಯೋಗ, ಮುದ್ರಣ.

೧೯೨೪ - "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಗೀತೆಯ ರಚನೆ. ಬೆಳಗಾವಿಯ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಸ್ವಾಗತ ಗೀತೆಯಾಗಿ ಸ್ವೀಕೃತಿ, ಪ್ರಸ್ತುತಿ, ಗಾಂಧೀಜಿಯವರಿಂದ ಮೆಚ್ಚುಗೆ.

೧೯೨೫ - "ಶಿಕ್ಷಣ ಸಂಭ್ರಮ" ನಾಟಕದ ರಚನೆ, ಪ್ರಯೋಗ, ಮುದ್ರಣ.

೧೯೩೫ - "ಉತ್ತರ ಕರ್ನಾಟಕದ ರಂಗಭೂಮಿ ಇತಿಹಾಸ" ಲೇಖನದ ಪ್ರಕಟನೆ - "ರಂಗ ಭೂಮಿ" ಪತ್ರಿಕೆಯಲ್ಲಿ.

೧೯೫೨ - ಧಾರವಾಡದ ಕಲೋಪಾಸಕ ಮಂಡಳಿಯವರಿಂದ ಸತ್ಕಾರ (ವೀರನಾರಾಯಣನ ಬೆಳ್ಳಿ ವಿಗ್ರಹ ಪ್ರದಾನ)

೧೯೫೩ - ಗದಗ - ಬೆಟಗೇರಿ ನಾಗರಿಕರಿಂದ ಸನ್ಮಾನ.

೧೯೫೪ - "ಪತಿತೋದ್ಧಾರ" ನಾಟಕಕ್ಕೆ ಮುಂಬಯಿ ಸರಕಾರದಿಂದ ಮನ್ನಣೆ.

೧೯೫೫ - ಗದಗಿನ ವಕೀಲ ಸಂಘದವರಿಂದ ಸನ್ಮಾನ.

೧೯೫೬ - ಕರ್ನಾಟಕ ಸರಕಾರದಿಂದ ಸನ್ಮಾನ ಬೆಂಗಳೂರಿನಲ್ಲಿ. (ಡಾ. ರಾಜೇಂದ್ರ ಪ್ರಸಾದ ಅವರಿಂದ ಒಂದು ಸಾವಿರ ರೂಪಾಯಿ ನಗದು ಹಾಗೂ ಬಂಗಾರ ಪದಕ ಪ್ರದಾನ)

೧೯೬೧ - ಗದಗಿನಲ್ಲಿ ನಡೆದ ಸಾಹಿತ್ಯ ಸಮ್ಮೇಲನದಲ್ಲಿ ಶಾಲು ಹೊದಿಸಿ ಸನ್ಮಾನ.

೧೯೭೦ - "ಉದಯವಾಗಲಿ" ನಾಡಗೀತೆ ಅಧಿಕೃತ ನಾಡಗೀತೆ ಪಟ್ಟಿಯಿಂದ ಅಳಿದದ್ದು.

೧೯೭೧ - ಜುಲೈ ೪ (ವೈಕುಂಠ ಏಕಾದಶಿ)ಯ ದಿನ ಸ್ವರ್ಗಸ್ಥರಾದದ್ದು (ಹುಬ್ಬಳ್ಳಿಯಲ್ಲಿ).

೧೯೭೪ - ಗದಗಿನಲ್ಲಿ ಟಾಂಗಾ ಕೂಟಕ್ಕೆ "ಹುಯಿಲಗೋಳ ನಾರಾಯಣರಾಯರ ವೃತ್ತ" ಎಂದು ನಾಮಕರಣ.

೧೯೮೪ - ಜನ್ಮ ಶತಾಬ್ದಿ ಆಚರಣೆ ಗದಗಿನಲ್ಲಿ - ನವ್ಹೆಂಬರ ೧ ರಂದು (ಗದಗ - ಬೆಟಗೇರಿ ನಗರಪಾಲಿಕೆ ಹಾಗೂ ಕನ್ನಡ ಸಾಹಿತ್ಯ ಕುಟೀರ - ಬೆಂಗಳೂರ ಇವುಗಳ ಸಂಯುಕ್ತ ಆಶ್ರಯದಲ್ಲಿ).

೧೯೮೫ - ಜನ್ಮ ಶತಾಬ್ದಿ ಆಚರಣೆ ಬೆಂಗಳೂರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ.

# ಅನುಬಂಧ ೨

## ಹುಯಿಲಗೋಳ ನಾರಯಣರಾಯರ ಸಾಹಿತ್ಯಿಕ ರಚನೆಗಳ ವಿವರ

## I. ಕಾವ್ಯ ರಚನೆಗಳು

೧. ಭಾಮಿನಿ ಷಟ್ಪದಿಯಲ್ಲಿ ಬರೆದ ನೀಳ್ಗವಿತೆಗಳು - ೧೪

೨. ಭಕ್ತಿಗೀತೆಗಳು - ಸುಮಾರು ೧೦೦

೩. ಸ್ವಾಗತ ಗೀತೆಗಳು - ೮

೪. ಅನ್ಯ ಬಿಡಿ ಹಾಡುಗಳು. (ದುಂದುಮೆ, ಲಾವಣಿ ಇತ್ಯಾದಿ) - ಕೆಲವು ಮಾತ್ರ.

## ೧. ಭಾಮಿನಿ ಷಟ್ಪದಿಗಳು

### (i) ನಾಡಭಕ್ತಿ ಆಧಾರಿತ

೧. ಕನ್ನಡಮ್ಮನ ಸ್ಥಿತಿ (ಪ್ರಥಮ ಕನ್ನಡ ಸಮ್ಮೇಳನ) - (೧೯೦೮)

೨. ಕನಸು - (೧೯೦೮)

೩. ಕರ್ನಾಟಕದ ಮಿಡುಕು - (೧೯೧೬)

೪. ರಥೋತ್ಸವ - (೧೯೧೮)

೫. ಭಾರತ ಭೂವನ - (೧೯೨೧)

೬. ವಿಜಯನಗರದ ವೀರವಾಣಿ - (೧೯೩೬)

೭. ಒಂದಾದ ಕನ್ನಡ ನಾಡು - (೧೯೫೬)

### (ii) ಪೌರಾಣಿಕ ಪ್ರಸಂಗ ಆಧಾರಿತ

೮. ಜೋಕುಮಾರನ ಜನಸೇವೆ - (೧೯೨೩)

೯. ಗಜೇಂದ್ರ ಮೋಕ್ಷ - (೧೯೨೮)

೧೦. ಶ್ರೀಮದಾನಂದ ತೀರ್ಥರು - (೧೯೬೬)

**(iii) ಇತರ ಕಾಲ್ಪನಿಕ ಹಾಗೂ ವರ್ಣನಾತ್ಮಕ**

೧೧. ಚಂದ್ರಮ - ಜ್ಯೋತಿ ಸಂವಾದ - (೧೯೧೯)

೧೨. ಆಗುಂಬೆಯ ಸೂರ್ಯಾಸ್ತ - (೧೯೩೧)

೧೩. ಸ್ವದೇಶೀ ಚಳವಳಿ - (೧೯೩೨)

೧೪. ಶ್ರೀ ಮಧ್ವಮಹಾಮಂಡಲದ ಹುಂಡಿ ನಿಧಿ - (೧೯೬೯)

## II. ಗದ್ಯ ರಚನೆಗಳು

೧. "ಮೂಡಲು ಹರಿಯಿತು" - ಏಕೈಕ ಕಾದಂಬರಿ.

೨. "ನೆತ್ತರದ ಔತಣವು" - ಐತಿಹಾಸಿಕ ಕಥೆ.

**ಲೇಖನಗಳು**

೧. ವಿಜಯನಗರದ ಕಾಲದ ಕಲಾಕೌಶಲ್ಯ, ಕೈಗಾರಿಕೆಗಳು - (೧೯೩೫)

೨. ಕುಮಾರವ್ಯಾಸನು

೩. ಏಳು ಕೋಟಿಗ್ಯೊ - (೧೯೫೦)

೪. ಪುರಂದರ ದಾಸರ ೩೮೮ ನೆಯ ಪುಣ್ಯತಿಥಿ.

೫. ವ್ಯವಸಾಯಿ ರಂಗಭೂಮಿ ಸಮಸ್ಯೆ.

೬. ಲಕ್ಕುಂಡಿ. (೧೯೫೬)

೭. ಮಹಾಕವಿ ಕುಮಾರವ್ಯಾಸನ ಮತ.

೮. ಪ್ರಚಲಿತ ಸಂಗೀತ ನಾಟಕಗಳನ್ನು ಮೊದಲು ಹುಡಿಕಿದವರಾರು ? - (೧೯೬೨)

೯. ಉತ್ತರ ಕರ್ನಾಟಕದ ರಂಗಭೂಮಿಯ ಸಂಕ್ಷಿಪ್ತ ಇತಿಹಾಸ.

೧೦. ಶ್ರೀ ವೀರನಾರಾಯಣ ಪ್ರಾಸಾದಿಕ ಕೃತುಪುರ ನಾಟಕ ಮಂಡಳಿಯ ಸಂಕ್ಷಿಪ್ತ ಇತಿಹಾಸ.

೧೧. ರಂಗಭೂಮಿಯ ಹಿರಿಯರು - ಗರೂಡ ಸದಾಶಿವರಾಯರು.

## III. ನಾಟಕ ರಚನೆಗಳು

### ಚಿಕ್ಕ ನಾಟಕಗಳು

೧. ಇಂದ್ರಜಿತ ವಧೆ (ಪೌರಾಣಿಕ) - (೧೯೦೨)

೨. ಗರುಡ ಗರ್ವಭಂಗ (ಪೌರಾಣಿಕ) - (೧೯೦೭)

### ದೀರ್ಘನಾಟಕಗಳು

೧. ವಜ್ರಮುಕುಟ (ಕಾಲ್ಪನಿಕ) - (೧೯೧೦)

೨. ಪ್ರೇಮಾರ್ಜನ (ಕಾಲ್ಪನಿಕ) - (೧೯೧೨)

೩. ಕನಕ ವಿಲಾಸ (ಕಾಲ್ಪನಿಕ) - (೧೯೧೩)

೪. ಮೋಹಲಹರಿ (ಐತಿಹಾಸಿಕ) - (೧೯೧೪)

೫. ಅಜ್ಞಾತವಾಸ (ಐತಿಹಾಸಿಕ) - (೧೯೧೫)

೬. ಪ್ರೇಮವಿಜಯ (ಐತಿಹಾಸಿಕ) - (೧೯೧೬)

೭. ಕುಮಾರರಾಮ (ಐತಿಹಾಸಿಕ) - (೧೯೧೭)

೮. ಭಾರತ ಸಂಧಾನ (ಪೌರಾಣಿಕ) - (೧೯೧೮)

೯. ಸ್ತ್ರೀಧರ್ಮ ರಹಸ್ಯ (ಸಾಮಾಜಿಕ) - (೧೯೧೯)

೧೦. ಶಿಕ್ಷಣ ಸಂಭ್ರಮ (ಸಾಮಾಜಿಕ) - (೧೯೨೦)

೧೧. ವಿದ್ಯಾರಣ್ಯ (ಐತಿಹಾಸಿಕ) - (೧೯೨೧)

೧೨. ಉತ್ತರ ಗೋಗ್ರಹಣ (ಪೌರಾಣಿಕ) - (೧೯೨೨)

೧೩. ಪತಿತೋದ್ಧಾರ (ಸಾಮಾಜಿಕ) - (೧೯೨೩)

೧೪. ಪುನರಾಗಮನ (ಸಾಮಾಜಿಕ) - (೧೯೪೪)

## ಅನುಬಂಧ ೩

## ಉಲ್ಲೇಖಗಳು - ಕೃತಜ್ಞತೆಯೊಂದಿಗೆ

### ಗ್ರಂಥಗಳು - ಲೇಖನಗಳು


೧. "ನಾಡಗೀತೆ ನೀಡಿದ ಶ್ರೀ ಹುಯಿಲಗೋಳ ನಾರಾಯಣರಾಯರು" - ಶ್ರೀ. ಗು.ಹ.ಬಾಳೀಹಳ್ಳಿ.

೨. "ಹುಯಿಲಗೋಳ ನಾರಾಯಣರಾಯರು" - ಶ್ರೀಶಂಕರ ಪಾಟೀಲ.

೩. "ನಾಡಕವಿ ಹುಯಿಲಗೋಳ ನಾರಾಯಣರಾಯರು" - (ವಿದ್ಯಾದಾನ ಸಮಿತಿ ಪ್ರಕಟನೆ) - *ಎಸ್.ಎನ್. ಸಾವಕಾರ*

೪. "ಕರ್ನಾಟಕದ ಆದ್ಯ ಸಾಮಾಜಿಕ ನಾಟಕಕಾರರಾದ ಶ್ರೀ ಹುಯಿಲಗೋಳ ನಾರಾಯಣರಾಯರು - ಅವರ ಜೀವನ ಚರಿತ್ರೆ" - ಕಲೋಪಾಸಕ ಮಂಡಲ, ಧಾರವಾಡ ಪರವಾಗಿ ಆಯೋಜಿಸಿದ ಸನ್ಮಾನ ಸಮಾರಂಭದ ಸಮಯದಲ್ಲಿ ಪ್ರಕಟಿತ ಸ್ಮರಣಿಕೆ.

೫. "ಅರ್ಪಣ" - ಹುಯಿಲಗೋಳ ನಾರಾಯಣರಾಯರ ಜನ್ಮಶತಮಾನೋತ್ಸವ ಪ್ರಸಂಗದಲ್ಲಿ ಪ್ರಕಟಿತ ಸ್ಮರಣ ಸಂಚಿಕೆ. (ಕನ್ನಡ ಸಾಹಿತ್ಯ ಕುಟೀರ - ಬೆಂಗಳೂರ) - *ಎಂ.ವಿ. ಸುಬ್ಬರಾವ್*

೬. "ಹುಯಿಲಗೋಳ ನಾರಾಯಣರಾಯರು - ಜೀವನ ಹಾಗೂ ಸಾಹಿತ್ಯ " - ಡಾ.ಜಿ.ಡಿ. ಜೋಷಿ (ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ)ಯವರಿಂದ ಪಿಎಚ್.ಡಿ. ಪದವಿಗಾಗಿ ಬರೆದ ಸಂಪ್ರಬಂಧ.

೭. "ಬೆಳಗಾವಿ ಕಾಂಗ್ರೆಸ್ ಅಧಿವೇಶನ (೧೯೨೪) ದ ಸ್ಮರಣಿಕೆ." - *ಗೋವಿಂದಮೂರ್ತಿ ದೇಸಾಯಿಯವರ ಕೃಪೆಯಿಂದ.*


ಲೇಖನಗಳು


೧. "ನಾಡಗೀತೆಯ 'ನಾನಾ' - ಹುಯಿಲಗೋಳ ನಾರಾಯಣರಾಯರು" - ಡಾ. ವರದರಾಜ ಹುಯಿಲಗೋಳ (ಪ್ರಜಾವಾಣಿ - ೩೦.೯.೧೯೮೪)

೨. "ನಾಡಗೀತೆಯನಿತ್ತ ಹುಯಿಲಗೋಳ ನಾರಾಯಣರಾಯರು" - ಗೋವಿಂದ ಮೂರ್ತಿ ದೇಸಾಯಿ (ಸುಧಾ ೭.೧೦.೧೯೮೪)

೩. "ನನ್ನ ಅಜ್ಜ ನಾನಾ - ಹುಯಿಲಗೋಳ ನಾರಾಯಣರಾಯರು" - ಪರಿಮಳಾ ಎಸ್.ಕುರ್ತಕೋಟಿ (ತರಂಗ - ೧೮.೧೧.೧೯೮೪)

೪. "ಹುಯಿಲಗೋಳ ನಾರಾಯಣರಾಯರು - 'ಉದಯವಾಗಲಿ' ಎಂದು ದನಿ ಎತ್ತಿದವರು" - ಎಲ್.ಎಸ್.ಶೇಷಗಿರಿ ರಾವ್ (ತರಂಗ - ೧೮.೧೧.೧೯೮೪)

೫. "ಮರೆತು ಹೋದ ಹುಯಿಲಗೋಳರು" - ಸಿ.ಜಿ.ಕೆ. ಹಿರೇಮಠ (ವಿಜಯ ಕರ್ನಾಟಕ ೧.೧೧.೨೦೦೪)

೬. "ಸನ್ಮಾನಕ್ಕೆ ಒಪ್ಪಿಸಿದ ಸಾಹಸ" - ಎಂ. ವಿ. ಸುಬ್ಬರಾವ್ (ಉಷಾಕಿರಣ ೧.೧೧.೨೦೦೫)

**ಸಂದರ್ಶನ, ಸಂಭಾಷಣೆಗಳು**

೧. ಡಾ.ಎನ್.ಕೆ. ಕುಲಕರ್ಣಿಯವರ ಜೊತೆಗೆ (೧೨.೧೦.೨೦೦೪ ; ೨, ಫೆಬ್ರವರಿ ೨೦೦೫ ಧಾರವಾಡದಲ್ಲಿ)

೨. ಗೋವಿಂದಮೂರ್ತಿ ದೇಸಾಯಿಯವರ ಜೊತೆಗೆ - ೮.೭.೨೦೦೪.

೩. ನಿಟ್ಟೂರ ಶ್ರೀನಿವಾಸರಾವ್ ಅವರೊಂದಿಗೆ - ೭.೧.೨೦೦೪

೪. ಶ್ರೀಪಾದರಾವ್ ಗರೂಡ ಅವರೊಂದಿಗೆ - ೧೫.೪.೨೦೦೪ (ಗದಗಿನಲ್ಲಿ).

೫. ಎಂ.ವಿ. ಸುಬ್ಬರಾವ್ (ಕನ್ನಡ ಸಾಹಿತ್ಯ ಕುಟೀರ, ಬೆಂಗಳೂರ) - ಅನೇಕ ಸಲ ವಿಚಾರ ವಿನಿಯೋಗ.

೬. ರಾಧಾಬಾಯಿ ಪಾಗೆ (ನನ್ನ ತಾಯಿಯವರು) ಹಾಗೂ ನನ್ನ ಅಣ್ಣಾ (ಮೋಹನ ಪಾಗೆ), ಅಕ್ಕಂದಿರಾದ (ಪ್ರಭಾ ಕೆರೂರ ಹಾಗೂ ಡಾ. ಕಮಲ ಪುರಂದರೆ), ತಂಗಿ (ಮಾಲಿನಿ ಪೂಜಾರ) ಹಾಗೂ ತಂಗಿಯ ಪತಿ (ಮೋಹನ ಪೂಜಾರ) ಇವರಿಂದ ವಿವರಗಳ ನೆನಪುಗಳ ಸಂಕಲನ.

೬. ಉಷಾಬಾಯಿ ಹುಯಿಲಗೋಳ ('ನಾನಾ' ಅವರ ಸೊಸೆ) ಹಾಗೂ ಅವರ ಮಕ್ಕಳಿಂದ ವಿವರಗಳ ಸಂಕಲನ.

**ಸಹಕಾರ ಹಾಗೂ ಪ್ರೇರಣೆ**

೧. ಕನ್ನಡ ಪುಸ್ತಕ ಪಾಧಿಕಾರ ಆಡಳಿತಗಾರ ಹಾಗೂ ಸಿಬ್ಬಂದಿಯವರಿಗೆ ಮನದಾಳದಿಂದ ಕೃತಜ್ಞತೆಗಳು.

೨. ಎಚ್.ಕೆ. ಪಾಟೀಲ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಾಜಿ ಸಚಿವರು)

೩. ಜಯಂತ ಕಾಯ್ಕಿಣಿ.

೪. ಡಾ. ಜಿ.ಎಸ್. ಆಮೂರ.

೫. ಎಮ್.ಜಿ.ಪಾಗೆ.

೬. ಎಚ್.ಎಸ್. ವೆಂಕಟೇಶ ಮೂರ್ತಿ.

೭. ಡಾ. ಕೆ.ಎಸ್. ಕುಲಕರ್ಣಿ (ನನ್ನ ಪತಿ).

೮. ಪ್ರೊ. ವಸಂತ ಸವದಿ.

೯. ವಾಮನ, ವಾಸುದೇವ ಹುಯಿಲಗೋಳ.

೧೦. ಅರುಣಾ, ಯಶೋದಾ ದೇಶಪಾಂಡೆ.

೧೧. ಪ್ರೊ. ಶ್ಯಾಮಸುಂದರ ಬಿದರಕುಂದಿ.

## ಭಾಗ - ೩

## ನಾರಾಯಣರಾಯರ ಆಯ್ದ ಗೀತೆಗಳು

*ನಾಟಿ ರಾಗ ಆದಿತಾಳ*

ಶ್ರೀ ಗಜವದನಾ ಬೇಗದಿ ಕರುಣಿಸವ ।
ಬಾಗುತ ಬೇಡುವೆ ನೀಗು ವಿಘ್ನಗಳ ॥ ಅ. ಪ. ॥

ಪದ್ಯವ ರಚಿಸಲು ಬುದ್ಧಿಯ ನೀವುದು
ಬಿದ್ದು ಬೇಡುವೆನು ಸಿದ್ಧಿ ವಿನಾಯಕ ॥ ೧ ॥

ತೋರು ದಯವನೋಂಕಾರ ರೂಪನೇ
ಶೌರಿಯ ತುತಿಸಲು ಬೀರು ಬಲವನು ॥ ೨ ॥

ಗದುಗಿನ ವೀರನಾರಾಯಣ ದೇವನ
ಪದವನು ರಚಿಸಲು ಭಜಿಸಲು ಪದಗಳ ರಚಿಸಲು ॥ ೩ ॥

**೨. ರಾಗ ಕಾಂಬೋದಿ ಝಂಪಾ ತಾಳ**

ಯಾವ ಹೆಸರಿಂದ ಕರೆದರೇನು ॥ ಪ ॥

ಪಾವನಾತ್ಮನೆ ಬರನೆ ಸ್ವಾಮಿ ಸರ್ವೋತ್ತಮನು
ಸಾವಿರದ ಹೆಸರುಳ್ಳ ಅವಗೆ ಹೆಸರಿಂದೇನು ।
ದೇವನೊಬ್ಬನೆ ಜಗಕೆ ಎಂಬ ನುಡಿ ಸುಳ್ಳೇನು ।
ಭಾವ ಭಕುತಿಗಳಿಂದ ಬಹಳೇನು ॥ ೧ ॥

ಅಲ್ಲಾ ಅಂದರೆ ಬರುವ ಶಿವನೆ ಎಂದರೆ ಬರುವ ।
ಗೊಲ್ಲ ಕೃಷ್ಣನೆ ಬಾರೊ ಎಂದರಾತನೆ ಬರುವ ।
ಅಲ್ಲಿ ಇವ ಇಲ್ಲಿ ಅವ ಎಂದು ಬಡಿದಾಡಿದರೆ ।
ಖುಲ್ಲರೆಂದೆನರೇನು ಬಲ್ಲವರು ಮರುಳಾ ॥ ೨ ॥

ವಿಧ ವಿಧ ನುಡಿಗಳಲಿ ಬೇರೆ ಶಬುದಗಳಿರಲು ।
ಅದು ಪದಾರ್ಥವೆ ಬೇರೆ ತಾನೇ ಆಗುವುದೇನು ।
ಹದಿನಾರು ಪದಗಳಿರೆ ಹಿಡಿದೊಂದು ಹೋದೊಡನೆ ।
ಅದರಿಂದಾವುದು ಸೇರಿಸುವದಿಲ್ಲೇನು ॥ ೩ ॥

ಹೃದಯದಲಿ ನಿಜವಾದ ಭಕುತಿಯನು ಬೇಡುವನು ।
ಇದನಂತು ಪ್ರತಿ ದಿನ ಭಜಿಪರು ಮುನಿಜನರು ।
ಗದುಗಿನಲಿ ವಾಸಿಸುವ ಶ್ರೀ ವೀರನಾರಾಯಣನು ।
ಮುದದಿಂದ ಸಲಹುವನು ಸಂದೇಹವೇನು ॥ ೪ ॥

**೩. ರಾಗ ಧನಾಶ್ರೀ ಅಥವಾ ಮುಲ್ತಾನಿ ಆದಿತಾಳ**

ಒಲಿಯುವೆ ನೀನೆಂತು ಹಲಧರನನುಜಾ ॥ ಪ ॥

ಹೊಗಳಲು ನೀ ಮರುಳಾಗುವನೆಲ್ಲ ।
ತೆಗಳಲು ನೀ ಮುನಿಯುವನಲ್ಲ ।
ಹೊಗಳಲ್ಕೊ ತೆಗಳಲ್ಕೊ ತಿಳಿಯುವದಿಲ್ಲ ।
ಬಗೆಯನು ತೋರಲು ಹೇಳ ಸೊಲ್ಲ ॥ ೧ ॥

ಪಂಚಪಕ್ವಾನ್ನವ ಹಂಚೇನೆಂದರೆ ।
ಲಂಚಗುಳಿಯು ನೀನಲ್ಲ ।
ಚಂಚಲ ಮನದವ ನನ್ನಾಗಿಸಿದನ್ನೆ ।
ಹಂಚಿಕೆಯ ಹೇಳು ನೀ ನಿತ್ಯ ತೃಪ್ತನೆ ॥ ೨ ॥

ಧನಲಕ್ಷ್ಮೀಪತಿ - ನೀನಹುದೋ ।
ಘನತರ ಗದುಗಿನ ವೀರ ನಾರಾಯಣ ।
ಮನಸಿನ ಇಂಗಿತವನು ಹೇಳೆಲೊ ನೀ ॥ ೩ ॥

**೪. ರಾಗ ರೇಗುಪ್ತಿ ಅಟತಾಳ**

ಶ್ರೀಪತಿಯೆ ನಿನ್ನ ಒಲುಮೆಯೊಂದಿರಲಿಕ್ಕೆ
ತಾಪಗಳಾವ ವೆನಗೆ ಮಾಡುವವೊ॥ ಪ ॥

ಪಾಪಿಯಂತೆಂದೆನ್ನ ಕೈಯನು ಬಿಡಬೇಡ ।
ಗೋಪನೆ ಎಲ್ಲಕ್ಕು ಕರ್ತೃ ನೀನಲ್ಲವೆ ॥ ಅ.ಪ ॥

ಸಂಸಾರ ತಾಪವನಳಿವ ಬಗೆ ಬಗೆಯನು ।
ಪುಂಸಕಾಲೋಚನೆ ಮಾಡುವೇನೋ ।
ಕಂಸಾರಿಯೇ ನೀನೆ ಭಾರಹೊತ್ತುವೆಯೆಂಬ
ಅಂಶವನರಿಯದೆ ವ್ಯರ್ಥ ಬಳಲಿದೆನೋ ॥ ೧ ॥

ಅಪಶಕುನಗಳಲ್ಲದೆ ವಿಘ್ನಂಗಳೆಲ್ಲವೂ ।
ವಿಪರೀತ ಕಾಲವೂ ಉಪದ್ರವಂಗಳೂ
ಕೃಪೆಯಿಂದ ಪರಿಣಾಮಗೊಳ್ಳವೆಂದೆಂದಿಗೂ ।
ಕೃಪೆಯ ನೀಡಯ್ಯಾ ನೀ ಭಕ್ತವತ್ಸಲನೇ ॥ ೨ ॥

ಯೋಚಿಸುವೆ ನಾನು ಯೋಜಿಸುವೆ ನೀನು ।
ತೋಚಿದ ಗತಿಯೆಂದು ಚಿಂತಿಸುತಲಿರಲು ।
ಸೂಚನೆ ಕೊಡದೆ ಪರಿಹರಿಸಿ ಪೊರೆಯುವಿ ನಿಗಮ ।
ಗೋಚರ ನಿನ್ನ ಕಾರುಣ್ಯವನರಿಯೆನೋ ॥ ೩ ॥

ಅಂಬುಜಾಕ್ಷನೆ ನಿನ್ನ ನಂಬಿದ ಜನರ ।
ಬೆಂಬಿಡದೆ ಕಾಯುವ ನೀ ಕೃಪಾಳೋ ।
ತುಂಬ ಒಲುಮೆಯನೀಯೊ ನಿತ್ಯದಿ ।
ಭಕ್ತ ಕುಟುಂಬಿಯೆ ಗದುಗಿನ ವೀರನಾರಾಯಣ ॥ ೪ ॥

**೫. ರಾಗ ಮೋಹನ ಆದಿತಾಳ**

ಪರಮ ಮಂಗಲಧಾಮಾ ಶ್ರೀ ರಾಮಾ ॥ ಪ ॥

ಕರುಣಾಮೃತ ಸಾಗರ ನಿಸ್ಸೀಮಾ
ಚರಣಕ್ಕೆರಗುವೆ ಸಾಸಿರ ನಾಮಾ ॥ ೧ ॥

ಶರಣಾಗತರನು ಕರವಿಡಿವುದು ನೇಮಾ ।
ಶರಣುಬಂದೆನಯ್ಯ ರಘುಕುಲಸ್ತೋಮ ॥ ೨ ॥

ವಚನವ ಪಾಲಿಪ ಸುಚರಿತವ್ಕೆ ನಿಮ್ಮ ।
ಅಚಲ ಭಕ್ತಿ ಕೊಡೋ ಮೇಘಶ್ಯಾಮಾ ॥ ೩ ॥

ಗದುಗಿನ ವೀರನಾರಾಯಣ ಪ್ರೇಮ ।
ಪೊದಗಿಸಿ ಕಾಯೋ ವೀರ ಲಲಾಮ ॥ ೪ ॥

**೬. ರಾಗ ಪೀಲು ರೂಪಕ ತಾಳ**

ಇದು ಕಾಣೊ ನಿನ್ನ ದಯಾ ರಾಮರಾಯಾ ॥ ಪ ॥

ಮೃದುಬಾಲನಿಗಳಿದುದು ಮೃತ್ಯುಭಯಾ ॥ ಅ.ಪ ॥

ನರಳುವ ಕೂಸನು ಚರಣಕೆ ಹಾಕಲು ।
ಮೊರೆಯಿಡೆ - ಕರುಣದಿ ಕರಗಿತು ಹೃದಯಾ ॥ ೧ ।

ಭಕುತರ ಬಯಕೆಯ ನೀವುದು ನಿನ್ನಯಾ ।
ಸುಕರ ಕೆಲಸವೆಂದರಿದೆನು ಚಿನ್ಮಯ ॥ ೨ ॥

ಗದುಗಿನ ವೀರನಾರಾಯಣನೆ ಜಯಾ ।
ಒದಗಿಸಿ ನಿರುತದಿ ಸಲಹುವೆ ನಿಶ್ಚಯಾ ॥ ೩ ॥

**೭. ಉದಯ ರಾಗ ಝಂಪೆ ತಾಳ**

ರಘುಪತಿಯೆ ನಿನ್ನನೆ ಪೊಗಳುವಾ ಪದಗಳನು।
ಸೊಗಸಾಗಿ ರಚಿಪಂತೆ ಬಗೆಯನ್ನು ನೀಡೋ॥ ಪ ॥

ಪರರ ಹೋಗಳಿಕೆ ಬೇಡ ಪರರ ತೆಗಳಿಕೆ ಬೇಡ ।
ತರುಣಿಯರ ಸೌಂದರ್ಯ ಬಣ್ಣಿಪುದು ಬೇಡ ।
ಪರಮ ಪಾವನ ನಿನ್ನ ಮಹಿಮೆಯನು ಬಣ್ಣಿಸುವ ।
ಸರಳ ನುಡಿಗಳು ಬಾಯ್ಗೆ ಬರುವಂತೆ ಮಾಡೊ ॥ ೧

ಒಂದು ಲಕ್ಷದ ನಾದದೊಂದು ಮಣಿ ಮಾಡು ।
ಕುಂದದಿಹ ಭಕ್ತಿಗುಣದಿಂದ ಪೋಣಿಸಿ ಪದ್ಯ ।
ಒಂದು ಹಾರವ ಮಾಡಿ ನಿನ್ನಡಿಗೆ ಅರ್ಪಿಸಲು ।
ಮಂದ ಬುದ್ಧಿಯು ನನಗೆ ಬುದ್ಧಿ ಶಕ್ತಿಯ ನೀಡೊ ॥

ರಾಗ ನೀನರಿವೆ ತಾಳ ನಿನಗೆಯೆ ಗೊತ್ತು ।
ರಾಗ ತಾಳಗಳ ಮೇಳ ನನಗೇನು ಗೊತ್ತು ।
ರಾಗ ತಾಳಗಳಲ್ಲಿ ಹಗುರಾಗಿ ಹಾಡಲಿಕೆ ।
ತೂಗಿ ಶಬ್ದಗಳಿಡಲು ಸನ್ಮತಿಯ ನೀಡೊ ॥ ೩ ॥

ಸುರವರನೆ ಬೇಕಯ್ಯ ನಿನ್ನ ಪ್ರೇರಣೆ ಇದಕೆ ।
ವರಕವಿಯ ಸುಕುಮಾರ ವ್ಯಾಸನಿಗೆ ವರವಿತ್ತು ।
ಉರುತರದಿ ಕನ್ನಡದಿ ಭಾರತವ ಬರೆಯಿಸಿದ ।
ತೆರದಿ ಗದುಗಿನ ವೀರ ನಾರಾಯಣನೆ ಸಲಹೋ ॥ ೪ ॥

**೮. ರಾಗ ಶಂಕರಾಭರಣ ಆದಿತಾಳ**

ಬಂದೆಯಾ ಕೃಷ್ಣಯ್ಯಾ ಬಂದೆಯಾ ॥ ಪ ॥
ಸುಂದರ ನರರೂಪದಿಂದಲಿ ಧರೆಯೊಳಗೆ ॥ ಅ.ಪ ॥

ಲೋಕೈಕ ದೇವನೆಂದು ।
ಜ್ಞಾನಿಗಳೇಕಾಗಿ ಸಾರ್ವರಿಂದು ।
ಆಕಾರ ರಹಿತನ ಲೋಕ ಸಾಮಾನ್ಯರು
ಸ್ವೀಕರಿಸರು ಎಂದು ಸಾಕಾರನಾಗಿ ॥ ೧ ॥

ಪೂರಾ ವಿಶ್ವದಲೆಲ್ಲಾ ತುಂಬಾ ।
ಇರುತಿಹ ನಿನ್ನನ್ನಾರು ನಂಬರು ಎಂತೆಂಬ ।
ಕಾರಣ ಜಗಕೆ ನೀ ತೋರಲೆಲ್ಲಾ ಗುಣ ।
ಸಾರ ಸಂಗ್ರಹಿಸಿ ನೀ ಧೀರ ಮಾನವನಾಗಿ ॥ ೨ ॥

ಜಗದೊಳೊಂದದ್ಭುತ ಶಕ್ತಿ ।
ಇರುವದೆಂದುಗಮಿಸೆ ಜನರೊಳಾಸಕ್ತಿ ।
ಜಗದೊಳು ತೋರ್ಪ ವೀರನಾರಾಯಣ ।
ಬಗೆ ಬಗೆ ಮಹಿಮೆಯ ಸಗುಣ ಮಾನವನಾಗಿ ॥ ೩ ॥

**೯. ರಾಗ ಬಿಹಾರ ರೂಪಕ ತಾಳ**

ಎಂಥ ಧನ್ಯಳೆ ಯಶೋದೆ
ಎಂಥ ಧನ್ಯಳೆ ॥ ಪ ॥

ಎಂಥ ಧನ್ಯಳಮ್ಮ ನೀನು ।
ಎಂಥ ಪುಣ್ಯವಮ್ಮ ನಿನ್ನದು ।
ಕಂತು ಪಿತನು ಕುವರನಾಗಿ ಸಂತೋಷ ಪಡಿಸಿದನು ॥ ಅ.ಪ ॥

ಕಷ್ಟಪಟ್ಟು ಮುನಿಗಳೆಲ್ಲ ಎಷ್ಟು ತಪವ ಮಾಡಿದರು ।
ಇಷ್ಟು ಪುಣ್ಯ ಪಡಿಯಲಿಲ್ಲ ಸೃಷ್ಟಿಯೊಳಗೆ ಸ್ಪಷ್ಟವಿಹುದು ॥ ೧ ॥

ಒಡಲೊಳಗೆ ಹೆರೆಯಲಿಲ್ಲ ಪಡೆಯಲಿಲ್ಲ ಅವನ ಪರರ ।
ಒಡಲೊಳ್ಪುಟ್ಟಿ ಬಂದು ನಿನ್ನ ಹುಡಿಗನಾಗಿ ಮೆರೆದನಮ್ಮ ॥ ೨ ॥

ಇಡಿಯ ಜಗವನುದರದಲಿ ಹಿಡಿದು ಬಾಲನಾಗಿ ಗದುಗಿನ ।
ವೀರನಾರಾಯಣ ತೊಡೆಯ ಮೇಲೆ ಆಡಿದನು ॥ ೩ ॥

**೧೦. ರಾಗ ದೇಶಿಕಾರ ಆದಿತಾಳ**

ಮದಾಂಧನೊ ನಾನು ಮಧುಸೂದನಾ ॥ ಪ ॥

ಒಗವನು ತುಂಬಿಹ ತ್ರಿಗುಣಾತ್ಮಕನೆ
ತೆರೆದು ಕಣ್ಗಳ ನೋಡದ ನಾನು ॥ ೧ ॥

ಪವನನೊಡೆಯ ನಿನ್ನ ಸವಿ ಸವಿಸ್ತವನಕೆ
ಕಿವಿಗೊಡದೆ ಬಹು ಕಿವುಡನಾದೆನು ॥ ೨ ॥

ಗದುಗಿನ ವೀರನಾರಾಯಣನೇ ಎನ್ನ
ಎದಿರೊಳು ನಿಂತಿರೆ ನೋಡದ ನಾನು ॥ ೩ ॥

**೧೧. ರಾಗ ಸಾರಂಗ ಝಂಪೆ ತಾಳ**

ನನ್ನದೇನಿದೆಯೊ ದೇವ ನಿನ್ನದೇ ಎಲ್ಲವೂ ॥ ಪ ॥
ಪನ್ನಗಾಸನ ದೊರೆಯ ಸನ್ನುತಾಂಘ್ರಿಯೆ ಹರಿಯೆ ॥ ಅ.ಪ ॥

ಅವನಿಯೊಳು ಪುಟ್ಟಿಸುವವ ಭವದೊಳಗೆ ನೂಕುವವ ।
ಕಿವಿ ಮೂಗು ಕಣ್ಣು ವದನ ತ್ವಚೇಂದ್ರಿಯದಿ
ಅವಿತೆಮ್ಮ ಪುತನಾಗಿ ವ್ಯವಹರಿಸುವವ ನೀನೆ
ಅವಸರದಿ ಕಾಯುವ ದೇವ ನೀನೆಯೊ ॥ ೧ ॥

ತಿಳಿಯುವವ ನೀನೆಯೊ ತಿಳಿಸುವವ ನೀನೆಯೊ
ಗಳಿಸುವವ ನೀನೆಯೊ ಬಳಸುವವ ನೀನೆಯೊ
ಬೆಳೆಸುವವ ನೀನೆಯೊ ಕಳೆಯುವವ ನೀನೆಯೊ
ಕೊಳುವವನು ನೀನೆಯೊ ಕಸಿಯುವವ ನೀನೆಯೊ ॥ ೨ ॥

ಅಂತರಂಗದಿ ಅಡಗಿ ನಿಂತು ಪ್ರೇರಿಸುವ
ಅನಂತ ದ್ವಂದ್ವವನಳಿಸಿ ಸ್ವಂತತನವೆನಗೆಲ್ಲಿ
ಸಂತಿಕನುದ್ಧರಿಸಲಿಂತು ಭೂಮಿಗೆ ಬಂದು
ನಿಂತ ಗದುಗಿನ ವೀರನಾರಾಯಣ ನೀನೆ ॥ ೩ ॥

**೧೨. ರಾಗ ರೇಗುಪ್ತಿ ರೂಪಕ ತಾಳ**

ನಾನೇನು ನಿನಗಂದೆನು ಶ್ರೀಹರಿಯೆ ನಾನಿನಗೇನೆಂದೆನೊ ॥ ಪ ॥
ನಾನೇನು ನಿನಗೆಂದೆ ನೀನಿಂತು ನಿನ್ನದು ಧ್ಯಾನವ ಬಿಡಿಸಲು
ಜ್ಞಾನಿಗಳರಸನೆ ॥ ಅ.ಪ ॥

ಕರುಣೆ ನೀನೆಂಬುವುದು ನನಗೆ ಇನ್ನೂ ಭರವಸೆ ಇಲ್ಲೆಂಬೆನೋ ।
ಕರುಣೆ ನೀನಾದರೆ ಪರಿಪರಿ ಬೇಡಲು ಕರುಣವ ತೋರದೆ ಇರುವ ॥ ೧ ॥

ಭಕ್ತನು ನಾನಲ್ಲೇನೊ ನಿನ್ನೊಳಗನುರಕ್ತಿ ಮಾಡುವದಿಲ್ಲೇನೋ ।
ಮುಕ್ತಿ ತಪ್ಪಿಸಲು ನೀ ಯುಕ್ತಿ ಮಾಡಲು ಮತ್ತೆ ರಿಕ್ತ ಕರುಣನೆಂಬುಕ್ತಿ ಸುಳ್ಳೇನೋ
॥ ೨ ॥

ಸ್ಮರಿಸಲು ದುರಿತಗಳ ತರಿವನುಡಿ ಬರಿದೆನ್ನ ಬಗೆಗಾಯ್ತೇನೋ ।
ಧರೆಯೊಳು ಗದುಗಿನ ವೀರನಾರಾಯಣ ಬಿರುಸು ನನ್ನ ನುಡಿ ಬರೆಯಲಿಲ್ಲವೇನೊ
॥ ೩ ॥

### ೧೩. ರಾಗ - ಕಾನಡಾ ಆದಿತಾಳ

ಬೇಡೆಲೊ ಜೀವ ಜನಿಸಲೆ ಬೇಡೊ ॥ ಪ ॥
ಬೇಡ ನಿಜಸುಖ ದೊರೆಯದು ನೋಡೊ ॥ ಅ.ಪ ॥

ಹೆಣ್ಣೊ ಗಂಡೋ ಆಗಿ ಮೆರೆಯುವೆ
ಮಣ್ಣು ಹೊನ್ನಿಗೆ ನೀ ಹಾತೊರೆಯುವೆ
ಉಣ್ಣುತ ಪ್ರಾರಬ್ಧವ ಬಾಯ್ದೆರೆಯುವೆ
ಹಣ್ಣಾಗುವೆ ನೀ ಪರೀಕ್ಷೆ ಮಾಡೊ ॥ ೧ ॥

ಆರು ಹಗೆಗಳು ಗಡ ಮುತ್ತುವವೊ
ಮೂರು ತಾಪಗಳು ಕಡು ಹತ್ತುವವೊ
ನೂರೊಂದೊಗಟ ಗಳಿರದೊತ್ತುವವೊ
ಪಾರಾಗಲು ಬಿಡವೆಂದಿಗೂ ಕೇಡೊ ॥ ೨ ॥

ಹುಟ್ಟು ಸಾವುಗಳ ಸುಳಿಯಲಿ ಸುತ್ತುವೆ
ಒಟ್ಟು ಮರಳಿ ಸಂಚಿತವನು ಬಿತ್ತುವೆ
ಗಟ್ಟಿಸಿ ಗದುಗಿನ ವೀರನಾರಾಯ್ಣಗೆ
ಹುಟ್ಟಿಸಬೇಡೆಂದಿಚ್ಛಿಸಿ ಬೇಡೊ ॥ ೩ ॥

### ೧೪. ರಾಗ ಪೂರ್ವಿ ಆದಿ ತಾಳ

ಕಂಡಿರೇನಯ್ಯ ಹರಿಯನು ॥ ಪ ॥
ಚಂಡ ಪ್ರಚಂಡನ ಪುಂಡರಿಕಾಕ್ಷನ ॥ ಅ.ಪ ॥

ಅಲ್ಲಿ ಇಲ್ಲಿ ಇರುವನಂತೆ । ಎಲ್ಲೆಲ್ಲೂ ಸಿಕ್ಕನಂತೆ
ಗುಲ್ಲನ ಎಂದೂ ಕೊಡದಿಹನಂತೆ । ಎಲ್ಲವ ಬಲ್ಲಿದ ಬಲ್ಲವನಂತೆ ॥ ೧ ॥

ಧ್ರುವನ ಮುಂದೆ ನಿಂತಿದ್ದನಂತೆ । ಕುವರ ಪ್ರಲ್ಹಾದ ಹಿಡಿದಿದ್ದನಂತೆ
ಪಾರ್ಥಗೆ ಗೀತೆಯ ಸಾರಿದನಂತೆ । ಶಬರಿಯ ಎಂಜಲ ತಿಂದಿದ್ದನಂತೆ ॥ ೨ ॥

ಮುನಿಗಳು ಹೃದಯದಿ ಕಂಡಿಹರಂತೆ । ವನಿತೆ - ಯಶೋದೆಗೆ ಸಿಕ್ಕಿದನಂತೆ ।
ಹನುಮ ಭೀಮರು ನೋಡಿದರಂತೆ । ಅನಿತೋದ್ಧವಗೆ ಮೆಚ್ಚಿದನಂತೆ ॥ ೩ ॥

ಜವ್ಮಕೆ ತಾ ಕಾಣಿಸಿದನಂತೆ । ದಿವ್ಯ ದೃಷ್ಟಿಗೆ ನಿಲುಕುವನಂತೆ ।
ಭವ್ಯ ಗದುಗಿನ ವೀರನಾರಾಯಣ । ದಿವ್ಯ ದೃಷ್ಟಿಯ ಕೊಡುವನಂತೆ ॥ ೪ ॥

**೧೫. ರಾಗ - ತೋಡಿ ಅಥವಾ ಭೈರವಿ ತಾಳ - ದಾದರಾ**

ಶರಣು ಬಂದೆನೊ ಹರಿಯೆ ಶರಣು ಬಂದೆನೊ ॥ ಪ ॥
ಕರುಣದಿಂದ ನೋಡೆನ್ನ ಸಲಹು ಎಂದೆನೋ ॥ ಅ.ಪ ॥

ಜನನ ಮರಣ ಸುಳಿಗಳಲಿ । ತೊನೆದು ಬಳಲಿ ನೊಂದೆನೊ ।
ಘನ ಭವದಲ್ಲಿ ಮೂರು । ತಾಪದಲ್ಲಿ ಸಿಲುಕಿ ಬೆಂದೆನೊ ॥ ೧ ॥

ಧನಕೆ ಮೆಚ್ಚಿ ನಿನ್ನ ಹೊರತು । ಕಹಿಯ ಫಲವ ತಿಂದೆನೊ ।
ಅನುದಿನ ಘನ ಚಿಂತೆಯಿಂದ । ಮನ ಶ್ಯಾಂತಿ - ಹೊಂದೆನೊ ॥ ೨ ॥

ವನಿತೆ ಸುತರು ಪೊರೆವರೆಂಬ । ಭ್ರಮದೊಳಾತ್ಮ ಕೊಂದೆನೊ ।
ಕೊನೆಗೆ ಗದಗು ವೀರನಾರಾಯಣನೆ ಗತಿ - ಎಂದೆನೊ ॥ ೩ ॥

**೧೬. ರಾಗ - ಪೀಲು ಆದಿ - ತಾಳ**

ಪಾರ್ಥನ ಸಾರಥಿಯಾ ॥ ಪ ॥
ಆರ್ತಜೀವನಿಗೆ ಕರ್ತವ್ಯವನು । ಗುರ್ತಿಸಿ ಪೇಳುವ ಪೂರ್ತಿಯ ರೀತಿಯಾ ॥ ಅ.ಪ ॥

ಗೀತೆಯ ಪೇಳಲು ವೇದಾಗಮಗಳ
ಸಾರಧಾರೆಯ ಕರೆವನೆಂಬಂತೆ
ಶ್ವೇತಾಶ್ವಗಳ ಕಡಿವಾಣಗಳು
ಪ್ರೀತಿಲಿ ಹಿಡಿದಿಹ ಕೃಷ್ಣಮೂರುತಿಯ ॥ ೧ ॥

ಭವನದಲ್ಲಿ ತೇಲಿಸಲಿ ಜೀವನವಿರಿಸಿ
ನಾಲ್ಕರ್ಥಗಳನು ಜೋಡಿಸುತ
ತವಕಡಿತಾ ಹೊರಗಿರುವ ತಲೆನೆಡೆಸಿ
ಪ್ರೇರಿಪನೆಂಬಂತಿಹ ಶ್ರೀಪತಿಯ ॥ ೨ ॥

ನೇತ್ರಕೆ ಜೀವನ ಯಾತ್ರೆಯ ನಡೆಸುವ
ಸೂತ್ರಧಾರನನೆ ತೋರುತಲಿರುವ
ಕ್ಷೇತ್ರ ಗದುಗಿನ ವೀರನಾರಾಯಣನ
ಪಾತ್ರವಹಿಸಿದ ದಿವ್ಯಾಕೃತಿಯ ॥ ೩ ॥

## ೧೭. ರಾಗ ಬಿಹಾಗ ರೂಪಕ ತಾಳ

ನಿನ್ನೊರೆಗೆ ನಾನಿಳಿಯಲಾರೆ ॥ ಪ ॥
ಪನ್ನಗಾದ್ರಿವಾಸ ಶ್ರೀಹರೆ ॥ ಅ.ಪ ॥

ಕುನ್ನಿ ಮಾನವ ನಾನು ಎನ್ನಿಂದ ಸಾಧ್ಯವಿರೆ ಇನ್ನು
ಹೆಚ್ಚು ಹೆಚ್ಚು ಭಕುತಿಯನು ಬೇಡ ಬೇಡಾ ॥ ೧ ॥

ಬೊಮ್ಮಾದಿ ದೇವತೆಗಳು ಅಮ್ಮಲಕುಮಿಯು ಸಹ
ನಿಮ್ಮನ್ನು ತಿಳಿಯರಿನ್ನು ತಿಳಿವ ದಮ್ಮು ನನಗೇಕೆ ಶೌರೆ ॥ ೨ ॥

ಅನ್ಯಜೀವಿಯ ಅಂತರಂಗವನ್ನು ತಿಳಿಯಲಾರೆ ನಾನು
ಇನ್ನು ಸರಸಿಜಾಂಡನೊಡಲು ನಿನ್ನ ತಿಳಿವದೆಂತು ॥ ೩ ॥

ಇಷ್ಟು ಭಕುತಿಯಿಂದ ನೀನು ತುಷ್ಟವಾಗಿ ಸಲುಹಬೇಕು
ಎಷ್ಟು ಕಷ್ಟ ಪಟ್ಟರು ನಿನ್ನಿಷ್ಟಕೆ ಸರಿ ಹೋಗುವಷ್ಟು ॥ ೪ ॥

ಭಕುತಿಯಲಿ ಸತತವಿರಲು ಶಕುತಿಯನು ಈಯಲೊ ಎನಗೆ
ಸಕಲ ಜಗದಿ ಮೆರೆವ ಗದುಗು ವೀರನಾರಾಯಣ ॥ ೫ ॥

## ೧೮. ರಾಗ ದೇಶ ಆದಿ ತಾಳ

ಯಾದವಾ ಮಾಧವಾ ಕರುಣಿಸು ॥ ಪ ॥
ಮೋದವನೀವ ದೇವಾ॥ ಅ.ಪ ॥

ತುಂಬಿದ ಸಭೆಯೊಳ್ ತುರುಣಿಯ ಪೊರೆದೆಯಾ
ನಂಬಿದ ಶರಣರ ಕಾವಾ ॥ ೧ ॥

ಕರೆಯದ ವಿದುರನ ಮನೆಗೆ ನೀ ಬಂದೆಯಾ ।
ನಿರುತವಿ ಭಕುತರ ಜೀವಾ ॥ ೨ ॥

ಪ್ರಾರ್ಥಿಪೆ ಗದುಗಿನ ವೀರನಾರಾಯಣ ।
ಪಾರ್ಥನ ಬಂಡಿಯ ಬೋವಾ ॥ ೩ ॥

**೧೯. ರಾಗ ತುಜಾವಂತಿ ತಾಳ - ತ್ರಿಪುಡೆ**

ಭಾರತಿ ರಮಣ ಸಮೀಕರಣ ನಿನ್ನಯ ಚಾರು
ಲೀಲೆಯನೆಂತು ಬಣ್ಣಿಪೆ ॥ ಪ ॥

ಮೂರು ಯುಗಗಳಲಿ । ಮೂರವ ತಾರದಿ ಮೂರು ನಾಮದಲಿ
ಮೂರು ವೇಷದಲಿ, ಮೂರು ಕ್ರಮಗಳಲಿ, ಮೂರು ಧರ್ಮಗಳ
ಮೂರು ಲೋಕಕೆ ತಿಳಿಸಿದ ಮೂರುತಿಯೆ ॥ ಅ ಪ ॥

ಹನುಮನೆನಿಸಿ ಕೌಪೀನದಿ ತನುವಾಚ್ಛಾದಿಸಿ ।
ಜನರೊಳು ತನುಮನ ನಿಯಮದ ಬ್ರಹ್ಮಚರ್ಯ ಬೋಧಿಸಿ ।
ವನದೊಳು ಇನಕುಲ ರಾಮನ ವನಿತೆಯ ಶೋಧಿಸಿ ।
ಮನುಜನ ರೂಪದ ಹರಿಯ ಅನುಚರ ಸಾಧಿಸಿ ।
ತನುಮನ ಧನದಿಂದವನ ಸೇವೆಯನು ।
ಅನುದಿನ ಬಕುತಿಗಳಿಂದ ಮಾಡಿದಿ ।
ಘನ ಭಕುತಿಯ ಫಲ ಬ್ರಹ್ಮ ಪದವಿ
ಎಂದೆನಿಪ ಮತವ ನೀ ಜಗಕೆ ತಿಳುಹಿದಿ ॥೧॥

ಭೀಮನ ನಾಮದಿ ಭೂಮಿಪರುಡಿಗೆಯನೇರಿಸಿ ।
ಪಾಮರ ಜನರೊಳು ನಿಜಗಾರ್ಹಾಸ್ಥವ ಬೀರಿಸಿ ।
ಸ್ವಾಮಿಯ ವೈರಿಗೆ ಸೋಮನ ಧಾಮವ ತೋರಿಸಿ ।
ಶ್ಯಾಮಲ ಕೃಷ್ಣನ ಪ್ರೇಮಕೆ ಸೀಮೆಯ ಮೀರಿಸಿ ।
ಶ್ರೀಮತು ಕೃಷ್ಣನನಂತರಂಗದಲಿ ।
ಕಾಮರಹಿತ ಭಕ್ತಿಗಳಿಂ ಮೆಚ್ಚಿಸಿ ।
ಪ್ರೇಮದ ಫಲವಿದು ನೋಡಿರೆಂದು ಜನ ।
ಸ್ತೋಮಕೆ ತಿಳುಹಿದಿ ಭೀಮ ಮಹಾತ್ಮ ॥೨॥

ಭೂಸುರ ಮಧ್ವನ ಹೆಸರಿಲಿ ಶ್ಯಾಟಲಿ ರಾಜಿಸಿ ।
ವ್ಯಾಸರ ಶಾಸನ ಸಾರೆ ಸನ್ಯಾಸವ ಯೋಜಿಸಿ ।
ಶ್ರೀಶನೆ ಸರ್ವೋತ್ತಮನೆಂಬ ಡಂಗುರ ಬಾಜಿಸಿ ।
ಸಾಸಿರ ನಾಮದ ಶ್ರೀಶನ ದಾಸ್ಯವನಾರ್ಜಿಸಿ ।
ಭೂಸುರ ಗದುಗಿನ ವೀರ ನಾರಾಯಣ ।
ನಾಸರದಿಂ ಬಹು ಸರಳ ಭಾಷೆಯಲಿ ।
ಈಶ ಜೀವಿಗಳ ತರತಮ ತಿಳಿಸುತೆ ।
ಲೇಸಿದು ಮೋಕ್ಷಕ್ಕೆಂದು ತಿಳುಹಿದಿ ॥೩॥

೨೦. ರಾಗ - ಮುಖಾರಿ    ರೂಪತಾಳ

ನಿಲ್ಲಿಸಯ್ಯ ನಿನ್ನ ಮೂರುತಿ । ನಿಲ್ಲಿಸಯ್ಯ ನಿನ್ನ ಮೂರುತಿ
ಪಲ್ಲವಿಸಿದೆ ನಿನ್ನ ಕೀರುತಿ ॥ ಬಲ್ಲ ಭಕ್ತಿ ಪದವ ತೋರುತಿ ॥
ಎಲ್ಲರೊಳಗೆ ಸುಖವ ಬೀರುತಿ ॥ಅ. ಪ ॥

ಗಾಡಿಕಾರ ರಾಮನನು ನೋಡಿ ನೋಡಿ ಅವನ ಮೂರ್ತಿ ॥
ಮೂಡಿ ನಿಂತ ನಿನ್ನ ಕಣ್ಣ । ನೋಡಿ ಧನ್ಯನಪ್ಪೆ ಪೂರ್ತಿ ॥ ೧॥
ಪ್ರೇಮ ಭಕುತಿಯಿಂದ ನಿರುತ । ರಾಮನನ್ನು ಭಜಿಸಿ ನುಡಿವ ।
ನಾಮವೆನ್ನ ಪಾಪಿ ಕಿವಿಯ ಧಾಮದಲ್ಲಿ ಬೀರುವಂತೆ ॥೨॥

ಎನ್ನ ಕಾಡುವಂಥ ದುರಿತ । ವನು ಕಳೆದು ಸಾಖ್ಯವನು ॥
ಇನ್ನು ಕೊಡುವ ನಿನ್ನ ದಿವ್ಯ ॥ ಸನ್ನಿಧಿ ತಾನಾಗುವಂತೆ ॥೩॥

ಧಾರುಣಿಯೊಳು ಗದುಗಿನಲ್ಲಿ । ವೀರನಾರಾಯಣನ ಪದವ ॥
ತೋರಿನಿತ್ಯ ಸೇವಿಪಂತೆ ಧೀರತೆ ಬರುವಂತೆ ಎನ್ನೊಳು ॥ ೪॥

೨೧. ರಾಗ - ಭೈರವಿ   ತಾಳ -ಬಲಂದ

ಕರುಣಿಸಲಾರೆಯಾ । ಇನ್ನಷ್ಟನೀ । ಸಿರಿಪತಿರಾಯಾ ॥ಪ॥

ಕರುಣಿಸಲಾರೆಯಾ । ಕರುಣಾಕರನೆಂಬೊ ಬಿರುದನುಳಿಸಿಕೊಳ್ಳಲಾರೆಯಾ ॥
ನೀ ನರಿಯಾ ॥ ಅ. ಪ॥

ಭುವಿಯೊಳು ನಿನ್ನ ದಯವಿರದಿರೆ ಕಣವಂದು ಸರಿಯದಯ್ಯಾ ॥
ಭವದೊಳು ನಿನ್ನವ ಕೃಪೆಯಾಗಲು ಜವದೊಳೀಗಿನ ಸುಖ ಸ್ರವಿಸಿ ಪೋಗುವದಯ್ಯಾ ॥೧॥
ಹೋಗಿಸಿ ಸಂಸಾರ ಬೇಗುದಿಯನು ನೀನು । ಬೇಗ ನಿನ್ನ ಧ್ಯಾನ ಭೋಗವ ನೀಡಯ್ಯಾ॥೨॥

ತುಷ್ಟಿ ಹೊಂದಲು ನೀ ಜೀಯಾ । ಕಷ್ಟದ ಪರಿಯಾ ನಷ್ಟ ಮಾಡಲು ಅರಿಯಾ । ಸೃಷ್ಟಿಯ ಜೀವಿಗ । ದೃಷ್ಟ ಎಷ್ಟಿಷ್ಟೆಂಬ ಸ್ಪಷ್ಟ ಸಂಕಲ್ಪವ ಬದಲಿಸಲರಿಯಾ ॥೩॥

ಎಲ್ಲವೂ ನಿನ್ನಧೀನವಲ್ಲವೆ ಹರಿಯೇ । ಸಲ್ಲದ ಅನುಮಾನ ॥ ಖುಲ್ಲದೈವವ ತಿರುವ ಬಲ್ಲೆಯಲ್ಲದೆ ನೀನು । ಒಲ್ಲೇಕೆ ಮನವನು ಕಲ್ಲು ಮಾಡಿದೆಯಾ ॥ ೪॥

ಶರಣೆಂಬ ಜನರ ಕೈಯ್ಯಾ । ಎಂದೂ ಬಿಡದೆ ಪೊರೆಯುವದೆಂಬರಯ್ಯಾ ॥ ಧರೆಯೊಳು ಗದುಗಿನ ವೀರನಾರಾಯಣ । ಮರೆಯದೆ ಸಲುಹಯ್ಯಾ ಕೇಳೆನ್ನ ಮೊರೆಯಾ ॥೫॥

### ೨೨. ರಾಗ (ಹಿಂದೂಸ್ಥಾನಿ) ಭೈರವಿ ತಾಳ - ಕೇರವಾ

ಸಿಕ್ಕ ಸಿಕ್ಕ ಇಲ್ಲೇ ಸಿಕ್ಕ ॥ಪ॥ ಪಕ್ಕದೊಳೆಲ್ಲಲ್ಲೂ ತುಂಬಿಹನಕ್ಕ ॥ ಅ. ಪ.॥
ಅಗಲಲು ಎಲ್ಲೆಲ್ಲೂ ಸ್ಥಳವಿಲ್ಲವಕ್ಕ । ಜಡಜೀವಿಗಳೊಳು ತೋರುವನಕ್ಕ ॥ ೧ ॥
ಸಕಲರಿಗವನು ಕಾಣನು ತಕ್ಕ । ಭಕುತರಿಗಷ್ಟೆ ಕಾಣುವನಕ್ಕ ॥ ೨ ॥
ಶಕ್ತಿಯುಕ್ತಿಯಿಂದರಸಲು ಸಿಗನಕ್ಕ ॥ ಭಕ್ತಿಯೊಳರಸಲು ಇಲ್ಲೇ ಸಿಗುವನಕ್ಕ ॥೩॥
ಇಲ್ಲೇ ಗದುಗಿನೊಳು ಬಂದು ನಿಂತಿಹನಕ್ಕ ಬಲ್ಲ ವೀರನಾರಾಯಣನಕ್ಕ ॥೪॥

### ೨೩. ರಾಗ -ತೋಡಿ ತಾಳ - ಆದಿ

ಪುಟ್ಟಿ ಬಂದಿಹೆಯಾ ಕಿಟ್ಟಯ್ಯಾ ॥ಪ ॥ ಕೆಟ್ಟ ಲೋಕವನೆಲ್ಲ ನೆಟ್ಟನೆ ತಿದ್ದಲು । ಕಟ್ಟನೋಳ್ ಶ್ರಾವಣದಷ್ಟಮೀದಿನದಲಿ ॥೧॥ ಹೀನಾದ ಧರ್ಮದ ಜ್ಞಾನೋದಯಗೈಸಿ ॥ ದೀನರನುದ್ಧರಿಸಿ ಧೀರಮಾನವನಾಗಿ ॥೨॥ ಬಾಧಿಪಕುಜನರ ಛೇದಿಸಿ ಜಗದೊಳು । ಸಾಧು

ಸುಜನರನು ವೋದದಿ ಸಲುಹಲು ||೩|| ಮುಕ್ತಿಸ್ಥಾನ ವೈಕುಂಠವ ಬಿಟ್ಟು | ಸುರಮುನಿಗಳಿಗಿಂತು ವರವನಿತ್ತ ಕಾರಣ || ಧರೆಯೊಳು ಗದುಗಿನ ವೀರನಾರಾಯಣ ||೪||

### ೨೪. ರಾಗ - ಕೇದಾರ ಗೌಳ ಆಟತಾಳ

ಧನ್ಯನಾದೆ, ಧನ್ಯನಾದೆ ಘನ್ನ ಲಕುಮಿಯ ನೋಡಿದೆ | ಚೆನ್ನದೇವಿಯ ಪಾದಕೆರಗಿದೆ | ಮನ್ನಿಸೆಂತೆಂದ ಅವಳ ಬೇಡಿದೆ || ಪ || ಚರಣಯುಗದಲಿ ಮೆರೆವನೂಪುರ | ಧರಿಸಿ ಪೀಠದೊಳಿಂದಿರೆ || ಜರದ ಸೀರೆಯುಟ್ಟು ನಡುವೊಳು | ಹಿರಿದು ವಡ್ಯಾಣದೊಳು ನಿಂದಿರೆ ||೧|| ಕರದ ಕಂಕಣ ಕೊರಳ ಹಾರವು | ವರಕಿರೀಟವು ಶಿರದೊಳಿಂದಿರೆ | ಕರಣ ಕುಂಡಲಿ ಮೂಗು ಮುಕುರವು | ಪರಮ ತೇಜದ ಸೊಬಗು ತಂದಿರೆ || ೨|| ಹೊಳವ ಕಂಗಳು ಹಣೆಯ ಕುಂಕುಮ | ಥಳಿಸೆ ಸರಸಿಜ ಮಂದಿರೆ | ಬಿಳಿಯ ಕೊಡೆಯನು ಹಿಡವ ತೆರದಲಿ | ಎಳೆಯ ನಾಗವು ಹಿಂದಿರೆ ||೩|| ಬೆರಳೊಳುಂಗುರ ಕುರುಳು ಸುಂದರ | ಹೆರಳು ಸಿಂಗರದಿಂದಿರೆ | ತಿರುಳು ಗಂಧದ ಸರಳ ಮೂರ್ತಿಯ | ತರಳೆ ಎನ್ನಯ ಮುಂದಿರೆ ||೪|| ಧೀರಭಕುತರ ಪೊರೆವುದಕೆ ಕರವೀರ ಪುರದೊಳು ಬಂದಿರೆ | ಧಾರುಣೀಯೊಳು ಮೆರೆವ ಗದುಗಿನ ವೀರನಾರಾಯಣ ಚಂದಿರೆ ||೫||

### ೨೫. ರಾಗ - ನಾಂಟ ತಾಳ - ಝಂಪೆ

ಆಣೆಯಾರೋ ನಿನಗೆ ಈ ತ್ರಿಭುವನದೊಳಗೆ ||ಪ|| ಹಣಮಂತ ಗುಣವಂತ ಮಣೆಯುವೆನೊ ನಿನಗೆ ||ಅ. ಪ. || ಗಡ್ ಗಡ್ ಗಡನೆ ರಾಮನ ಪದಾಂಬುಜಕೆ ವಂದಿಸುತ | ಖಡ್ ಖಡ್ ಖಡನೆ ಸಿಡಿಲಂತೆ ನಭದೊಳಗೆ ಗರ್ಜಿಸುತೆ | ಧಡ್ ಧಡ್ ಧಡನೆ ಜಿಗಿಯುತ್ತ ದಾಟುತ್ತ || ಬಡ್ ಬಡ್ ಬಡನೆ ಸೀತೆಯನು ಶೋಧಿಸುತ ಬಂದೆಯೋ ||೧|| ಭರ್ ಭರ್ ಭರನೆ ಬೆಂಕದಲ್ಲಿ ಉರಿಯುತಿಹ ರಕ್ಕಸರ ದರ್ ದರ್ ದರನೆ ಕಣರಂಗಕೊಬ್ಬನೇ ಎಳೆ ತಂದು | ಕರ್ ಕರ್ ಕರನೆ ಹಲ್ಲಿಡಿದು ತರಿಯುತ್ತ ಧರೆಯೊಳಗೆ | ಭರ್ ಭರ್ ಭರನೆ ಸಿರಿವರನ ಇಷ್ಟವನು ಪೂರ್ತಿಸಿದಿ ||೨|| ಖಿದ್ ಖಿದ್ ಖಿದನೆ ನಗುತೆ ರಘುರಾಮನನು ಹೃದಯದೊಳು | ಬುದ್ ಬುದ್ ಬುದನೆ ಜಿಡದೇಳ್ವ ಭಕುತಿಯಲಿ ಸೇವಿಸುತ | ಗದ್ ಗದ್ ಗದುಗಿನೊಳು ವೀರ ನಾರಾಯಣನ | ಮುದ್ ಮುದ್ ಮುದಿಸಿ ಪರಬ್ರಹ್ಮ ಪದವಿಯನೆ ಹೊಂದಿದೆಯೋ ||೩||

**೨೬. ರಾಗ - ಕಾಂಬೋದಿ ತಾಳ - ಝಂಪೆ**

ಏಕೆ ಬೇಕಾಗಿತ್ತೊ ನಿನಗ ಈ ಆಟ ॥ ಲೋಕೇಶ ಸಾಕಯ್ಯ ಇಲಿ ಬೆಕ್ಕಿನಾಟ ॥ಪ॥ ಸುಷ್ಟು ಜಲಧಿಯ ಶಯನ ಬಿಸುಟ ಬಿಡಲ್ಯಾಕೆ । ಸೃಷ್ಟಿಪುದು ಮೊದಲ್ಯಾಕೆ ಸೃಷ್ಟಿಸಲು ಪ್ರಾಣಿಗಳ । ಕಷ್ಟ ಪಡಿಸುವುದ್ಯಾಕೆ ಕಷ್ಟವನು ನೋಡಿ । ತುಷ್ಟಿ ಪಡುವದು ಏಕೆ ಇಷ್ಟ್ಯಾಕೆ ಬಯಕೆ ॥೧॥ ಸ್ವರ್ಗ ನರಕಗಳೇಕೆ ಜನ್ಮ ಜನ್ಮಾಂತರದ ವರ್ಗವ ಮಾಡುವುದೇಕೆ । ಪಾಪ ಪುಣ್ಯಗಳೇಕೆ ದುರ್ಗಮದ ವೈಕುಂಠದಾಸೆ ತೋರುವದೇಕೆ ನಿರ್ಗುಣನೆ ಸಲ್ಲದೀ ಉದ್ಯೋಗವೇಕೆ ॥೨॥ ಉದದಿ ಶಯನದೊಳಾತ್ಮ ಸಾನಂದದಲಿ ಮುಳುಗಿ । ಹೃದಯದೊಳು ಬಂದು ನೀನೆಯೇ ನೀನಾಗಿ । ಮೋದಪಡುವದು ಬಿಟ್ಟು ವೀರ ನಾರಾಯಣನೆ ॥ ಗದುಗಿನೊಳು ಬಂದಿಲ್ಲಿ ನಿಂತುರುವುದೇಕೆ ॥೩॥

**೨೭. ರಾಗ - ವೇಲು (ಹಿಂದೂಸ್ಥಾನಿ) ತಾಳ-ಏಕ**

ನಿಜ ವೈಷ್ಣವಾ ಅವನೇ ನಿಜ ವೈಷ್ಣವಾ ॥ಪ॥ ಇತರರ ದುಃಖವು ತನದೆಂದರಿವಾ। ಸತತದಿ ಸೇವೆಗೆ ತತಪರನಿರುವಾ ॥೧॥ ತೊರೆದು ಹೆಮ್ಮೆಯ । ಸರುವರ ನಮಿಸುವ । ಪರರನು ಜರಿಯಾ ನಿರುಮಲನಿರುವಾ ॥೨॥ ಧನ್ಯನವನು ತಾ ಅನ್ಯರ ಸತಿಯನು ತಾಯಿಯೊಲು ಮನ್ನಿಸುತಿರುವಾ ॥೩॥ ಸಟೆಯನು ನುಡಿಯಾ ಪರಧನ ಹಿಡಿಯಾ । ಕಟ್ಟಲಿ ಸಿಕ್ಕದೆ ಸಮಮನಸಿನವ ॥೪॥ ನಡೆನುಡಿಗಳಲಿ ಮಡಿಯಿಂದಿರುವಾ ದೃಢಮನದಿಂ ಬಹುಶಾಂತಿಯಲಿರುವಾ ॥೫॥ ಪ್ರತಿಪ್ರಾಣಿಯಲಿ ಹರಿಯನು ನೋಡುವ । ಅತಿಶಯ ದಯವನು ತೋರುತಲಿರುವ ॥೬॥ ಕಾಮ ಕ್ರೋಧಗಳ ಗಡ ಜೈಸಿರುವಾ । ರಾಮನಾಮವ ನೇಮದಿ ಭಜಸುವ ॥೭॥ ಗದುಗಿನ ವೀರನಾರಾಯಣನ ಹೃದಯದಿ ಸತತದಿ ಮುದದಲಿ ಪಿಡಿವಾ ॥೮॥

**೨೮. ರಾಗ -ರೇಗುಪ್ತಿ ತಾಳ - ಆದಿ**

ಕೇಳಿಸಲೊಲ್ಲದೇನೋ ಕೃಷ್ಣಾನೀ ಕೇಳೀ ಕೆಳದಂತಿರುವಿಯೇನೋ ॥ ಪ॥ ಬಾಳುವೆಯೊಳು ಬಲು ಕೀಳಾದೆ ನಾನಿಂತು ಏಳಿಸೆನ್ನನು ಎಂದು ಕೇಳಿಕೊಳ್ಳುವದಿನ್ನು ॥ಅ. ಪ. ॥ ಯಾವತ್ತು ತಿಳಿದವನು ಎಂಬರು ಎನ್ನ ನೋವು ತಿಳಿದಾಯ್ತೇನೋ ॥ ಸಾವಿರ ಕಿವಿಗಳಿದ್ದೆನ್ನಯ ಪಾಲಿಗೆ ದೇವಾ, ಅವೆಲ್ಲವು ಕಿವುಡಾದವೇನೋ ॥೧॥ ಈ ವಿಶ್ವವನ್ನು

ತುಂಬಿ ನಿಂತಿಹನೆಂಬೀ ಭಾವಕೆ ನೀನೆ ನಂಬಿ ಆವಾವ ಜೀವರ, ಭಾವವನರಿತು ನೀ ॥ ಕಾವುದೆಂತೆಂಬೊ ಈ ವಚನವು ನಿನಗೆ ॥೨॥ ಭೇಧ ಭಾವವು ಇಲ್ಲೆಂದು, ಸಾಧಿಸುವವು। ವೇದಗಳೆಲ್ಲವಿಂದು । ಭಾಧೆಯ ಬಿಡಿಸೆಂದು ಬೇಡುವೆ ಗದುಗಿನ । ಆಧಾರಿ ದೇವನೇ ವೀರನಾರಾಯಣ ॥ ೩ ॥

## ೨೯. ರಾಗ - ರೇಗುಪ್ತಿ ತಾಳ - ಆದಿ

ಹರಿಯನ್ನು ಒಲಿಸಿ ಕೊಡೋ । ಮಾರುತಿಯೇ । ಹರಿಯನ್ನು ಒಲಿಸಿಕೊಡೋ ॥ಪ॥ ಹರಿಯನ್ನು ನಿನ್ನದೆ ಪರಿಮುಖದಿಂದಲಿ, ಸರುವರು ಕಾಣಬೇಕೆಂಬರು ನೋಡೊ ॥ಅ. ಪ. ॥ ಪರಮ ಭಕ್ತನು ನೀನೆಂದೂ । ಎಂದಿಗೂ । ಹರಿಯು ಮೀರನೆಂದೂ । ಬರೆವರು ಮನದಂದು ಮೊರೆಯು ನನ್ನದು ಇಂದು ॥೧॥ ಒಡೆಯ ರಾಮಗೆ ನೀ ದೂತಾ । ಎಂದಿಗೂ ಆತ । ನಡೆಸುವ ನಿನ್ನ ಮಾತ । ಬಡವ ನಾನೊಬ್ಬನ ಕಡು ಕರುಣೆಯ ಭಿಕ್ಷೆ ಕೊಡು ಎಂದು ಬೇಡುವನೆಂದು ನೀ ತಿಳಿಸುತ ॥೨॥ ಹಾಯಗೊಡರು ಜೀಯಾ । ಬಾಗಿಲದಲಿ । ಕಾಯುವ ಜಯವಿಜಯ ॥ ಶ್ರೀಯರಸನ ಕಾಂಬುಪಾಯವ ಕಲಿಸಿ ಬಡಪಾಯಿಯನಗೆ ನೀನೀಯುತ ಕೈಯಾ ॥೩॥ ಸದಯನೆ ಕರುಣ ಬಂತೆ । ಸಂಸಾರದಿ । ಕುದಿಸುವದೆನ್ನ ಚಿಂತೆ ॥ ಗದುಗಿನ ವೀರನಾರಾಯಣ ನಿನ್ನೊಳು । ಸದಾವಕಾಲದಿ ಹೃದಯದಿ ನಿಲುವಂತೆ ॥೪॥

## ೩೦. ರಾಗ -ತಿಲಕ ಕಾಮೋದ ತಾಳ-ರೂಪಕ

ಸೇವೆ ಮಾಳ್ಪೆ ನಾರಾಯಣ । ಈವುದಯ್ಯ ನಿನ್ನ ಚರಣ ॥ಪ॥ ಸುರಮುನಿಗಳಿಗಿದು ದುರ್ಲಭ । ಸಿರಿದೇವಿಗೆ ಮಾತ್ರ ಸುಲಭ ॥ ಕರುಣಿಸು ಹೇ ಕಮಲನಾಭಿ । ಇರದೆ ಚಾಚು ನಿನ್ನ ಚರಣ ॥ ೧॥ ತ್ರಿಜಗಗಳ ಗೆಲ್ವವಚರಣ । ಭಜಕ ಗುಹಕನೊಲಿದ ಚರಣ ॥ ರಜತ ನದಿಯ ಹೆತ್ತಚರಣ ।ಕಲ್ಲಹಲ್ಯೆಯ ಪೊರೆದ ಚರಣ ॥೨॥ ಕುರುನೃಪನನು ಕೆಡೆದ ಚರಣ । ಉರಗ ಕಾಳಿ ಹಣೆದ ಚರಣ ॥ಧರೆಗೆ ಮರೆವ ಗದುಗು ವೀರ । ನಾರಾಯಣ ನಿನ್ನ ಚರಣ ॥೩॥

## ೩೧. ರಾಗ-ವಸಂತ ತಾಳ-ರೂಪಕ

ದಾತ ॥ ಗೋಲವ್ಯಾಪಿ ನಿರಾಕಾರಿ ॥ಪ॥ ಸೊಕ್ಕಿ ಮೆರೆವ ಬಲಿಯ ಬಳಿಯ । ಹೊಕ್ಕು ಮೂರು ಪಾದ ನೆಲವ । ಬಿಕ್ಕೆ ಬೇಡಿಯವನನು ಹತ್ತಿಕ್ಕಿ ತುಳಿಯಲೆಂದು ॥೧॥ ಇಡಿಯ ಜಗವ ತನ್ನೊಡಲಲಿ । ಹಿಡಿದ ಪರಿಯಬಾಯಿ ತೆರೆದು । ಜಡೆದು ತೋರೆ ಯಶೋದೆಯ ತೊಡೆಯ ಮೇಲೆ ಆಡಲೆಂದು ॥೨॥ ಹಾಳುಮಾಡಿ ಹೂಡಿದಾಟ ಕಾಲಬೆರಳು ಬಾಯೊಳಿಟ್ಟು ॥ ಆಲದೆಲೆಯ ಮೇಲೆ ಮಲಗಿ ಗದುಗಿನ ವೀರನಾರಾಯಣ ॥೩॥

## ೩೨. ರಾಗ - ಹಮೀರ ಕಲ್ಯಾಣ ತಾಳ - ಆದಿತಾಳ

ಹುಡುಕುತಲಿಹೆನವನ । ಮಾಧವನಾ । ಹಿಡಿಯುತೆ ಭಕುತಿಯ ಸೊಡರನು ಕರದೊಳು । ಕಡುಗತ್ತಲೆಯೊಳು । ಕಡೆಗಾದೆ ನಾ ॥೧॥ ಸಿದ್ಧವೇದದೊಳು ಕದ್ದಡಗಿದನನ । ಬುದ್ಧಿಯತಳ ಗಡುನದ್ದಿ ಕದಡಿದನಾ ॥೨॥ ಜಗವ ತುಂಬಿಹನೆಂದು ನಿಗಮಸಾರಲು । ಜಗದೊಳಗೆಲ್ಲಾ ಖಗವಾಹನನೇ ॥೩॥ ಜ್ಞಾನಿಗಳಿಗೆ ತಾ ಕಾಂಬನು ಎಂಬರು । (ಕಾಣುವನೆಂಬರು) ಇಕ್ಕುತಲಿ ನಾ । ಮಾನನಲ್ಲಿನ ॥೪॥ ಎದೆಯ ಮರೆಯಲ್ಲಿ ಹುದುಗಿ ಮೆರೆವನ ಗದುಗಿನ ವೀರನಾರಾಣನ ॥೫॥

## ೩೩. ರಾಗ- ನಾಂಟ ಕುರಂಜಿ ಅಟತಾಳ

ಕೋಪವೇತಕೆ ಬಂದಿತೆನ್ನೊಳು ರಾಯರೇ ಗುರುರಾಯರೇ ॥ಪ॥ ತಾಪವಿನ್ನಿದು ಮನವು ಹಿಡಿದುದು । ಪಾಪಿಯನ್ನನು ಕ್ಷಮಿಸಲಾರಿರಾ ॥ಅ.ಪ.॥ ಕರುವು ತಾಯನು ನೋಡಬರಲೊಡೆ । ಕರೆದುಕೊಳ್ಳದೆ ದೂಡಬಹುದೇ ॥ ಭರದೆ ದರುಶನಕೆಂದು ಧಾವಿಸಿ। ಬರಲು ಬರಗೊಡದಂತೆ ಮಾಡಿದೆ ॥೧॥ ದ್ರೋಹಮಾಡಿದೆನೇನು ನಿಮ್ಮೊಳು ದ್ರೋಹ ಮಾಡಿದುದನ್ನು ತಿಳಿಯೆನು ॥ ದ್ರೋಹಿಯಾದೊಡೆ, ಕ್ಷಮಿಸದೆನ್ನನು । ಸ್ನೇಹದಿಂದೆನ್ನ ತಿಳಿದುಕೊಳ್ಳದೆ ॥೨॥ ಹಣದೊಳಾಶೆಯ ನಿಟ್ಟೆನೆಂದೊಡೆ । ಹಣವು ಸಂಸಾರಿ ಕಡೆ ಬೇಡವೆ। ಸೆಣನ ಗದುಗಿನ ವೀರನಾರಾಯಣನ ಭಕುತನ ಸಲಹದೆ ॥೩॥

## ೩೪. ರಾಗ -ತಿಲಕ ಕಾಮೋದ ಆದಿತಾಳ

ಧನ್ಯ ಧನ್ಯ ನೋ ಶ್ರೀ ಗುರುರಾಯ । ಧನ್ಯ ಶ್ರೀ ರಾಘವೇಂದ್ರ ಯತಿವರ್ಯಾ ॥ಪ॥ ವೀಣಾ ಪಾಣಿಯಾ ಅಣತಿಯಂತೆ । ಮಾಣದೆ ಸನ್ಯಾಸವ ಗ್ರಹಿಸಿದಿ ॥ ವೇಣು

ಗೋಪಾಲನು ತಪದ ಕಾಣಿಕೆಗೆ ಕಾಣಿಸಿಕೊಂಡನೋ ಓ ಮಾರಾಯ ||೧|| ಅನಾಥೆಯ ಹೊತ್ತಿಗೆಯ ಪರಿಮಳ ವಾಸನೆಗೆ ಬೆರಗಾದ ಸುಧೀಂದ್ರರ || ಭಾಸುರ ಕರಕಮಲ ಸಂಜಾತನೆ| ವಸುಜನ ಮದ ಸುಕೃತವೋ ಜೀಯಾ ||೨|| ಉತ ಗದುಗಿನ ವೀರನಾರಾಯಣ | ಸನ್ನಿಧಿಯಲಿ ನರಸಿಂಹನೆದುರಲಿ || ಸನ್ನಹಿತನು ನೀನಾಗಿ ಕುಳಿತೆಯೋ ಮನ್ನಿಸಿ ಸಲಿಸಲು ನಿನ್ನ ಭಕ್ತಿಯ ||೩||

## ೩೫. ಲಾವಣಿ (ಯಮನ)

ಖೋಡಿ ಮನಸು ಇದು ಓಡಿ ಹೋಗುತದ ಬೇಡಂದರು ಕೇಳದು ಅರಿಯೇ || ಜೋಡಿಸಿ ಕೈಗಳ ಬೇಡಿಕೊಂಬೆ, ದಯಮಾಡಿ ಹಿಡಿದುಕೊಡು ನರಹರಿಯೇ ||ಪ|| ಗಾಡಿಕಾರ ನಿನ್ನ ಮೋಡಿಯ ಮೂರ್ತಿಯ ಕೂಡಿಸಿ ಪೂಜಿಸಲಘು ಹರಿಯೆ | ದೂಡುತ ಹೃದಯದ ಗೂಡಿನೊಳಗೆ ಸ್ಥಿರಮಾಡಲು ಹದವನು - ನಾನರಿಯೆ ||ನೋಡಿಂದ್ರಿಯಗಳ ತೀಡಬಲ್ಲೆ ಮನ ತೀಡುವ ಯತ್ನವ್ರು, ಬರೆ ಬರೆಯೆ |ಬೇಡ ಬೇಡವೆಂದಾದವನೆ ನಿನ್ನ ನೋಡುವುದಂತ್ಕೆ ಜಗ ದೊರೆಯೆ (ಏಳೆಧನಿ) | ಕೋಡಗನಂತಿದು, ಕಿಡಿಗೇಡಿ ಜಿಗಿದಾಡಿ| ಪೋಗೋದು ತ್ವರೆ ಮಾಡಿ ಕೂಡಿಸಗೊಡದದ ಹುಡುಕಾಡಿ | ದಿಟಸ್ಮಾಡಿ ನೋಡಲಿದು ಅಡನಾಡೀ (ದುಡುಕು) ಕಾಡಿ ಕಾಡಿ ಬಲು ಪೀಡಿಸುತಿರುವದು ಕಾಡುವುದೇನಿದು ಈ ಪರಿಯ ಜೋಡಿಸಿ ಕೈಗಳ ||೧|| ತುಣುಕು ಮನಸು ಇದು, ಕ್ಷಣದೊಳು ಹಿಡಿವುದು ತಿಣೆಕಿ ತಿಣೆಕಿ ಗಡ ಇದನ್ನಣಿಯೆ | ಹೊನನಲ್ಯಾತಕೆಂದು ಗೊಣಗುತಿಹ ಜನ ಗುಣ ಗೊತ್ತಿಲ್ಲದ ಗುಣ ಖಣಿಯೇ ಗುಣ ರಹಿತನೆ ನಿನ್ನ ಗುಣ ನಾಮಂಗಳ ಜಪಿಸುತೆ ನಾಲಿಗೆ ತಾ ದಣಿಯೇ ತೊರೆದು ನಮ್ಮನು ಕ್ಷಣ ಕ್ಷಣಕೊಂದು ಕಣಕೆ ಹಾರುವದು ಸುರ ಧರಣಿಯೇ || (ಏಳೆ) ಇಣಚಿಯ ಹಾಂಗೆ ಚಪಲವೋ ಧಣಿಯೆ | ಅಣಗಿಸಿದ್ಹಾಂಗ | ಕುಣಿ ಕುಣಿಯೆ | ಒಣಗು ಜನರು ನಮಗದು ಹೊಣೆಯೆ | ಒಣಮಾತಿದು ಕೇಳಿ ನರ್ಗುಣಿಯೇ (ದುಡುಕು ) ಮಣಿಯದು, ದಣಿಯದು, ಹಣಿಯದು, ತಣಿಯದು ಹಣಿಯಲು ನಿನ್ನನು ಆದರಣಿಯೆ ||೨|| ಸ್ಪಷ್ಟ ಹೇಳುವೆನು ಚೇಷ್ಟೆಗಳದರದು ಯಥೇಷ್ಟವಾಗಿ ಕಣಾ ಕಣಾ | ಶಿಷ್ಟರನಲ್ಲಾ ಭ್ರಷ್ಟ ಮಾಡುವದು ದೃಷ್ಟ ಇದೊಂದೆ ಕಾರಣ || ಎಷ್ಟು ಮಾತ್ರಕವರಿಷ್ಟ ನಡೆಸದೆಂದಿಷ್ಟ ಇದರದು ಧೋರಣಾ, ಕಷ್ಟದಿ ಹಿಡಿದಿಟ್ಟ ಅಷ್ಟು ಇಂದ್ರಿಯ ಕಡೆ, ದುಷ್ಟದುಪದೇಶದ ಪ್ರೇರಣೆ || (ಏಳೆದು ) ನಷ್ಟ ಮಾಡೋ ಈ ಚೇಷ್ಟೆ ಗುಣ ಸುಷ್ಟ ಮತಿಯ ಕೊಡೆವೊರಣ | ಮುಷ್ಟಿಯೊಳಗೆ ಸೋತನುಹರಣ || ಸೃಷ್ಟ ಸ್ಥಿತಿ ಲಯ ಕಾರಣ || (ದುಡುಕು) ಸೃಷ್ಟಿಯೊಳಗೆ ಉತ್ಕೃಷ್ಟ ಗದುಗಿನ ಶ್ರೇಷ್ಠ ವೀರನಾರಾಯಣ ||೩||

**೩೬ ರಾಗ - (ದಕ್ಷಿಣಾದಿ) ಭೈರವಿ ತಾಳ - ರೂಪಕ**

ಏನು ವೈಭವವೋ । ಶ್ರೀನಿವಾಸ ದೊರೆಯೆ ನಿನ್ನದೇನು ವೈಭವವೋ ॥ಪಲ್ಲ॥ ಸಿರಿಯು ತಾನೇ ನಿಂತು ನಿನ್ನ । ನಿರುತ ಸೇವೆ ಗೈಯ್ಯುತಿಹಳೋ ಸರಸಿಜಾಸನಾದಿ ಸುರರು । ಕರವಮುಗಿದು ತುತಿಸುತಿಹರು ॥೧॥ ನಾಗರಾಯ ದಿವ್ಯಾಸನನಾಗಿ ಹೆಡೆಯ ಛತ್ರಪಿಡಿವ ॥ ಯೋಗಿ ನಾರದ ತುಂಬರಾರಿಂ । ರಾಗಮಾಡಿ ಹಾಡುತಿಹರೊ ॥೨॥ ಗರುಡ ವಾಯುಸುತರು ನಿನ್ನ । ಪರಮವಾಹನವಾಗಿ ಬಹರು । ಸುರಮುನಿಗಳು ಸಕಲನರರು ನಿರುತನಾಮ ಜಪಿಸುತಿಹರು ॥೩॥ ಮಂಗಳ ವಾದ್ಯಗಳು ಮೊಳಗಿ ಮಂಗಳಾರುತಿಯಾಗಿ ಬೆಳಗಿ । ತಿಂಗಳ ನೇಸರರು ದಿವ್ಯ ಮಂಗಳವ ದೀವಟಿಗರಾಗಿ ॥೪॥ ಕ್ಷೀರದಲ್ಲಿ ನಿನ್ನ ಸ್ನಾನ । ಸಾರ ಅಮೃತ ನಿನ್ನ ಪಾನ । ತೋರು ಭಕುತರಾಳ ಗದುಗು । ವೀರನಾರಾಯಣನೇ ನಿನ್ನದೇನು ವೈಭವವೋ ॥೫॥

**೩೭ ರಾಗ - ಕಾಂಬೋದಿ ಜಂಪೆ ತಾಳ**

ಜಿಪ್ಪುಣರ್ಕೆ ನೀವೆಂದು ಹೇಳಿದುದು ಸುಳ್ಳಲ್ಲ ॥ಪ॥ ನಿಪುಣಮತಿ ಪುರಂದರದಾಸ ಮಲ್ಲ ॥ಅ. ಪ ॥ ಘನತರದ ವೈರಾಗ್ಯ ತಳೆದು ದ್ವಿಜರಿಂಗೆಲ್ಲ । ಧನಕನಕ ಸಂಪತ್ತು ದಾನ ಮಾಡಿದರೆಲ್ಲ ॥ ವನಜನಾಭನ ಸ್ತುತಿಗೆ ಶಬ್ದ ಸಂಪತ್ತೆಲ್ಲ । ಒಗೆದು ನೀವೇ ಬಳಿಸಿ ನಮಗೇನು ಕೊಡಲಿಲ್ಲ ॥೧॥ ಖಂಜೂಸ ತನದ ಕತೆಯನು ಹೇಳಲಾಸಲ್ಲ । ಕಂಚನಾಭನ ಮಹಿಮೆ ಬಣ್ಣಿಸುವನೆವದಲ್ಲ ॥ ರಂಜನೆಯ ಶಬ್ದಗಳ ಸವಿದುಂಡೆಯಲ್ಲ । ಎಂಜಲವನುಳಿದೆಮಗೆ ಕಿಂಚಿತ್ತು ಬಿಡಲಿಲ್ಲ ॥೨॥ ಕೃಪೆ ಮಾಡಿ ಕ್ಷಮಿಸುವದು ವಿಪುಲ ಭಕ್ತಿಗಳಿಂದ । ಜಪತಪದಿ ಕನ್ನಡದ ನಿಮ್ಮ ಭಾರತ ಮಲ್ಲ ॥ ಕೃಷ್ಣ ವತ್ಸಲ ಗದುಗು ವೀರನಾರಾಯಣನ । ಸಫಲ ಜ್ಞಾನವನೆಲ್ಲ ಗಳಿಸಿ ನಮಗೇನು ಕೊಡಲಿಲ್ಲ ॥೩॥

**೩೮ ರಾಗ**

ಕನಕಾ ನಿನ್ನ ಕೆಣಕಿ ತಿಣಕಲಾರೆನೋ । ಕ್ಷಣ ಕ್ಷಣಕೂ ತಿಣಕಿ ತಿಣಕಿದಣಕಲಾರೆನೋ । ಅಡಿಗಡಿಗೊಳೆದ ಮುಂಡಿಗೆಯನು ಒಡೆಯಲಾರೆನೋ ॥ ಒಡೆಯಲು ದುಡುಕಿ ದುಡುಕಿ ದಣಿದವನು ತಡಕೊಳ್ಳರೇನೋ । ಒಡೆಯ ದೇವನೆಂದಟ್ಟುವ ಶುನಕನ ಮುಟ್ಟಲಾರೆನೋ ॥೧॥ ಮುಡಿಯ ದೇವರೆಂದೊದಗಿಸಿ ದುಂಗನ ಬಳಿಗೆ ಸಾರೆನೊ

|| ಪಾತ್ರೆಯ ಒಳಮ್ಮೆ ಮಾತ್ರವ ತೊಳೆದುದು ತಿಳಿಯಲಾರೆನೋ || ಗೋತ್ರವ ಕೇಳಿ ಸುಸೂತ್ರದೊಳುತ್ತರ ಪಡೆಯಲಾರೆನೋ । ಅದಕ್ಕೂ ಇದಕ್ಕೂ ಯಾವದಕ್ಕೂ ನಾ ಕೆದಕಲಾರೆನೋ || ಗದುಗಿನ ವೀರನಾರಾಯಣನ ಮರೆಯಲಾರೆನೋ ||೨||

ಶ್ರೀ..... ಶ್ರೀ........ ಶ್ರೀ....... ಶ್ರೀ....... ಶ್ರೀ.......

### ೩೯ ರಾಗ-ಕಾಂಬೋದಿ ಝುಂಪೆ ತಾಳ

ಏನೆಂದು ಹರಿಯವರಿಸಿದೆಯೇ ಲಕುಮಿ ತಾಯೆ ||ಪ|| ಆನಂದಪ್ರದವೆಂದು ಭ್ರಮಿಸಿದೆಯೋ ಶ್ರೀಯೇ ||ಅ.ಪ|| ಮಕ್ಕಳನು ಹೆರುವ ಮನದಭಿಲಾಷೆಯಿಂದೇನೆ । ಹೊಕ್ಕಳಲಿ ಬೊಮ್ಮನನು ಹಡೆದು ಕುಳಿತನು ತಾನೆ । ರಕ್ಕಸರ ಕಂಡೊಡನೆ ಹೆಣ್ಣಾಗಿ ನಿಲ್ಲುವನೆ || ಅಕ್ಕ ಇಂಥವರೊಡನೆ ಸರಸವೆಂತಾಡುವೆಯೇ ||೧|| ತಾನು ಸೇವೆಯ ಕೊಂಡು ಮಾನವನು ಪಡೆವನೆ । ದೀನ ನಂದಿನಿ ಭಕ್ತ ಜನ ಸೇವೆಗೆಳವನೆ || ಆನೆ ಕರೆದೊಡೆ ನಿನ್ನ ಬಿಟ್ಟೋಡಲಿಲ್ಲವೆ ಜ್ಞಾನಿಗಿಂತ ನೀ ನಮಗೆ ಹೆಚ್ಚಿನವಳೇನು ||೨|| ಮುದಿ ಋಷಿಯ ಕರೆಯುತಂದು ಎದೆಗೆ ಒದೆಸಿದವನ ಬಂದೊಡನೆ ಬಹುರೂಪಧಾರಕನೆ || ಮದುವೆಯಾದರೂ ತನ್ನ ಗುಟ್ಟನ್ನು ಕೊಡುವವನ || ಗದುಗಿನೊಡೆಯ ಶ್ರೀ ವೀರ ನಾರಾಯಣ ||೩||

### ೪೦ ಕಾಂಬೋದಿ ಝುಂಪೆ ತಾಳ

ಎಂದು ಕಾಂಬುವೆ ನಿನ್ನ ಚರಣ ನಾರಾಯಣ । ತಂದು ತೋರಸಯ್ಯಾ ನಾಬಂದೆನು ಶರಣ ||ಪಲ್ಲಿ|| ಇಂದ್ರ ಸುರಮುನಿ ವಂದ್ಯ ಚರಣ । ನಂದಗುಣ ಸಂಪೂರ್ಣ ಒಂದೆ ಮನದೆ ಮಾಳ್ಪೆ ಸ್ಮರಣ । ಬಂದು ತೋರ್ಯೆ ನಿನ್ನ ಚರಣಾ ||ಅ. ಪ. || ಚಾರು ಲಕ್ಷ್ಮಿಯು ನಿತ್ಯ ಒತ್ತುವ ಚರಣ । ತೋರ ಗಂಗೆಗೆ ಜನ್ಮಕೊಟ್ಟಂಥ ಚರಣ ||(ದುಡುಕು) ಮೂರು ಲೋಕವ ಹಿಡಿದ ಚರಣ । ನಾರಿ ಅಹಲ್ಯೆಯ ಪೊರೆದ ಚರಣ || ಮಾರುತಿಯು ಸೇವಿಸಿದ ಚರಣ ಕ್ರೂರ ಕಾಲಿಯ ತುಳಿದ ಚರಣ ||೧|| ಪ್ರಳಯ ಕಾಲದಿ ನೆಕ್ಕುತಿಹ ಚಿಕ್ಕ ಚರಣ || ಇಳೆಗೆ ಸುಯೋಧನನ ನಿಳಿಸಿದ ಚರಣ । (ದುಡುಕು) ಎಳೆಯ ಧ್ರುವ ತಾಕಂಡ ಚರಣ । ತುಳಸಿವನದ ಕುಣಿದ ಚರಣ । ಸುಳಿದು ಭಕ್ತರ ಪೊರೆವ ಚರಣ ||೨|| ಅಖಿಲಾಂಡದ ಸ್ಥಿತಿಲಯ ಕಾರಣ । ಭಕುತರು ಕರೆಯ ಲೋಡುವ ದಿವ್ಯ ಚರಣ । ಯುಕುತಿ ಶಕುತಿಗೆ ಬರದ ಚರಣಾ || ಮುಕುತಿ ಪಥವನು ತೋರ್ಪ ಚರಣ || ಪ್ರವಿರ ಗದುಗಿನ ವೀರನಾರಾಯಣ ||೩||

### ೪೧ ರಾಗ : ಕೇದಾರ ಗೌಳ (ಇಟ್ಟಾಂಗ ಇರುವೆನೋ) ಆಟ-ತಾಳ

ಇಟ್ಟಂತೆ ಇರುವೆನೋ ಹರಿಯೆ ।ನೀನು। ಕೊಟ್ಟಿದ್ದನುಣ್ಣುವೆ ಮತ್ತೇನು ದೊರೆಯೆ ॥ಪಲ್ಲ॥ ಪಟ್ಟೆ ಪಿತಾಂಬರ ಕೊಟ್ಟರೆ ಉಡುವೆನು । ಬಟ್ಟೆಯಿಲ್ಲದೆ ಚಿಂದಿ ತೊಟ್ಟು ನಾನಿರುವೆನು ॥ ಮೃಷ್ಟಾನ್ನ ಭೋಜನ ವಿತ್ತರೆ ಉಣ್ಣುವೆ ॥ ಉಪ್ಪವ ನಿತ್ತರೆ ತುಪ್ಪಿಲಿ ತಿನ್ನುವೆ ॥೧॥ ಹಾಸಿಗೆ ಕೊಟ್ಟರೆ ಹಾಗೆನಾ ಮಲುಗುವೆ । ಭೂಶಯನ ವಿತ್ತರೆ ಅಲ್ಲಿಯೇ ಒರಗುವೆ ಆ ಶ್ಯಾಲು ಕೊಟ್ಟರೆ ಹೊದೆಯುವೆ ಬಿಡದೆ । ಆಕಾಶವ ಹೊದೆಯಂದರೆ, ಹೊದೆಯುವೆ ಬರಿದೆ ॥೨॥ ನೀ ಕೊಟ್ಟರುಂಟು । ಕೊಡದಿದ್ದರೇನುಂಟು । ಬೇಕು ಬೇಡಗಳು ನಿನ್ನಿಚ್ಛೆಯಾಧೀನ ॥ ಲೋಕೇಶ ಗದುಗಿನ ವೀರನಾರಾಯಣ । ಸಾಕು ಬಿಡಿಸಯ್ಯ ನರಜನ್ಮದ ಗಂಟು ॥೩॥

### ೪೨ ರಾಗ : ಖಮಾಜ ರೂಪಕ ತಾಳ

ಕಾಲಬೆರಳು ಬಾಯೊಳೇತಕೊ । ರಂಗಯ್ಯ ನಿನ್ನ ॥ಪ॥ ಸಾಲದಾಯ್ತೆ ಭಕ್ತರಿತ್ತ ॥ (ದುಡುಕು) ಕಾಲೋಚಿತ ಶಾಲ್ಯನ್ನವು ॥ ಹಾಲೋಗರ ಭಕ್ಷ್ಯಂಗಳು ॥ಪಲ್ಲ॥ ಆಲದೆಲೆಯ ಮೇಲೆ ಮಲಗಿರೆ । ಚಲುವ ನಿನ್ನ । ಕಾಲು ಚಾಚಲನವು ಇಲ್ಲವೆ । ಬಾಲ ನಿನ್ನ ನಾಭಿ ಕಮಲ ॥ (ದುಡುಕು) ಕಾಲವಾದಲ್ಲಿ ಗಂಗೆ ಜಲವ ಬಿಡುತಲಿರುವೆ ಏನು ॥೧॥ ಹಸಿವೆ ಬಹಳವಾಗಿರುವದೆ ನಿನ್ನಮ್ಮ । ಆ ಯಶೋದೆ ನಿನ್ನ ಮೊಲೆ ಉಣಿಸಳೇ ನಿಶಾಚರಿ ಪುತನಿಯು ಮೊಲೆಯ ॥ (ದುಡುಕು ) ವಿಷವನುಂಡಕಾರಣದಲಿ ನೀರಡಿಸುತಲಿರುವೆ ಏನು ॥೨॥ ಪದದಿಂದಲಿ ಬರುವಗಂಗೆಯ । ಉದಕದಿಂದ । ಉದರಳಿಹ ಜೀವರಾಶಿಯ । ಮುದದಿಂದುದ್ಧರಿಸಲೆಂದು ॥ (ದುಡುಕು) ಪದುಮಾಸನೆ ಜುರು ಜುರು ನೀ ಚೀಪುತಲಿರುವೆ ಏನು ಹೇಳು ॥೩॥ ಹಸುಳೆ ನಿನ್ನ ಪದ ಧೂಳಿಡುತಿಹ । ಭಕ್ತರ ಭಕ್ತಿರಸವ ಸವೆದು ನೋಡತಲಿರುವೆಯಾ ॥ ಹೆಸರನೆತ್ತ ಗದುಗಿನ (ದುಡುಕು) ವೀರನಾರಾಯಣನೆ ದಯವ ತೋರಿ ಹೇಳು ಬೇಡುತಿಹೆನು ॥

### ೪೩. ರಾಗ-ಕಾನಡಿ ರೂಪಕ ತಾಳ

ಏನು ಮಾಡಿದೆ ಮೂಢ ಮನುಜಾ । ಮಾನವ ಜನುಮದಿ । ಬಂದೀ ಜಗದಿ ॥ಪ॥ ದೇಶದ ಸೇವೆಗೆ ತನು ನೀಡಿದೆಯಾ । ಭಾಷೆಯ ಏಳ್ಗೆಗೆ ಮನ ಮಾಡಿದೆಯಾ ॥ ಕಾಸಿಗಾಗಿ ವಂಚನೆ ನಿನ್ನೊಡಲಿನ । ಪೋಷಣೆಗಾಗಿ ದುಡಿದೆಯಲ್ಲದೆ ॥೧॥ ಆರ್ತರ ದುಃಖವ ನೀಡಾಡಿದೆಯಾ ಸ್ವಾರ್ಥದ ಹಂಬಲ ಬಿಟ್ಟು ನಡೆದೆಯಾ ಪೂರ್ತಿಯಾಗಿ ಜನ ಹಿತ

ನೋಡಿದೆಯಾ ಧೂರ್ತ ತನವ ಬರಿದೆ ತೋರಿದೆಯಲ್ಲದೆ ॥೨॥ ಮದ ಮತ್ಸರಗಳ ನೆಲಕೆ ಬಡೆದೆಯಾ । ಹೃದಯವ ನಿರ್ಮಲಗೊಳಿಸಿ ನುಡಿದೆಯಾ ಮುದದಿ ಗದುಗಿನ ವೀರನಾರಾಯಣನ ಪದವನೊಮ್ಮೆಯಾದರು ಸ್ಮರಿಸಿದೆಯಾ ॥೩॥

### ೪೪ ರಾಗ - ಮುಖಾರಿ ತ್ರಿಪುಟ ತಾಳ

ಯಾವಲ್ಲ ಅಡಗಿರುವಿ । ಕೃಷ್ಣಯ್ಯ ನೀ । ಯಾವಲ್ಲಿ ಅಡಗಿರುವಿ ॥ ಪ॥ ಯಾವಲ್ಲಿಅಡಗಿರುವಿ ಯಾವಲ್ಲಿ ಹುಡುಕಲಿ । ಭಾವದ ಮೂಲೆಯ ಠಾವನು ಬಿಟ್ಟು ನೀ ॥ ಅ. ಪ.॥ ಕಣ್ಣು ಮುಚ್ಚಾಲೆಯಾಟ । ಬೇಡಯ್ಯ ಈ ಬಣ್ಣದ ನುಡಿಯ ಬೇಟಾ ॥ ಕಣ್ಣು ಮುಚ್ಚಲು ಕೊಟ್ಟೆ । ಟಣ್ಣಾನೆ ಜಿಗಿದೋಟ ಅಣ್ಣ ಹುಡುಕಿ ಹುಡುಕಿ ಹಣ್ಣಾಗಿ ಹೋದನೋ ॥ ೧॥

ಎಲ್ಲೆಲ್ಲೂ ತುಂಬಿರುವೆ । ಹುಡುಕಲು ನೀ । ನೆಲ್ಲೆಲ್ಲು ಸಿಗದಿರುವೆ ॥ ಕ್ಷುಲ್ಲಕನೆನ್ನನು । ಚಲ್ಲದೆನೆನ್ನದಿರು । ಚಲ್ವ ರೂಪದಿ ಬಂದು । ನಿಲ್ಲುದನು ಬಿಟ್ಟು ॥೨॥ ಕಡುಕಷ್ಟ ಹುಡುಕುವದು । ಮನವಿದು ನಿನ್ನ । ಹಿಡಿಯಲು ದುಡುಕುವದು । ಹಿಡಿದು ಹಿಡಿದು ತಂದು ಒಡಲಲ್ಲಿಡಲು ಮತ್ತೆ । ಒಡನೆ ನುಸುಳಿಕೊಂಡು । ಬಿಡದಲೋಡೋಡಿ ॥ ೩॥ ಇದೀಗ ಕರೆತಂದು ನೆನೆಯಲು ನಿನ್ನ । ಸದಾವಕಾಲಕೆಂದು ॥ ಹೃದಯದ ಗವಿಯೊಳು । ಮುದದಿ ಕೂಡಿಸಿ ಮೇಲೆ । ಬದಿಗೆ ಕಾವಲ್ಗಿಟ್ಟು ಮನವ ನೊಡದೆ ನೀ ॥ ೪॥ ಬದರಿ-ಕಾಶಿ ಕಂಚಿಯೋ । ನೀನಿರುವದು ಪಂಢರಪುರವೋ ॥ ಪದುಮಾವತಿಯ ಗಿರಿಯೋ । ಉಡುಪಿ ದ್ವಾರಕೆಯೋ । ಗದುಗೋ ಗದುಗೋ ನೀ ಹೇಳಯ್ಯ ವೀರನಾರಾಯಣ ॥೫॥

### ೪೫ ರಾಗ - ಕಾಫಿ ತ್ರಿಪುಟ ತಾಳ

ಎಲ್ಲೆಲ್ಲಿ ಆಡಿ ಬಂದೇ । ಕೃಷ್ಣಯ್ಯ ನೀ ॥ಪ॥ ಎಲ್ಲೆಲ್ಲಾಡಿ ಬಂದಿ ಎಲ್ಲೀ ದೂರನು ತಂದಿ । ಒಲ್ಲೆ ನಿನ್ನ ನಡತೆ । ಸಲ್ಲದೆಂಬರು ಮಂದಿ ॥ ಅ. ಪ. ॥ ಪೆದ್ದಕಾಳಿಯೆ ಬಂದಿದ್ದ ತನ್ನ । ನೊದ್ದ ಸುದ್ದಿಯ ತಂದಿದ್ದ ॥ ಸದ್ದು ಮಾಡದೇ ಪೋಗಿ । ಮುದ್ದೆ ಬೆಣ್ಣೆ ಹಾಲಾ ಮೆದ್ದದ್ದು ಗೊಲ್ಲತೇರು ತಿದ್ದಿ ಹೇಳುವರಲ್ಲೊ ॥೧॥ ರಾಗನೀ ಕರೆದೊಡನೇ । ಎದಿಯೊಳು ಹೋಗಿ ನೀ ನಿಂತೆಯಂತೆ । ಬೇಗನೇ ರಕ್ಕಿಸಿ । ತ್ಯಾಗ ಮಾಡಿಯಂತೆ । ಯೋಗಿ ಜನರು ಬಂದು ಕೂಗಿ ಹೇಳುವರಲ್ಲೊ ॥೨॥ ಹೇಯ ರಕ್ಕಸರ ಪ್ರಾಣ । ಕೊಳ್ಳುವಿಯಂತೆ । ನ್ಯಾಯವಿದೆಯೇನೋ ಜಾಣ ॥ ರಾಯನೇ ಗದುಗಿನ ವೀರನಾರಾಯಣ । ಕೈಯಲಿ ಶಂಖಚಕ್ರಾಯುಧ ಹಿಡಿದುಕೊಂಡು ॥೩॥

### ೪೬ ರಾಗ -ಧನಶ್ರೀ ಆಟತಾಳ

ಬಗರಿ ಆಡೋ ತಮ್ಮ ಬಗರಿ ಆಡೊ ॥ ಬಗೆ ಬಗೆಯ ಜನುಮದಿ ತಿರುಗಿ ಬಂದೊಗತನದನುಭವ ಪರಿಕಿಸಿ ನೋಡೋ ॥ ಅ. ಪ.॥ ತನುವೆಂಬುದೇ ಕೊರಡಿನ ತುಂಡು ದಿನದ ಕರ್ಮವೇ ಕೊನೇರು ದುಂಡು ಮನವೆಂಬುವ ಮೊಳೆಯನು ಚುಚ್ಚಿಕೊಂಡು ಘನಹರುಷದಿ ಕರದಲಿ ಕೈಕೊಂಡು ॥೧॥

ಭವವೆಂಬುದೇ ನಿನ್ನ ಚಾಳಿಗೆ ನೋಡೋ ॥ ತವಕದಿ ಬಿಡದಲೇ ಸುತ್ತಾಡೂ ॥ ಸವಿಯನುಂಡು ನೀ ಹರಿಯನು ಬೇಡೋ । ಜವೆದಲ್ಲಿ ಝಾಡಿಸಿ ಭರದಿ ಬೀಸಾಡೋ ॥೨॥ ಧರೆಯ ಗದುಗಿನ ವೀರನಾರಾಯಣನೇ । ಚರಣದಿ ಮೊಳೆಯೂರಿ ತಿರುಗತಲಾಡೊ । ಕರಣಗಳೆಳೆದು ಏಕ ಚಿತ್ತದಿ । ಸ್ಮರಿಸುತ ನಿಂತು ನಿದ್ದೆಯಾಡೂ ॥೩॥

### ೪೭ ರಾಗ-ಬಿಹಾಗ ತಾಳ-ಆದಿ

ಕಮಲ ಭವನ ಪ್ರಿಯರಾಣಿ ॥ಪ ॥ ವಿಮಲ ಮತಿಯೇ ನೀ ಕರುಣಿಸು ಜಾಣೆ ॥ಅ. ಪ. ॥ ಅಂತರಂಗದ ತಂತಿಯ ಮಿಡಿಸೌಗಿಂತು ಜಿಹ್ವೆಯಿಂ ಹರಿ ಗುಣ ನುಡಿಸೌ ॥ ಕಂತು ಜನಕನಿಂದ ಯುವನು ಕಾಡಿಸೌ । ಸಂತತ ಶಾರದೆ ವೀಣಾಪಾಣಿ ॥೧ ॥ ವಿವಿಧ ಭಾಷೆಗಳೊಡತಿಯಾಗಿ ಬಲು । ವಿವಿಧ ಬಣ್ಣಗಳ ಕಣ್ಗಳ ಹೊಳೆಯಲು ॥ ಪವಣಿನ ಗರಿಗಳ ಪಸರಿಸಿ ಕುಣಿಯಲು । ನವಿಲುನೇರುವ ಘನ್ನದ ವೇಣಿ ॥೨॥ ಪ್ರೇರಿಸರ್ಥಗರ್ಭದ ನುಡಿಗಳನು । ತೋರಿಸಿ ಪದ್ಯವ ರಚಿಪ ರೀತಿಯನು । ಚಾರು ಚರಣಗಳಿಗೆರುಗುವೆ ಗದುಗಿನ । ವೀರನಾರಾಯಣನ ಸೊಸೆಯೆ ಸುವಾಣಿ ॥೩॥

### ೪೮ ರಾಗ-ಮುಖಾರಿ ತಾಳ-ತ್ರಿಪುಟ

ಚಂದ್ರಲಾ ಪರಮೇಶ್ವರಿ । ವಂದಿಸುವೆನು । ಚಂದ್ರಲಾ ಪರಮೇಶ್ವರಿ ॥ಪ॥ ಚಂದಾಗಿ ಮನಸಿಗಾನಂದ ನೀಡುವ ನಿನ್ನ । ಮುಂದೆ ಕಂದ ತಾಬಂದು ನಿಂತಿಹನವ್ವ ॥ ಅ. ಪ. ॥ ಘನ ದಯಾವಂತೆ ಕಾಯೆ ಇದು ನಿನ್ನ ಅನುಗ್ರಹವೆಂಬೆ ತಾಯೇ ಕನಸಿನೊಳಿರಲಿಲ್ಲ ಮನಸಿನೊಳಿರಲಿಲ್ಲ । ಜನನಿ ನೀನೇ ಕರಿಸಿ ದರುಶನವಿತ್ತೆವ್ವ ॥೧॥ ಸನಿತೆಯೊಳ್ಬಂದು ನಿಂತು । ದಯಾಮೃತವ । ಹನಿಸುವಿ ಜನರಿಗಿಂತು । ಜನರ ಪಾವನಮಾಡಿ ಘನ ಸಂತಸ ನೀಡಿ । ಅನುದಿನ ಜನ ಪಾಡಿ ಕುಣಿವಂತೆ ಕೃಪೆ ಮಾಡೆ ॥೨॥ ಸದಯಾ

ಮೂರ್ತಿಯು ನೀ ಸತ್ಯ ನಿನ್ನಯ ಪಾದ । ಪದುಮಕೆ ಮಣಿಯುವೆ ನಿತ್ಯ । ಗದುಗಿನ ವೀರ ನಾರಾಯಣನೆನ್ನಯ ॥ ಹೃದಯದಿ ಸತತ ನಿಲುವಂತೆ ಕರುಣಿಸೌ ॥೨॥

### ೪೯ ಶ್ರೀ ಯಲಗೂರ ಮಾರುತಿಯ ಬಗ್ಗೆ

### ರಾಗ-ತೋಡಿ (ಹಿಂದುಸ್ತಾನಿ ಭೈರವಿ) ರೂಪಕ (ದಾದರ)

ಪ್ರಾಣದೇವಾ ಕಾವುದೆಮ್ಮ॥ ಜೀಮೋತ್ತಮ ॥ಪ॥ಜಾಣರೊಳು ಜಾಣ ನೀನು ।ತ್ರಾಣಕರೊಳು ಸೂತ್ರಾಣ।ಕಾಣೆ ನಿನಗೆ ಸರಿ ಸಮಾನ। ಕ್ಷೋಣಿಯಲಿ ಹನುಮಾನ॥೧॥ ಎಲ್ಲ ಗುರುಗಳಿಂಗೆ ಜಗದಿ ।ಬಲ್ಲಿದ ಗುರುವು ನೀನಾದೆ। ಎಲ್ಲರನ್ನುದ್ಧರಿಪ ಮನದಿ। ಯಲಗುರೇಶನಾಗಿ ಬಂದು ॥೨॥ ಸ್ಮರಿಪೆ ನಿನ್ನನು ಪುರಗಳೊಡೆಯ। ಕರುಣಿಸಯ್ಯ ಮುಗಿವೇ। ಕೈಯ್ಯ॥ ಸಿರಿ ಗದುಗಿನ ವೀರ ನಾರಾಯಣನ ದೂತರೊಳಗೆ ಪ್ರಿಯ॥೩॥

### ೫೦ ರಾಗ- ಮಧ್ಯಮಾವತಿ ತಾಳ ರೂಪಕ

ಎಷ್ಟು ಭಜಿಸಲೊ ಸಾಕಷ್ಟು ನನಗಾಗದೊ ॥ಪ॥ ಕೃಷ್ಣಮೂರ್ತಿಯೇ ಎಷ್ಟು ಭಜಿಸಲೊ ಸಾಕಷ್ಟು ತುಷ್ಟಿ ನೀಡಿದರೂ ॥ಅ. ಪ.॥ ಅಂಗಜವೇತ ಮೋಹನಾಂಗ॥ ಚೆಂಗೊಳಲು ನುಡಿಸುತ್ತಿರುವ।ಭಂಗಿಯಲಿ ನಿನ್ನ ರೂಪ। ಕಲೆಗಳಿಂದ ಸೋಡಿ ನೋಡುತ ॥೧॥ ಪೂರ್ಣ ಗುಣ ನಿರ್ದೋಷನೇ ಸುವರ್ಣ ಗರ್ಭ ನಿನ್ನ ರೀತಿ। ವರ್ಣಸುತಿಹ ಕೀರ್ತನೆಯ। ಕರ್ಣದಿಂದ ಕೇಳಿ ಕೇಳುತ॥೨॥ ಅಪ್ಪ ನಿತ್ಯ ಮುದವ। ತುಪ್ಪುವ ನಿನ್ನ ನಾಮ ಸುಧೆಯ॥ ೨॥ಚಪ್ಪರಿಸುವ ನಾಲಿಗೆಯಲಿ।ಒಪ್ಪಿ ಸವಿದು ಸವಿಯುತಿರಲು ॥೩॥ ಅನುಪಮ ನಿನ್ನ ತನುವಿನಿಂದ ಘುಮಿಘುಮಿತು ಬರುವ ಗಂಧ।ಅಮಿತ ಮುದವ ಮೂಗಿಗಿಡಲು। ರಮಿಸಿ ಮೂಸಿ ನೋಡುತಿರಲು ॥೪। ದೇವತರ ನಿನ್ನಡಿಯಲ್ಲಿ ।ಸೇವೆಗೊಳ್ಳು ನಿರುತದಲಿ। ಕಾವುದಯ್ಯ ಶ್ರೀ ಗದುಗಿನ ವೀರನಾರಾಯಣ॥೫॥

### ೫೧ ರಾಗ-ಮಧ್ಯಮಾವತಿ ತಾಳ ರೂಪಕ

ಪಾದಂಗಳ ತೋರಿಸೋ।ನಾರಾಯಣ ॥ಪ॥ ಸಾದರ ಭಕುತಿಯ ನಿನ್ನಲ್ಲಿ ಇರಿಸೋ। ಮೋದದಿ ಭಜಿಪಂತೆ ನನ್ನ ಪ್ರೇರಪಿಸೋ ॥ಅ.ಪ. ॥ನಾಗಾರ್ಜುನನು ನೀಗಲು ಭುವಿಯೊಳು।ವೇಗದಿಂ ಬಂದ ವೀರನಾರಾಯಣ ॥೧॥ಮೈಯೊಳು ಕವಚವು ಶಿರದಿ

ಕಿರೀಟವು ।ಕೈಯೊಳು ಚಕ್ರಗದಾ ಶಂಖ ಧರಿಸಿ।ಕೊಯ್ಯನೆ ಗದುಗಿನೊಳಿಳಿದು ಆ ದೈತ್ಯನ। ಹೊಯ್ಯಲು ಬಂದ ಶ್ರೀ ವೀರ ನಾರಾಯಣ॥೨॥ ತೋರ ಕನ್ನಡದಲ್ಲಿ ವರ ಕವಿಯಾದ। ಕುಮಾರ ವ್ಯಾಸನಿಂದ ಭಾರತ ರಚಿಸಿದ॥ ಧೀರ ಪುರಂದರ ದಾಸರು ಕರೆದರು ಭಾರತಮಲ್ಲ ಶ್ರೀ ವೀರನಾರಾಯಣ॥೩॥

### ೫೨ ರಾಗ - ಉದಯ ತಾಳ ಆದಿ

ಸ್ಮರಿಸುವದು ರಘುನಂದನನ ॥ಪ॥ ನಿರುತದಿ ಬೆಳಗಿನೊಳೆದ್ದು ಭಕುತಿಯಲಿ ॥ಅ. ಪ.॥ ಜನಪತಿ ದಶರಥನುದರದಿ ಜನಿಸಿದ॥ ವನಿತೆಯಹಲ್ಯೆಯ ತಾನುದ್ದರಿಸಿದ॥ ಘನ ಶಂಕರನ ಧನು ಭಂಗಿಸಿದ ಜನಕ ಸುತೆಯ ವರಿಸಿದ ಶ್ರೀರಾಮನ ॥೧॥ ತಾಯಿ ಕೈಕೇಯಿ ಮಾತನಡೆಸಿದ। ನೋಯದೆ ಮನವನು ಸತಿ ಸಹ ಸೇರಿದ॥ ಮಾಯೆ ಮೃಗದಾಸೆಗೆ ಸತಿಯನು ಅಗಲಿದ। ರಾಯ ಲಕ್ಷ್ಮಣನಣ್ಣ ಶ್ರೀ ರಾಮನ ॥೨॥ ದಂಡಕದೊಳು ಸತಿಯನು ಶೋಧಿಸಿದ। ಚಂಡ ಹನುಮನಿಗೆ ತಾ ದೊರೆಯಾದ॥ ಪುಂಡ ಜಲಧಿಯ ದಾಟಿಸಿದ। ಹೆಂಡತಿಯ ಇರುವನು ತಿಳಿಸಿದ ಶ್ರೀ ರಾಮನ॥೩॥ ಜಲಧಿಗೆ ಸೇತುವೆ ನಿಂತು ಬಿಗಿಸಿದ। ಖಲ ರಾವಣನ ರಣದೊಳು ಕೆಡಹಿದ॥ ಒಲಿದು ವಿಭೀಷಣನನು, ಪೊರೆದ।ನೆಲದೊಳು ಸುಖ ಬೀರಿದ ಶ್ರೀರಾಮನ ॥೪॥ ಧರಮವ ನೆಲೆಸಲು ದುಷ್ಟರ ತರಿದ। ಧರೆಯೊಳು ಶಿಷ್ಟರ ಪೊರೆಯಲು ಬಯಸಿದ॥ಸಿರಿಪತಿ ಗದುಗಿನ ವೀರನಾರಾಯಣ ನರನಾಣ್ಯವ ತರಿಸಿದ ರಾಮನ ॥೫॥

### ೫೩ ರಾಗ (ಹಿಂದುಸ್ತಾನಿ) ಕಾಫಿ ತಾಳ- ರೂಪಕ

ಪಾಲಿಸು ಸೌಭಾಗ್ಯದ ಲಕ್ಷ್ಮೀದೇವಿ। ಮೇಲಾದ ಕರವೀರ ವಾಸಿನಿ ದೇವಿ ॥ಪ॥ಬಡಬಡಿಸಿ ಬಂದಿಹೆ ನಾ ನಿನ್ನೋಡಿ।ಕೊಡುವಿ ವರವನೆಂದು ಆಶೆಯ ಮಾಡಿ। ಬಿಡಬೇಡ ಕರುಣದಿ ನೋಡ। ಕೊಡು ನೀ ವರವನು ಸಿರಿಗಳ ನೀಡಿ॥೧ ॥ಬಡತನದ ಭೂತವ ಎದುರಿಸುವೆ ತಾಯೇ। ತಡೆಯಲಾರೆನು ಇನ್ನು ಕರುಣಿಸಿ ಕಾಯೆ। ಬಿಡದೆ ಭಜಿಪೆ ನಿನ್ನ।ಹೇ ಶುಭಕಾಯೇ।ಕೊಡು ವರವನು ಧನಗಳ ನೀಯೇ ॥೨॥ಇಡುವೆ ತಲೆಯ ನಿನ್ನ ಪದದಿ ಪನ್ನಗ ವೇಣಿ। ನುಡಿಯೆ ಹರಕೆಗಳ ಹೇ ಶುಭವಾಣಿ॥ ಒಡೆಯ ಗದುಗಿನ ವೀರ ನಾರಾಯಣ ಜಾಣೆ ।ಕೊಡು ನೀ ವರವನು ವಿಠಲನ ರಾಣಿ॥ ೩॥

೫೪ ರಾಗ- ಸಿಂಧಿ ಭೈರವಿ ತಾಳ -ರೂಪಕ

ಬಿಡಬೇಡೋ ರಂಗಾ ಬಿಡಬೇಡೋ। ಕಡು ಮೋಹಕದ ಕೊಳಲ ನೂದುವದನು ॥ಪ॥ ಬಿಡುವೆಯಾದರೆ ಮನ ಕಡು ತವಕದೊಳು ತಡವರಿಸುವುದೋ ತಡೆಯೆನು ನೋಡೊ ॥ಅ. ಪ. ॥ಕಿವಿಯೊಳು ನಾದವು ಅಮೃತವ ಸುರಿಯೆ। ಸವಿಯುಣ್ಣುತಲಿ ಮನ ಮೈಮರೆಯೆ ತಳಮಳಿಸುವದು ನಡುವೆ ನಿನಗಿದು ಸರಿಯೆ ಹೊರಗಿನ ಭಾವದ ಪವಣವನರಿಯೆ ॥೧॥ ಕೊಳಲನೂದುತಿರಲಾನಂದದೊಳು ಮುಳುಗಿರಲಾಗ, ಕಣ್ಣು ಮುಂದ । ಸುಳಿದಾಡುವ ನಿನ್ನ ಮೂರುತಿ ಚಂದ॥ ತೊಲಗಿ ಪೋಗುವದೋ ಗೋಪಿಯ ಕಂದ ॥೨॥ ಮಧುರವೋ ನಿನ್ನ ಕೊಳಲು ಗಾಯನ ।ಇದರೊಳು ಇಲ್ಲವೋ ಲವ ಅನುಮಾನ॥ಮೊದಲು ಮುರಳಿಯ ಹಿಡಿ ಹಿಡಿ ಜಾಣ ।ಗದುಗಿನ ವೀರನಾರಾಯಣ॥೩ ॥

೫೫ ರಾಗ ? ತಾಳ ?

ರಾಮಚಂದ್ರ ನೀ ದಯಮಾಡೋ। ಪ್ರೇಮದಿಂದಲಿ ಹರಕೆಯ ನೀಡೋ ॥ಪ॥ ನಿನ್ನ ಜನುಮದ ದಿನವಿದು ನೋಡೋ ।ಘನ ತರದ ಸಂತೋಷವ ನೀಡೋ ॥ಬನವನು ನೀನುತೀದಾಜೋ ಮನ್ನಿಸಿ ಎನ್ನುವನು ದಯದಿ ಕಾಪಾಡೋ॥ ೧॥ವನಿತೆ ಅಹಲ್ಯೆಯ ಶಾಪವ ಹರಿದೆ ।ದನುಜರ ಪಟಲದ ತಾಪವ ಹರಿದೆ ।ಮನುಜರೆಲ್ಲರ ಧರ್ಮದಿ ಪೊರೆದೆ।ಘನ ಸೌಖ್ಯವ ಭೋಗಿಸುವಂತರಿದೆ॥ ೨॥ ಕುಣಿಯುವದು ಮುದದಲಿ ಭಕ್ತರ ನಡುವಣ್ಣ ದಣಿಯದು ನೋಡೈ ಸೀತಾರಾಮಾ ।ಗುಣಿಸಿ ಸಂಬವಕೊಂಡು ಕರುಣಾ ಭರಣಾ॥ ಮಣಿವೆ ಗದುಗಿನ ವೀರನಾರಾಯಣ॥೩॥

೫೬ ರಾಗ ಮೋಹನ (ಭೂಪ) ತಾಳ -ಆದಿ

ಪರಮ ಮಂಗಳಧಾಮಾ। ಶ್ರೀ ರಾಮಾ ॥ಪ॥ ಕರುಣಾಮೃತಾ ಸಾಗರ ನಿಸ್ಸೀಮ ।ಚರಣಕೆರಗುವೆ ಸಾಸಿರ ನಾಮ ॥೧॥ ಶರಣಾಗತರನು ಕರವಿಡುವುದು ನೇಮಾ ॥ಶರಣು ಬಂದೆನಯ್ಯ ರಘುಕುಲ ಸೋಮಾ॥೨ ॥ ವಚನವ ಪಾಲಿಪ ಸುಚರಿತವೈ ನಿಮ್ಮ ಅಚಲ ಭಕ್ತಿ ಕೊಡು ಮೇಘಶ್ಯಾಮ॥ ೩॥ ಗದುಗಿನ ವೀರನಾರಾಯಣ ಪ್ರೇಮ।ವೊದಗಿಸಿ ಕಾಯೋ ವೀರ ಲಲಾಮಾ ॥೪॥

### ೫೭ ರಾಗ (ಹಿಂದುಸ್ತಾನಿ ) ತಾಳ-ಆದಿ

ಹರಲಿ ಮಾಡಿದರಲ್ಲೋ ನಿನ್ನ। ಮುರಲೀಧರ ಚೆನ್ನ ಕೃಷ್ಣ ಸಂಪನ್ನ।। ತುಂಟ ಕಾಮನು ಕೇವಲೆಂಟು ವರ್ಷ ಬಾಲ ।ಗಂಟದ್ದು ಹ್ಯಾಗೆ ಮದ ಒಗಟದ।ಗಂಟೊಡೆದ ಮುನ್ನ ।।೧।। ಜಾರನೆಂದು ಕಡುವೈರಿ ಶಿಶುಪಾಲನು ದೂರಲಿಲ್ಲೆಂಬುದನಾ ಹದನಾ। ಯಾರು ಅರಿಯದೆ ಘನಾ ।।೨।। ಪಾವನ ಪರಮಾತ್ಮಾ ಜೀವರಿಗಾಗುವ। ಭಾವದ ಮರ್ಮವನಾ।ತಾನರಿಯನಾ ಠೀವಿಯ ಕುಜನಾ ।।೩।। ಅತಿಶಯೋಕ್ತಿಯು ಮತ್ತು ಉತ ಪ್ರೇಕ್ಷಾಲಂಕಾರ ಮತಿಕೊಟ್ಟು ಕಾವ್ಯವನ್ ಅರ್ಥವನಾ ಮಥಿಸದೆ ಚೆನ್ನಾ ।।೪।। ಸದ್ಧರ್ಮವನು ಬೀರಿ ಉದ್ಧರಿಸಲು ಬಂದ। ಸಿದ್ಧ ಗದುಗಿನ ವೀರನಾರಾಯಣ ಪೊದ್ದುವ ನಯನಾ।।೫।।

### ೫೮ ರಾಗ- ಹಮೀರ ಕಲ್ಯಾಣ ತಾಳ- ಆದಿ

ಹುಡುಕುತಲಿಹೆನವನಾ। ಮಾಧವನಾ।ಹಿಡಿಯುತ ಭಕುತಿಯ ಸೊಡರನು ಕರದೊಳು ।।ಕಡುಗತ್ತಲೆಯೊಳು ಕಡೆಗಾಣದೆ ನಾ।।೧।।ಸಿದ್ಧ ವೇಗದೊಳು। ಕದ್ದಡಗಿರುವನ।ಬುದ್ಧಿಯ ತಳಗಡ। ನಿದ್ದಿ ಕದಡಿನಾ।।೨।।ಜಗವ ದುಂಬಿಹನೆಂದು ನಿಗಮವು ಸಾರಲು ।ಜಗದೊಳಗೆಲ್ಲಾ ಖಗವಾಹನನಾ।।೩।। ಜ್ಞಾನಿಗಳಿಗೆ ತಾ ಕಾಂಬನು ಎಂಬರು ಧೇನಿ ಸುತಲಿನಾ । ಮಾಧವನಾ।।೪।।ಎಲೆಯ ಮರೆಯಲಿ ಹುದುಗಿ ಮೆರೆವನಾ। ಗದುಗಿನ ವೀರನಾರಾಯಣನಾ ।।೫।।

### ೫೯ ರಾಗ- ರೇಗುಪ್ತಿ ಅಟ- ತಾಳ

ನಾಲಿಗೆ ಬರದಯ್ಯ ಶ್ರೀ ಗುರುವರ ರಾಯಾ ।।ಪಾಲಿಸೆನ್ನೊಳು ಪೂರ್ಣದಯ ।।ಪ।। ನಾಲಿಗೆ ಮತಿಗಳು ತಡೆದು ನಿಂತಿಹವಯ್ಯ।ಮೇಲು ನಿಮ್ಮಯ ನಾಮಾ ನಾ ಪೇಳೆಂದರೆ ।। ಅ. ಪ।।ಕಥೆಯ ಕಟ್ಟದೆ ನಾಟಕ ಪದ್ಯವ ರಚಿಸಿದೆನೆಂಬ ಹೆಮ್ಮೆಯೊಳಿದ್ದೆ। ಯತಿರಾಯ ನಿನ್ನ ಸಂಚರಿತವ ಕಥಿಸಲು ಗತಿಯ ಗಾಣದೆ ನಿಂತು ಬಾಯ್ಬಿಡುವೆ ಪೊರೆಯಯ್ಯ ।।೧।।ಬಡವನು ನುತಿಯೊಳು ಸಿರಿಯೊಳು ಸಹ ಎನ್ನ ಪರಿಪಾಟಲವನು ಕಳೆದು ಕಾಪಾಡೊ।। ಕಡಿದೆನ್ನ ಚಿತ್ತದ ದುಗುಡವ ಕಳೆಯೆಂದು! ಪಿಡಿದು ನಿನ್ನ ಪಾದ ತುತಿಸುವೆನೆಂದರೆ।।೨।।ಸ್ಮರಿಸುವೆ ಮನಸದೊಳು ನಿರುತದಿ ಯತಿವರ್‍ಯ ಶ್ರೀ

ರಾಘವೇಂದ್ರರಾಯಾ॥ಧರೆಯೊಳು ಪರಮ ದಾನಿಗಳ ಹಿರಿಯನೆಂದು ಅರಿತು ನಾ ಬಂದೆನೋ ಮೂಕ ನಾನಿರುವೆನೊ॥೩॥ಮನದೊಳಗಿರುತಿರ್ದ ಭಕುತಿ ಭಾವಗಳು ಎನಿತೆಂಬುದನು ನೀನೇ ನೋಡಿ ಮನಸಿನ ಭಷ್ಟವನಿತ್ತು ಕಾಯುವದಯ್ಯ ।ಮನದೊಳು ನೆನೆಯುವ ಹೊರಗಾಡಲಾರದೆ॥೪॥ ಕರುಣಾಳು ಗದುಗಿನ ವೀರನಾರಾಯಣ ಹರಸಿ ಕಳುಹಿಸಿದನೆಂದು ನಾನಿಲ್ಲಿ ಬಂದೆ। ವರ ನಿನ್ನ ಚರಣವು ದೊರೆಯೆ ನಾ ತುತಿಸಲು ಸರಿಯಾದ ನುಡಿಗಳನು ಕರುಣಿಸು॥೫॥

**೬೦ ರಾಗ ತಿಲಕ ಕಾಮೋದ ಆದಿತಾಳ**

ಧನ್ಯ ಧನ್ಯನೋ ಶ್ರೀ ಗುರುರಾಯಾ ।ಧನ್ಯ ಶ್ರೀ ರಾಘವೇಂದ್ರ ಯತಿವರ್ಯ॥ಪ॥ವೀಣಾ ಪಾಣಿಯ ಆಣತಿಯಂತೆ ।ಮಾಣದೆ ಸನ್ಯಾಸವ ಗ್ರಹಿಸಿದಿ॥ವೇಣುಗೋಪಾಲನು ತಪದ ಕಾಣಿಕೆಗೆ ಕಾಣಿಸಿಕೊಂಡನೋ ಮಾರಾಯಾ॥೧॥ಆ ಸುಧೆಯ ಹೊತ್ತಿಗೆಯ ಪರಿಮಳ ವಾಸನೆಗೆ ಬೆರಗಾದ ಸುಧೀಂದ್ರರ ॥ಭಾಸುರ ಕರಕಮಲ ಸಂಜಾತನೆ।ಏಸು ಜನುಮದ ಸುಕೃತವೋ ಜೀಯಾ॥೨॥ಉನ್ನತ ಗದುಗಿನ ವೀರನಾರಾಯಣ।ಸನ್ನಿಧಿಯಲಿ ನರಸಿಂಹ ನೆದುರಲಿ॥ಸನ್ನಿಹಿತನು ನೀನಾಗಿ ಕುಳಿತಿಯೋ ಮನ್ನಿಸಿ ಸಲಿಸಲು ನಿನ್ನ ಭಕ್ತಿಯ॥ ೩॥

**೬೧ ರಾಗ ಜಲಹರಿ ತಾಳ ರೂಪಕ**

ಕಾಯೋ ತೋಯಜ ನೇತ್ರ ॥ಪ॥ಸುಮಿತ್ರ ಪವಿತ್ರ ಚರಿತ್ರ ॥ಅ.ಪ.॥ ಮಾನವ ಜನುಮದಿ ನೀನೇ ತಂದೆಯೋ ಎನ್ನ। ಗ್ಲಾನಿಯ ಕಳೆದು ಸುಜ್ಞಾನವನಿತ್ತು॥೧॥ಕಠಿಣ ಸಂಸಾರದ ಕಟು ಅನುಭವ ಸೈಸೆ। ಸಟೆಯಲ್ಲೊ ಇದು ಸರಿ। ಕಷ್ಟವ ಪರಿಹರಿಸಿ ॥೨॥ ಹೃದಯದಿ ನೆಲೆಸು ನೀ ಸದಾವಕಾಶದೊಳ್ ಗದುಗಿನೊಳ್ಮೆರೆಯುವ ವೀರನಾರಾಯಣ ॥೩॥

ಬಿಡದೆ ನಿಷ್ಫಲವಾಗಿ ।ಒಡವೆಯಲ್ಲದ ಬರಿಯ ಒಡೆತನಕೆ ಅಡಿಮಾಡಿ ।।ಮಡದಿ ಮಕ್ಕಳ ಬಿರುಸು ನುಡಿಗೇಳಿ ಮನನೊಂದು ಸುಡುಬಾಳ್ವೆ ಇದನೆಂದು ಮಿಡುಕುವೆಂದದಿಗೈದಿ ।।೨।। ನಂಬಿದವರನು ಹರಿಯು ಬೆಂಬಿಡನು ಎಂದೆಂದು।ಎಂಬ ಬಿರುದನು ತೊರೆದು ಇಂಬುಗೊಡದಿರಲಿಕ್ಕೆ ।।ಅಂಬುಜಾಕ್ಷನೆ ನಿನಗೆ ಸಂಬಂಧವಿರದೇನು ಹಂಬಲಿಪ ದುಸ್ಥಿತಿಗೆ ತುಂಬಿ ತಂದಿಡಲಿಕ್ಕೆ ।।೩।।ಅಣುಗರಿಗೆ ಉಣಲಿಕೆ ಹಣನೆತ್ತ ಗಳಿಸಲಿ ಫಣಿ ಶಯನ ನನಗಿನ್ನು ಗುಣವೆತ್ತ ತೋರಿಸಲಿ।।ಮಣಿಗಳನು ಎಣಿಸುತ್ತ ಪ್ರಣವೆತ್ತ ಧೇನಿಸಲಿ।।ಹಣಿವ ಭವದೊಳು ಸಿಲುಕಿ ಕ್ಷಣವು ಸಹ ನಗದಂತಾಯ್ತು।।೪ ।।ಬಾಳಿನೊಳು ಸೌಖ್ಯವೇ ಆಳು ಆಶ್ವರ್ಯವೇ ತೋಳಿನೊಳು ದಾರ್ಢ್ಯವೇ ಚಿತ್ತದೊಳು ಸ್ಥೈರ್ಯವೇ ಏಳಿಗೆಯ ಕೀರ್ತಿಯೇ ಒಳ್ಳೆ ನೀತಿ ಧೈರ್ಯವೆ ಹೇಳು ಗದುಗಿನ ವೀರನಾರಯಣನೆ ಮಣಿವೆ।।೫।।

**೬೩ ರಾಗ ಕೇದಾರ ಗೌಳ ತಾಳ ರೂಪಕ**

ಕೊಳಲನೂದೆಲೊ ಕೃಷ್ಣ ಕೊಳನೂದೆಲೊ ।।ಪ।।ಕೊಳಲನೂದು ಮನದ ದುಗುಡ ।ಕಳೆದು ಮತ್ತೆ ಮನಕೆ ಪ್ರಶಾಂತಿ ।ತಳೆಯುವಂತೆ ನಿತ್ಯ ಮಂಜುಳದ ಸ್ವರಗಳನ್ನು ತೆಗೆದು ।।ಅ. ಪ।।ಧರಿಸಿ ಕೈಯಲೀ ಕೊಳವೆಯಿರಿಸಿ ಬಾಯಲಿ।।ಭರದಿ ಉಸಿರ ತುಂಬಿ ನಳಿನ ಬೆರುಳುಗಳ ತೂತುಮಟ್ಟ।ತೆರೆದು ಸವಿಯ ನಾದದಲ್ಲಿ। ನಿಸಾರ ನಿಧಪ ಮಪನಿ ಎಂದು ।।೧।।ಇಲ್ಲಿ ಪೀಠದಿ ಎದ್ದು ನಿಲ್ಲು ಥಾಟದಿ।।ಮಲ್ಲಿಗೆ ವನಮಾಲೆ ಕೊರಳೊಳಾಡುತಲಿರಲು ರೂಪದಲ್ಲಿ ಮನ ವಿದ್ಯೈಕ್ಯವಾಗಿ।ತಲ್ಲೀನರಾಗುವಂತೆ ಕೃಷ್ಣ।।೨।।ಎದ್ದು ಮಾಟದಿ।ನಿಂತು।ಮುದ್ದು ನೋಟದಿ।ಬಿದ್ದವರನು ನೋಡಿ ನಮಗೆ।ಶುದ್ಧ ಬುದ್ಧಿ ಕೊಟ್ಟು ನಮ್ಮ।ನುದ್ಧರಿಸುವುದು ಗದುಗಿನ ಪ್ರಸಿದ್ಧ ವೀರನಾರಾಯಣ ।।೩।।

**೬೪ ರಾಗ ಕಾಫಿ ತಾಳ ಅಟ್ಟ**

ಮನೆಗೆ ಬಾರೋ ಕೃಷ್ಣ।ಬೇಗನೇ।। ಪ।।ವನಿತೆಯರೋಡಿ ಬರುತಿಹರು ।।ಅ.ಪ.।। ಕೊಳಲಿನ ಧ್ವನಿಕೇಳಿ।ಹೆಂಗಳು ನಲಿದು ಮೋಹ ತಾಳಿ।।ಸುಳಿದು ನಿನ್ನ ನೆತ್ತಿಕೊಳುತಲೋವರು।ಗಲ್ಲವ ಚುಂಬಿಸಿ ಸುಗ್ಗು ಮಾಡಿವರೊ।।೧।।ಬೆಣ್ಣೆಯಾಸೆ ನೀಡಿ।ಕರವರೋ।।ಕಣ್ಣು ತಪ್ಪಿಸ್ಯಾಡಿ।। ನಿನ್ನ ನಲ್ಲೆಯಾಡಿ। ಹಣ್ಣು ಮಾಡುವರು ಗಾಸಿ ಮಾಡಿ।।೨।।ಚೆನ್ನಿಗ ಹೇಳುವೆನು ಎಂದಿಗೂ।ನಿನ್ನನು ಬಿಟ್ಟಿರೆನು।ಉನ್ನತ ಗದುಗಿನ ವೀರನಾರಾಯಣ। ಚೆನ್ನಾಗಿ ದೃಢ ಹೆಜ್ಜೆನಿಕ್ಕುತ।।೩ ।।

**೬೫ ರಾಗ ?        ರೂಪಕತಾಳ**

ಚಂಚಲಿಸಲು ಕೊಡದಿರು ನೀ।ನೆನ್ನ ಮನಕ್ಕೆ ಶ್ರೀ ಹರಿಯೆ॥ವಂಚಿಸುತಿಹುದೀ ಮನವು ಸ್ಥಿರಗೊಳಿಸಲರಿಯೇ ॥ಅ. ಪ. ॥ನಿನ್ನ ಪದದಿ ಮನವನಿರಿಸಿ।ಇನ್ನು ಭಜಿಸಬೇಕೆಂದರೆ।ಭಿನ್ನದೆಸೆಗೆ ಓಡಿವೋಡಿ, ಅನ್ಯವನ್ನೆ ಚಿಂತಿಸುವುದು॥೧ ॥ ಕಡಲ ಕಡೆಯುವಾಗ ಗಿರಿಯು।ನಡುಗದಂತೆ ಗಟ್ಟಿನಿಂತು।ಹಿಡಿದು ತೆರದೊಳೊಡಲ ಹೊಕ್ಕು ಜಡದು ಎನ್ನ ಮನದಿ ನಿತು।ಸದಾ ಭಜಿಸುವಂತೆ ಮಾಡೋ।ಗದುಗಿನ ವೀರನಾರಾಯಣ ॥೩ ॥

**೬೬ ರಾಗ-ಮುಖಾರಿ   ತಾಳ-ಝಂಪೆ**

ಶ್ರೀ ವೇಣುಗೋಪಾಲ ಕೃಷ್ಣಾ।ಕಾವುದ್ಯೆ ಪರಹರಿಸಿ ನೀನೆನ್ನ ಕೃಷ್ಣ ॥ಪ॥ಕಾವುದ್ಯೆ ಪರಿಹರಿಸಿ ನೀನೆನ್ನ ಕೃಷ್ಣ॥ ಪ॥ಶ್ರೀ ವ್ಯಾಸರಾಯಾನಿಂದಾರ್ಚಿತಾನಂದ ತರಣಾ।ದೇವಾದಿನುತ ಚರಣ ಗುಣಗಣಾ ಭರಣಾ ।ಅ.ಪ,॥ಭೂಮಿ ಆಕಾಶದಿ ಸಕಲವನು ವ್ಯಾಪಿಸಿದ, ಪ್ರೇಮದಿಂ ನಿನ್ನಂಶವನು ಪೂರ್ಣಗೊಳಿಸಿದ।ನೇಮದಿ ಜಾಂಬುವತಿ ಭಕುತಿಯಂ ಪೂಜಿಸಿದ। ಭೀಮರಥಿಯಿಂ ಬಂದು ಶ್ರೀ ವ್ಯಾಸ ರಾಯಗೊಲಿಗದ ॥೧॥ಅಚ್ಛೆಯದ ಪುರಂದರ, ಕಚ್ಚು ನೈವೇದ್ಯಕ್ಕೆ।ಮೆಚ್ಚಿನಲಿ ವ್ಯಾಸರನು ಅಚ್ಚರಿಯಗೊಳಿಸಿದ। ಹುಚ್ಚು ಕುರುಬನಿಗೆ ಜಗನ್ನಾಥ' ದಾಸರ ಜನುಮ।ದಿಚ್ಛೆಯನು ವ್ಯಾಸರಿಂ ಪೂರೈಸಿ ಮೆರೆಯುತಿಹ॥೨॥ಕನ್ನಡ ರಾಜ್ಯವೆಂದಿನಿಪ ವಿದ್ಯಾನಗರ।ದುನ್ನತಿ ಗೈದ ಯತಿವ್ಯಾಸರನು, ಪಟ್ಟದೊಳು।ಸನ್ನಿಹಿತ ಘನಕೃಷ್ಣ ನರಪತಿಗೆ ಬಂದಿದ್ದ।ಬನ್ನಕುಹಯೋಗವನು ಪರಿಹರಿಸಿ ಪಾಲಿಸಿದ॥೩॥ಪ್ರಾಣರಹಯತಿ ವ್ಯಾಸರಾಯಾದಿ ಹರಿದಾಸ ಜಾಣರನು ಕುಣಿಸಲಿಕೆ ನಾದವನು ಕೊಡಲೆಂದು ವೇಣುವನು ಊದುತ್ತೆ ಮೋದಿಸುವನೆಂಬಂತೆ ಕಾಣಿಸುವ ರೀತಿಯಲಿ ನರ್ತಿಸುತ ನಿಂತಿರುವ॥೪ ॥ವ್ಯಾಸರಂದದಿ ಧರ್ಮದುಪದೇಶ ಮಾಡುತ್ತೆ ದೇಶದೊಳು ಪಸರಿಸಲು ಲಕ್ಷ್ಮೀಶ ತೀರ್ಥರನು।ಶಾಸನವ ಗೈದು ಸನ್ಯಾಸಕ್ಕೆ ನೇಮಿಸಿದ ಶ್ರೀಶ ಗದುಗಿನ ವೀರನಾರಾಯಣನು ಎಂಬ ॥೫॥

**೬೭ ರಾಗ -ಸಾರಂಗ    ತಾಳ-ರೂಪಕ**

ಮೀಸಲಾಗಿ ನಿನ್ನದೊಂದು ಚಲ್ವ ರೂಪವನ್ನಿಡೋ॥ವಾಸುದೇವ ನಿನ್ನನಂತ ಬಿಪ ರೂಪಗಳಲಿ ಎನಗೆ ॥ಪ॥ಮಾನವ ಭಕುತ ಜನರು ಕರೆವಾಕ್ಷಣಕೆ ಓಡಿಬಂದು

ಮುಂದೆ।ಕುಣಿ ಕುಣಿದು ಹೋಗಿಬಂದು।ದಣಿದುಕೊಳುವ ಬದಲು॥೧॥ಎಷ್ಟು ನೋಡಿದರು ಎನಗೆ ತುಷ್ಟಿಯಿಲ್ಲವಯ್ಯಾ ಕೃಷ್ಣ॥ ಅಷ್ಟಷ್ಟಕ್ಕೆ ಹೋಗಿ ಬರುವ ಕಷ್ಟವೇಕೆ ದಯದಿ ಎನಗೆ॥೨॥ಮಾಡಿದಘವ ಕುಟ್ಟಿ ಹಣಿವ।ನೋಡಿ ನೋಡಿ ಪದಕೆ ಮಣಿವ॥ಹಾಡಿ ಹಾಡಿ ನಲಿದು ಕುಣಿವ।ನಾಡೆ ಕುಣಿದು ತುಂಬ ತಣಿವ॥ ೩॥ ಸಾವಿರಾರು ಭಕ್ತ ಜನರು।ದೇವ ನಿನಗೆ ಗೈವ ಎಂತು।ಪಾವನಾತ್ಮ ಗದುಗು ವೀರನಾರಾಯಣ ದಯವ ತೋರಿ॥೪॥

**೬೮. ರಾಗ ಖಮಾಜ ತಾಳ ರೂಪಕ**

ನಿನ್ನವನಲ್ಲವೇನೊ ಶ್ರೀ ಹರಿಯೆ ನಾ
ನಿನ್ನೊಳಗಿಲ್ಲವೇನೋ ॥ಪ॥

ನಿನ್ನವನಲ್ಲೆ ನೀ ಎನ್ನೊಳಗಿಲ್ಲವೆ।
ನಿನ್ನ ಭಕುತನೆಂದು ಮನ್ನಿಸಲೊಲ್ಲೆನೊ ॥ಅ. ಪ.॥

ಹೃದಯದೊಳೆಂಟುದಳ ಪದುಮವು
ಮುದದಿ ನೀನಿರುವ ಸ್ಥಳ
ಹದನವನರಿತು ನಾ ಸದಾವಕಾಲದಿ
ಸದಮಲ ಭಕುತಿಯನ್ನೊದಗಿಸಿ ಸೇವಿಪ ॥೧॥

ಎಂಬತ್ತು ನಾಲ್ಕು ಲಕ್ಷ ಜೀವನರಾಶಿ।
ಗಿಂಬಿತ್ತು ಕಾಯ್ವ ದಕ್ಷ
ಗೊಂಬೆಯ ಮಾಡುವ
ಬಿಂಬ ಮೂರುತಿ ನಿನ್ನ ನಂಬಿದ ನನ್ನನು
ತುಂಬ ಮರೆತೀಯೇನೊ॥೨॥

ಗದುಗಿನೊಳ್ ಮೆರೆವ ವೀರನಾರಾಯಣ।
ಪದವ ನಂಬಿದೆ ಪೂರಾ।
ವಿಧ ವಿಧ ಪರಕಿಸು।
ಬದುಕಿಸು ಮುಳಗಿಸು।
ಬೆದರಿಸು ಕರುಣಿಸು।
ಕದಲಲೊಲ್ಲೆನೊ ದೇವ॥೩॥

**೬೯ ರಾಗ-ಉದಯ ರಾಗ          ತಾಳ-ಝಂಪೆ**

ಏಳು ನಾರಾಯಣ ಏಳು ಲಕ್ಷ್ಮೀರಮಣ
ಏಳು ಬೆಳಗಾಯ್ತರಣ ಬೀರುತಿದೆ ಕಿರಣ ||ಪ||

ರಂಗ ಬರುತಿಹನೆಂದು ಮಂಗಳಾಂಗಿಯರೆಲ್ಲ|
ಅಂಗಳವ ಸಾರಿಸುತ ಮಂಗಳವ ಪಾಡುತ್ತ|
ರಂಗೋಲಿಯೊಳು ನಿನ್ನ ಚಿತ್ರವನು ರೇಖಿಸುತ|
ಶೃಂಗರಿಸುತಿಹರು ನೋಡೆದ್ದು ಬಾರೋ ||೧||

ಹಿಂಡಿ ನೊರೆ ಹಾಲ್ಗಳನು ಗಿಂಡಿಯೊಳು ತುಂಬಿಟ್ಟು|
ಕೊಂಡು ವದನವ ತೊಳೆಯೆ ಬಿಸಿ ನೀರು ತಂದಿಟ್ಟು|
ತಂಡ ತಂಡದಿ ಭಕುತ ಮಂಡಲಿಯು ಕಾದಿಹುದು|
ಹೆಂಡತಿಯನೊಡಗೂಡಿ ಉಂಡು ತಣಿಯಲು ಬಾರೋ||೨||

ಪಿಳ್ಳೆ ತುಂಬಿಗಳ್ಹಾಡೆ ಮಂಗಳಾರುತಿ ಮಾಡೆ|
ಬೆಳ್ಳಿ ಕಲಶಗಳೊಳಮೃತವನು ತುಂಬಿ|
ಬೆಳ್ಳನೆಯ ಹೂಗಳನು ಮಡಿ ತಳಿಗೆಯೊಳು ಹಿಡಿದು|
ಬಳ್ಳಿ ಮಲ್ಲಿಗೆ ತಾವು ಆತುರದಿ ನಿಂತಿಹವು ||೩||

ಚಿಕ್ಕೆಗಳು ಬಾಡುತಿವೆ ಚೊಕ್ಕೆಲರು ಬೀಸುತಿದೆ|
ಮಕ್ಕಳಾಡುತಿವೆ ಕಕ್ಕುಲತೆಯಿಂದ|
ಲೆಕ್ಕವಿಲ್ಲದ ಭಕುತರೊಕ್ಕೊರಲಿ ಕರೆಯುತಿರೆ|
ರಕ್ಷಿಸಲು ಅವರ ನೀ ತಕ್ಷಣದಿ ಬಾರೋ|| ೪||

ಸಾವಿರದ ಕಿವಿಯಂತೆ, ಸಾವಿರದ ತಲೆಯಂತೆ
ಸಾವಿರದ ಪಾದಗಳು ನಿನಗಂತೆ ಕೇಳೊ|
ಭಾವುಕರು ಕರ ಮುಗಿದು ಭಕುತಿಯಲಿ ಬೇಡುವರು
ಪಾಪ ಮಂಚವ ಬಿಟ್ಟು ಬೇಗೆದ್ದು ಬಾರೋ ||೫||

ಕಂಜದೆಲೆಯಲಿ ಬಿದ್ದ ಮಂಜುವನಿಗಳ ಮೇಲೆ।
ಕೆಂಜೆಡೆಯನಾಂಶುಗಳು ರಂಜಿಸಲು ದೀಪದೊಳು।
ಕಂಜನಾಭ ನೀರಾಂಜನವ ಬೆಳಗಲಿಕೆ ।
ಮುಂಜಾವ ಬಾಲೆ ಕಾಯುತ್ತಲಿಹಳೊ।। ೬।।

ಶಿರಬಾಗಿ ನಿನ್ನ ಚರಣಗಳಿಗೆ ಬಂದಿಹೆ ಶರಣ।
ನಿರುತ ಧನವಾರೋಗ್ಯವಿತ್ತು ದುರಿತಾಪಹರಣ।
ಪರಕಿಸದೆ ರಕ್ಷಿಸಲು ಬಾರೊ ಕರುಣಾಭರಣ।
ವರ ಗದುಗಿನಲಿ ಮೆರೆವ ವೀರನಾರಾಯಣ ।।೭।।

**೭೦ ರಾಗ:ಪೂರ್ವಿ ತಾಳ- ಬಿಲಂದಿ**

ಜನುಮದ ದಿವಸವಿದು ಹನುಮ ನಿನ್ನ।
ಜನುಮದ ದಿವಸವಿದು ।।ಪ।।

ಜನುಮದ ದಿನವಿದು ।ಅನುದಿನ ನಿನ್ನನು
ನೆನೆಯುವ ಜನರಿಗೆ ।ಘನ ಮುದ ಕೊಡುವಂಥ ।।ಅ. ಪ.।।

ಯಾವಾಗಲೂ ಹರಿಯ ಭಕುತಿ। ಸೇವೆ ಮಾಳ್ಪ ಪರಿಯ।
ಭಾವುಕರಿಗೆ ಕಲಿಸುವದಕೆ ಗಡ।
ಜೀವಿಯಾಗಿ ಅವತರಿಸಿದ ನಿನ್ನದು।।೧।।

ಪೊಡವಿಯ ಮಾತೆಯನು ದನುಜ ಬಚ್ಚಿಡಲವಳಿರುವದನು
ಹುಡುಕಿ ತೆಗೆಯಲು ಕಡಲನೆ ಜಿಗಿಯುವ।
ಕಡು ಶಕ್ತಿಯನೆ ಗಡ ಪಡೆದ ನಿನ್ನದು।। ೨।।

ಧಾರುಣಿ ಕಾರಣನ। ಗದುಗಿನ ವೀರನಾರಾಯಣನ।
ಚಾರು ಚರಣದಿ। ತೋರ ಭಕುತಿಯನು। ಸೂರೆಗೈಯ
ಮೈದೋರಿದ ನಿನ್ನದು ।। ೩ ।।

### ೨೧. ರಾಗ-ಬಿಹಾಗ ತಾಳ -ಆದಿ

ಕೊಳಲೂದೊ ಕೃಷ್ಣ ಕೊಳಲೂದೊ ॥ಪ॥

ಕೊಳಲೂದಲು ಮನ ಮುದವನು ತಳೆವುದೊ।
ಬಳಲಿಪ ಚಿಂತೆಯ ಕಳೆವುದು ನಾದೊ ॥ಅ.ಪ.॥

ಸವಿಸವಿ ಸ್ವರಗಳು ಕಿವಿಗಳ ಹೊಗಲವು
ಭವಿಸುವದೆನ್ನೊಳು ಭಕುತಿಯುನ್ಮಾದೊ॥೧ ॥

ತನು ಕೊಳವೆಯಲಿ ನಿನದುಸಿರನು ಕೂಡೆ।
ಇನಿದು ನುಡಿದು ಪಾವನ ತನುವಹುದೊ॥೨॥

ಸ್ವರ ಮಧುರತೆಯು ಶಿರದೊಳು ಚರಿಸುತೆ।
ನಿರುತ ನಿನ್ನಯ ಸ್ಮರಣೆಯ ನೀವುದೊ॥೩॥

ಮಧುರ ನಿನ್ನಯ ಗಾನವ ಕೇಳ್ವುದು।
ಗದುಗು ವೀರನಾರಾಯಣ ಮಹಾ ಪ್ರಸಾದೊ ॥೪॥

### ೨೨. ರಾಗ- (ಹಿಂದೂಸ್ತಾನಿ) ಕಾಫೀ ತಾಳ-ರೂಪಕ

ಪಾಲಿಸು ಸೌಭಾಗ್ಯದ ಲಕ್ಷ್ಮೀ ದೇವಿ। ಮೇಲಾದ ಕರವೀರ ವಾಸಿನಿ ದೇವಿ॥ಪ॥

ಬಡಬಡಿಸಿ ಬಂದೆ ನಾನಿಲ್ಲಿಗೋಡಿ।
ಕೊಡುವಿ ವರವನೆಂದು ಆಸೆಯ ಮಾಡಿ।
ಬಿಡಬೇಡ ಮಗನನ್ನು ಕರುಣದಿ ನೋಡಿ।
ಕೊಡುಸೀ ವರವನು ಸಿರಿಗಳ ನೀಡಿ ॥೧॥
ಬಡತನದ ಭೂತವನೆದುರಿಸುವುದು ತಾಯೆ।
ತಡೆಯಲಾರೆನು ಇನ್ನು ಕರುಣಿಸಿ ಕಾಯೆ।
ಬಿಡದೆ ಭಜಿಪೆ ನಿನ್ನ ಹೇ ಶುಭಕಾಯೆ।
ಕೊಡುಸೀ ವರಗಳನು ಧನಗಳ ನೀಯೆ ॥೨॥

ಇಡುವೆ ತಲೆಯ ಪದದಿ ಪನ್ನಗವೇಣಿ।
ನುಡಿಯೆ ಹರಕೆಗಳ ಹೇ ಶುಭವಾಣಿ।
ಒಡೆಯ ಗದುಗು ವೀರನಾರಾಯಣನ ಜಾಣೆ।
ಕೊಡು ನೀ ವರವನು ವಿಠಲನ ರಾಣಿ ।। ೩ ।।

**೭೩ ರಾಗ ಶಂಕರಾಭರಣ ತಾಳ -ಅಟ್ಟತಾಳ**

ಬಂದೆಯಾ ಕೃಷ್ಣಯ್ಯಾ ಬಂದೆಯಾ ।ಪ।।
ಸುಂದರ ನರರೂಪದಿಂದಲಿ ಧರೆಯೊಳು।। ಅ. ಪ.।।

ಲೋಕೈಕ ದೇವನೆಂದು। ಜ್ಞಾನಿಗಳು ಸಾರ್ವರಿಂದು।
ಆಕಾರ ರಹಿತನ ಲೋಕಸಾಮಾನ್ಯರು।
ಸ್ವೀಕರಿಸರು ಎಂದು ಸಾಕಾರನಾಗಿ ।।೧।।

ಪೂರಾ ವಿಶ್ವದಲ್ಲೆಲ್ಲಾ ತುಂಬಾ ನಿಂತಿಹ ನಿನ್ನ
ನಾರಮ ನಂಬರು ಎಂತೆಂಬ। ಕಾರಣ ಜಗಕೆ ನೀ
ತೋರಲೆಲ್ಲ ಗುಣ । ಸಾರ ಸಂಗ್ರಹಿಸಿ ನೀ ಧೀರ ಮಾನವನಾಗಿ।।೨।।

ಜಗದೊಳೊಂದದ್ಭುತ ಶಕ್ತಿ। ಇರುವುದೆಂದುಗಮಿಸೆ
ಜನರೊಳಾಸಕ್ತಿ। ಜಗದೊಳು ಗದುಗಿನ ವೀರನಾರಾಯಣ।
ಬಗೆಬಗೆ ಮಹಿಮೆಯ ಸಗುಣ ಮಾನವನಾಗಿ ।। ೩ ।।

**೭೪ ರಾಗ- ಭಾಗ್ಯಶ್ರೀ ತಾಳ -ರೂಪಕ**

ಸುಲಭ ನೀನೆನಗಲ್ಲ।ತಿಳಿದೆ ಶ್ರೀ ನಲ್ಲ ।।ಪ।।
ಸುಲಭನೆಂದಾಡುವರು ಹರಿದಾಸರೆಲ್ಲ ।।ಅ. ಪ.।।

ದರುಶನವು ಸಿಗಲೆಂದು ಪಂಢರಿಗೆ ನಾ ಬಂದೆ।
ಪೆರಮ ಪಾವನ ನಿನ್ನ ಮೂರುತಿಯ ಮುಂದೆ।

ತ್ವರದೆ ನಿಲಬರಲು ಬಹು ಭಕ್ತಿಯಿಂದೆ।
ತೆರೆಯಲಿಲ್ಲವೊ ದ್ವಾರ ಏನಿದೆಂತಂದೆ ॥೧॥

ಶಿಲೆಯ ಪ್ರತಿಮೆಯನೀಗ ತೋರೆದವ ನೀ ಮುಂದೆ।
ಬಲು ನಿಜದ ರೂಪವನು ತೋರುವುದು ಹೇಗೆಂದೆ।
ಜಲಜಾಕ್ಷ ಭರವಸೆಯ ನೀಡಲೆಂತು ಮನ ಮುಂದೆ।
ಸಲುಹು ವಿಠ್ಠಲರಾಯ ಕೈಮುಗಿವೆ ತಂದೆ ॥೨॥

ಸುಲಭದೊಳು ಸುಲಭನ್ನೆ ಪಂಢರಿಯ ವಿಠಲಾ।
ಬಲು ಪಾಪಿಗಳನುದ್ಧರಿಪೆ ಸಕಲಾ॥
ಬಲುಹಿನ ಈ ನುಡಿಯು ಸುಳ್ಳಾಯ್ತು ನನಗೆಲಾ।
ಸುಲಭ ಗದುಗಿನ ವೀರನಾರಾಯಣನು ಅಚಲಾ ॥ ೩

೭೫ ರಾಗ ಮುಲ್ತಾನಿ ತಾಳ -ಆದಿ

ಏನಿದು ಚಂದ ಹರಿಯೇ ಮುಕುಂದ ॥ಪ॥

ಒದಗಿದ ಬಾಧೆಯ ಬಿಡಿಸಲು। ಬೇಡಲು
ತುದಿಕೆಳಸುವತನ ಹಾದಿಯ ಕಾಯ್ವದು॥ ೧॥

ಕುರು ಸಭೆಯಲಿ ಮಾನವನುಳಿಸೆಂದು।
ತರುಣಿ ಬಾಯ್ಬಿಡೆ ಬೇಗನೆ ಬಾರದುದು ॥೨॥

ಮಕರಿಯ ಹಿಡಿತ ಬಿಡಿಸಲು ಕರಿನೃಪ।
ಮುಖವೆತ್ತಿ ಮೊರೆಯಿಡೆ ಜವದಿ ಪೊರೆಯದು ॥ ೩ ॥

ತಡ ಮಾಡದೆ ಶರಣರ ರಕ್ಷಿಸದೆ।
ಚಡಪಡಿಪುದನು ನೋಡುತಲಿರುವುದು॥ ೪॥

ಮೊರೆಯಿಡೆ ಭಕುತರು ಜವದಲಿ ಪೊರೆಯೈ।
ಕರುಣದಿ ಗದುಗಿನ ವೀರ ನಾರಾಯಣ॥೫॥

೭೬ ರಾಗ-? ತಾಳ -ಝಂಪೆ

ನಿನ್ನ ದಿವ್ಯರೂಪವನ್ನು ಕಣ್ಣಲಿ ನೋಡಿ ಧನ್ಯನಾದೆನೊ।
ಇಂದು ಪನ್ನಗ ಶಯನ ॥ಪ॥

ಚೆನ್ನಪಾದಂಗಳಲಿ ಚಿನ್ನದ ಕಡಗರುಳಿ।
ಹನ್ನೆರಡು ನಿರಿಗೆಗಳ ಹೊನ್ನ ಪೀತಾಂಬರಕೆ
ರನ್ನಮಯದೊಡ್ಯಾಣವನ್ನು ಸುತ್ತಿದ ನಡುವು।
ಚೆನ್ನ ಪದಗಳ ಮುಟ್ಟುವನ್ನಕ್ಕ ವನಮಾಲೆ ॥೧॥

ನನ್ನಿಯಿಂದೆಸೆವ ಕೆಂಪನ್ನ ಕೌಸ್ತುಭದೆದೆಯ।
ಕನ್ನಿಕೆಯ ಲಕ್ಷುಮಿಯ ಚಿಹ್ನ ಧರಿಸಿದ ವಕ್ಷ।
ಘನ್ನ ಚಕ್ಕರ ಶಂಖ ಸನ್ನೆ ಕಾಮೋದಕಿಯು।
ಕನ್ನೈದಿಲೆಯವಿಡಿದ ಇನ್ನಂತ ನಾಲ್ಕೈಯು ॥೨॥

ಪನ್ನೀರು ಬೆರೆತು ಬಾವನ್ನ ಕಂಪಿನ ಮೈಯ।
ಬೆನ್ನಗಲ ಹೆಗಲು ದುಂಡನ್ನ ತೋಳಗುವ ಕೊರಳು।
ಕನ್ನವುರ ಕುಂಡಲಗಳನ್ನು ಧರಿಸಿದ ಕಿವಿಯ।
ಜೊನ್ನ ಪಸರಿಪ ನಗೆಯ ಮುನ್ನಿಸುವ ಕೆಂದುಟಿಯ ॥ ೩ ॥
ಮುನ್ನೂರು ಕೋಟಿರಲು ಸನ್ನಿಭನ ಚೆಲ್ವ ಮೊಗ।
ಕನ್ನೀಲ ಕಣ್ಣು ಚಂದನ್ನ ಎಸಳಿನ ಮೂಗು।
ಉನ್ನತ ಹಣೆಯ ಮೇಲೆ, ಸೊನ್ನಿ ಕತ್ತೂರಿ ತಿಲಕ।
ಸೊನ್ನ ಮುಕುಟವ ಧರಿಸಲನ್ನುಳಿದ ಕರಿಗುರುಳು॥೪ ॥

ಎನ್ನೆದುರು ನಿಂತಿರಲು, ಚೆನ್ನುಮಯ ರೂಪನೆ।
ಕುನ್ನಿ ಮಾನವ ನಾನು ಇನ್ನೆಂತು ಬಣ್ಣಿಸುವೆ।

ನಿನ್ನ ಕೃಪೆಯಿಲ್ಲದಿದೆನ್ನಲಿಪ್ಪುದೆ ದೇವ।
ಚೆನ್ನ ಗದುಗಿನ ವೀರ ನಾರಾಯಣನೆ ಮಣಿಯುವೆ ॥೫॥

**೭೭ ರಾಗ- ಅಸಾವರಿ ತಾಳ -ರೂಪಕ**

ಮನವೇ ನೀ ಸ್ಥಿರವಾಗಿ ಹರಿಯ ಪದಾಂಬುಜವನು ಸೇರಿ
ಅಲ್ಲಿಯೇ ನಿಲ್ಲಯ್ಯ ಬಿಡದೆ ॥ಪ॥

ಅನುದಿನ ಸೇವಿಸಲನುವಾಗುವದಯ್ಯಾ
ಘನ ಚಂಚಲನು ನೀನು ಎಚ್ಚರ ಎಚ್ಚರ ॥ಅ. ಪ.॥

ಅಲ್ಲಲ್ಲಿ ಇಲ್ಲೆಂದು ಎಲ್ಲೂ ಹುಡುಕಲು ಬೇಡ ।
ಎಲ್ಲೆಲ್ಲೂ ಇರುವ ಶ್ರೀ ವಲ್ಲಭನು।
ಬಲ್ಲಿದರಾಡುವ ಸೊಲ್ಲನು ಲಾಲಿಸು।
ಖುಲ್ಲನೆಂದೆಂಬುವ ನಿಂದೆಗೀಡಾಗಬೇಡ॥೧॥

ಸದುಗತಿಯ ಕೊಡುವ ಪದುಮನಾಭನ ಪಾದ।
ಪದುಮದಿ ಮಧುರ ನಾಮಾಮೃತ ಸವಿಯುತ ।
ಮುದದಿ ಗುಣಿಸುತಲನುಪನಾಗಿ ಮತ್ತೆ ।
ಸದನವ ಬಿಡದೆ ಸುತ್ತಾಡುತಲಿರು ನಿತ್ಯ ॥೨॥

ಧ್ಯಾನದ ದಾರದಿಂ ಜಪವೆಂಬ ಗಂಟಲಿ।
ಶ್ರೀನಿವಾಸನ ಪಾದವೆಂಬ ಗೂಟಕೆ ಕಟ್ಟಿ।
ಮೌನದಿಂ ಕಟ್ಟಿಸಿಕೊಂಡಲ್ಲಿ ಸುಳಿದಾಡು।
ಸ್ಥಾನವ ಬಿಟ್ಟಿನ್ನ ನಿಟ್ಟಿಗೆ ಪೋಗದೆ ॥ ೩ ॥

ಸಕಲರ ಪಾಪವ ತೊಳೆದು ಪಾವನಗೈವ
ಮುಕುತಿಯ ದಾರಿಯ ತೋರುವ ನದಿ ಗಂಗೆ।
ಪ್ರಕಟವಾಗಿರುವಂಥ ಚರಣದೊಳುರುಳಾಡು।
ಭಕುತಿಯ ಬೇಡು ನೀ ಪ್ರತಿದಿನ ನೋಡು ॥೪॥

ಗದುಗಿನ ವೀರನಾರಯಣನಿಗು ನಿನಗು
ಹೃದಯವೆ ಮಂದಿರವಲ್ಲವೆ ಏನು ದೀಪದ।
ಕದಿರಂತೆ ಚಾಚುತ ಪೋಗಿ ಬರುವಂತೆ
ಸದನವ ಬಿಡದಲ್ಲೆ ಹರಿಯನು ಸೇವಿಸು॥೫॥

**೭೮ ರಾಗ-ಅಸಾವರಿ ತಾಳ -ಆದಿ**

ಈಸಲು ಬಿಡು ನನ್ನ। ಹರಿಘನ ॥ಪ॥
ಮೀಸಲು ಭಕುತಿಯ ರಸ ಜಲಧಿಯಲಿ ॥ಅ. ಪ.॥

ಏನೂ ತಿಳಿಯದವ ನಾನೀ ಗುಟ್ಟು। ಜ್ಞಾನದ ಸಿಂಗಡಿ ಸಂಗಡ ಕೊಟ್ಟು ।
ಧ್ಯಾನದ ಪಾಶವ ಬಿಗಿಯಲು ಕಟ್ಟು। ಶ್ರೀನಿವಾಸನೆ ನೀ ದಯವಿಟ್ಟು ॥೧ ॥

ಭವಸಾಗರವನು ದಾಟಿಸಬಲ್ಲ ।ನಾವಿಕ ನೀನಲ್ಲದೆ ಯಾರಿಲ್ಲ।
ಹವಣೆಗೆ ನಿನ್ನನೆ ನಂಬಿಹೆನಲ್ಲ। ತವಕದಿ ಮನ್ನಿಸಿ ದೀನನ ಸೊಲ್ಲ ॥೨॥

ಬಿನ್ನಪ ನನ್ನದು ದಯದಿಂ ಲಾಲಿಸು ।ಎನ್ನನು ಭಕುತಿಯ ರಸದಲಿ ತೇಲಿಸು ।
ಸನ್ನುತ ಗದುಗಿನ ವೀರನಾರಾಯಣ।ಎನ್ನೊಳು ಕೃಪೆಯನು ನೀ ದಯಪಾಲಿಸು
॥ ೩ ॥

**೭೯ ರಾಗ -ಕಾಫಿ ತಾಳ- ರೂಪಕ**

ರತ್ನವ ದೊರಕಿಸಿರೊ ಬಹಳ ಪ್ರತ್ನದಿಂ ರಕ್ಷಿಸಿರೊ ॥ಪ॥

ಕತ್ತಲೆ ತುಂಬಿದ ಚಿತ್ರವೆ ಗೂಡೊಳು।
ಸುತ್ತಲು ಬೆಳಗಿಸಿ ಝುಗಝುಗ ಝುಗಿಸುವ ॥ಅ. ಪ. ॥

ಜ್ಞಾನದ ಖಣಿಯಿಂದಲಗಿದು।
ಮನಸಿನ ಹೀನ ಕಸವನೆಲ್ಲವ ತೆಗೆದು।
ಧ್ಯಾನ ಕಂಕಣದಿಂದ ಗಟ್ಟಾಗಿ ಬಿಗಿದು।
ಮಾನ ಭಂಡಾರದೊಳಗಿಡಲು ಬಗೆದು ॥೧॥

ಬೆಲೆಯಿದಕೆ ಒಂದೇ ಲಕ್ಷ ಕೊಟ್ಟರೆ।
ಸುಲಭವ್ರೊ ನಿಮಗಪರೋಕ್ಷ।
ಒಲಿದೊಗೆವ್ರುದು ತಾನು ಕಿರಣ ಕಟಾಕ್ಷ।
ನಿಲುವಿಕೆ ಬೇಕಾದ ಅಳತೆಗೆ ಬರುವ॥೨॥

ತೇಜದಿ ಕೋಟಿ ಸೂರ್ಯರ ಮಿಕ್ಕುವ ನಿತ್ಯ।
ಭಜಕರ ಘನರಾಶಿಯ ಮುಕ್ಕುವ।
ಮೋಜಿದ ಮನಕಾನಂದವನಿಕ್ಕುವ।
ರಾಜಿತ ಗದುಗಿನ ವೀರ ನಾರಾಯಣನೆಂಬ ॥ ೩ ॥

**೮೦ ರಾಗ- ಕರ್ನಾಟಕ ಭೈರವಿ ತಾಳ- ರೂಪಕ**

ರಾಯ ಕೇಶವ । ಚರಣಕೆರಗುವೆ ಕಾಯೊ ಮಾಧವ॥ ಪ॥

ಮಾಯಾ ಪ್ರಪಂಚದಿ ಬಾಯಾರಿ ಬಳಲುತಿಹೆ।
ತೋಯಜಾಕ್ಷನೆ ನೀ ಕಾಯೊ ಮಾಧವಾ ॥ಅ.ಪ.॥

ಪಾರುಗಾಣೆಸಯ್ಯ ಸಂ। ಸಾರ ಬಂಧನದಿಂದ ನಾನು।
ಸಾರಾಸಾರ ವಿಚಾರವಿಲ್ಲವ್ರೊ ಗಡ ತೀರ ಅಲ್ಪನು ತಿಳಿ ॥೧॥

ಜ್ಞಾನ ಹೀನನಾಗಿ ನಿನ್ನ ಧ್ಯಾನವ ಮಾಡದಾದೆ ನಾನು ।
ಮಾನಾಪಮಾನಕ್ಕೆ ನೀನೇ ಹೊಣೆಗಾರನು ದೀನಜನ ಪಾಲಕನೆ ॥೨॥

ಆರು ಹಗೆಗಳನ್ನ ಮೈಯಸೇರಿ ।ನಿನ್ನ ಭಜಿಸಗೊಡರು।
ಬಾರೋ ನೀ ದಯವನು ತೋರೋ।ಗದುಗಿನ ವೀರನಾರಯಣನೆ ॥ ೩ ।

**೮೧ ರಾಗ- ಪಂತುರಾವಳಿ ತಾಳ -ಆದಿ**

ಕರುಣಿಸಯ್ಯ ಚಂದ್ರಶೇಖರಾ । ನೀನೆನ್ನೊಳೊಲಿದು ॥ಪ॥ .

ಕರುಣೆಸಯ್ಯ ಭವದ ತಾಪ । ಹರಣ ಮಾಡು ನಿನ್ನ ದಿವ್ಯ ।
ಚರಣಗಳಿಗೆ ನಮಿಪೆನು । ಉರಾಗಭರಣ ಶರಣು ಶರಣು ॥ಅ.ಪ.॥

ಕಾಳಭೈರವ ಶಂಭು ಶಂಕರ ।ಗಿರಿಜೆಯಣ್ಣ ಕೇಳು ನಾನು ನಿನ್ನ ಕಿಂಕರ।
ಹೂಳಿ ಷಡ್ರಿಪುಗಳನ್ನು। ಮನದಲಿ ಊಳಿ ನಿಜಜ್ಞಾನವನ್ನು।
ಸಜ್ಜನರೋಳಯಲಿ ನಿಲಿಸುತ್ತ ನಿತ್ಯದಿ। ಬಾಳಿ ತಾಳಿ ಏಳುವಂತೆ ॥೧॥

ನಂಟನಯ್ಯ ಭಕ್ತ ಜನರಿಗೆ।ಇನ್ನು ಮಿತಿಯು ಉಂಟೇ।
ನಿನ್ನಯ ಕರುಣಾಲಹರಿಗೆ ।ಎಂಟು ದಿಕ್ಕನು ಸುಡುವ ವಿಷವನು।
ಕಂಠದಲ್ಲಿ ಭರಿಸಿ ಜಗಿದ ।ಕಂಟಕವನು ಪರಿಹರಿಸಿದಂಥ।
ಬಂಟ ನೀನ್ಯೆ ಮಹಾದೇವ ॥೨।

ಮೂರು ಊರುಗಳನೆ ಸಂಹಾರ ।ಮಾಡಿ ಉರುಳಿಸಿದಿ।
ಘೋರ ಸಂಕಟದಿಂದ ಪೂರ್ವಜರ।
ಸೂರಿ ಮಾಡಿ ಬೊಮ್ಮನ ಮತ್ತೆ ಗದುಗಿನ
ವೀರನಾರಾಯಣನ ಕೂಡಿ।ನಾರಿ ಸತಿ ಅನಸೂಯನ್ನು।
ದ್ಧಾರ ಮಾಡಿದ ರೀತಿಯಲ್ಲಿ ॥ ೩ ॥

**೮೨ ರಾಗ- ಕಾಂಬೋದಿ ತಾಳ- ಝಂಪಾ**

ನೀನೊಲಿದರೇನು ಏನಿಲ್ಲ ಹರಿಯೇ ॥ಪ॥
ನೀನೊಲಿಯದಿರೆ ಮಾತ್ರ ಏನೇನು ಇಲ್ಲ ॥ಅ.ಪ॥

ಸಾಧನವು ಸಂಪತ್ತು ಸಾಧಿಸದೆ ದೊರೆಯುವುದು।
ಪಾದಗಳ ಸೇವೆ ತಾ ತಾನಾಗಿ ಲಭಿಸುವುದು।
ಖೇದ ವ್ಯಸನಗಳೆಲ್ಲ ಬಾಧಿಸದಲೋಡುವವು।
ಸಿಂಧು ಸಂಗ ಭಕ್ತಿ ಬೋಧಿಸದೆ ಬರುವವು ॥೧॥

ವಾಸುದೇವನೆ ವಿಪುಲ ।ಐಸಿರಿಯ ನೀಡುತಲೆ।
ಬೇಸರಿದೆ ನಿನ್ನವರ ಲೇಸಾಗಿ ಸಲಹುವಿಯೋ।

ದಾಸ ಭಕುತರು ಸೇರಗ್ಯಾಸಿ ಬೇಡಿದರೇನು ।
ಶೇಷಶಯನನೆ ನಿನ್ನ। ಈಸು ಮಹಿಮೆಯ ತಿಳಿಯೆ ॥೨॥

ಮನಸು ನಿನ್ನಡಿಗಳಲಿ । ಕೊನೆತನಕ ಇರಿಸುವದು।
ಘನ ಕೆಲಸ ನಿನ್ನದಯ್ಯ। ಮನುಜರಿಗೆ ಸಾಧ್ಯವೇ।
ತನುಮನಗಳಿವು ನಿನ್ನವೇ। ನನದೇನೆಂಬುದುಂಟು।
ಧಣಿಯ ಗದುಗಿನ ವೀರನಾರಾಯಣನೆ ॥ ೩ ॥

**೮೩ ಷಟ್ಪದಿ (ಮಧ್ವ ಮಂಡಲದ ಹುಂಡಿ ನಿಧಿ)**

ಶ್ರೀವರನು ಗಡ ಪೂರ್ಣ ಬ್ರಹ್ಮನು।
ಜೀವ ಬ್ರಹ್ಮರ ಭೇದ ತತ್ವವ।
ಭೂವಲಯದೊಳಾರೆ ಮೈವೆತ್ತಿದರು ಮಧ್ವಮುನಿ॥
ಪಾವನಾತ್ಮಕ ಮಧ್ವಮತವಿದು।
ಈವುದೈ ನಿಜ ಮುಕ್ತಿಯೆನ್ನಲು
ಭಾವುಕರ ಜನಸಂಖ್ಯೆ ಬೆಳೆದುದು ನೂರುಮಡಿಯಾಗಿ ॥೧॥

ಸುಖವ ಕಾಣದ ದ್ವಿಜ ಸಮಾಜದ ।
ಪ್ರಖರದೇಳ್ಗೆಯ ಬಯಸಿ ಪೂಜ್ಯರು।
ಅಖಿಲ ಭಾರತ ಮಾಧ್ವ ಮಹಾಮಂಡಲವ ರಚಿಸಿದರು॥
ಲಿಖಿಸಿ ವೈದಿಕ ಧರ್ಮ ಜಾಗ್ರತಿ।
ಪ್ರಖರಿಸಲು ವಿದ್ಯಾರ್ಥಿ ನಿಲಯದ।
ಸುಖ ನಿವಾಸಕೆ ಸ್ಥಳಿಕ ನಿಧಿ ಯೋಜನೆಯ ಮಾಡಿದರು ॥೨।

ತೆನೆಗೆ ತೆನೆ ಕೂಡಿದರೆ ರಾಶಿಯು ।
ಹನಿಗೆ ಹನಿ ಕೂಡಿದರೆ ಹಳ್ಳವು ತಾ।
ನೆನಿಪ ತತ್ವವ ಪಿಡಿದು ನಿಧಿ ಸಂಗ್ರಹಕೆ ಮನ ಮಾಡಿ॥
ಜನಕೆ ಹುಂಡಿಯ ನಿಧಿಯ ಮರ್ಮವ।
ವಿನಯದಿಂದಲಿ ತಿಳಿಸಿಕೊಟ್ಟರು।
ಅನುಮತಿಯ ತಾ ಪಡೆದು ಹುಂಡಿಯ ನಿಧಿಯ ಹಣಗಳ ॥

ಭಾರವಾಗದ ತೆರದಿ ದಾನವ।
ಬೀರಿ ಪುಣ್ಯವ ಗಳಿಸಿಕೊಳ್ಳಲು
ದಾರಿ ಸುಲಭವು ತಿಳಿವುದೀ ನುಡಿಯನ್ನು ಜನವೆಲ್ಲ॥
ತೋರ ಕಾರ್ಯದಿ ನೆರವನೀಯಲು
ಸಾರಿ ಬಂದರೆ ಧರ್ಮದೇಳ್ಗೆಯು
ಪೂರಣವದು ನಿಶ್ಚಿತವೆಂದು ಸಾರಿದರು ॥೪॥

ಎಲೆಯ ಪುಷ್ಪ ಜಲವ ಫಲವನು ।
ಸಲಿಸೆ ಭಕುತಿಯಲೀಶ ಪೂಜೆಯು।
ಸಲುವುದೆಂಬಾ ಗೀತೆಯಲಿ ಭಗವಂತ ನುಡಿದಂತೆ ॥
ಒಲಿದು ತನ್ನಯ ಶಕ್ತಿಗೆಟಕುವ।
ಚಲಿತ ನಾಣ್ಯವ ನಿಧಿಯಲಿಟ್ಟೊಡೆ।
ನಲಿದು ಸಲಹುವವನ ಗದುಗಿನ ವೀರನಾರಯಣ ॥೫॥

**೮೪ ರಾಗ-ಧನಶ್ರೀ ತಾಳ -ಆದಿ**

ಎಂಥ ವಿಲಕ್ಷಣನೊ ಶ್ರೀ ಹರಿ ॥ಪ॥

ಪಂಥವು ತಿಳಿಯದನಂತ ಮೂರುತಿಯೆ ॥ಅ.ಪ॥

ಅಣು ಎಂದರೆ ನೀ ಮಹತನಾಗುವಿ।
ಅಣುವಾಗುವಿ ನೀ ಮಹತನೆಂದರೆ।
ಅಣು ಮಹತ್ತೆರಡೂ ಕೂಡಿರಲೂ ಸಹ ।
ಗುಣ ತಿಳಿಯದು ಅಜ್ಞೇಯಾ ।೧॥

ಧನವ ಕೊಟ್ಟರೆ ನೀ ಬೇಡೆನ್ನುವಿ।
ತಿನಿಸು ಕೊಟ್ಟರೆ ಒಲಿಯದಲಿರುವಿ।
ಅನುದಿನ ಮನವನಿತ್ತು ಮಾಳ್ಪ ಬರಿ।
ಘನ ಭಕ್ತಿಗೆ ಬಹು ನೀ ಮೆಚ್ಚುವಿ ॥ ೨॥

ಆಕಾರವು ನಿನಗಿಲ್ಲವೆಂದರೆ
ಸಾಕಾರವ ನೀನಾಗಿ ತೋರುವಿ।
ಈ ಕಾರಣ ನಿಜ ತಿಳಿಯದು ಪೇಳಲು
ಬೇಕ್ಕೆ ಗದುಗಿನ ವೀರ ನಾರಾಯಣ ॥ ೩ ॥

**೮೫ ರಾಗ -ಮುಖಾರಿ ತಾಳ -ಝಂಪೆ**

ಜಯಮಂಗಳಂ ನಿತ್ಯ ಶುಭಮಂಗಳಂ ॥ಪ॥

ಬುದ್ಧಿಯನಾಳ್ವಂಗೆ ಸಿದ್ಧಿಯನೀವಂಗೆ।
ಉದ್ದನ್ನ ಒಡಲಂಗೆ ವಿಘ್ನಗಳ ಕೊಲ್ವಂಗೆ।
ಶುದ್ಧ ಹಿಮಗಿರಿಯ ಮುದ್ದಾದ ಕುವರಂಗೆ।
ಜಿದ್ದಿನಲಿ ಷಣ್ಮುಖನ ಗೆದ್ದಂಥ ಜಾಣಂಗೆ॥ ೧॥

ಶಂಕರನ ಕುವರಂಗೆ ಓಂಕಾರ ರೂಪನಿಗೆ
ಸಂಕಷ್ಟ ನಾಶನಿಗೆ। ಅಂಕುಶಾಯುಧಧರಗೆ।
ಹೂಂಕರಿಪ ಜನರ ಬಿಂಕವನು ತರಿದವಗೆ।
ಕಿಂಕರರ ನಿರುತದಲಿ ಕರುಣದಲಿ ಕಾಯ್ವಂಗೆ ॥೨॥

ಶುಭಕಾರ್ಯ ಮೊದಲು ಪೂಜೆಗೊಂಬಾತಗೆ ।
ಅಭಿಯವನು ತೋರ್ಪನಿಗೆ ಇಭವದನ ಗಣಪನಿಗೆ।
ಪ್ರಭುವಾಗಿ ಗಣಗಳಿಗೆ ಜಗದೊಳಗೆ ಮೆರವವಗೆ।
ಮಿಭವದಲಿ ಭಾರತವ ಬಿಡುವಲದೆ ಬರವಣಿಗ ॥ ೩ ॥

ಸೂಕ್ಷ್ಮದಲಿ ಪರಕಿಸಲು ಸಣ್ಣ ಕಣ್ಣುಳ್ಳವಗೆ।
ಕಾಂಕ್ಷ್ಮಗಳ ಕೇಳಲಿಕೆ ಮರದಗಲ ಕಿವಿಯವಗೆ।
ತೀಕ್ಷ್ಣತರದ ಮತಿವಿಡಿದ ಘನವಾದ ತಲೆಯವಗೆ ।
ಸುಕ್ಷೇಮ ಲಾಭಗಳ ಭಕ್ತರಿಗೆ ಕೊಡುವವಗೆ ॥೪॥

ಇಲಿದೇರ ವೀರನಿಗೆ ಸುಲಿದೇಕದಂತನಿಗೆ।
ಎಲರುಣಿಯನುಪವೀತ ಮಾಡಿಕೊಂಡವಗೆ।
ನೆಲದೊಳಗೆ ಗದುಗು ವೀರನಾರಾಯಣ।
ನೊಲಿಸಿ ಕೊಡುವಂಥ ಮಂಗಳ ಮೂರ್ತಿಗೆ ॥೫॥

೮೬ ರಾಗ- ಮುಖಾರಿ ತಾಳ- ಝಂಪೆ

ಜಯ ಮಂಗಳಂ ನಿತ್ಯ ಶುಭ ಮಂಗಳಂ॥ ಪ॥

ಮಂಗಳಂ ನಾರಾಯಣನ ಭಕ್ತಂಗೆ।
ಮಂಗಳಂ ಶಿವನಂಶ ದ್ರೋಣಸುತ ಶಿಷ್ಯಂಗೆ।
ಕನ್ನಡದೆ ಭಾರತವನೊರೆದಂಗೆ।
ಮಂಗಳಂ ಯೋಗೀಂದ್ರ ಕುವರವ್ಯಾಸಂಗೆ ॥೧॥

ಶ್ರೀ ವರನ ವರದಿಂದ ವೀರನಶ್ವತ್ಥಾಮ।
ದೇವನಾಶೀರ್ವಾದದಿಂದೆ ಸ್ಫೂರ್ತಿಯ ತಳೆದು।
ಭಾವ ಪೂರಿತ ಪದವ ಪ್ರೌಢಿಯಲಿ ಕನ್ನಡದೆ।
ಓವಿ ಭಾರತ ಬರೆದ ಕವಿಪುಂಗವಂಗೆ॥೨॥

ಭಾರತದ ಶಾಸ್ತ್ರಾರ್ಥದೊಗಟವನು ಭಜಿಸುತಲಿ।
ಸಾರಿ ಜನರಿಗೆ ರಮ್ಯ ಗಮಕದಲಿ ಪೇಳಲಿಕೆ।
ಭಾರತದ ಶ್ರೀ ಬಿಂದುರಾಯರನು ಪ್ರೇರಿಸಿದ ।
ತೋರ ಗದುಗಿನ ವೀರನಾರಾಯಣಂಗೆ ॥ ೩ ॥

೮೭ ರಾಗ - ದೇಸ ತಾಳ - ದೀಪಚಂದಿ

ಮಂಗಳಾರುತಿ ತಂದು ಬೆಳಗಿರೆ।
ರಂಗನಾಥನ ರಾಣಿಗೆ । ಅಂಗನಾಜನರೆಲ್ಲ ಕೂಡಿ।
ಮಂಗಳಾರುತಿ ಮಾಡಿರೆ ॥ಪ॥

ಮುತ್ತು ರತ್ನಾಭರಣ ತೊಡಿಸಿರೆ।
ಉತ್ತುಮಾಂಬರ ಉಡಿಸಿರೆ।
ಎತ್ತಿದಾರುತಿ ಭಕುತಿಯಲಿ ಸಂಪತ್ತುಗಳ ಮಹಾ ಲಕುಮಿಗೆ ॥೧॥

ಹೊಸತು ಹೂಗಳ ಮುಡಿಸಿರೆ।
ತುಸು ಬಿಸಿಯ ಬಿಷವ ಬಡಿಸಿರೆ
ಎಸೆವ ಮಹಾಲಕುಮಿ ದೇವಿಗೆ ಬಿಡದೆ ಶುಕ್ರವಾರದಿ॥೨॥

ಹಳದಿ ಕುಂಕುಮ ಧರಿಸಿ ಸೌಭಾಗ್ಯಗಳ ನೀಡುವ ದೇವಿಗೆ
ಹೊಳೆವ ಗದುಗಿನ ವೀರನಾರಾಯಣನ
ಪ್ರೇಮದ ಮಡದಿಗೆ ॥ ೩ ॥

**೮೮ ರಾಗ- ಮುಖಾರಿ ಝಂಪೆ -ತಾಳ**

ಜಯ ಮಗಳಂ ನಿತ್ಯ ಶುಭಮಂಗಳಂ ॥ಪಲ್ಲ॥

ಆಂಜನೇಯ ಕುವರಂಗೆ, ಅಂಜನನ ಪುತ್ರಂಗೆ।
ಪಂಜುಗದಿರನನ್ನುಂಗೆ ಅಂಜದಲೆ ಜಿಗಿದಂಗೆ।
ಶರಜಾಪಶ್ರೀ ರಾಮ ಧೂತಂಗೆ ಹನುಮಂಗೆ ॥೧॥

ಕಾನನದಿ ರಾಮನಿಗೆ ತಾನಾದ ಭೃತ್ಯಂಗೆ।ವಾನರ ಪ್ರಮುಖನಿಗೆ ।
ಧೀರ ಮಾರುತಿಗೆ ॥೨॥

ದುಷ್ಟರನು ಶಿಕ್ಷಿಸುತ।ಕಷ್ಟಗಳ ಪರಿಹರಿಸಿ ತುಷ್ಟಿ ಕೊಡುವಾತನಿಗೆ ।
ಸೃಷ್ಟಿಯಲಿ ಸಕಲ ಜನ ಪೂಜ್ಯರಿಗೆ।ಮಹಿಮನಿಗೆ ।
ಶ್ರೇಷ್ಠ ಗದುಗಿನ ವೀರನಾರಾಯಣ ಪ್ರಿಯಗೆ ॥೩॥



ಶ್ರೀ ಹುಯಿಲಗೋಳ ನಾರಾಯಣರಾಯರ
ಕುಟುಂಬದ ಸದಸ್ಯರು

ಶ್ರೀಮತಿ ರಾಧಾಕುಲಕರ್ಣಿಯವರು ಬರೆದಿರುವ 'ಹುಯಿಲಗೋಳ ನಾರಾಯಣರಾಯರ (ಜೀವನ – ಸಾಧನೆ)' ಪುಸ್ತಕ ಒಂದು ಉಪಯುಕ್ತ ಗ್ರಂಥ. ಲೇಖಕಿಯವರು ಹುಯಿಲಗೋಳರ ಮೊಮ್ಮಗಳು. ಅಜ್ಜನ ಪ್ರೀತಿಯ ಭಾವಬಂಧದಲ್ಲಿ ಬಾಲ್ಯ ಕಳೆದ ಶ್ರೀಮತಿ ರಾಧಾ ಅವರು ಈ ಕೃತಿಯಲ್ಲಿ ತಮ್ಮ ಅನುಭವಗಳ ಜೊತೆಗೆ ಅಜ್ಜನ ಜೀವನ ಸಾಧನೆಗಳನ್ನು ಅಂತಃಕರಣ ತುಂಬಿದ ಭಾವದಲ್ಲಿ ಕಟ್ಟಿಕೊಟ್ಟಿದ್ದಾರೆ. ಕನ್ನಡ ನಾಡಿನ ಏಕೀಕರಣದ ಕಥನದಲ್ಲಿ ಹುಯಿಲಗೋಳರ ಹೆಸರು ಅಮೃತರೂಪಿಯಾದುದು. ಈ ಕೃತಿಯ ಘಟನೆಗಳು ಅದನ್ನು ಅದ್ಭುತವಾಗಿ, ಆಪ್ತವಾಗಿ ಮನಗಾಣಿಸಿವೆ.

**ಪ್ರೊ. ಎಸ್.ಜಿ. ಸಿದ್ಧರಾಮಯ್ಯ**
ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ

---

ಬೆಲೆ ರೂ. ೧೮/-

ISBN : 81-7713-211-3

ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು